# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:23–05–2011 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ |
|---|---|
| 1. | ಹೆಚ್. ಹೆಚ್.ಆರ್.ಕೃಷ್ಣಪ್ಪ, ಅಧ್ಯಕ್ಷರು |
| 2. | ವೀಣಾ ನಾಗರಾಜ್, ಸದಸ್ಯರು |
| 3. | ಮುನಿಸ್ವಾಮಿ ಗೌಡ, ಸದಸ್ಯರು |
| 4. | ಎ. ವಿಜಯ, ಸದಸ್ಯರು |
| 5. | ಕೆ.ವಿ. ಯಶೋಧ, ಸದಸ್ಯರು |
| 6. | ವೈ.ಆರ್. ಗೌರಮ್ಮ, ಸದಸ್ಯರು |
| 7. | ಫೌಜಿಯಾ ಬೇಗಂ, ಸದಸ್ಯರು |
| 8. | ಟಿ.ಮಲ್ಲೇಶ್, ಸದಸ್ಯರು |
| 9. | ಲಲಿತ ಮುಕುಂದರಾವ್, ಸದಸ್ಯರು |

**ಹಾಜರಿದ್ದ ಅಧಿಕಾರಿಗಳು ಶ್ರೀಯುತರಾದ**

ಅಪರ ಆಯುಕ್ತರು (ಆಡಳಿತ)
ಜಂಟಿ ಆಯುಕ್ತರು (ದಕ್ಷಿಣ)
ಜಂಟಿ ಆಯುಕ್ತರು (ಪೂರ್ವ)
ಜಂಟಿ ಆಯುಕ್ತರು (ಪಶ್ಚಿಮ)
ಆಪರ ಆಯುಕ್ತರು (ಆರ್.ಆರ್.ನಗರ)
ಉಪ ಆಯುಕ್ತರು (ಬೊಮ್ಮನಹಳ್ಳಿ)
ಉಪ ಆಯುಕ್ತರು (ದಾಸರಹಳ್ಳಿ)
ಉಪ ಆಯುಕ್ತರು (ಪೂರ್ವ)
ಉಪ ಆಯುಕ್ತರು (ಆರ್.ಆರ್.ನಗರ)
ಉಪ ಆಯುಕ್ತರು (ಯಲಹಂಕ)
ಉಪ ಆಯುಕ್ತರು (ಮಹದೇವಪುರ)
ಸಹಾಯಕರ ಆಯುಕ್ತರು (ಆಡಳಿತ–1)
ಸಹಾಯಕ ಆಯುಕ್ತರು (ಆಡಳಿತ–2)
ಉಪ ಆಯುಕ್ತರು ( ಭೂಸ್ವಾಧೀನ)
ಮುಖ್ಯ ಆರೋಗ್ಯಾಧಿಕಾರಿ
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ಜಂಟಿ ನಿರ್ದೇಶಕರು (ಸಾಂಖ್ಯಿಕ)
ಜಂಟಿ ನಿರ್ದೇಶಕರು, (ಪಶುಪಾಲನೆ)
ವಿಶೇಷ ಅಧಿಕಾರಿ
ಸಹಾಯರ ನಿರ್ದೇಶಕರು (ಮಹದೇವಪುರ)
ತೋಟಗಾರಿಕೆ ಅಧೀಕ್ಷರು (ದಕ್ಷಿಣ)
ತೋಟಗಾರಿಕೆ ಅಧೀಕ್ಷರು (ಮಹದೇವಪುರ)
ತೋಟಗಾರಿಕೆ ಅಧೀಕ್ಷರು ( ರಾರಾನಗರ)
ಸಹಾಯಕ ನಿರ್ದೇಶಕರು (ಪಶುಪಾಲನೆ) ದಾಸರಹಳ್ಳಿ ವಲಯ
ಜಂಟಿ ನಿರ್ದೇಶಕರು (ಪಶುಪಾಲನೆ)
ಆರೋಗ್ಯಧಿಕಾರಿ
ಜಂಟಿ ನಿರ್ದೇಶಕರು ನಗರ ಯೋಜನೆ (ದಕ್ಷಿಣ)
ಉಪ ನಿರ್ದೇಶಕರು ನಗರ ಯೋಜನೆ (ದಕ್ಷಿಣ)
ಸಹಾಯಕ ನಿರ್ದೇಶಕರು (ಪಶುಪಾಲನೆ) ಮಹಾದೇವಪುರ
ತಹಶೀಲ್ದಾರ್ (ಆಸ್ತಿಗಳು)
ಕೇಂದ್ರಸ್ಥಾನಿಕ ಸಹಾಯಕರು (ದಕ್ಷಿಣ)
ಕಂದಾಯ ಅಧಿಕಾರಿ (ಮಹಾದೇವಪುರ)
ಉಪ ಆರೋಗ್ಯಾಧಿಕಾರಿ (ಆರ್.ಆರ್.ನಗರ)
ಮುಖ್ಯ ಅಭಿಯಂತರರು (ದಾಸರಹಳ್ಳಿ)
ಸಹಾಯಕರ ನಿಯಂತ್ರಕರು (ಹಣಕಾಸು)
ಉಪ ನಿರ್ದೇಶಕರು ನಗರ ಯೋಜನೆ (ದಕ್ಷಿಣ)
ಸಹಾಯಕರ ನಿಯಂತ್ರಕರು (ಯಲಹಂಕ)
ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ)
ಮುಖ್ಯ ಅಭಿಯಂತರರು (ಪಶ್ಚಿಮ)
ಸಹಾಯಕ ನಿರ್ದೇಶಕರು (ಮಹಾದೇವಪುರ)
ಉಪ ನಿರ್ದೇಶಕರು (ಕೆ.ಆರ್.ಪುರಂ)

Recd 30 copies 3/6/11.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಸದಸ್ಯರುಗಳಿಗೆ ಸ್ವಾಗತವನ್ನು ಕೋರುತ್ತಾ, ಎಲ್ಲರ ವೈಯಕ್ತಿಕ ಪರಿಚಯವನ್ನು ಮಾಡಿಕೊಳ್ಳುತ್ತಾ, ತಮ್ಮ ಕಛೇರಿಗಳಲ್ಲಿನ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಯಾವ ವಿಧವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದು ಎಂಬ ಬಗ್ಗೆ ವಿವರಿಸಲು ಕೋರಿದರು.

ಮುಖ್ಯ ಆರೋಗ್ಯ ಅಧಿಕಾರಿ, ಆರೋಗ್ಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ತುಂಬಾ ಇದೆ. ಖಾಲಿಯಿರುವ ಹುದ್ದೆಗಳನ್ನು ತುಂಬಲು ಸುಮಾರು 15 ವರ್ಷದಿಂದ ಓಡಾಡುತ್ತಿದ್ದೇನೆ. ಆದರೆ ಇದುವರೆವಿಗೂ ಹುದ್ದೆ ಭರ್ತಿಯಾಗಿಲ್ಲ. 17 ಜನ ಇರಬೇಕಾದ ಜಾಗದಲ್ಲಿ 7 ಜನ ಗೈನಕಲಾಜಿಸ್ಟ್ಸ್ ಇದ್ದಾರೆ. ಹಾಲಿ ಡಾಕ್ಟರ್‌ಗಳ ಪ್ಯಾನಲ್ ಅಂತ ಮಾಡಿಕೊಂಡಿದ್ದೇವೆ. ಈ ಪ್ಯಾನಲ್‌ಗೆ ಬರುತ್ತೇವೆ ಎಂದು ಹೇಳುತ್ತಾರೆ ಆದರೆ ಬರುವುದಿಲ್ಲ. ಕಡಿಮೆ ಸಂಬಳವೆಂದು ಯಾರು ಬರುವುದಿಲ್ಲ. ಇವರ ಬದಲಿಗೆ ನೇರನೇಮಕಾತಿ ಮೂಲಕ 15 ಜನ ವೈದ್ಯರ ಹುದ್ದೆಗೆ ಕೆ.ಪಿ.ಎಸ್.ಸಿ ಮುಖಾಂತರ ಕರೆದಾಗ 4 ಜನ ವೈದ್ಯರು ಮಾತ್ರ ಹಾಜರಾಗಿರುತ್ತಾರೆ. ಸ್ಟಾಫ್, ನರ್ಸ್, ಡಾಕ್ಟರ್ಸ್, ಮುಂತಾದ ಸಿಬ್ಬಂದಿಗಳನ್ನು ಒದಗಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆಯೆಂದು ಹೇಳಿದರು. ಇದಕ್ಕೆ ಉತ್ತರವಾಗಿ ಸಹಾಯಕ ಆಯುಕ್ತರ (ನೇಮಕಾತಿ) ಮಾತನಾಡಿ, ಇದಕ್ಕೆ ಸಂಬಂಧಪಟ್ಟಂತಹ ಕಡತವನ್ನು ಸಹಾಯಕ ಆಯುಕ್ತರು (ಆಡಳಿತ-1 ) ರವರಿಗೆ ಕಳುಹಿಸಿರುವುದಾಗಿ ಹೇಳಿದರು. ಸಹಾಯಕ ಆಯುಕ್ತರು (ಆಡಳಿತ-1 ) ರವರು ಮಾತನಾಡಿ ಸಂಜೆಯೊಳಗೆ ಕಡತವನ್ನು ಕಳುಹಿಸುವುದಾಗಿ ಹೇಳಿದರು. ಅಧ್ಯಕ್ಷರು ಮಾತನಾಡಿ, ಬಿಬಿಎಂಪಿ ಪರಿಸ್ಥಿತಿ ತುಂಬಾ ಹದಗೆಟ್ಟಿದೆ, ಬೆಂಗಳೂರು ಜನತೆಗೆ ಆರೋಗ್ಯವನ್ನು ಕೊಡಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಆದುದರಿಂದ ಆರೋಗ್ಯ ವಿಷಯಕ್ಕೆ ಸಂಬಂಧಪಟ್ಟ ಕಡತಗಳನ್ನು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲು ಸೂಚಿಸಿದರು. ಎಮ್.ಓ.ಹೆಚ್ ಗಳನ್ನು ಆಸ್ಪತ್ರೆಗಳಿಗೆ ನೇಮಕಮಾಡಿದರೆ, DHO ಗಳು ರಾಷ್ಟ್ರೀಯ ಕಾರ್ಯಕ್ರಮಗಳನ್ನು ನೋಡಿಕೊಳ್ಳಬೇಕಾಗುತ್ತದೆ.

ಔಷಧಿಗಳ ವಿಷಯವಾಗಿ ಮಾತನಾಡಿದಂತಹ ಅಧ್ಯಕ್ಷರು ಸರಬರಾಜು ಮಾಡಲಾಗುತ್ತಿರುವ ಔಷಧಿಗಳಲ್ಲಿ ಕಲಬೆರಕೆ ಇರುವುದಿಲ್ಲವೇ ? ಎಷ್ಟೋ ಮೆಡಿಕಲ್ ಸ್ಟೋರ್‌ನಲ್ಲಿ ಅವಧಿ ಮುಗಿದಿರುವಂತಹ ಔಷಧಿಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ಬಂದಿವೆ. ನಾವುಗಳು ಟಿ.ವಿ. ನೋಡಿ ಕ್ರಮ ತೆಗೆದುಕೊಳ್ಳುವುದರ ಬದಲು ನಾವುಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿದರೆ ಈ ರೀತಿಯಾಗುವುದನ್ನು ತಪ್ಪಿಸಬಹುದೆಂದು ಹೇಳಿದರು. ಈ ಬಗ್ಗೆ ಸುತ್ತಮುತ್ತಲಿರುವ ಮೆಡಿಕಲ್ ಸ್ಟೋರ್ಸ್ ಮತ್ತು ಎಣ್ಣೆ ಅಂಗಡಿ ಮುಂತಾದವುಗಳಿಗೆ ಭೇಟಿ ನೀಡಲು ಸೂಚಿಸಿದರು. 4,000 ಪೌರ ಕಾರ್ಮಿಕರ ಹುದ್ದೆಯು ಖಾಲಿಯಿದ್ದು, ಇದುವರೆವಿಗೂ ಭರ್ತಿಯಾಗಿಲ್ಲ. ಬಿ.ಬಿ.ಎಂ.ಪಿಯಲ್ಲಿ ಕೆಲಸ ಕಾರ್ಯಗಳು ತುಂಬಾ ವಿಳಂಬವಾಗುತ್ತಿದೆ. ಆದುದರಿಂದ ಅಧಿಕಾರಿಗಳು, ಮತ್ತು ನಮ್ಮ ಸ್ಥಾಯಿ ಸಮಿತಿಯ ಸದಸ್ಯರುಗಳು ಎಲ್ಲಾ ಸೇರಿಕೊಂಡು ಸರ್ಕಾರದ ಆದೇಶಕ್ಕೆ ಹೋಗಿರುವ ಮೇಲ್ಕಂಡ ಕಡತಗಳು ತ್ವರಿತವಾಗಿ ಇತ್ಯರ್ಥ ಪಡಿಸಬೇಕೆಂದು ಶ್ರೀ ಮಲ್ಲೇಶ್ ಸದಸ್ಯರು ಸೂಚಿಸಿದ್ದು, ಇದಕ್ಕೆ ಸಂಬಂಧಪಟ್ಟ ಕಡತಗಳನ್ನು ಪುಟ್ ಅಪ್ ಮಾಡಿದ್ದೇನೆ, ಹಾಗೂ ಸಿ ಅಂಡ್ ಆರ್ ನಿಯಮಾವಳಿ ಮಾರ್ಪಾಡಿಗೆ ಸಂಬಂಧಿಸಿದ ಕಡತವು ಸಹ ಮಾನ್ಯ ಮುಖ್ಯ ಮಂತ್ರಿಗಳ ಬಳಿ ಇರುವುದಾಗಿ ಸಹಾಯಕ ಅಯುಕ್ತರು (ನೇಮಕಾತಿ) ಯವರು ಹೇಳಿದರು.

ಅಧ್ಯಕ್ಷರು ಮಾತನಾಡಿ, ವಲಯವಾರು ಕಛೇರಿಗಳಲ್ಲಿ ಅಧಿಕಾರ ವಿಕೇಂದ್ರೀಕರಣ ಆಗಿದೆಯೇ? ಎಂದು ಕೇಳಿದರು. ಪ್ರತಿ ವಲಯವಾರು ಮಟ್ಟದಲ್ಲಿ ಬಡ್ಜೆಟ್ ಫಿಕ್ಸ್ ಮಾಡಿ ಅಲ್ಲಿನ ಜಂಟಿ ಆಯುಕ್ತರುಗಳಿಗೆ ಪೂರ್ತಿ ಅಧಿಕಾರವನ್ನು ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಪ್ರತಿಯೊಂದಕ್ಕೂ ಕೇಂದ್ರ ಕಛೇರಿಗೆ ಬರಬೇಕಾಗುತ್ತದೆ. ಎಲ್ಲಾ ವಲಯ ಮಟ್ಟದಲ್ಲಿಯೇ sanction ಆಗುವಂತೆ, approval ಆಗುವಂತೆ ಮಾಡಿದರೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸೀರಿಯಸ್ ಆಗಿ ನಿರ್ಣಯ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದರು.

ವಿವಿಧ ಇಲಾಖೆಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿಯಿವೆ. ಅವುಗಳಲ್ಲಿ ಎಷ್ಟು ಹುದ್ದೆಗಳು ಬೇಕು ಅಥವಾ ಬೇಡ ಎಂಬುದನ್ನು ನೋಡಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹಾಜರಿದ್ದ ಅಧಿಕಾರಿಗಳಿಗೆ ಹೇಳಿದರು. ಸಿ ಅಂಡ್ ಆರ್ ರೂಲ್ಸ್ ತಯಾರಿಸುವ ಬಗ್ಗೆ ಎಲ್ಲರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿರುವುದಾಗಿ ತಿಳಿಸಿದಂತಹ ಅಧಿಕಾರಿಗಳು ಆರೋಗ್ಯ ಇಲಾಖೆಯಲ್ಲಿ Chief Health Officer, Deputy Health Officer, clinical & non-clinical, MOH Mosquito Controll, Surgeon, Gynacalogist-26 post ಖಾಲಿಯಿವೆ ಮತ್ತು ಧನ ಹಿಡಿಯುವವರು ಮುಂತಾದ ಹುದ್ದೆಗಳಿವೆ. ಆದರೆ ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ವರದಿ ಇಲ್ಲ. ಆದರೆ ಅವರು ಪ್ರತಿ ತಿಂಗಳು ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಕೇಳಿದರೆ, ಓ.ಓ.ಡಿ ಮೇಲೆ ಬೇರೆ ಕಡೆ ಇದ್ದಾರೆ ಎಂದು ತಿಳಿದು ಬರುತ್ತದೆ. ಅಧ್ಯಕ್ಷರು ಮಾತನಾಡಿ ಆರೋಗ್ಯ ಇಲಾಖೆಯಲ್ಲಿ ಮತ್ತು ಶಿಕ್ಷಣ ಇಲಾಖೆಯಲ್ಲಿ ಯಾರು ಯಾರು ಓ.ಓ.ಡಿ ಆಧಾರದ ಮೇಲೆ ಬೇರೆ ಕಡೆ ಹೋಗಿದ್ದಾರೆಯೋ ಅವರೆಲ್ಲರ ಒಂದು ಪಟ್ಟಿ ತಯಾರಿಸಿ ಕೊಡಿ ಅವರೆಲ್ಲರನ್ನು ಹಿಂದಕ್ಕೆ ಕರೆಸೋಣವೆಂದು ಹೇಳಿದರು.

ಕಸ ವಿಲೇವಾರಿಗೆ ಸಂಬಂಧಪಟ್ಟಂತ ಅಧಿಕಾರಗಳು Chief Engineer (Solid Waste Management) ರವರಿಗೆ ಸೇರಿದೆ. ಉಳಿದೆಲ್ಲಾ ಮೇಲ್ವಿಚಾರಣೆ, ಮಾಹಿತಿ ಸಂಗ್ರಹಣೆ ಮಾಡಿ ಪೇಮೆಂಟ್, ಟ್ರಾನ್ಸ್‌ಪೋರ್ಟೇಷನ್, ಅಲೋಕೇಷನ್ ಮತ್ತು ನಿರ್ವಹಣೆ ಆಯಾ ವಲಯಗಳಲ್ಲಿ ನಡೆಯುತ್ತದೆಯೆಂದು ಹಾಜರಿದ್ದ ಅಧಿಕಾರಿಗಳು ಹೇಳಿದರು.

**<u>ಜಂಟಿ ನಿರ್ದೇಶಕರು (ಸಾಂಖ್ಯಿಕ):-</u>** ಆನ್ ಲೈನ್ ವ್ಯವಸ್ಥೆಯನ್ನು ಅಳವಡಿಸಿರುವುದರಿಂದ ತುಂಬಾ ಅನುಕೂಲವಾಗಿದೆ. ಇದರಿಂದ ಆದಾಯ ಕೂಡ ಜಾಸ್ತಿಯಾಗಿದೆ. ಜನನ ಮತ್ತು ಮರಣ ಪ್ರಮಾಣ ಪತ್ರ ನೀಡುವಲ್ಲಿ ತುಂಬಾ ಅನುಕೂಲಕರವಾಗಿದೆ. ಪ್ರಮಾಣ ಪತ್ರಕ್ಕೋಸ್ಕರ ಪಾಲಿಕೆಗೆ ಅಲೆಯುವುದು ತಪ್ಪುವ ಸಲುವಾಗಿ ಮಗು ಜನಿಸಿ, ಒಂದು ವಾರದೊಳಗೆ ನಂತರ ತಾಯಿ, ಮಗು ಮನೆಗೆ ಹೋಗುವ ಸಂದರ್ಭದಲ್ಲಿ ಮಗುವಿನ ಪೂರ್ಣ ವಿವರಗಳನ್ನೊಳಗೊಂಡ ಒಂದು ಪ್ರಮಾಣ ಪತ್ರದ ಪ್ರತಿಯನ್ನು ತಾಯಿಯ ಕೈಯಲ್ಲಿ ಕೊಡುವಂತೆ ವ್ಯವಸ್ಥೆ ಮಾಡಲಾಗಿದೆ.

1. ಜನನ ಮತ್ತು ಮರಣ ಪ್ರಮಾಣ ಪತ್ರವನ್ನು ಎಮ್.ಓ.ಹೆಚ್ ಮಟ್ಟದಲ್ಲಿ ನೀಡಬೇಕಾಗಿದ್ದು, ಇವರುಗಳ ಆರೋಗ್ಯ ಅಧಿಕಾರಿಗಳ ನಿಯಂತ್ರಣದಲ್ಲಿ ಕೆಲಸ ಮಾಡಲಿಕ್ಕೆ ಒಬ್ಬ ಕಂಪ್ಯೂಟರ್ ಆಪರೇಟರ್ ಇದ್ದರೆ ಸಾಕು.
2. ವಲಯವಾರು ಬೇಸಿಕ್ ಇನ್‌ಫಾರ್‌ಮೇಷನ್ ಬೇಕಾಗುತ್ತದೆ.
3. Planning aspect vision of the Ward ಈಗ ಯಾವ ಹಂತದಲ್ಲಿ ಇದೆ, ಮುಂದೆ ಯಾವ ತರಹ ಮಾಡಬೇಕು ಇದಕ್ಕೆ implement up plan ಎಂದು ಕರೆಯುತ್ತೇವೆ.
4. Monitoring Aspect:- ಶೇ. 22.75 ಅಥವಾ ಇತರೇ ಯಾವುದೇ ಅನುದಾನದಡಿಯಲ್ಲಿ ಪ್ರಯೋಜನವನ್ನು ಪಡೆದಿರುವಂತಹ ಫಲಾನುಭವಿಗಳು ಪದೇ ಪದೇ ಅವರೇ ಅವಕಾಶಗಳನ್ನು ಪಡೆಯದಂತೆ ವ್ಯವಸ್ಥೆಯನ್ನು ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಪೋಟೋ, ಗುರುತಿನ ಚೀಟಿ, ಹೆಬ್ಬೆಟ್ಟಿನ ಗುರುತು ಮುಂತಾದವುಗಳ ಸಹಾಯದಿಂದ ಕಂಡುಹಿಡಿಯಬಹುದಾಗಿದೆ.

**<u>ಜಂಟಿ ನಿರ್ದೇಶಕರು (ನಗರ ಯೋಜನೆ)</u>** :- ಜಂಟಿ ನಿರ್ದೇಶಕರು (ದಕ್ಷಿಣ) ರವರು ಮಾತನಾಡಿ ನಾವು ಕೇವಲ ನಕ್ಷೆ ಮಂಜೂರು ಮಾಡುವುದು ಮತ್ತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಸೂಕ್ತ ಸಲಹೆಗಳನ್ನು ನೀಡುವ ಕಾರ್ಯವನ್ನು ನಿರ್ವಹಿಸುತ್ತಿದ್ದೇವೆ. ಜೊತೆಗೆ ರಸ್ತೆ ಅಗಲೀಕರಣಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದೇವೆ. ಆದುದರಿಂದ ನಿರ್ಮಾಣದಲ್ಲಿನ ವಿಚಲತೆ ಬಗ್ಗೆ ನಮ್ಮನ್ನು ಬೇರೆ ಕೆಲಸಗಳಿಗೂ ಸಹ ನಿಯೋಜಿಸಿಕೊಳ್ಳಿ ಎಂದು ಹೇಳಿದರು. ನಕ್ಷೆ ಮಂಜೂರಾತಿ ನಂತರ

ಕಟ್ಟಡ ನೋಡಿಕೊಳ್ಳುವಂತಹ ಜವಾಬ್ದಾರಿ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರದ್ದಾಗಿದೆ. ಅಧ್ಯಕ್ಷರು ಮಾತನಾಡಿ, occupancy certificate ಕೊಡುವವರು ನೀವು, ಜವಾಬ್ದಾರಿ ಏಕೆ ಎ.ಇ.ಇ. ಗೆ ಕೊಡುತ್ತೀರಿ. ಅದರ ಬದಲು ನೀವೇ ಅದನ್ನು ಮಾಡಬಹುದಲ್ಲವೇ ಎಂದು ಕೇಳಿದ್ದು, ನಗರ ಯೋಜನೆ (ನಿರ್ದೇಶಕರು) ರವರ ಮಾನ್ಯ ಆಯುಕ್ತರ ಆದೇಶದ ಮೇರೆಗೆ ತಾವುಗಳು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿ ಮುಂದೆ ಹಿರಿಯ ಅಧಿಕಾರಿಗಳು ಯಾವ ವಿಧವಾದ ಆದೇಶ ನೀಡುವರೂ ಅದೇ ರೀತಿ ಕಾರ್ಯನಿರ್ವಹಿಸುವುದಾಗಿ ತಿಳಿಸಿರುತ್ತಾರೆ.

**ಮಾಹಿತಿ ತಂತ್ರಜ್ಞಾನ ಸಲಹೆಗಾರರು** ವಿಷಯಕ್ಕೆ ಸಂಬಂಧಪಟ್ಟಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಾಹಿತಿ ತಂತ್ರಜ್ಞಾನ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಮುಖ್ಯವಾಗಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಪೂರ್ವ ವಲಯ ಹೊರತುಪಡಿಸಿ ಎಲ್ಲಾ ವಲಯಗಳಲ್ಲೂ ಬಯೋಮೆಟ್ರಿಕ್ ವ್ಯವಸ್ಥೆ ಅಳವಡಿಸಲಾಗಿದೆ. ನಮ್ಮ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡುವಂತಹ ತರಬೇತಿ ಕೇಂದ್ರವನ್ನು ತೆರೆಯುವ ಯೋಜನೆ ಇದೆ. ಜೊತೆಗೆ ಕಟ್ಟಡದ 5ನೇ ಮಹಡಿಯಲ್ಲಿ ಎಲ್ಲಾ ಗಣಕಯಂತ್ರಗಳಿಗೆ ಸಂಬಂಧಪಟ್ಟ Server ಅನ್ನು ಒಂದೇ ಕಡೆ ಇಡುವುದಕ್ಕೆ ವ್ಯವಸ್ಥೆಯನ್ನು ಮಾಡಲಾಗಿದೆ.

**ಉಪ ಆಯುಕ್ತರು (ಕಲ್ಯಾಣ):-** ಕಲ್ಯಾಣ ಕಾರ್ಯಗಳಿಗೆ ಸಂಬಂಧಪಟ್ಟಂತೆ ಹೇಳಬೇಕಾದರೆ ಯಾವುದಾದರೂ ಒಂದು ಸ್ಕೀಮ್ ತಂದರೆ ಅದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಒಂದು ಸಾಫ್ಟ್‌ವೇರ್ ಮಾಡಬೇಕು. ಫಲಾನುಭವಿಗಳು ಅನುದಾನದಡಿಯಲ್ಲಿ ಪಡೆದಂತಹ ಸೌಲಭ್ಯಗಳನ್ನು ಮತ್ತೊಮ್ಮೆ ಎಲ್ಲಿಯೂ ಪಡೆಯಲು ಅವಕಾಶವಿರಬಾರದು. ಒಂದು ವೇಳೆ ಮತ್ತೊಮ್ಮೆ ಅವರು ಸೌಲಭ್ಯಗಳನ್ನು ಪಡೆಯುವಂತಹ ಸಂದರ್ಭದಲ್ಲಿ ಅವರು ಹೆಬ್ಬೆಟ್ಟಿನ ಗುರುತು ನಮೂದಿಸಿದರೆ ಅವರ ಸಂಪೂರ್ಣ ಮಾಹಿತಿ ಬರಬೇಕು ಮತ್ತು ಮರು ಸೌಲಭ್ಯಕ್ಕಾಗಿ ಅರ್ಜಿಸಲ್ಲಿಸಿದ್ದರೆ ಅದು omission ಆಗಬೇಕು. ಈ ರೀತಿಯಾದಂತಹ ಸಾಫ್ಟ್‌ವೇರ್ ಜಾರಿಗೆ ತರಬೇಕೆಂದು ಹೇಳಿದರು.

**ಜಂಟಿ ನಿರ್ದೇಶಕರು ಪಶುಪಾಲನೆ:-** ಬೀದಿ ನಾಯಿಗಳ ನಿರ್ವಹಣೆ, ದನಗಳನ್ನು ಹಿಡಿಯುವುದು, ಹಂದಿಗಳ ನಿರ್ವಹಣೆ ಮುಂತಾದವು ಪಶುಪಾಲನೆ ಇಲಾಖೆಗೆ ಸಂಬಂಧಿಸಿದ್ದಾಗಿದ್ದು, ಸಿಬ್ಬಂದಿಗಳ ಕೊರತೆಯಿರುತ್ತದೆ. ಆದುದರಿಂದ ಅಧ್ಯಕ್ಷರು ಮಾತನಾಡಿ ಪಾಶುಪಾಲನೆ ಮತ್ತು ಆರೋಗ್ಯ ಇಲಾಖೆಯವರು ಸೇರಿಕೊಂಡು ಜಂಟಿಯಾಗಿ ಕಾರ್ಯನಿರ್ವಹಿಸಿದರೆ ಅನುಕೂಲವಾಗುತ್ತದೆಯೆಂದು ಹೇಳಿದರು.

ಸಿಬ್ಬಂದಿಗಳ ಹಾಜರಾತಿ ಮತ್ತು ಗುರುತಿನ ಚೀಟಿ ಬಗ್ಗೆ ಅಧ್ಯಕ್ಷರು ಮಾತನಾಡಿ ಪ್ರತಿಯೊಬ್ಬರು ಗುರುತಿನ ಚೀಟಿಯನ್ನು ತಪ್ಪದೇ ಹಾಕಿಕೊಳ್ಳಬೇಕು ಮತ್ತು ಹಾಜರಾತಿ ಪುಸ್ತಕವನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ನಾಲ್ಕನೇ ದರ್ಜೆ ನೌಕರರು ತಪ್ಪದೇ ಸಮವಸ್ತ್ರವನ್ನು ಧರಿಸಬೇಕು. ಅಧಿಕಾರಿಗಳ ಮಟ್ಟದಲ್ಲೂ ಈ ಸಮವಸ್ತ್ರವನ್ನು ಜಾರಿಗೆ ತಂದರೆ ಅಧಿಕಾರಿಗಳು ಯಾರು ಎಂದು ಗುರುತಿಸಲು ಅನುಕೂಲವಾಗುತ್ತದೆ. ಈ ರೀತಿಯಾದಂತಹ ಪದ್ಧತಿ ಜಾರಿಗೆ ತರುವ ಬಗ್ಗೆ ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ಅಭಿಪ್ರಾಯವನ್ನು ಕೇಳಿದರು. ಇದರಿಂದ ಕಛೇರಿಯಲ್ಲಿ ಶಿಸ್ತನ್ನು ಕಾಪಾಡಲು ಸಾಧ್ಯವಾಗುತ್ತದೆಯೆಂದು ಹೇಳಿದರು. ಪ್ರತಿ ಕಛೇರಿಯಲ್ಲೂ

ಚಲನವಲನ ವಹಿ ನಿರ್ವಹಣೆ (Movement Register maintain) ಮಾಡಬೇಕು. ಕಛೇರಿ ಸಿಬ್ಬಂದಿಗಳು ಮಾತ್ರವಲ್ಲದೇ, ಕಛೇರಿ ಕಾರ್ಯನಿರ್ವಾಹಕ ಸಿಬ್ಬಂದಿ/ಅಧಿಕಾರಿಗಳು ಸಹ ತಾವು ಎಲ್ಲಿಯಾದರೂ ಹೋಗಬೇಕಾದರೆ ಇಂತಹ ಕಡೆ ಹೋಗಿದ್ದೇವೆ ಎಂದು (Movement Register) ಚಲನವಲನ ವಹಿಯಲ್ಲಿ ಬರೆದಿಡಬೇಕು. ಒಂದು ವೇಳೆ ನಾವು ಹೋಗಿ ಚೆಕ್ ಮಾಡಿದರೆ ಅವರು ಬರೆದಿಟ್ಟಂತಹ ಸ್ಥಳದಲ್ಲಿ ಇರಬೇಕು. ಇಲ್ಲದಿದ್ದರೆ ವಾಪಾಸ್ಸು ಕಛೇರಿಯಲ್ಲಿ ಇರಬೇಕೆಂದು ಹೇಳಿದರು.

ಕಛೇರಿಯ ಸಿಬ್ಬಂದಿ ವರ್ಗದವರಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಕ್ರಮ ಅದರಲ್ಲೂ ಅತೀ ಮುಖ್ಯವಾಗಿ ಮಹಿಳಾ ಸಿಬ್ಬಂದಿಗಳಿಗೆ ಶೌಚಾಲಯದ ವ್ಯವಸ್ಥೆಯು ಸಮರ್ಪಕವಾಗಿರುವುದಿಲ್ಲ. ಅದುದರಿಂದ ಎಲ್ಲೆಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದೆಯೋ ವರದಿ ನೀಡಿದ್ದಲ್ಲಿ ಮೂಲಭೂತ ಸೌಕರ್ಯದ ವ್ಯವಸ್ಥೆ ಮಾಡುತ್ತೇವೆ ಎಂದು ಅಧ್ಯಕ್ಷರು ಹೇಳಿದರು.

ಕೊನೆಯದಾಗಿ, Cadre & Recruitment (C & R) ಬಗ್ಗೆ ಜಂಟಿ ಆಯುಕ್ತರು, ಉಪ ಆಯುಕ್ತರು ಮತ್ತು ಸಹಾಯಕ ಆಯುಕ್ತರು (ಆಡಳಿತ) ಇವರುಗಳೆಲ್ಲಾ ಒಟ್ಟಾಗಿ ಸೇರಿಕೊಂಡು ಸಭೆಯನ್ನು ಕರೆದು ಯಾವ ಯಾವ ಹುದ್ದೆ ಬೇಕು, ಯಾವ ಯಾವ ಹುದ್ದೆ ಬೇಡ ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ ಹೆಚ್ಚಿನ ಮಾಹಿತಿಗಳು ಇದ್ದಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳೋಣ ಹಿಂದೆ ನಡೆದಂತಹ ವಿಷಯಗಳನ್ನೆಲ್ಲಾ ಬಿಟ್ಟು ಮುಂದೆ ಪಾಲಿಕೆಗೆ ಅನುಕೂಲವಾಗುವಂತಹ ಕೆಲಸಕಾರ್ಯಗಳನ್ನು ಮಾಡುವುದರ ಬಗ್ಗೆ ಚಿಂತಿಸೋಣ. ಇದಕ್ಕೆ ನಿಮ್ಮೆಲ್ಲರ ಸಹಕಾರ ತುಂಬಾ ಅಗತ್ಯವಾಗಿರುತ್ತದೆಯೆಂದು ಹೇಳುವುದರ ಮೂಲಕ ಅಧ್ಯಕ್ಷರು ಸಭೆಯನ್ನು ಮುಕ್ತಾಯಗೊಳಿಸಿದರು.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 28-05-2011 ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರುಗಳು**
**ಶ್ರೀಯುತರುಗಳಾದ**

1. ಹೆಚ್ ಆರ್. ಕೃಷ್ಣಪ್ಪ, ಅಧ್ಯಕ್ಷರು
2. ವೀಣಾ ನಾಗರಾಜ್, ಸದಸ್ಯರು
3. ಮುನಿಸ್ವಾಮಿಗೌಡ, ಸದಸ್ಯರು
4. ಎ.ವಿಜಯರಮೇಶ್, ಸದಸ್ಯರು
5. ಕೆ.ಜಿ ಯಶೋಧ, ಸದಸ್ಯರು
6. ವೈ.ಆರ್. ಗೌರಮ್ಮ, ಸದಸ್ಯರು
7. ಲಲಿತ ಮುಕುಂದರಾವ್, ಸದಸ್ಯರು
8. ಎಸ್.ಎಂ. ಮುರುಗೇಶ್ ಮೊದಲಿಯರ್,ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಉಪ ಆಯುಕ್ತರು (ಆಡಳಿತ)
ಮುಖ್ಯ ಲೆಕ್ಕಾಧಿಕಾರಿಗಳು
ಸಹಾಯಕರ ಆಯುಕ್ತರು (ಆಡಳಿತ)
ಸಹಾಯಕರ ಆಯುಕ್ತರು (ಟಿಡಿಆರ್)
ಸಹಾಯಕರ ಆಯುಕ್ತರು (ನೇಮಕಾತಿ)
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ವಿಶೇಷ ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯದ ಸಂಖ್ಯೆ: ಸಿಆಸುಸ್ಥಾಸ/20/2010-11**

ದಿನಾಂಕ: 17-02-2010 ರ ಆಯುಕ್ತರ ಸಂಖ್ಯೆ: ಸ.ಆ/ಟಿ.ಡಿ.ಆರ್/242/2010-11 ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯಗಳಿಗಾಗಿ ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ಕೆ.ಎಂ.ಸಿ. ಕಾಯ್ದೆ 1976 ರ ನಿಯಮ 20(ಎ) ರನ್ವಯ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಅವರ ಹುದ್ದೆಯ ಎದುರು ಕಾಣಿಸಿರುವ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ ದಿನಾಂಕ: 03-03-2010 ರಂದು ಉಲ್ಲೇಖ (3) ರನ್ವಯ ನೇಮಕ ಮಾಡಿಕೊಂಡು, ಕರ್ತವ್ಯಕ್ಕೆ ನಿಯುಕ್ತಿಗೊಳಿಸಲಾಗಿತ್ತು.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ನೇಮಕ ಮಾಡಲಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಆಯುಕ್ತರು | 16,000 | 3 |
| 2 | ತಹಶೀಲ್ದಾರ್‌ರು | 14,000 | 4 |
| 3 | ಶಿರಸ್ತೇದಾರ್‌ರು | 12,000 | 4 |
| 4 | ಕಂದಾಯ ನಿರೀಕ್ಷಕರು/ಪ್ರ.ದ.ಸ | 10,000 | 8 |
| 5 | ಮೋಜಣಿದಾರರು | 10,000 | 8 |
| 6 | ಗ್ರಾಮಲೆಕ್ಕಿಗರು/ದ್ವಿ.ದ.ಸ | 8,000 | 8 |

ಈ ಒಂದು ವರ್ಷದ ಗುತ್ತಿಗೆ ಅವಧಿಯು ದಿನಾಂಕ: 02-03-2011 ಕ್ಕೆ ಅಂತ್ಯವಾಗುತ್ತಿದ್ದು, ಹಾಲಿ ಟಿ.ಡಿ.ಆರ್/ಭೂಸ್ವಾಧೀನ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ದಿನಾಂಕ: 28-02-2011 ರ ಅಪರಾಹ್ನದಿಂದ ಅನ್ವಯವಾಗುವಂತೆ ಬಿಡುಗಡೆಗೊಳಿಸಬೇಕಾಗಿರುತ್ತದೆ.

Rcd 2 copies

| ಕ್ರ. ಸಂ. | ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರ ಹೆಸರು | ಹುದ್ದೆ | ಕರ್ತವ್ಯ ನಿರ್ವಹಿಸುತ್ತಿರುವ ವಲಯ |
|---|---|---|---|
| 1 | ಶ್ರೀ ಚಿಕ್ಕವೆಂಕಟಪ್ಪ | ನಿವೃತ್ತ ಸಹಾಯಕ ಆಯುಕ್ತರು | ಬೊಮ್ಮನಹಳ್ಳಿ/ದಕ್ಷಿಣ |
| 2 | ಶ್ರೀ ಮುಡುಪಣ್ಣ | ನಿವೃತ್ತ ತಹಶೀಲ್ದಾರ್ | ದಾಸರಹಳ್ಳಿ/ಯಲಹಂಕ |
| 3 | ಶ್ರೀ ಎಂ.ಕೃಷ್ಣಪ್ಪ | ನಿವೃತ್ತ ತಹಶೀಲ್ದಾರ್ | ಮಹದೇವಪುರ/ಪೂರ್ವ |
| 4 | ಶ್ರೀ ಕೆ.ಆರ್.ಮಾಗಡಯ್ಯ | ನಿವೃತ್ತ ತಹಶೀಲ್ದಾರ್ | ಆರ್.ಆರ್.ನಗರ/ಪಶ್ಚಿಮ |
| 5 | ಶ್ರೀ ಕಾಡಯ್ಯ | ನಿವೃತ್ತ ತಹಶೀಲ್ದಾರ್ | ದಕ್ಷಿಣ/ಬೊಮ್ಮನಹಳ್ಳಿ |
| 6 | ಶ್ರೀ ರಾಮಯ್ಯ | ನಿವೃತ್ತ ಶಿರಸ್ತೇದಾರ್ | ಆರ್.ಆರ್.ನಗರ/ ದಾಸರಹಳ್ಳಿ |
| 7 | ಶ್ರೀ ಹೆಚ್.ಎಂ.ತಾರಾನಾಥ್ | ನಿವೃತ್ತ ಶಿರಸ್ತೇದಾರ್ | ಪೂರ್ವ/ ಮಹದೇವಪುರ |
| 8 | ಶ್ರೀ ಹೆಚ್.ಆರ್.ಶಿವಲಿಂಗಯ್ಯ | ನಿವೃತ್ತ ಶಿರಸ್ತೇದಾರ್ | ದಕ್ಷಿಣ/ಬೊಮ್ಮನಹಳ್ಳಿ |
| 9 | ಶ್ರೀ ಸಿ.ಎಂ.ಚಂದ್ರಪ್ಪ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಪೂರ್ವ |
| 10 | ಶ್ರೀ ಹೆಚ್.ರಾಮಾಂಜನಯ್ಯ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ದಾಸರಹಳ್ಳಿ |
| 11 | ಶ್ರೀ ವೀರಭದ್ರಾಚಾರಿ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಬೊಮ್ಮನಹಳ್ಳಿ |
| 12 | ಶ್ರೀ ಎನ್.ಜಿ.ಶ್ರೀನಿವಾಸರಾವ್ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಮಹದೇವಪುರ |
| 13 | ಶ್ರೀ ಹೆಚ್.ಎಸ್.ನಾರಾಯಣಮೂರ್ತಿ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಆರ್.ಆರ್.ನಗರ |
| 14 | ಶ್ರೀ ಬಸವರಾಜ್.ವೈ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಕೇಂದ್ರ ಕಛೇರಿ |
| 15 | ಶ್ರೀ ಡಿ.ವಿ.ಹುಚ್ಚೀರೇಗೌಡ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ದಕ್ಷಿಣ |
| 16 | ಶ್ರೀ ಬಿ.ಎನ್.ಅಣ್ಣೋಜಿರಾವ್ | ನಿವೃತ್ತ ಮೋಜಣಿದಾರರು | ಯಲಹಂಕ |
| 17 | ಶ್ರೀ ಎಸ್.ಎಂ.ಕೃಷ್ಣಮೂರ್ತಿರಾಜ್ | ನಿವೃತ್ತ ಮೋಜಣಿದಾರರು | ದಾಸರಹಳ್ಳಿ |
| 18 | ಶ್ರೀ ಲಕ್ಷ್ಮಣ ರಾಥೋಡ್ | ನಿವೃತ್ತ ಮೋಜಣಿದಾರರು | ದಕ್ಷಿಣ |
| 19 | ಶ್ರೀ ಹೆಚ್.ಜಿ.ಚೆನ್ನಯ್ಯ | ನಿವೃತ್ತ ಮೋಜಣಿದಾರರು | ಆರ್.ಆರ್.ನಗರ |
| 20 | ಶ್ರೀ ಹೆಚ್.ಕೆ.ಕಾಳೇಗೌಡ | ನಿವೃತ್ತ ಮೋಜಣಿದಾರರು | ಬೊಮ್ಮನಹಳ್ಳಿ |
| 21 | ಶ್ರೀ ಎ.ಅಲ್ಲಾಬಕ್ಷಿ | ನಿವೃತ್ತ ಮೋಜಣಿದಾರರು | ಪೂರ್ವ |
| 22 | ಶ್ರೀ ಸಿದ್ದಲಿಂಗಪ್ಪ | ನಿವೃತ್ತ ಮೋಜಣಿದಾರರು | ಮಹದೇವಪುರ |
| 23 | ಶ್ರೀ ಬಿ.ವೋಲೇಕರ್ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಮಹದೇವಪುರ |
| 24 | ಶ್ರೀ ಬಾಬುರುದ್ರಪ್ಪ ಅಗಸೀಮನೆ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಪೂರ್ವ |
| 25 | ಶ್ರೀ ಬಾಹುಬಲಿ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಕೇಂದ್ರ ಕಛೇರಿ |
| 26 | ಶ್ರೀ ಎಸ್.ಕೆ.ರಂಗಪ್ಪ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಯಲಹಂಕ |
| 27 | ಶ್ರೀ ಬಿ.ಎನ್.ಶಂಕರಯ್ಯ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಪಶ್ಚಿಮ |
| 28 | ಶ್ರೀ ಹೆಚ್.ಸಿ.ರಾಮಕೃಷ್ಣಯ್ಯ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ದಾಸರಹಳ್ಳಿ |
| 29 | ಶ್ರೀ ಕೆ.ಶಿವಣ್ಣ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಆರ್.ಆರ್.ನಗರ |

ಮೇಲ್ಕಂಡ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳನ್ನು ಮುಂದುವರೆಸುವ/ಮರುನೇಮಕ ಮಾಡಿಕೊಳ್ಳುವ ಅಗತ್ಯತೆಯ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳಲ್ಲಿನ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯದ ಪ್ರಗತಿ ಪರಿಶೀಲನೆ ಮಾಡಲಾಗಿದ್ದು, ಅದರ ವಿವರಗಳು ಈ ಕೆಳಕಂಡಂತೆ ಇರುತ್ತವೆ.

1. **ಯಲಹಂಕ ವಲಯ :-** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 7 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 3,000 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 159 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ವಲಯದ ಜಂಟಿ ಆಯುಕ್ತರು ತಮ್ಮ ವರದಿಯಲ್ಲಿ ಹಾಲಿ ಇರುವ ತಹಶೀಲ್ದಾರ್‌ರವರನ್ನು ಬದಲಾಯಿಸಿ ಬೇರೊಬ್ಬರನ್ನು ಪೂರ್ಣಪ್ರಮಾಣದಲ್ಲಿ ನೀಡುವಂತೆ, ಹಾಲಿ ತೆಗೆದುಹಾಕಲಾಗಿರುವ ಶಿರಸ್ತೇದಾರ್ ಕಾಳಯ್ಯ ಇವರನ್ನು ಮುಂದುವರೆಸುವಂತೆ, ಹಾಲಿ ಇರುವ ಗ್ರಾಮ ಲೆಕ್ಕಿಗರ ಬದಲಾಗಿ ಹೆಚ್ಚುವರಿಯಾಗಿ ಒಬ್ಬ ಕಂದಾಯ ನಿರೀಕ್ಷಕರು ಹಾಗೂ ಸರ್ವೆಯರ್‌ರವರನ್ನು ನೀಡುವಂತೆ ಕೋರಿರುತ್ತಾರೆ. ಈ ವಲಯಕ್ಕೆ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಇಬ್ಬರು ಕಂದಾಯ ನಿರೀಕ್ಷಕರು ಮತ್ತು ಇಬ್ಬರು ಸರ್ವೆಯರ್ ರವರನ್ನು ನಿಯುಕ್ತಿಗೊಳಿಸಬಹುದಾಗಿರುತ್ತದೆ. ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಲೆಕ್ಕಿಗರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿರುತ್ತದೆ.
2. **ಮಹದೇವಪುರ ವಲಯ :-** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 11 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 4,187 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 99 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ಯಾವ ಹುದ್ದೆಗಳನ್ನು ಹಾಗೂ ಯಾವ ನೌಕರರನ್ನು ಮುಂದುವರೆಸಬೇಕು ಎಂಬ ಬಗ್ಗೆ ವರದಿ ನಿರೀಕ್ಷಿಸಲಾಗಿದೆ. ಆದಾಗ್ಯೂ ಪ್ರಗತಿ ವರದಿ ಪರಿಶೀಲನೆಯಂತೆ, ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಒಬ್ಬ ಕಂದಾಯ ನಿರೀಕ್ಷಕರು ಮತ್ತು ಒಬ್ಬ ಸರ್ವೆಯರ್ ರವರ ಹುದ್ದೆಯನ್ನು ಮುಂದುವರೆಸಬಹುದಾಗಿರುತ್ತದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿರುತ್ತದೆ.
3. **ದಾಸರಹಳ್ಳಿ ವಲಯ :-** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 17 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 17 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿರುತ್ತದೆ. ಆದರೆ ವಲಯದ ಜಂಟಿ ಆಯುಕ್ತರು ಕಂದಾಯ ನಿರೀಕ್ಷಕರನ್ನು ಹೊರತುಪಡಿಸಿ ಉಳಿದವರನ್ನು ಮುಂದುವರೆಸಲು ಕೋರಿದ್ದಾರೆ. ಇವರು ಸಲ್ಲಿಸಿರುವ ಪ್ರಗತಿ ವರದಿಯ ಅನುಸಾರ ಒಬ್ಬ ತಹಶೀಲ್ದಾರ್ ರವರನ್ನು ದಾಸರಹಳ್ಳಿ ಮತ್ತು ಆರ್.ಆರ್.ನಗರ ವಲಯಕ್ಕೆ ನಿಯೋಜಿಸಿ, ಒಬ್ಬ ಗ್ರಾಮ ಲೆಕ್ಕಿಗ ಮತ್ತು ಒಬ್ಬ ಸರ್ವೆಯರ್ ರವರನ್ನು ಮುಂದುವರೆಸಬಹುದಾಗಿರುತ್ತದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಕಂದಾಯ ನಿರೀಕ್ಷಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಬಹುದಾಗಿದೆ.
4. **ಬೊಮ್ಮನಹಳ್ಳಿ ವಲಯ :-** ಈ ವಲಯದಲ್ಲಿ ಒಬ್ಬ ಸಹಾಯಕ ಆಯುಕ್ತರು, ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 38 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 13 ರಸ್ತೆಗಳ ಅಗಲೀಕರಣ ಕಾರ್ಯ ಕೈಗೊಂಡಿದ್ದು, ಅಂದಾಜು 3,14 ಸಂಖ್ಯೆಯ

ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿದೆ ಈ ವಲಯದಲ್ಲಿ 7 ಡಿ.ಆರ್.ಸಿ ಗಳನ್ನು ನೀಡಲಾಗಿದೆ, 79 ಸ್ವತ್ತುಗಳಿಗೆ ಕಡತ ತಯಾರಿಸಲಾಗಿದೆ ಎಂದು ತಿಳಿಸಲಾಗಿರುತ್ತದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಯಾವ ಹುದ್ದೆಗಳನ್ನು ಹಾಗೂ ಯಾವ ನೌಕರರನ್ನು ಮುಂದುವರೆಸಬೇಕು ಎಂಬ ಬಗ್ಗೆ ವರದಿ ನಿರೀಕ್ಷಿಸಲಾಗಿದೆ. ಆದಾಗ್ಯೂ ಈ ವಲಯದ ಒಂದು ವರ್ಷದ ಪ್ರಗತಿ ಪರಿಶೀಲಿಸಲಾಗಿ ಒಬ್ಬ ಸರ್ವೆಯರ್ ಹಾಗೂ ಒಬ್ಬ ಕಂದಾಯ ನಿರೀಕ್ಷಕರ ಹುದ್ದೆಯನ್ನು ಮಾತ್ರ ಮುಂದುವರೆಸಬಹುದಾಗಿದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಆಯುಕ್ತರು, ಶಿರಸ್ತೇದಾರ್ ಮತ್ತು ಕಂದಾಯ ನಿರೀಕ್ಷಕರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿದೆ.

5. **ರಾಜರಾಜೇಶ್ವರಿನಗರ ವಲಯ :-** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 17 ರಸ್ತೆಗಳನ್ನು ರಸ್ತೆ ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 17 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಯಾವ ಹುದ್ದೆಗಳನ್ನು ಹಾಗೂ ಯಾವ ನೌಕರರನ್ನು ಮುಂದುವರೆಸಬೇಕು ಎಂಬ ಬಗ್ಗೆ ವರದಿ ನಿರೀಕ್ಷಿಸಲಾಗಿದೆ. ಆದಾಗ್ಯೂ ಈ ವಲಯದ ಒಂದು ವರ್ಷದ ಪ್ರಗತಿ ಪರಿಶೀಲಿಸಲಾಗಿ ಒಬ್ಬ ಸರ್ವೆಯರ್ ಹಾಗೂ ಒಬ್ಬ ಶಿರಸ್ತೇದಾರರ ಹುದ್ದೆಯನ್ನು ಮಾತ್ರ ಮುಂದುವರೆಸಬಹುದಾಗಿದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ತಹಶೀಲ್ದಾರ್ ಮತ್ತು ಕಂದಾಯ ನಿರೀಕ್ಷಕರ ಹುದ್ದೆಯನ್ನು ಯಲಹಂಕ ವಲಯಕ್ಕೆ ವರ್ಗಾಯಿಸಿ ನಿಯೋಜಿಸಬಹುದಾಗಿದೆ. ಹಾಲಿ ಇರುವ ಗ್ರಾಮ ಲೆಕ್ಕಿಗರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿದೆ.

6. **ಪೂರ್ವ ವಲಯ :-** ಈ ವಲಯದಲ್ಲಿ ಒಬ್ಬ ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 17 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 1,669 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 4 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಆದರೆ, ವಲಯ ಜಂಟಿ ಆಯುಕ್ತರಿಂದ ಬಂದಿರುವ ವರದಿ ಪ್ರಕಾರ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಹಾಲಿ ಇರುವ ಶಿರಸ್ತೇದಾರ್, ಗ್ರಾಮ ಲೆಕ್ಕಿಗರನ್ನು ಮತ್ತು ಸರ್ವೆಯರ್‌ರವರನ್ನು ಮುಂದುವರೆಸಿ, ಕಂದಾಯ ನಿರೀಕ್ಷಕರನ್ನು ಬೊಮ್ಮನಹಳ್ಳಿ ವಲಯಕ್ಕೆ ನಿಯುಕ್ತಿಗೊಳಿಸಬಹುದಾಗಿದೆ.

7. **ದಕ್ಷಿಣ ವಲಯ :-** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 14 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 6 ರಸ್ತೆಗಳಲ್ಲಿ ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ ಯಾವುದೇ ಡಿ.ಆರ್.ಸಿ ಗಳನ್ನು ನೀಡಿರುವುದಿಲ್ಲ. ಈ ವಲಯದ ಮೇಲ್ಕಂಡ ನಿವೃತ್ತ ನೌಕರರು ಇತ್ತೀಚಿನ ವರೆಗೆ ದಕ್ಷಿಣ ವಲಯ ಕಛೇರಿಯ ಟಿ.ಡಿ.ಆರ್/ಭೂಸ್ವಾಧೀನ ಕೆಲಸಗಳ ಜೊತೆಗೆ ಕೇಂದ್ರ ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಸೂಚಿಸಿರುವಂತೆ ಕಾರ್ಯವನ್ನು ನಿರ್ವಹಿಸಿದ್ದು, ಕದಿರೇನಹಳ್ಳಿ ಕೆಳ ಸೇತುವೆ

ನಿರ್ಮಾಣ  ಹಾಗೂ ರಸ್ತೆ ಅಗಲೀಕರಣ ಕಾಮಗಾರಿಗೆ ಒಳಪಡುವ 45 ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಕಡತಗಳನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಈಗ ಇವರನ್ನು ದಕ್ಷಿಣ ವಲಯದಲ್ಲಿನ ಕೆಲಸಗಳನ್ನು ನಿರ್ವಹಿಸಲು ವಲಯಿ ಕಛೇರಿಗೆ ನಿಯೋಜಿಸಲಾಗಿದೆ. ವಲಯದ ಅಪರ ಆಯುಕ್ತರ ವರದಿಯ ಪ್ರಕಾರ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಮತ್ತು ಸರ್ವೆಯರ್‌ರವರನ್ನು ಮುಂದುವರೆಸಲು ಕೋರಿರುತ್ತಾರೆ. ಈ ವಲಯದ  ಪ್ರಗತಿ ಪರಿಶೀಲಿಸಲಾಗಿ ಒಬ್ಬ ಕಂದಾಯ ನಿರೀಕ್ಷಕರು ಹಾಗೂ ಸರ್ವೆಯರ್‌ರವರನ್ನು ಮುಂದುವರೆಸಬಹುದಾಗಿದೆ. ಗ್ರಾಮ ಲೆಕ್ಕಿಗರನ್ನು ಕೇಂದ್ರ ಕಛೇರಿ ಭೂಸ್ವಾಧೀನ ಮತ್ತು ಟಿ.ಡಿ.ಆರ್ ಶಾಖೆಗೆ ನಿಯೋಜಿಸಬಹುದಾಗಿದೆ. ಹಾಲಿ ಇರುವ ತಹಶೀಲ್ದಾರ್‌ರವರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿದೆ.

8. **ಪಶ್ಚಿಮ ವಲಯ :-** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ ಹಲವು ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ ಯಾವುದೇ ಡಿ.ಆರ್.ಸಿ ಗಳನ್ನು ನೀಡಲಾಗಿರುವುದಿಲ್ಲ. ಈ ವಲಯದಲ್ಲಿ ಯಾವುದೇ ಪ್ರಗತಿ ಆಗಿರುವುದಿಲ್ಲ ಹಾಗೂ ವರದಿ ಸಹ ಬಂದಿರುವುದಿಲ್ಲ, ಈಗ ಈ ವಲಯದಲ್ಲಿ ಗ್ರಾಮ ಲೆಕ್ಕಿಗರು ಇದ್ದು ಆರ್.ಆರ್.ನಗರ ವಲಯದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಉಳಿದ ಯಾವುದೇ ನೌಕರರು ಕೆಲಸ ಮಾಡುತ್ತಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಅವಶ್ಯಕತೆ ಉಂಟಾದಲ್ಲಿ ಬೇರೆ ವಲಯಗಳಿಂದ ನಿಯೋಜಿಸಬಹುದಾಗಿದೆ.

9. **ಕೇಂದ್ರ ಕಛೇರಿ :-** ಕೇಂದ್ರ ಕಛೇರಿಯ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಶಾಖೆಯಲ್ಲಿ ಒಬ್ಬ ಪ್ರ.ದ.ಸ ಹಾಗೂ ಒಬ್ಬ ದ್ವಿ.ದ.ಸ/ಗ್ರಾ.ಲೆ ರವರು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಮುಂದುವರೆಸಬಹುದಾಗಿರುತ್ತದೆ.

**ಮೇಲ್ಕಂಡ ನಿಯೋಜಿಸಬಹುದಾದ ಅಧಿಕಾರಿ/ನೌಕರರನ್ನು ಕೆಲಸ ಒತ್ತಡ ಮತ್ತು ಅಗತ್ಯತೆಗನುಗುಣವಾಗಿ ವರ್ಗಾಯಿಸುವ ಮತ್ತು ಬಿಡುಗಡೆಗೊಳಿಸುವ ಅಧಿಕಾರವನ್ನು ಕಾಯ್ದಿರಿಸಿ ಪ್ರಸ್ತಾವನೆಯನ್ನು ಸಲ್ಲಿಸಿದೆ.**

ಮೇಲೆ ವಿವರಿಸಲಾದ  ಅಂಶಗಳ ಹಿನ್ನೆಲೆಯಲ್ಲಿ 2011-12 ನೇ ಸಾಲಿಗೆ ಈ ಕೆಳಗೆ ತಿಳಿಸಲಾಗಿರುವಂತೆ ಕೇಂದ್ರ ಕಛೇರಿ ಹಾಗೂ ವಲಯ ಕಛೇರಿಗಳಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯಗಳಿಗೆ ಕೆಳಕಂಡ ನಿವೃತ್ತ ಕಂದಾಯ ಅಧಿಕಾರಿ/ನೌಕರರುಗಳ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಡಲಾಗಿದೆ.

| ಕ್ರ ಸಂ | ವಲಯ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ನಿವೃತ್ತ ಕಂದಾಯ ಅಧಿಕಾರಿ/ನೌಕರರು | | | | | | ವಲಯ ಅಪರ/ಜಂಟಿ ಆಯುಕ್ತರು ಕೋರಿರುವ ಹುದ್ದೆ | | | | | ಅಗತ್ಯತೆಯ ಅನುಸಾರ ಮರು ನೇಮಕಾತಿ ಮಾಡಬಹುದಾದ ಹುದ್ದೆಗಳು | | | | | ಒಟ್ಟು ಹುದ್ದೆ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|
| | | AC | Tah | Shr | RI | VA | Surveyor | Tah | Shr | RI | VA | Surveyor | Tah | Shr | RI | VA | Surveyor | |
| 1 | ಯಲಹಂಕ | – | 1 | – | – | 1 | 1 | 1 | 1 | 2 | – | 2 | 1 | 1 | 2 | – | 2 | 6 |
| 2 | ದಾಸರಹಳ್ಳಿ | – | | | 1 | 1 | 1 | 1 | 1 | – | 1 | 1 | 1 | – | – | 1 | 1 | 3 |
| 3 | ಮಹದೇವಪುರ | – | 1 | 1 | 1 | 1 | 1 | – | – | – | – | – | 1 | – | 1 | – | 1 | 3 |
| 4 | ಪೂರ್ವ | – | | | 1 | 1 | 1 | – | 1 | 1 | 1 | 1 | – | 1 | 1 | 1 | 1 | 4 |
| 5 | ಬೊಮ್ಮನಹಳ್ಳಿ | 1 | 1 | 1 | 1 | – | 1 | – | – | – | – | – | – | – | 1 | – | 1 | 2 |
| 6 | ದಕ್ಷಿಣ | | | – | 1 | – | 1 | 1 | 1 | 1 | 1 | 1 | – | – | 1 | – | 1 | 2 |
| 7 | ರಾ.ರಾ.ನಗರ | – | 1 | 1 | 1 | 1 | 1 | – | – | – | – | – | – | 1 | – | – | 1 | 2 |
| 8 | ಪಶ್ಚಿಮ | – | | – | – | 1 | – | – | – | – | – | – | – | – | – | – | – | – |
| 9 | ಕೇಂದ್ರ ಕಛೇರಿ | – | – | – | 1 | 1 | – | – | – | 1 | 1 | – | – | – | 1 | 1 | – | 2 |
| | **ಒಟ್ಟು** | 1 | 4 | 3 | 7 | 7 | 7 | 3 | 4 | 5 | 4 | 5 | 3 | 3 | 7 | 3 | 8 | 24 |

ಮೇಲೆ ತಿಳಿಸಿರುವಂತೆ ಭೂಸ್ವಾಧೀನ ಹಾಗೂ ಟಿ.ಡಿ.ಆರ್ ಕಾರ್ಯ ನಿರ್ವಹಣೆಗಾಗಿ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳ ಸೇವೆಯು ಪಾಲಿಕೆಗೆ ಅತ್ಯಗತ್ಯವಾಗಿ ಬೇಕಾಗಿದ್ದು, ಇವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡಂತೆ ಮಾಹೆಯಾನ ಗೌರವ ಧನವನ್ನು(ಸಂಚಿತ ವೇತನ) ನಿಗಧಿಪಡಿಸಿ ಮರುನೇಮಕ ಮಾಡಿಗೊಳ್ಳಲು ಯೋಜಿಸಲಾಗಿದೆ.

| ಕ್ರ. ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ಅವಶ್ಯಕ ಹುದ್ದೆಗಳ ಸಂಖ್ಯೆ |
|---|---|---|---|
| 1 | ತಹಶೀಲ್ದಾರ್‌ರು | 14,000 | 3 |
| 2 | ಶಿರಸ್ತೇದಾರ್‌ರು | 12,000 | 3 |
| 3 | ಕಂದಾಯ ನಿರೀಕ್ಷಕರು/ಪ್ರ.ದ.ಸ | 10,000 | 7 |
| 4 | ಮೋಜಣಿದಾರರು | 10,000 | 8 |
| 5 | ಗ್ರಾಮಲೆಕ್ಕಿಗರು/ದ್ವಿ.ದ.ಸ | 8,000 | 3 |
| | ಒಟ್ಟು | | 24 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಟಿ.ಡಿ.ಆರ್ ಮತ್ತು ಭೂಸ್ವಾಧೀನ ಪ್ರಕ್ರಿಯೆಗೆ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳನ್ನು ಕರ್ನಾಟಕ ಮುನಿಸಿಪಲ ಕಾರ್ಪೋರೇಷನ್ಸ್, ನಿಯಮಗಳು 1977 ರ ನಿಯಮ 20(ಎ)ರನ್ವಯ ಅವರ ಹುದ್ದೆಯ ಎದುರು ಕಾಣಿಸಿರುವ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ 2011-12 ನೇ ಸಾಲಿಗೆ ಮರುನೇಮಕ ಮಾಡಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:**

ಈ ಹಿಂದಿನ ಸ್ಥಾಯಿ ಸಮಿತಿಯು ಪ್ರಸ್ತಾವನೆ ಕುರಿತಂತೆ ಕೋರಿದ ಮಾಹಿತಿಯನ್ನು ದಿನಾಂಕ: 06-04-2011 ರಂದು ಆಯುಕ್ತರವರು ನೀಡಿದ್ದು, ಈ ಹಿನ್ನಲೆಯಲ್ಲಿ ಧೀರ್ಘವಾದ ಚರ್ಚೆಯಾದ ನಂತರ ಆಯುಕ್ತರ ದಿನಾಂಕ: 17-02-2011 ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ: ಸಿಆಸುಸ್ಥಾಸ/01/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀ ಎಂ. ಪ್ರಭಾಕರ, ನಿವೃತ್ತ ಕೆ.ಎ.ಎಸ್ ಅಧಿಕಾರಿ ಇವರನ್ನು ಈ ಕಛೇರಿ ಸಮ ಸಂಖ್ಯೆಯ ಆದೇಶ ದಿನಾಂಕ: 29-09-2007 ಹಾಗೂ 15-12-2008 ರ ಆದೇಶಗಳಂತೆ ಪಾಲಿಕೆಯಲ್ಲಿ ವಿಶೇಷ ಅಧಿಕಾರಿ (ಹಣಕಾಸು) ಆಗಿ ಕಾರ್ಯನಿರ್ವಹಿಸಲು ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲಾಗಿದ್ದು, ಸದರಿಯವರ ನಿಯೋಜನಾ ಅವಧಿಯ ದಿನಾಂಕ: 28-09-2008ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿಯವರ ನಿಯೋಜನಾವಧಿ ದಿನಾಂಕ: 28-09-2008 ರಂದು ಮುಗಿದ ನಂತರ ಪಾಲಿಕೆಯಲ್ಲಿ ಸದರಿಯವರನ್ನು ಮುಂದುವರೆಸಲು ಸದರಿ ನಿವೃತ್ತ ಅಧಿಕಾರಿಯವರಾಗಲೀ ಅಥವಾ ಮುಖ್ಯ ಲೆಕ್ಕಾಧಿಕಾರಿಯವರಾಗಲೀ ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸದೇ ಇದ್ದುದರಿಂದ ಈ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರ ಅಭಿಪ್ರಾಯ ಕೋರಲಾದಂತೆ ಮುಖ್ಯ ಲೆಕ್ಕಾಧಿಕಾರಿಯವರ ಅಭಿಪ್ರಾಯದ ವರದಿ ದಿನಾಂಕ: 29-10-2010 ರಂತೆ ಸದರಿಯವರನ್ನು ದಿನಾಂಕ: 31-12-2010ರ ವರೆಗೆ ಹಾಲಿ ಇರುವ ಷರತ್ತು ಹಾಗೂ ನಿಬಂಧನೆಗಳನ್ವಯ ಮುಂದುವರೆಸಬಹುದಾಗಿರುತ್ತದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದರೆ ಕೆ.ಸಿ.ಎಸ್.ಆರ್ ನಿಯಮ 313 (ಬಿ) (೧) ರನ್ವಯ ಒಂದು ವರ್ಷ ಮೀರಿದ ನಂತರ ಇವರನ್ನೇ ಮುಂದುವರೆಸಬೇಕಾದರೆ ಮತ್ತೊಮ್ಮೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯಬೇಕಾಗಿರುತ್ತದೆ. ಆದುದರಿಂದ ಸದರಿಯವರನ್ನು ದಿನಾಂಕ: 29-09-2008 ರಿಂದ ಅನ್ವಯವಾಗುವಂತೆ ಪಾಲಿಕೆಯಲ್ಲಿ ಮುಂದುವರೆಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಮಂಡಿಸಿರುವ ಆಯುಕ್ತರ ಸಂಖ್ಯೆ: ಬಿ12 (ಸಿ1) ಪಿ.ಆರ್/74/07-08 ದಿನಾಂಕ: 24-02-2011ರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ: 14-03-2011 ರ ನಿರ್ಣಯ, ಸದರಿ ನಿರ್ಣಯವನ್ನು ದಿನಾಂಕ: 29-03--2011 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಈ ಕಡತವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ಕುರಿತು

**ನಿರ್ಣಯ:**

ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನತೆಗಳಿಗೆ ವಿವರವಾದ ಮಾಹಿತಿಯೊಂದಿಗೆ ವರದಿ ನೀಡಿ.

ಅ) ಚರ್ಚೆಯ ಸಮಯದಲ್ಲಿ ಮುಖ್ಯ ಲೆಕ್ಕಾಧಿಕಾರಿ ರವರು ನಿವೃತ್ತ ಅಧಿಕಾರಿಗೆ ತಹಲ್‌ವರೆವಿಗೂ ವೇತನ ಪಾವತಿಸಿರುವುದಾಗಿ ತಿಳಿಸಿರುತ್ತಾರೆ. ಹಾಗಿದ್ದಲ್ಲಿ ತಹಲ್‌ವರೆವಿಗೂ ಪಾವತಿಸಿರುವ ವೇತನದ ಮೊತ್ತವೆಷ್ಟು?

ಆ) ಪ್ರಸ್ತಾವನೆಗೆ ಸಂಬಂಧಿಸಿದಂತ ಮೂಲ ಕಡತದೊಂದಿಗೆ ಮರು ಮಂಡಿಸಿ.

**ವಿಷಯದ ಸಂಖ್ಯೆ: ಸಿಆಸುಸ್ಥಾಸ/02/2011-12**

ಟಿಪ್ಪಣಿ ತಿಳಿಸಿರುವ ಕಾರಣಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಇದರ ಕಾರ್ಯವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಸುಮಾರು 225 ಚ.ಕಿ.ಮೀ ನಿಂದ 800 ಚ.ಕಿ.ಮೀ ಗೆ ಭೌಗೋಳಿಕ ವಿಸ್ತಾರಗೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯ ವಿಸ್ತಾರಗೊಂಡಿದ್ದು, ಪಾಲಿಕೆಯ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ, ಇನ್ನು ಮುಂದೆ ಅಭಿವೃದ್ಧಿಪಡಿಸಲು ಮೀಸಲಿಟ್ಟಿರುವ ಉದ್ಯಾನವನಗಳಲ್ಲಿ ಟ್ರೀ ಪಾರ್ಕ್ (ಮರಗಳ ಉದ್ಯಾನವನ)ಗಳನ್ನು ಬೆಳೆಸಲು ನಿರ್ಣಯಿಸಿರುವುದರಿಂದ ಪ್ರಸಕ್ತ ಸಾಲಿನಿಂದಲೇ ಸುಮಾರು 10 ಲಕ್ಷ ಸಸಿಗಳನ್ನು ಉದ್ಯಾನವನಗಳಲ್ಲಿ ರಸ್ತೆ ಬದಿಗಳಲ್ಲಿ ಆಟದ ಮೈದಾನದ ಸುತ್ತಲು ಹಾಗೂ ಲಭ್ಯವಿರುವ ಜಾಗಗಳಲ್ಲಿ ಸಸಿಗಳನ್ನು ಬೆಳೆಸಲು ಉದ್ದೇಶಿಸಿಲಾಗಿದ್ದು, ಈ ಹಿಂದೆ ಬೆಂಗಳೂರು ಹಸಿರು ನಗರ ಎಂದು ಕರೆಸಿಕೊಳ್ಳುತ್ತಿದ್ದ ಹೆಸರನ್ನು ಪುನರ್ ಸ್ಥಾಪಿಸಲು ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಪ್ರತಿ ವಲಯಕ್ಕೆ ಒಬ್ಬರಂತೆ 8 ತೋಟಗಾರಿಕೆ ಅಧೀಕ್ಷಕರ ಹುದ್ದೆ ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಬ್ಬರಂತೆ 26 ತೋಟಗಾರಿಕೆ ಪರಿವೀಕ್ಷಕರುಗಳನ್ನು ನಿಯೋಜಿಸಲು ಉದ್ದೇಶಿಸಲಾಗಿದ್ದು, ಪ್ರತಿ ವಲಯದ ತೋಟಗಾರಿಕೆ ಅಧೀಕ್ಷಕರು ಆಯಾ ವಲಯದ ಅಧೀಕ್ಷಕ ಅಭಿಯಂತರರು/ ಜಂಟಿ ಆಯುಕ್ತರ ಅಧೀನದಲ್ಲಿ ಕಾರ್ಯನಿರ್ವಹಿಸಲು ಸೂಚಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಪಾಲಿಕೆಯಲ್ಲಿ ಹಳೆಯ 3 ವಲಯಗಳಲ್ಲಿ ಈಗಾಗಲೇ 3 ತೋಟಗಾರಿಕೆ ಅಧೀಕ್ಷಕರು ಹಾಗೂ 12 ತೋಟಗಾರಿಕೆ ನಿರೀಕ್ಷಕರ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 5 ತೋಟಗಾರಿಕೆ ಅಧೀಕ್ಷಕರು, 14 ತೋಟಗಾರಿಕೆ ಪರಿವೀಕ್ಷಕರ ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ.

ಆದ್ದರಿಂದ ಸರ್ಕಾರಕ್ಕೆ ಸದರಿ ಹುದ್ದೆಗಳನ್ನು ಸೃಜಿಸಲು ಹಾಗೂ ಸರ್ಕಾರದ ಅನುಮೋದನೆ ನಿರೀಕ್ಷಿಸಿ, ಮುಂಬಡ್ತಿ ಮೂಲಕ/ನೇರ ನೇಮಕಾತಿ/ಎರವಲು ಸೇವೆಯ ಮೇಲೆ ಭರ್ತಿ ಮಾಡಿಕೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 25-04-2011 ರ ಬಿ12 (5ಹೆಚ್) ಪಿಆರ್-05/11-12 ರ ಟಿಪ್ಪಣಿ.

**ನಿರ್ಣಯ:**

ಅ) ಪ್ರಸ್ತಾವನೆಯಲ್ಲಿ ವಿವರಿಸುವಂತೆ ಉಚ್ಛನ್ಯಾಯಾಲಯದ ಆದೇಶವನ್ನು ಮಂಡಿಸಿ

ಆ) ಹಾಲಿ ಇರುವ "ಕೆರೆಗಳು ಹಾಗೂ ಉದ್ಯಾನಗಳು" ವಲಯದಲ್ಲಿರುವ ಅಭಿಯಂತರರುಗಳಿಂದ ಈ ಹೊಸದಾಗಿ ಸೃಜಿಸಲು ನಿರ್ಧರಿಸಿರುವ ವಿಭಾಗದಲ್ಲಿ ಕಾರ್ಯವನ್ನು ನಿರ್ವಹಿಸಲು ಸಾಧ್ಯವಿಲ್ಲವೆ?

ಇ) ಹೊಸ ವಿಭಾಗ ಹಾಗೂ ಹುದ್ದೆಗಳನ್ನು ಸೃಜಿಸಲು ಪಾಲಿಕೆಗೆ ತಗಲುವ ವೆಚ್ಚದ ಬಗ್ಗೆ ವಿವರಾಣಾತ್ಮಕ ಪಟ್ಟಿಯನ್ನು ತಯಾರಿಸಿ.

ವಿಷಯದ ಸಂಖ್ಯೆ: ಸಿಆಸುಸ್ಥಾಸ/03/2011-12

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಇದರ ಕಾರ್ಯವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಸುಮರು 225 ಚ.ಕಿ.ಮೀ ನಿಂದ 800 ಚ.ಕಿ.ಮೀ ಗೆ ಭೌಗೋಳಿಕ ವಿಸ್ತಾರಗೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯ ವಿಸ್ತಾರಗೊಂಡಿದ್ದು, ನಾಗರೀಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಲು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದಿಂದ ಹಂತ ಹಂತವಾಗಿ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದನೆಯನ್ನು ನೀಡಲಾಗುತ್ತಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಸ್ಥಿತಿಯಲ್ಲಿ ನಗರದ ನಾಗರೀಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಗಂಭೀರವಾಗಿ ಚಿಂತಿಸಬೇಕಾದ ಅವಶ್ಯಕತೆ ಕಂಡುಬರುತ್ತದೆ. ಇತ್ತೀಚೆಗೆ ನಗರ ಪಾಲಿಕೆಯ ಸಭೆಯಲ್ಲಿ ನಾಗರೀಕರಿಗೆ ಕುಡಿಯುವ ನೀರಿನ ಭವಣೆಯನ್ನು ತಪ್ಪಿಸಲು ಜನಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ನೀಡಿ ತಾತ್ಕಾಲಿಕವಾಗಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಬೋರ್‌ವೆಲ್ ಕೊರೆಯುವಂತೆ ಒತ್ತಾಯಿಸಿರುತ್ತಾರೆ. ಆದರೆ ಬಹಳಷ್ಟು ಜನ ಪ್ರತಿನಿಧಿಗಳು ಸಭೆಯಲ್ಲಿ ಅಂತರ್ಜಲ ಸಂರಕ್ಷಣೆಯ ಬಗ್ಗೆ ಗಂಭೀರವಾಗಿ ಯೋಚಿಸಬೇಕಾದ ಪರ್ವಕಾಲ ಇದಾಗಿದೆಯೆಂದು ಹಾಗೂ ಅಗಾಧವಾಗಿ ಬೆಳೆಯುತ್ತಿರುವ ಬೆಂಗಳೂರಿನ ಸೌಂದರ್ಯ ಪ್ರೌಢಿಮೆಯನ್ನು ಉಳಿಸಿಕೊಳ್ಳಲು ಹಾಗೂ ಇಲ್ಲಿನ ಉದ್ಯಾನವನಗಳ ಸೌಂದರ್ಯ ಉಳಿಸಿಕೊಳ್ಳಲು ಅಂತರ್ಜಲ ಸಂವೃದ್ದಿಯಿಂದ ಮಾತ್ರ ಸಾಧ್ಯ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚಳದಿಂದ ಮತ್ತು ನೀರಿನ ಸಂಪನ್ಮೂಲಗಳ ಅವೈಜ್ಞಾನಿಕ ಬಳಕೆಯಿಂದಾಗಿ ಕುಡಿಯಲು ಮತ್ತು ದಿನನಿತ್ಯದ ಇತರೆ ಅವಶ್ಯಕತೆಗಳಿಗೆ ಬೇಕಾದ ನೀರಿನ ಪ್ರಮಾಣವು ಕಡಿಮೆಯಾಗಿರುತ್ತದೆ.

ಭವಿಷ್ಯದಲ್ಲಿ ಅಂತರ್ಜಲವನ್ನು ಹೆಚ್ಚಿಸಲು ಸಲುವಾಗಿ **" ನೀರಿನ ಸಂರಕ್ಷಣೆ ಮತ್ತು ಮಳೆನೀರಿನ ಬಗ್ಗೆ ಸುಗ್ಗಿ"** ಎಂಬ ಕಾರ್ಯಕ್ರಮವು ಸುಸ್ತಿರ ಅಭಿವೃದ್ದಿಗೆ ತುರ್ತು ಹಾಗೂ ಸೂಕ್ತ ಕ್ರಮಗಳಾಗಿವೆ.

ಪ್ರಾರಂಭಿಕವಾಗಿ ಅಂತರ್ಜಲವನ್ನು ಪುನಶ್ಚೇತನಗೊಳಿಸಬೇಕಾದ ಹಿನ್ನೆಲೆಯಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಈಗಾಗಲೇ ನಗರ ಪಾಲಿಕೆಯ ಪ್ರಮುಖ ಕಟ್ಟಡಗಳಲ್ಲಿ, ಆಟದ ಮೈದಾನಗಳಲ್ಲಿ ಉದ್ಯಾನವನಗಳಲ್ಲಿ, ರಸ್ತೆ ಬದಿಯ ಪಾದಚಾರಿ ಮಾರ್ಗಗಳಲ್ಲಿ ಹಾಗೂ ಸ್ಥಳ ಲಭ್ಯವಿರುವ ಜಂಕ್ಷನ್‌ಗಳಲ್ಲಿ ಮಳೆನೀರು ಕೊಯ್ಲು ಪದ್ಧತಿ ಹಾಗೂ ಅಂತರ್ಜಲ ಪುನಶ್ಚೇತನ ಕಾಮಗಾರಿ ಕೈಗೊಂಡು ಮುಂದಿನ ಮಳೆಗಾಲದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪಾಲಿಕೆ ಅಧೀನದಲ್ಲಿರುವ ಕೆರೆಗಳನ್ನು ಪುನಶ್ಚೇತನಗೊಳಿಸಿ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಿ ಗಡಿಗಳನ್ನು ನಿಗಧಿಪಡಿಸುವ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ. ಅಲ್ಲದೆ ಕೆರೆಗಳಿಗೆ ಕೊಳಚೆ ನೀರು ಸೇರ್ಪಡೆಯಾಗದಂತೆ ಡೈವರ್ಶನ್ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಈ ಬಗ್ಗೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿಯೂ ಸಹ 3 ತಿಂಗಳ ಕಾಲಮಿತಿ ನಿಗಧಿಪಡಿಸಿ ಈ ಕಾರ್ಯವನ್ನು ಕೈಗೊಳ್ಳಲು ಆದೇಶವಾಗಿದ್ದು, ಅದರಂತೆ ಕೆರೆಗಳ ಪುನಶ್ಚೇತನ/ಅಭಿವೃದ್ದಿ ಕಾರ್ಯಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮಳೆ ನೀರು ಕೊಯ್ಲು ಪದ್ದತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿತದೃಷ್ಟಿಯಿಂದ ಹಾಗೂ ಕೆರೆಗಳ ಸಂರಕ್ಷಣೆ/ಪುನಶ್ಚೇತನ/ಅಭಿವೃದ್ದಿ ಕಾರ್ಯಗಳ ಹಿತದೃಷ್ಟಿಯಿಂದ ಈ ಹಿಂದೆ ಕೆರೆಗಳ ಅಭಿವೃದ್ದಿ ಕಾರ್ಯವನ್ನು ಪರಿಸರ ಕೋಶ ವಿಭಾಗಕ್ಕೆ ನೀಡಿರುವುದನ್ನು

ಮಾರ್ಪಡಿಸಿ, ಪ್ರತ್ಯೇಕವಾಗಿ ಪಾಲಿಕೆಯಲ್ಲಿ ಮುಖ್ಯ ಅಭಿಯಂತರರು ರವರ ಅಧೀನದಲ್ಲಿ **"ಕೆರೆಗಳು ಮತ್ತು ಮಳೆನೀರು ಕೊಯ್ಲು"** ಎಂಬ ಪ್ರತ್ಯೇಕ ಯೋಜನಾ ವಲಯವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ವಲಯಕ್ಕೆ ಕೆಳಗಿನಂತೆ ಸಿಬ್ಬಂದಿಗಳನ್ನು ನಿಯೋಜಿಸಲು ಉದ್ದೇಶಿಸಲಾಗಿದೆ.

1. ಮುಖ್ಯ ಅಭಿಯಂತರರು (ಕೆರೆಗಳು ಮತ್ತು ಮಳೆನೀರು ಕೊಯ್ಲು) – 1 ಹುದ್ದೆ
2. ಅಧೀಕ್ಷಕ ಅಭಿಯಂತರರು – 1 ಹುದ್ದೆ
3. ಕಾರ್ಯಪಾಲಕ ಅಭಿಯಂತರರು – 4 ಹುದ್ದೆ
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು – 8 ಹುದ್ದೆ
5. ಸಹಾಯಕ/ಕಿರಿಯ ಅಭಿಯಂತರರು – 16 ಹುದ್ದೆ

ಮೇಲ್ಕಂಡ ಸಿಬ್ಬಂದಿಯನ್ನೊಳಗೊಂಡ ವಲಯಕ್ಕೆ ಈ ಕೆಳಕಂಡ ಜವಾಬ್ದಾರಿಗಳನ್ನು ನಿಗಧಿಪಡಿಸಬೇಕಾಗಿರುತ್ತದೆ.

ಕೆರೆಗಳು:

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಅಧೀನದಲ್ಲಿ ಕೆರೆಗಳ ಯೋಜನೆ ಕಾರ್ಯಗಳನ್ನು ಕೈಗೊಂಡು ಗಡಿಗಳನ್ನು ನಿಗಧಿಪಡಿಸುವುದು ಹಾಗೂ ತಂತಿ ಬೇಲಿ ನಿರ್ಮಿಸುವುದು
2) ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸುವುದು.
3) ಕೊಳಚೆ ನೀರು ಕೆರೆಗೆ ಸೇರದಂತೆ ಡೈವರ್ಷನ್ ಕಾಮಗಾರಿಗಳನ್ನು ಕೈಗೊಳ್ಳುವುದು.
4) ಕೆರೆಗಳ ಪುನಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳುವುದು.
5) ಕೆರೆಗಳ ಪ್ರದೇಶದಲ್ಲಿ ಪಾದಚಾರಿ ಮಾರ್ಗಗಳು ಹಾಗೂ ಟ್ರೀ ಪಾರ್ಕ್ ಅಭಿವೃದ್ಧಿ ಮಾಡುವುದು.
6) ಕೆರೆಯ ಬಯೋ ಡೈವರ್ಸಿಟಿ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳುವುದು ಹಾಗೂ ದೈನಂದಿನ ನಿರ್ವಹಣೆ.

ಮಳೆ ನೀರು ಕೊಯ್ಲು

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಮುಖ ಕಟ್ಟಡಗಳಲ್ಲಿ, ಉದ್ಯಾನವನಗಳಲ್ಲಿ, ಆಟದ ಮೈದಾನಗಳಲ್ಲಿ, ರಸ್ತೆ ಬದಿ ಚರಂಡಿಗಳಲ್ಲಿ, ಮರಗಳ ಸುತ್ತ ಹಾಗೂ ಸ್ಥಳ ಲಭ್ಯವಿರುವ ಜಂಕ್ಷನ್‌ಗಳಲ್ಲಿ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ಯತೇಚ್ಛ ನೀರನ್ನು ಭೂಮಿಯಲ್ಲಿ ಇಂಗಿಸಿ ಅಂತರ್ಜಲವನ್ನು ಸಮೃದ್ದಿಗೊಳಿಸುವ ಹಾಗೂ ಸಾಧ್ಯವಾದ ಸ್ಥಳಗಳಲ್ಲಿ ಮಳೆ ನೀರು ಇಂಗಿಸಿ ಅಂತರ್ಜಲವನ್ನು ಸಮೃದ್ದಿಗೊಳಿಸುವ ಹಾಗೂ ಸಾಧ್ಯವಾದ ಸ್ಥಳಗಳಲ್ಲಿ ಮಳೆ ನೀರು ಕೊಯ್ಲು ಪದ್ದತಿಯನ್ನು ಅಳವಡಿಸುವ ಕಾರ್ಯ.
2) ಸದರಿ ಸ್ಥಳಗಳಿಗೆ ಮಳೆ ಸುಗ್ಗಿ ಹಾಗೂ ಅಂತರ್ಜಲ ಪನಶ್ಚೇತನದ ಕಾಮಗಾರಿಗಳನ್ನು ಕೈಗೊಳ್ಳುವುದು. ಮಳೆಗಾಲದೊಳಗಾಗಿ ಯೋಜನೆ ಕಾಮಗಾರಿಗಳನ್ನು ಪೂರ್ಣ ಗೊಳಿಸುವುದು.
3) ಮಳೆ ನೀರು ಕೊಯ್ಲು ಪದ್ದತಿಯನ್ನು ಅಳವಡಿಸಿಕೊಂಡು ಅಂತರ್ಜಲ ಅಭಿವೃದ್ದಿಪಡಿಸಬಹುದಾದ ಬಗ್ಗೆ ಹಾಗೂ ಈ ನೀರಿನ ಉಪಯೋಗದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು.

ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ನ್ಯಾಯಾಲಯದ ಆದೇಶದಂತೆ ತುರ್ತಾಗಿ ಕ್ರಮ ವಹಿಸಬೇಕಾದ ಹಿನ್ನೆಲೆಯಲ್ಲಿ ಪಾಲಿಕೆಯಲ್ಲಿ ಹೊಸದಾಗಿ **"ಕೆರೆಗಳು ಮತ್ತು ಮಳೆ ನೀರು ಕೊಯ್ಲು"** ಎಂಬ ಪತ್ಯೇಕವಾದ ಯೋಜನಾ ವಲಯವನ್ನು ಮುಖ್ಯ ಅಭಿಯಂತರರ ಅಧೀನದಲ್ಲಿ ತೆರೆಯಲು ಹಾಗೂ ಈ ವಿಭಾಗಕ್ಕೆ ಅಗತ್ಯವಿರುವ ಮೇಲ್ಕಂಡ ಹುದ್ದೆಗಳನ್ನು ಸೃಜಿಸಿ, ಜವಾಬ್ದಾರಿಯನ್ನು ನಿಗಧಿಪಡಿಸುವ ಬಗ್ಗೆ ಮತ್ತು ಈ ಹುದ್ದೆಗಳನ್ನು ಮುಂಬಡ್ತಿ/ಎರವಲು ಸೇವೆಯ ಮೇಲೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಭರ್ತಿ ಮಾಡಿಕೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 13–04–2011 ರ ಬಿ12 (6) ಪಿಆರ್–13/11–12 ಟಿಪ್ಪಣಿ.

**ನಿರ್ಣಯ:**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ತೋಟಗಾರಿಕೆ ಇಲಾಖೆ ಅರಣ್ಯ ಇಲಾಖೆ ಎಂಬ ಎರಡು ಪತ್ಯೇಕ ಇಲಾಖೆಯಿದ್ದು, ಈ ಇಲಾಖೆಗಳಲ್ಲಿ ಹಾಲಿ ಮಂಜೂರಾತಿ ಹುದ್ದೆಗಿಂತ ಅಧಿಕವಾಗಿ ಅಧಿಕಾರಿಗಳು/ಸಿಬ್ಬಂದಿಗಳಿದ್ದು ಇವರುಗಳಿಂದ ಹೊಸದಾಗಿ ಸೃಜಿಸಲಿರುವ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲವೇ?
2) ಹಾಲಿ 3 ವರ್ಷಗಳ ಅವಧಿ ದಿನಾಂಕ: 01-07-2007 ರಿಂದ ತಹಲ್‌ವರೆವಿಗೂ ಎಷ್ಟು ಸಸಿಗಳನ್ನು ನೆಡಲಾಗಿದೆ ಎಂಬ ವರದಿ
3) ಪ್ರಸಕ್ತ ಸಾಲಿನಿಂದ ಸುಮಾರು 10 ಲಕ್ಷ ಸಸಿಗಳನ್ನು ಬೆಳೆಸಲು ಉದ್ದೇಶಿಸಿದ್ದು, ಇವುಗಳ ಬೆಳೆಸಲು ಸ್ಥಳ ಗುರುತಿಸಲಾಗಿದೆಯೇ.
4) ಈ ಹೊಸ ವಿಭಾಗವನ್ನು ಹಾಗೂ ಹುದ್ದೆಗಳನ್ನು ಸೃಜಿಸಲು ಪಾಲಿಕೆಗೆ ತಗಲುವ ವೆಚ್ಚದ ಬಗ್ಗೆ ವಿವರಣಾತ್ಮಕ ಪಟ್ಟಿಯನ್ನು ಸಿದ್ದಪಡಿಸಲಾಗಿದೆಯೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: ಸಿ.ಆಸಿ.ಸ್ಥಾಸ/ಪಿ.ಆರ್/32/11-12

**ದಿನಾಂಕ: 01-06-2011 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಕೈಗೊಂಡ ಕಛೇರಿ ತಪಾಸಣಾ ವರದಿ**

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್.ಆರ್. ಕೃಷ್ಣಪ್ಪ, ಅಧ್ಯಕ್ಷರು
2. ಮುನಿಸ್ವಾಮಿಗೌಡ, ಸದಸ್ಯರು
3. ಎಸ್.ಎಂ ಮುರುಗೇಶ್ ಮೊದಲಿಯರ್, ಸದಸ್ಯರು
4. ವೈ.ಆರ್. ಗೌರಮ್ಮ, ಸದಸ್ಯರು
5. ವೀಣಾ ನಾಗರಾಜ್ ,ಸದಸ್ಯರು
6. ಫೌಜಿಯಾ ಬೇಗಂ, ಸದಸ್ಯರು

ಹಾಜರಿದ್ದ ಅಧಿಕಾರಿಗಳು
ಶ್ರೀಯುತರುಗಳಾದ

ಅಪರ ಆಯುಕ್ತರು (ಆಡಳಿತ)
ಉಪ ಆಯುಕ್ತರು (ಆಡಳಿತ)
ಸಹಾಯಕ ಆಯುಕ್ತರು (ಆಡಳಿತ-1)
ಸಹಾಯಕ ಆಯುಕ್ತರು (ಆಡಳಿತ-2)
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ವಿಶೇಷ ಅಧಿಕಾರಿ

ಸಮಿತಿಯು ದಿನಾಂಕ: 01-06-2011 ರಂದು ಬೆಳಿಗ್ಗೆ 10-30 ಗಂಟೆಗೆ ಆಯುಕ್ತರ ಕಛೇರಿಗೆ ತಪಾಸಣೆಯನ್ನು ಕೈಗೊಳ್ಳಲಾಯಿತು. ಪ್ರಥಮವಾಗಿ ಕಛೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ಸಿಬ್ಬಂದಿ ಹಾಜರಾತಿಯು ಉತ್ತಮವಾಗಿರುತ್ತದೆ. ಕಛೇರಿಯ ಚಲನವಲನ ರಿಜಿಸ್ಟರ್‌ನಲ್ಲಿ ಸಿಬ್ಬಂದಿ ವರ್ಗದವರು ವಿಧಾನಸೌಧಕ್ಕೆ ಹೋಗಿರುವುದಾಗಿ ದಾಖಲಿಸಿದ್ದು ಬಂದ ಸಮಯ ನಮೂದಿಸಿರುವುದಿಲ್ಲ ಹಾಗೂ ಕೆಲವು ಸಿಬ್ಬಂದಿ ವರ್ಗದವರು ಇಂದಿನ ದಿನಾಂಕವನ್ನು 01-05-2011 ರಂದು ನಮೂದಿಸಿ ವಿಧಾನಸೌಧಕ್ಕೆ ಹೋಗಿರುವುದಾಗಿ ನಮೂದಿಸಿದ್ದು, ಆಯುಕ್ತರ ಕಛೇರಿಯ ಸಿಬ್ಬಂದಿ ವರ್ಗದವರೇ ಸಮರ್ಪಕವಾದ ದಿನಾಂಕ ಹಾಗೂ ಮಾಹೆಯನ್ನು ನಮೂದಿಸುವಲ್ಲಿ ವಿಫಲವಾದರೆ ಉಳಿದಂತೆ ವಲಯ ಕಛೇರಿ ಸಿಬ್ಬಂದಿಗಳ ಕಾರ್ಯ ವೈಖರಿ ಯಾವ ವಿಧದಲ್ಲಿ ಇರಬಹುದೆಂದು ಊಹಿಸಬಹುದಾಗಿರುತ್ತದೆ. ಈ ಬಗ್ಗೆ ಕಛೇರಿಯ ವ್ಯವಸ್ಥಾಪಕರು ಗಮನಹರಿಸದೆ ಇರುವುದು ವಿಪರ್ಯಾಸ, ಕಛೇರಿ ವಿಷಯ ನಿರ್ವಾಹಕರುಗಳ ವೈಯುಕ್ತಿಕ ನೊಂದಾಣಿ ಪುಸ್ತಕಗಳನ್ನು (ಪಿಆರ್) ಪರಿಶೀಲಿಸಲಾಗಿ ಯಾವ ವಿಷಯ ನಿರ್ವಾಹಕರು ಸಹ ಸಮರ್ಪಕವಾಗಿ ನಿರ್ವಹಿಸದೇ ಇರುವುದು ಕಂಡುಬಂದಿದೆ. ಈ ಬಗೆಗೂ ಸಹ ಕಛೇರಿ ವ್ಯವಸ್ಥಾಪಕರು ಗಮನಹರಿಸದೆ ಇರುವುದು ಶೋಚನೀಯ.

ಪಾಲಿಕೆಯ ಎ ಮತ್ತು ಬಿ ದರ್ಜೆ ಅಧಿಕಾರಿಗಳ ಆಸ್ತಿ ಮತ್ತು ಋಣಭಾರ ಮಾಹಿತಿಗಳನ್ನು ನಿಯಮಾನುಸಾರವಾಗಿ ಸ್ವೀಕರಿಸಿ ಸಂಗ್ರಹಿಸಿಡುವಲ್ಲಿ ವಿಫಲರಾಗಿರುತ್ತಾರೆ. ಈ ಸಂಬಂಧ ಸುತ್ತೋಲೆಗಳನ್ನು ನೀಡುವಲ್ಲಿ ಹಾಗೂ ಶಿಸ್ತಿನ ಕ್ರಮಕೈಗೊಂಡಿರುವ ಬಗ್ಗೆಗೂ ಸಹ ಸಮರ್ಪಕವಾದ ಮಾಹಿತಿ ನೀಡಲು ವಿಫಲರಾಗಿರುತ್ತಾರೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸೇವಾ ಜೇಷ್ಠತಾ ಪಟ್ಟಿ ತಯಾರಿಸುವಲ್ಲಿಯೂ ಕೆಲವೊಂದು ಲೋಪದೋಷಗಳು ಕಂಡುಬಂದಿರುತ್ತದೆ. ಹಾಜರಿದ್ದ ಸಹಾಯಕ ಆಯುಕ್ತರು (ಆಡಳಿತ) ರವರು ವಿವರಣೆ ನೀಡುವಲ್ಲಿ ವಿಫಲರಾಗಿರುತ್ತಾರೆ.

ಎರವಲು ಸೇವೆಯ ಸಿಬ್ಬಂದಿಗಳು ಎಸಗುವ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ಮಾತೃ ಇಲಾಖೆಯೊಂದಿಗೆ ವ್ಯವಹರಿಸುವ ಬಗ್ಗೆ ಯಾವುದೇ ಮಾಹಿತಿಯು ಲಭ್ಯವಿರುವುದಿಲ್ಲ.

ಪಾಲಿಕೆಯಲ್ಲಿ ಈ ಹಿಂದೆ ಹಣದುರಪಯೋಗ ಪ್ರಕರಣ ಕುರಿತಂತೆ ಸಿಬ್ಬಂದಿ ವರ್ಗದವರ ಮೇಲೆ ಹಾಗೂ ದುರುಪಯೋಗವಾದ ಹಣ ವಸೂಲಾತಿ ಮಾಡುವಲ್ಲಿ ಯಾವ ವಿಧವಾದ ಕ್ರಮಕೈಗೊಳ್ಳಲಾಗಿದೆ ಎಂಬ ಬಗ್ಗೆ ಸಹಾಯಕ ಆಯುಕ್ತರುಗಳು (ಆಡಳಿತ) ರವರು ಸಭೆಗೆ ವಿವರಿಸುವಲ್ಲಿ ವಿಫಲರಾಗಿರುತ್ತಾರೆ. ಹಾಗೂ ತಪಾಸಣೆ ಸಂದರ್ಭದಲ್ಲಿ ಅಗತ್ಯ ಮಾಹಿತಿಗಳನ್ನು ನೀಡುವಲ್ಲಿಯು ಸಹ ವಿಫಲರಾಗಿರುತ್ತಾರೆ.

ಈ ಹಿನ್ನಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಛೇರಿಯ ವಿಷಯ ನಿರ್ವಾಹಕರುಗಳಿಗೆ ಸೂಕ್ತ ಎಚ್ಚರಿಕೆ ನೀಡಿ ಆಯುಕ್ತರ ಕಛೇರಿ ಸಿಬ್ಬಂದಿಗಳು ಇತರೆ ವಲಯ ಕಛೇರಿಗಳಿಗೆ ಮಾದರಿಯಾಗಿರತಕ್ಕದೆಂದು ತಿಳಿಸಲು ಸಮಿತಿಯು ಅಭಿಪ್ರಾಯಪಡುತ್ತದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪ್ರತಿಯನ್ನು:
1. ಪೂಜ್ಯ ಮಹಾಪೌರರ ಅವಗಾಹನೆಗೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ
3. ಮಾನ್ಯ ಆಯುಕ್ತರವರ ಅವಗಾಹನೆಗೆ
4. ಅಪರ ಆಯುಕ್ತರು (ಆಡಳಿತ) ರವರಿಗೆ ಸೂಕ್ತಕ್ರಮಕ್ಕಾಗಿ
5. ಕಛೇರಿ ಕಡತಕ್ಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 13-06-2011 ರಂದು ಕೈಗೊಂಡ ತಪಾಸಣೆ ವರದಿ

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್ .ಆರ್. ಕೃಷ್ಣಪ್ಪ, ಅಧ್ಯಕ್ಷರು
2. ಎಸ್.ಎಂ. ಮುರುಗೇಶ್ ಮೊದಲಿಯರ್, ಸದಸ್ಯರು
3. ವೈ.ಆರ್. ಗೌರಮ್ಮ, ಸದಸ್ಯರು
4. ಮುನಿಸ್ವಾಮಿಗೌಡ, ಸದಸ್ಯರು
5. ಕೆ.ವಿ.ಯಶೋಧ, ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿಗಳು
ಪರಿಸರ ಅಧಿಕಾರಿಗಳು, ಸಂಪಂಗಿರಾಮನಗರ

ದಿ: 13-06-2011 ಬೆಳಿಗ್ಗೆ 6-30 ಕ್ಕೆ ಸಂಪಂಗಿರಾಮನಗರ ವಾರ್ಡ್ ನಂ 110 ರ Mustering Centre ನ ತಪಾಸಣೆ ನಡೆಸಲಾಯಿತು.

ಪೌರ ಕಾರ್ಮಿಕರ ಹಾಜರಾತಿಯನ್ನು ಪರಿಶೀಲಿಸಿದಾಗ 27 ಜನ ಪೌರಕಾರ್ಮಿಕರ ಪೈಕಿ 13 ಜನ ಅನಧಿಕೃತ ಗೈರು ಹಾಜರಿಯಾಗಿರುತ್ತಾರೆ. ಸ್ಥಳದಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರಾಗಲಿ, ಹಿರಿಯ ಆರೋಗ್ಯ ಪರಿವೀಕ್ಷರಾಗಲಿ, ಪರಿಸರ ಅಭಿಯಂತರರಾಗಲಿ ಹಾಜರಿರುವುದಿಲ್ಲ.

ಪಾಲಿಕೆ ವತಿಯಿಂದ ನೀಡಿರುವ 1 ಲಾರಿ ಹಾಗೂ 2 ಆಟೋಗಳು ಇರುವುದಾಗಿ ತಿಳಿದುಬಂದಿರುತ್ತದೆ. ಒಟ್ಟು 40 ಕೈಗಾಡಿಗಳಿದ್ದು ಈ ಪೈಕಿ 24 ಗಾಡಿಗಳು ಸುಸ್ಥಿತಿಯಲ್ಲಿದ್ದು, ಉಳಿದ ಗಾಡಿಗಳು ದುರಸ್ತಿಯಾಗಿದ್ದು ಇವುಗಳನ್ನು ಕಛೇರಿ ಹಿಂಭಾಗದಲ್ಲಿರುವ ಖಾಲಿ ಸ್ಥಳದಲ್ಲಿ ತುಂಬಲಾಗಿರುತ್ತದೆ. ಪಾಲಿಕೆಯ ಪೌರಕಾರ್ಮಿಕರು ಸಮವಸ್ತ್ರ ಧರಿಸದೇ ಇರುವುದು ಕಂಡು ಬಂದಿರುತ್ತದೆ. ಇದೇ ವಾರ್ಡ್‌ನ Police Station ಪಕ್ಕದಲ್ಲಿ ಗುತ್ತಿಗೆದಾರರ ಹಾಜರಾತಿ ಪರಿಶೀಲನೆ ಸಂದರ್ಭದಲ್ಲಿ 30 ಜನ ಪೌರ ಕಾರ್ಮಿಕರ ಪೈಕಿ ಕೇವಲ 17 ಜನ ಮಾತ್ರ ಹಾಜರಿದ್ದು, ಬಾಕಿ ಪೌರಕಾರ್ಮಿಕರು ಲಭ್ಯವಿರುವುದಿಲ್ಲ ಈ ಬಗ್ಗೆ ಗುತ್ತಿಗೆದಾರರ ಪೈಕಿ ಮೇಲ್ವಿಚಾರಣೆ ನಡೆಸುತ್ತಿದ್ದವರು ಸಮರ್ಪಕವಾದ ಮಾಹಿತಿ ನೀಡುವಲ್ಲಿ ವಿಫಲರಾಗಿರುತ್ತಾರೆ ಹಾಗೂ ಅವರ ಬಳಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಯರೊಬ್ಬರು ಸಮವಸ್ತ್ರ ಧರಿಸದೇ ಇರುವುದು ಕಂಡುಬಂದಿರುತ್ತದೆ. ಸಂಬಂಧಪಟ್ಟ ವಾರ್ಡಿನ ಪರಿಸರ ಅಭಿಯಂತರರಾಗಲಿ ಅಥವಾ ಸಹಾಯಕ ಅಬಿಯಂತರರಾಗಲಿ ಪ್ರತಿನಿತ್ಯ ಬೆಳಗಿನ ಅವಧಿಯಲ್ಲಿ ಈ ಬಗ್ಗೆ ಪರಿಶೀಲನೆ ನಡೆಸದೇ ಇರುವುದು ಕಂಡುಬಂದಿರುತ್ತದೆ. ಇವರುಗಳನ್ನು ದೂರವಾಣಿಯಲ್ಲಿ ಸಂಪರ್ಕಿಸಲು ಸಹ ಸಾಧ್ಯವಾಗದೆ ಇದ್ದು ನಿಯಂತ್ರಣ ಕೊಠಡಿಯಿಂದಲು ಇವರುಗಳನ್ನು ಸಂಪರ್ಕಿಸಲು ಸಾಧ್ಯವಾಗಿರುವುದಿಲ್ಲ. ಹಾಜರಿದ್ದ ಕಿರಿಯ ಅಭಿಯಂತರರು, ಗುತ್ತಿಗೆದಾರರು ಹಾಜರಾತಿ ಪುಸ್ತಕವನ್ನು ಅವರ ಬಳಿಯೆ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ.

ವಾರ್ಡ್ ಸಂಖ್ಯೆ 118, ಸುಧಾಮನಗರದ Mustering Centre ಬೀಗ ಹಾಕಿರುವುದು ಕಂಡುಬಂದಿದ್ದು ಈ ಪ್ರದೇಶದಲ್ಲಿ ತಪಾಸಣೆ ಕೈಗೊಂಡ ಸಂದರ್ಭದಲ್ಲಿ ಯಾವುದೇ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವುದು ಗೋಚರಿಸಿರುವುದಿಲ್ಲ. ಈ ವಾರ್ಡಿನ 8ನೇ ಕ್ರಾಸ್‌ನ ಚರ್ಚ್ ಸಮೀಪ ಇರುವ ಪಾರ್ಕಿನ ಬಳಿ ಗುತ್ತಿಗೆದಾರರು ಹಾಜರಾತಿ ತೆಗೆದುಕೊಳ್ಳುವುದಾಗಿ ತಿಳಿದುಬಂದಿದ್ದು, ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಯಾರೊಬ್ಬರು ಹಾಜರಿರದೆ ಇದ್ದು ಗುತ್ತಿಗೆದಾರರ ಪೈಕಿ ಮೇಲ್ವಿಚಾರಕರನ್ನು ಸಂಪರ್ಕಿಸಲಾಗಿ ಅವರು ಹಾಜರಾತಿ ಪುಸ್ತಕ ತರುವುದಾಗಿ ತಿಳಿಸಿ ಹೋದವರು ಸಮಿತಿಗೆ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ ಈ ವಾರ್ಡಿನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಲಿ, ಪರಿಸರ ಅಭಿಯಂತರರಾಗಲಿ ಲಭ್ಯವಿಲ್ಲದೆ ಇದ್ದು ಇವರುಗಳನ್ನು ಸಂಪರ್ಕಿಸಲು ನಿಯಂತ್ರಣ ಕೊಠಡಿಯಿಂದಲೂ ಸಾಧ್ಯವಾಗಿರುವುದಿಲ್ಲ. ಈ ಪ್ರದೇಶದಲ್ಲಿರುವ ಪಾರ್ಕ್‌ನ್ನು ಖಾಸಗಿ ಸಂಸ್ಥೆಯೊಂದಕ್ಕೆ ನಿರ್ವಹಣೆಗೆ ನೀಡಿದ್ದು ಈ ಪಾರ್ಕಿನ ಆವರಣವು ಸ್ವಚ್ಛತೆ ಇಲ್ಲದೆ ಇದ್ದು ಇಲ್ಲಿರುವ ವಿದ್ಯುತ್ ಸ್ವಿಚ್‌ಬಾಕ್ಸ್ ಒಂದು ತೆರೆದಿಟ್ಟಿದ್ದ ಸಾರ್ವಜನಿಕರು ಹಾಗೂ ಮಕ್ಕಳುಗಳಿಗೆ ಇದು ಅಪಾಯಕಾರಿಯಾಗಿರುತ್ತದೆ.

ಈ ಪಾರ್ಕಿನ ಪಕ್ಕದಲ್ಲಿ ಕಸದ ರಾಶಿಯಿದ್ದು ಇಲ್ಲಿ ಹೊಡೆದ ಗಾಜಿನ ಚೂರುಗಳು ಹೇರಳವಾಗಿದ್ದು, ಈ ಬಗ್ಗೆ ಪಾರ್ಕಿನಲ್ಲಿ ವಾಯುವಿಹಾರಕ್ಕೆ ಬಂದಿದ್ದ ಬೆರಳೆಣಿಕೆಯಷ್ಟು ಸಾರ್ವಜನಿಕರು ತಮ್ಮ ಅತೀವ ಅಸಮಧಾನವನ್ನು ವ್ಯಕ್ತಪಡಿಸಿರುತ್ತಾರೆ. ಸಂಬಂಧಪಟ್ಟ ತೋಟಗಾರಿಕೆ ಅಧೀಕ್ಷರು ಪಾರ್ಕಿನ ಅವ್ಯವಸ್ಥೆ ಕುರಿತಂತೆ ಯಾವುದೇ ಕ್ರಮಕೈಗೊಳ್ಳದೇ ಇರುವುದು ಅವರ ಬೇಜವಾಬ್ದಾರಿತನವನ್ನು ಎತ್ತಿತೋರಿದೆ. ಈ ಪರಿಸರದ ನೈರ್ಮಲ್ಯತೆ ಬಗ್ಗೆ ಪಾಲಿಕೆಯ ಯಾವೊಬ್ಬ ಅಧಿಕಾರಿಯು ಗಮನಹರಿಸದೇ ಇರುವುದು ಸೋಜಿಗದ ಅಂಶವಾಗಿದೆ.

ಇಂದಿನ ತಪಾಸಣೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರುಗಳು ಪಾಲಿಕೆಯ ಅಧಿಕಾರಿಗಳ ಕಾರ್ಯ ವೈಖರಿ ಕುರಿತಂತೆ ತಮ್ಮ ತೀವ್ರತರವಾದ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತಾರೆ. ಈ ಬಗ್ಗೆ ಆಯುಕ್ತರು ಕೂಲಂಕುಷವಾಗಿ ಪರಿಶೀಲಿಸಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮಕೈಗೊಳ್ಳತಕ್ಕದೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
5. ಅಪರ ಆಯುಕ್ತರು /ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಂಡು, ವರದಿ ನೀಡಲು ಕೋರಿದೆ
6. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 13-06-2011 ರಂದು ನಡೆದ ಸಭೆಯ ನಡವಳಿಗಳು**

**ಹಾಜರಿದ್ದ ಸದಸ್ಯರು**
**ಶ್ರೀಯುತರುಗಳಾದ**

1. ಹೆಚ್.ಆರ್. ಕೃಷ್ಣಪ್ಪ, ಅಧ್ಯಕ್ಷರು
2. ಎ. ವಿಜಯ ರಮೇಶ್, ಸದಸ್ಯರು
3. ಯಶೋಧ, ಸದಸ್ಯರು
4. ಲಲಿತ ಮುಕುಂದರಾವ್, ಸದಸ್ಯರು
5. ಎಸ್.ಎಂ. ಮುರುಗೇಶ್ ಮೊದಲಿಯಾರ್
6. ಮುನಿಸ್ವಾಮಿಗೌಡ, ಸದಸ್ಯರು
7. ಫೌಜಿಯಾ ಬೇಗಂ,ಸದಸ್ಯರು
8. ಗೌರಮ್ಮ, ಸದಸ್ಯರು

**ಹಾಜರಿದ್ದ ಅಧಿಕಾರಿಗಳು**
ಸಹಾಯಕ ಆಯುಕ್ತರು (ಆಡಳಿತ-1)
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ವಿಶೇಷ ಅಧಿಕಾರಿ

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯದ ಸಂಖ್ಯೆ: ಸಿಆಸುಸ್ಥಾಸ/04 /2010-11**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ಎರವಲು ಸೇವೆಯ ಮೇಲೆ ನಿಯೋಜಿಸಲ್ಪಡುತ್ತಿರುವ ಅಭಿಯಂತರರು ಹಾಗೂ ಇತರೆ ಸಿಬ್ಬಂದಿ ವರ್ಗದವರು ಸರ್ಕಾರದ ಅಂಗ ಸಂಸ್ಥೆಗಳಾದ ಕೆ.ಎಸ್.ಎಫ್.ಸಿ, ಕೆ.ಪಿ.ಟಿ.ಸಿ.ಎಲ್, ಬೆಸ್ಕಾಂ, ಬಿಡ್ಲ್ಯೂ.ಎಸ್.ಎಸ್.ಬಿ ಕೆ.ಎಸ್.ಸಿ.ಸಿ, ಕರ್ನಾಟಕ ಕೊಳಚೆ ನಿಗಮಗಳಿಂದ ಪಾಲಿಕೆಗೆ ನಿಯೋಜಿಸಲ್ಪಡುತ್ತಿದ್ದು, ಇವರುಗಳ ವೇತನವು ಲೋಕೋಪಯೋಗಿ ಇಲಾಖೆ ಸಿಬ್ಬಂದಿ ಹಾಗೂ ಪಾಲಿಕೆಯ ಅಭಿಯಂತರರ ವೇತನಕ್ಕಿಂತ ಶೇ.100 ರಷ್ಟು ಹೆಚ್ಚಿನದಾಗಿದ್ದು ಇವರುಗಳು ನಿರ್ವಹಿಸುವ ಕೆಲಸ ಕಾರ್ಯಗಳು ಪಾಲಿಕೆಯ ಹಾಗೂ ಲೋಕೋಪಯೋಗಿ ಇಲಾಖೆ ಸಿಬ್ಬಂದಿಗಳು ನಿರ್ವಹಿಸುವ ಕೆಲಸ ಕಾರ್ಯಗಳ ಸಮಾನಾಂತರ ಕಾರ್ಯ ವೈಖರಿಯುಳ್ಳದಾಗಿದ್ದು, ಮೇಲ್ಕಂಡ ಎರವಲು ಸೇವೆಯ ಸಿಬ್ಬಂದಿಗಳಿಗೆ ವಿತರಿಸುವ ವೇತನದಿಂದ ಪಾಲಿಕೆಗೆ ಹೆಚ್ಚಿನ ರೀತಿಯ ಆರ್ಥಿಕ ಹೊರೆ ಉಂಟಾಗುತ್ತಿರುವುದರಿಂದ ಹಾಗೂ ಮೇಲ್ಕಂಡ ಸಂಸ್ಥೆಗಳಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳಲು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅವಕಾಶವಿಲ್ಲದೆ ಇರುವುದರಿಂದ ಈ ರೀತಿ ನಿಯೋಜಿಸಲ್ಪಡುತ್ತಿರುವ ಸಿಬ್ಬಂದಿ ವರ್ಗದವರು ಕೂಡಲೇ ಬಿಡುಗಡೆಗೊಳಿಸಲು ಕ್ರಮಕ್ಕೈಗೊಳ್ಳತಕ್ಕದ್ದು ಒಂದು ಪಕ್ಷ ಮೇಲ್ಕಂಡ ಸಂಸ್ಥೆಗಳಿಂದ ಸಿಬ್ಬಂದಿ ವರ್ಗದವರನ್ನು ನಿಯೋಜಿಸಿಕೊಳ್ಳುವುದು ಅತ್ಯವಶ್ಯಕವಾಗಿದ್ದಲ್ಲಿ ಸದರಿಯವರುಗಳಿಗೆ ಲೋಕೋಪಯೋಗಿ ಇಲಾಖೆ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ವರ್ಗದವರಿಗೆ ನೀಡುವ ವೇತನವನ್ನು ಪಡೆಯುವ ಷರತ್ತಿಗೊಳಪಡಿಸಿ ನಿಯೋಜಿಸಿ ಕೊಳ್ಳಬಹುದೆಂಬ ಅಂಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಅಳವಡಿಸಿಕೊಳ್ಳಲು ಆಯುಕ್ತರಿಗೆ ಸೂಚನೆ ನೀಡಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

ವಿಷಯ ಸಂಖ್ಯೆ: ಸಿಆಸುಸ್ಥಾಸ/05/2011-12

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀ ಚಲುವಯ್ಯ, ನಿವೃತ್ತ ಮುಖ್ಯ ಅಭಿಯಂತರರು ಪಾಲಿಕೆಯಲ್ಲಿ ಮುಖ್ಯ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 31-10-2004ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರನ್ನು ರಸ್ತೆಗಳ ಸಮೀಕ್ಷೆ ಮತ್ತು ಪಂಕ್ತೀಕರಣ ಕಾರ್ಯದಲ್ಲಿ ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಿದ್ದುದರಿಂದ, ಸದರಿಯವರ ಸೇವೆಯನ್ನು ದಿನಾಂಕ: 31-01-2005ರಿಂದ ಒಂದು ವರ್ಷದ ಅವಧಿಗೆ ನಗರ ಪಾಲಿಕೆ ವ್ಯಾಪ್ತಿಯ ರಸ್ತೆ ಅಗಲೀಕರಣ ಯೋಜನಾ ಕಾಮಗಾರಿಗಳಿಗೆ ಯೋಜನಾ ಅಭಿಯಂತರರಾಗಿ ಮಾಸಿಕ ಸಂಚಿತ ವೇತನ ರೂ. 10,000/-ಗಳಿಗೆ ನಿಗಧಿಪಡಿಸಿ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲಾಗಿರುತ್ತದೆ. ನಂತರ ಸದರಿಯವರ ಗುತ್ತಿಗೆ ಅವಧಿಯನ್ನು ದಿನಾಂಕ: -02-2006 ರಿಂದ 30-01-2007ರ ವರೆಗೆ, ದಿನಾಂಕ: 01-02-2007 ರಿಂದ 31-03-2007ರ ವರೆಗೆ ಹಾಗೂ ದಿನಾಂಕ: 01-04-2007 ರಿಂದ 31-12-2007ರ ವರೆಗೆ ಮುಂದುವರೆಸಲಾಗಿದ್ದು, ಇವರ ಗುತ್ತಿಗೆ ಅವಧಿಯು ದಿ: 31-12-2007ಕ್ಕೆ ಮುಕ್ತಾಯಗೊಂಡಿದ್ದರಿಂದ ಇವರ ಮಾಸಿಕ ಸಂಚಿತ ವೇತನವನ್ನು ರೂ. 10,000/-ಗಳಿಂದ ರೂ. 13,000/-ಗಳಿಗೆ ಹೆಚ್ಚಿಸಿ ದಿನಾಂಕ: 01-01-2008 ರಿಂದ 31-12-2008ರ ವರೆಗೆ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲಾಗಿರುತ್ತದೆ.

ನಂತರ ದಿನಾಂಕ: 11-11-2008ರ ಆದೇಶದಲ್ಲಿ ಸದರಿಯವರಿಗೆ ನೀಡಲಾಗುತ್ತಿದ್ದ ಮಾಸಿಕ ಸಂಚಿತ ವೇತನವನ್ನು ರೂ. 13,000/-ಗಳಿಂದ ರೂ. 15,000/-ಗಳಿಗೆ ಪರಿಷ್ಕರಿಸಿ, ದಿ: 01-01-2009 ರಿಂದ 31-12-2009ರ ವರೆಗೆ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ, ರಸ್ತೆ ಅಗಲೀಕರಣ ವಿಭಾಗದಲ್ಲಿಯೇ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ನೇಮಿಸಿ ಮುಂದುವರೆಸಿ, ಸದರಿ ಆದೇಶವನ್ನು ಸ್ಥಿರೀಕರಿಸಲು ದಿನಾಂಕ: 11-11-2008ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ದಿನಾಂಕ: 03-09-2009ರ ಪತ್ರದಲ್ಲಿ ಸದರಿ ನಿವೃತ್ತ ಅಭಿಯಂತರರನ್ನು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮುಂದುವರೆಸಲು ಕೋರಲಾದ ಮೇರೆಗೆ ಸದರಿಯವರನ್ನು ದಿನಾಂಕ: *01-01-2010* ರಿಂದ *30-06-2010*ರ ವರೆಗೆ 6 ತಿಂಗಳ ಅವಧಿಗೆ ಹಾಗೂ 01-07-2010 ರಿಂದ 30-06-2011ರ ವರೆಗೆ ಮಾಸಿಕ ವೇತನ ರೂ. 15,000/-ಗಳಲ್ಲಿ ಮತ್ತೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ. ಒಟ್ಟಾರೆಯಾಗಿ ಶ್ರೀ ಚಲುವಯ್ಯ, ನಿವೃತ್ತ ಮುಖ್ಯ ಅಭಿಯಂತರರು ಇವರನ್ನು ದಿನಾಂಕ: 31-01-2005 ರಿಂದ 30-06-2011ರ ವರೆಗೆ ಗುತ್ತಿಗೆ ಆಧಾರದ ಮೇಲೆ ಸಂಚಿತ ವೇತನದಲ್ಲಿ ಮುಂದುವರೆಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 139 ಎಂಎನ್‌ಯು 2010, ದಿನಾಂಕ: 03-05-2010ರ ಆದೇಶದಂತೆ ಗುತ್ತಿಗೆ ಅವಧಿಯು ದಿನಾಂಕ: 30-06-2011ಕ್ಕೆ ಮುಕ್ತಾಯಗೊಳ್ಳುತ್ತದೆ.

ಶ್ರೀ ಚೆಲುವಯ್ಯ, ನಿವೃತ್ತ ಮುಖ್ಯ ಅಭಿಯಂತರರು ಹಾಗೂ ತಾಂತ್ರಿಕ ಸಲಹೆಗಾರರು, ಇವರು ಪಾಲಿಕೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು, ರಸ್ತೆ ಅಗಲೀಕರಣ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರ ಅವಧಿಯು ದಿನಾಂಕ: 30-06-2011ಕ್ಕೆ ಕೊನೆಗೊಳ್ಳಲಿರುವುದರಿಂದ, ಇನ್ನೂ ಒಂದು ವರ್ಷ ಮುಂದುವರೆಸಲು ಕೋರಿರುತ್ತಾರೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸಂಖ್ಯೆ: ನಅಇ 145 ಎಂಎಸ್‌ಯು 2011, ದಿನಾಂಕ: 02-[illegible]-2011ರ ಪತ್ರದಲ್ಲಿ ಶ್ರೀ ಚೆಲುವಯ್ಯ, ಮುಖ್ಯ ಅಭಿಯಂತರರು ಹಾಗೂ ತಾಂತ್ರಿಕ ಸಲಹೆಗಾರರು (ನಿವೃತ್ತಿ) ಇವರನ್ನು ಮಾಹೆಯಾನ ರೂ. 15,000/-ಗಳ ಸಂಚಿತ ವೇತನದ ಆಧಾರದ ಮೇಲೆ ದಿನಾಂಕ; 01-07-2011 ರಿಂದ 30-06-2012ರ ವರೆಗೆ ಒಂದು ವರ್ಷದ ಅವಧಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ಮುಂದುವರೆಸಲು ಅನುಮೋದನೆ ನೀಡಲಾಗಿರುತ್ತದೆ.

ಶ್ರೀ ಚಲುವಯ್ಯ, ನಿವೃತ್ತ ಮುಖ್ಯ ಅಭಿಯಂತರರು ಯೋಜನಾ ಅಭಿಯಂತರರಾಗಿ ರಸ್ತೆ ಅಗಲೀಕರಣ ಯೋಜನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಇವರನ್ನು ಮಾಹೆಯಾನ ರೂ. 15,000/-ಗಳ ಸಂಚಿತ ವೇತನದ ಆಧಾರದ ಮೇಲೆ ದಿನಾಂಕ: 01-07-2011 ರಿಂದ 30-06-2012ರ ವರೆಗೆ ಒಂದು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:02-06-2011 ರ ಬಿ12 (6) ಪಿಆರ್/172/05-06 ರ ಟಿಪ್ಪಣಿ.

**ನಿರ್ಣಯ:** ದಿನಾಂಕ: 02-06-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

(ಹೆಚ್. ಆರ್. ಕೃಷ್ಣಪ್ಪ)

ಅಧ್ಯಕ್ಷರು,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿ:13-06-2011 ರಂದು ಘನತ್ಯಾಜ್ಯ ನಿರ್ವಹಣೆ ಕುರಿತಂತೆ ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು**

**ಶ್ರೀಯುತರುಗಳಾದ**

1. ಹೆಚ್.ಆರ್. ಕೃಷ್ಣಪ್ಪ, ಅಧ್ಯಕ್ಷರು
2. ಎ. ವಿಜಯ ರಮೇಶ್, ಸದಸ್ಯರು
3. ಯಶೋಧ, ಸದಸ್ಯರು
4. ಲಲಿತ ಮುಕುಂದರಾವ್, ಸದಸ್ಯರು
5. ಎಸ್.ಎಂ. ಮುರುಗೇಶ್ ಮೊದಲಿಯಾರ್
6. ಮುನಿಸ್ವಾಮಿಗೌಡ, ಸದಸ್ಯರು
7. ಫೌಜಿಯಾ ಬೇಗಂ,ಸದಸ್ಯರು
8. ಗೌರಮ್ಮ, ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಧೀಕ್ಷಕ ಅಭಿಯಂತರರು (ಪೂರ್ವ)
ಅಧೀಕ್ಷಕ ಅಭಿಯಂತರರು ( ಮಹಾದೇವಪುರ)
ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ)
ಅಧೀಕ್ಷಕ ಅಭಿಯಂತರರು (ಯಲಹಂಕ)
ಸಹಾಯಕ ನಿಯಂತ್ರಕರು (ಹಣಕಾಸು) ಮಹಾದೇವಪುರ
ಸಹಾಯಕ ನಿಯಂತ್ರಕರು (ಹಣಕಾಸು)ಆರ್.ಆರ್.ನಗರ
ಸಹಾಯಕ ನಿಯಂತ್ರಕರು (ಹಣಕಾಸು) (ಪೂರ್ವ)
ಸಹಾಯಕ ನಿಯಂತ್ರಕರು (ಹಣಕಾಸು) ಯಲಹಂಕ
ಸಹಾಯಕ ನಿಯಂತ್ರಕರು ಹಣಕಾಸು (ದಕ್ಷಿಣ)
ಸಹಾಯಕ ನಿಯಂತ್ರಕರು(ಹಣಕಾಸು) (ಪಶ್ಚಿಮ)
ಸಹಾಯಕ ಕಾರ್ಯಪಾಲಕ ಅಭಿಯಂತರರು ( ಮಹಾದೇವಪುರ) (ಡಿ.ಇ.ಒ)
ಸಹಾಯಕ ಕಾರ್ಯಪಾಲಕ ಅಭಿಯಂತರರು ( ಮಹಾದೇವಪುರ) (ಕೆ.ಆರ್.ಪಿ)
ಲೆಕ್ಕ ಅಧೀಕ್ಷಕರು, ಯಲಹಂಕ
ಲೆಕ್ಕ ಅಧೀಕ್ಷಕರು
ಉಪ ಪರಿಸರ ಅಧಿಕಾರಿಗಳು (ಬೊಮ್ಮನಹಳ್ಳಿ)
ಉಪ ಪರಿಸರ ಅಧಿಕಾರಿಗಳು (ಅಂಜನಪುರ)

ಹಾಜರಿದ್ದ ಸದಸ್ಯರುಗಳಿಗೆ ಹಾಗೂ ಅಧಿಕಾರಿಗಳಿಗೆ ಅಧ್ಯಕ್ಷರು ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ಗುತ್ತಿಗೆ ಕಾರ್ಮಿಕರಿಗೆ ಇಎಸ್ಐ ಮತ್ತು ಪಿಎಫ್‌ಗಳ ಸೌಲಭ್ಯದ ಕಟಾವು ಕುರಿತಂತೆ ಹಲವಾರು ಲೋಪದೋಷಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಂಡು ಬರುತ್ತಿರುವುದಾಗಿ ತಿಳಿಸಿದ್ದು, ಈ ದಿಸೆಯಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಗುತ್ತಿಗೆದಾರರಿಗೆ ಬಿಲ್ಲನ್ನು ತಯಾರಿಸಿ ಚೆಕ್ಕನ್ನು ನೀಡುವ ಮುಂಚಿತವಾಗಿ ಕೆಳಕಂಡ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲು ಆದೇಶಿಸಲಾಗಿರುತ್ತದೆ.

1. ಪ್ರತಿ ದಿವಸ ಪೌರಕಾರ್ಮಿಕರಿಂದ ಪಡೆಯುವ ಹಾಜರಾತಿ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಪರಿಸರ ಅಭಿಯಂತರರು ದೃಢೀಕರಿಸಿರುವುದನ್ನು ಪರಿಶೀಲಿಸತಕ್ಕದ್ದು.
2. ವಾಹನಗಳ ವಿವರ ಹಾಗೂ ಸಂಖ್ಯೆಗಳ ಪಟ್ಟಿಯನ್ನು ಸಂಗ್ರಹಿಸಿಟ್ಟಿರುವುದು.
3. ವಾಹನಗಳ ದಾಖಲೆ ಪತ್ರಗಳು ಆರ್.ಸಿ ಪುಸ್ತಕ ಪ್ರತಿ, ವಿಮೆ ಪತ್ರ ಚಾಲ್ತಿಯಲ್ಲಿರುವುದರ ಬಗ್ಗೆ, ಚಾಲಕರ ಡ್ರೈವಿಂಗ್ ಲೈಸೆನ್ಸ್ ಹಾಗೂ ಬ್ಯಾಡ್ಜ್ ನಂಬರುಗಳನ್ನೊಳಗೊಂಡ ಮಾಹಿತಿಯ ಪ್ರತಿಯನ್ನು ಕಛೇರಿಯಲ್ಲಿ ಸಂಗ್ರಹಿಸಿಟ್ಟಿರತಕ್ಕದ್ದು.
4. ಪೌರಕಾರ್ಮಿಕರಿಗೆ ಇಎಸ್ಐ ಹಾಗೂ ಪ್ರಾವಿಡೆಂಟ್ ಫಂಡ್ ಅನ್ನು ಪಾವತಿಸಿರುವ ಕುರಿತಂತೆ (ಪ್ರತಿಯೊಬ್ಬ ನೌಕರರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಮಾಹಿತಿ ಹಾಗೂ ಪಾಸ್‌ಪುಸ್ತಕಗಳ ಪ್ರತಿಯನ್ನು ಕಛೇರಿಯಲ್ಲಿ ಸಂಗ್ರಹಿಸಿಡತಕ್ಕದ್ದು )

5. ಪ್ರತಿಯೊಂದು ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಗುತ್ತಿಗೆ ಕರಾರನ್ನು ಕಛೇರಿಯಲ್ಲಿ ಸಂಗ್ರಹಿಸಿಟ್ಟಿರತಕ್ಕದ್ದು ಸಮಿತಿಯು ಮೇಲ್ಕಂಡ ದಾಖಲೆಗಳನ್ನು ತಪಾಸಣೆ ಸಂದರ್ಭದಲ್ಲಿ ಕೇಳಿದಾಗ ಹಾಜರುಪಡಿಸತಕ್ಕದ್ದು.

ಈ ಮೇಲ್ಕಂಡ ಅಗತ್ಯ ಮಾಹಿತಿಗಳನ್ನು ಗುತ್ತಿಗೆದಾರರು ಒದಗಿಸದಿದ್ದ ಪಕ್ಷದಲ್ಲಿ ಅಂತಹ ಗುತ್ತಿಗೆದಾರರ ಬಿಲ್ಲನ್ನು ಪಾವತಿಸುವುದು ನಿಯಮಗಳ ವಿರುದ್ದವೆಂಬುದನ್ನು ಅಧಿಕಾರಿಗಳು ಸ್ಪಷ್ಟವಾಗಿ ತಿಳಿದುಕೊಳ್ಳತಕ್ಕದೆಂದು ಸಮಿತಿಯು ಅಭಿಪ್ರಾಯ ಪಡುತ್ತಾ, ಮೇಲ್ಕಂಡಂತೆ ಅಗತ್ಯ ದಾಖಲೆಗಳನ್ನು ಒದಗಿಸದಿದ್ದಾಗ್ಯೂ ಸಹ ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿಸಿದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ಮೇಲೆ ಕಠಿಣ ಶಿಸ್ತಿನ ಕ್ರಮಕೈಗೊಳ್ಳಲು ಸಮಿತಿಯು ಆಯುಕ್ತರವರನ್ನು ಈ ಮೂಲಕ ಕೋರಲು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ತಹಲ್‌ವರೆವಿಗೂ ತಾವುಗಳು ದಾಖಲೆಗಳ ಬಗ್ಗೆ ಕ್ರಾಸ್ ವೆರಿಫಿಕೇಶನ್ ಮಾಡಿರುವುದಿಲ್ಲವೆಂದು ಇಎಸ್‌ಐ ಹಾಗೂ ಪಿಎಫ್‌ಗಳನ್ನು ನೌಕರರ ಖಾತೆಗೆ ಜಮೆ ಮಾಡಿರುವ ಬಗ್ಗೆ ಪತ್ಯೇಕವಾಗಿ ಪಾಸ್ ಬುಕ್‌ಗಳನ್ನು ಪರಿಶೀಲಿಸಿರುವುದಿಲ್ಲವೆಂದು ತಿಳಿಸುತ್ತ ತಮಗೆ ಗುತ್ತಿಗೆದಾರದಿಂದ ಹೆಚ್ಚಿನ ಒತ್ತಡ ಬರುತ್ತಿದ್ದು ಈ ನಿಟ್ಟಿನಲ್ಲಿ ತಾವು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲು ಸಾಧ್ಯವಾಗುತ್ತಿಲ್ಲವೆಂದು ಇನ್ನೂ ಮುಂದೆ ಇಂತಹ ಲೋಪದೋಷಗಳಿಗೆ ಅವಕಾಶ ನೀಡುವುದಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ.

ಪ್ರತಿ ವಾರ್ಡ್‌ಗೂ ಸಹ ಒಬ್ಬ ಪರಿಸರ ಅಭಿಯಂತರರನ್ನು ನೇಮಿಸುವುದು ಸೂಕ್ತವೆಂತಲೂ ಇದರಿಂದ ವಾರ್ಡ್‌ನ ಸ್ವಚ್ಛತೆ ಕೆಲಸ ಕಾರ್ಯಗಳಿಗೆ ಬಹಳಷ್ಟು ಅನುಕೂಲವನ್ನು ಕಲ್ಪಿಸಿಕೊಟ್ಟಂತಾಗುವುದೆಂದು ಕೋರಿರುತ್ತಾರೆ. ಪ್ರಸ್ತುತ ಪಾಲಿಕೆಯಲ್ಲಿ ಹಿರಿಯ ಅಧಿಕಾರಿಗಳ ಸಂಖ್ಯೆಯು ಹೆಚ್ಚುವರಿಯಾಗಿದ್ದು ಕಿರಿಯ ಅಧಿಕಾರಿಗಳ ಸಂಖ್ಯೆಯು ಕಡಿಮೆ ಇದ್ದು ಈ ಹಿನ್ನಲೆಯಲ್ಲಿ ಕಛೇರಿಯ ದೈನಂದಿನ ಕೆಲಸಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿರುವುದಾಗಿ ತಿಳಿಸಿ ಇದನ್ನು ಸಹ ಸರಿಪಡಿಸಲು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮಕೈಗೊಳ್ಳುವುದಾಗಿ ಅಧ್ಯಕ್ಷರು ತಿಳಿಸಿರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಗಿದೆ.

ಹೆಚ್. ಆರ್. ಕೃಷ್ಣಪ್ಪ

(ಹೆಚ್. ಆರ್. ಕೃಷ್ಣಪ್ಪ)
**ಅಧ್ಯಕ್ಷರು,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ**

*ಪ್ರತಿಯನ್ನು:*

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಅಪರ ಆಯುಕ್ತರು (ಆಡಳಿತ), ವಲಯ ಅಪರ/ಜಂಟಿ ಆಯುಕ್ತರು, ಪ್ರಧಾನ ಅಭಿಯಂತರರು, ಮುಖ್ಯ ಲೆಕ್ಕಾಧಿಕಾರಿಗಳು, ವಲಯ ಮುಖ್ಯ ಅಭಿಯಂತರರು, ವಲಯ ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ*
6. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 13-06-2011 ರಂದು ಕೈಗೊಂಡ ತಪಾಸಣೆ ವರದಿ

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್.ಆರ್. ಕೃಷ್ಣಪ್ಪ, ಅಧ್ಯಕ್ಷರು
2. ಎ. ವಿಜಯ ರಮೇಶ್, ಸದಸ್ಯರು
3. ಲಲಿತ ಮುಕುಂದರಾವ್, ಸದಸ್ಯರು
4. ಮುನಿಸ್ವಾಮಿಗೌಡ, ಸದಸ್ಯರು
5. ಫೌಜಿಯಾ ಬೇಗಂ,ಸದಸ್ಯರು
6. ಗೌರಮ್ಮ, ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿ

ದಿನಾಂಕ: 13-06-2011 ರಂದು ಮದ್ಯಾಹ್ನ 3.00 ಗಂಟೆಗೆ ಪ್ರಧಾನ ಅಭಿಯಂತರರ ಕಛೇರಿಯನ್ನು ತಪಾಸಣೆ ನಡೆಸಲಾಯಿತು

ಕಛೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ಕು॥ ಕಾವ್ಯ, ದ್ವಿತೀಯ ದರ್ಜೆ ಸಹಾಯಕರು, ದಿನಾಂಕ: 10-06-2011 ಕ್ಕೆ ರಜೆ ಚೀಟಿ ಸಲ್ಲಿಸಿದ್ದು ದಿನಾಂಕ: 13-06-2011 ಕ್ಕೆ ಯಾವುದೇ ವಿಧವಾದ ರಜೆ ಚೀಟಿ ಸಲ್ಲಿಸದೇ ಅನಧಿಕೃತ ಗೈರು ಹಾಜರಿಯಾಗಿದ್ದು ಕಛೇರಿಯ ತಾಂತ್ರಿಕ ಸಹಾಯಕರು ಈ ಬಗ್ಗೆ ವಿವರಣೆ ನೀಡಲು ವಿಫಲರಾಗಿರುತ್ತಾರೆ. ಕಛೇರಿಯಲ್ಲಿ ಚಲನವಲನ ಪುಸ್ತಕಗಳ ಬಗ್ಗೆ ಯಾವುದೇ ವಿಧವಾದ ಮಾಹಿತಿ ಇರುವುದಿಲ್ಲ. ಸಮಿತಿಗೆ ಅತಿಮುಖ್ಯವಾಗಿ ಕಂಡುಬಂದ ಅಂಶವೆಂದರೆ ಈ ಕಛೇರಿಯಲ್ಲಿ ಸಿಬ್ಬಂದಿವರ್ಗದವರ ಸಾಂಧರ್ಭಿಕ ರಜೆ ಅರ್ಜಿ ಸಲ್ಲಿಸಿದ್ದರೆ ಅದನ್ನು ದಾಖಲಿಸಲು ಯಾವುದೇ ವಿಧವಾದ ರಿಜಿಸ್ಟರ್‌ಗಳನ್ನು ಇರುವುದಿಲ್ಲ. ಇದು ಅತಿ ಗಂಭೀರಸ್ವರೂಪವಾದ ಲೋಪವಾಗಿರುತ್ತದೆ. ಕಛೇರಿಯ ಸಿಬ್ಬಂದಿವರ್ಗದವರಿಗೆ ನಿರ್ವಹಿಸಬೇಕಾದ ಕಾರ್ಯ ವೈಖರಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಹಾಜರಾತಿ ಪುಸ್ತಕದಲ್ಲಿ ಇದ್ದಂತಹ ಸಾಂಧರ್ಭಿಕ ರಜೆ ಅರ್ಜಿಗಳನ್ನು ಪರಿಶೀಲಿಸಲಾಗಿ ಕೆಲವು ನೌಕರರುಗಳು ರಜೆ ಅರ್ಜಿ ಸಲ್ಲಿಸಿದ್ದರೂ ಸಹ ನಂತಹ ಹಾಜರಾತಿ ಪುಸ್ತಕದಲ್ಲಿ ತಾವು ಪಡೆದಂತಹ ರಜೆ ದಿವಸಗಳಲ್ಲಿ ಸಹಿ ಮಾಡಿರುವುದು ಗೋಚರವಾಗಿರುತ್ತದೆ. ಉದಾಹರಣೆ: ಶ್ರೀಮತಿ ಕೃಷ್ಣವೇಣಿ, ದ್ವಿತೀಯ ದರ್ಜೆ ಗುಮಾಸ್ತ ರವರು ದಿನಾಂಕ: 24-04-2011 ಹಾಗೂ 30-04-2011 ಸಾಂಧರ್ಭಿಕ ರಜೆ ಅರ್ಜಿ ಸಲ್ಲಿಸಿದ್ದು ಆದರೆ ಸದರಿ ದಿವಸಗಳಲ್ಲಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದು ಕಂಡುಬಂದಿರುತ್ತದೆ. ಹಾಜರಾತಿ ಪುಸ್ತಕವನ್ನು ಪರಿಶೀಲಿಸಿದಾಗ ತಾಂತ್ರಿಕ ಸಹಾಯಕರ ಹುದ್ದೆಯ ಮುಂದೆ ನಾಲ್ಕನೇ ದರ್ಜೆ ನೌಕರರು ಒಬ್ಬರು ತಮ್ಮ ಹಾಜರಾತಿ ನಮೂದಿಸಿದ್ದು ಇದನ್ನು ಗಮನಿಸುವಲ್ಲಿ ತಾಂತ್ರಿಕ ಸಹಾಯಕರು ವಿಫಲರಾಗಿದ್ದು, ಇನ್ನು ಕಛೇರಿ ಕೆಲಸ ಕಾರ್ಯ ನಿರ್ವಹಿಸುವಲ್ಲಿ ಎಷ್ಟರ ಮಟ್ಟಿಗೆ ಗಮನ ಹರಿಸಬಲ್ಲರು ಎಂಬುದು ಯಕ್ಷ ಪ್ರಶ್ನೆಯಾಗಿದೆ. ಕಛೇರಿಯ ... ರಿಜಿಸ್ಟರ್‌ನಲ್ಲಿ ಕಡತಗಳ ವ್ಯವಹರಣೆ ಕುರಿತಂತೆ ಸಮರ್ಪಕವಾದ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ರೀತಿಯಲ್ಲಿ ದಾಖಲಿಸದೆ ಇದ್ದು, ಈ ಬಗ್ಗೆ ಹಾಜರಿದಂತಹ ಕೆಲವೇ ವಿಷಯ ನಿರ್ವಾಹಕರನ್ನು ಕೇಳಲಾಗಿ ಅವರು ಸಹ ಹೇಳಿಕೆ ನೀಡಲು ವಿಫಲರಾಗಿರುತ್ತಾರೆ. ನಕ್ಷೆ ಮಂಜೂರಾತಿ ಕುರಿತಂತೆ ಸ್ವೀಕರಿಸಲಾದ ಕಡತಗಳ ವ್ಯವಹರಣೆ ಸಹ ಸಮರ್ಪಕವಾಗಿ ಇಲ್ಲದಿದ್ದು ಈ ಬಗ್ಗೆ ಬಟವಾಡೆ ಅಧಿಕಾರಿಗಳು ತೀವ್ರವಾಗಿ ಗಮನಹರಿಸಬೇಕಾಗಿರುತ್ತದೆ. ಲೆಕ್ಕ ಪರಿಶೋಧಕರ ಆಕ್ಷೇಪಣೆಗೆ ಸಂಬಂಧಿಸಿದಂತೆ ಸಮರ್ಪಕವಾದ ರೀತಿಯಲ್ಲಿ ವರದಿ ಸಲ್ಲಿಸದೇ ಇರುವುದು ಕಂಡುಬಂದಿದ್ದು ಸಂಬಂಧಪಟ್ಟ ವಿಷಯ ನಿರ್ವಾಹಕರ ವೈಫಲ್ಯವೆಂಬುದು ಸ್ಪಷ್ಟವಾಗಿದೆ.

ಒಟ್ಟಾರೇ ಈ ಕಛೇರಿಯಲ್ಲಿ ಬಟವಾಡೆ ಅಧಿಕಾರಿಗಳು ಸಮರ್ಪಕವಾಗಿ ಮೇಲುಸ್ತುವಾರಿ ನಡೆಸದೇ ಇರುವುದರಿಂದ ಕಚೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿದ್ದು ಇಲಾಖಾ ಮುಖ್ಯಸ್ಥರು ತಮ್ಮ ಅಧೀನ ಸಿಬ್ಬಂದಿಗಳ ಕಛೇರಿಯ ಕಾರ್ಯ ವೈಖರಿ ಕುರಿತಂತೆ ಸೂಕ್ತ ನಿಗಾವಹಿಸುವುದು ಉತ್ತಮವೆಂಬುದು ಸಮಿತಿಯು ಅಭಿಪ್ರಾಯಿಸುತ್ತದೆ.

(ಸಹಿ)
ಅಧ್ಯಕ್ಷರು

ಪ್ರತಿಯನ್ನು:

1) ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ
3) ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4) ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
5) ಅಪರ ಆಯುಕ್ತರು (ಆಡಳಿತ), ಪ್ರಧಾನ ಅಭಿಯಂತರರು, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
6) ಕಛೇರಿ ಪ್ರತಿ

5/7

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 27-06-2011 ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ**

1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಫೌಜಿಯಾ ಬೇಗಂ – ಸದಸ್ಯರು
5. ಲಲಿತ ಮುಕುಂದರಾವ್ – ಸದಸ್ಯರು
6. ವೀಣಾ ನಾಗರಾಜ್ – ಸದಸ್ಯರು
7. ಕೆ.ವಿ ಯಶೋಧ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಧಿಕ ಕೌನ್ಸಿಲ್ ಕಾರ್ಯದರ್ಶಿ

ವಿಶೇಷ ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯದ ಸಂಖ್ಯೆ: ಸಿಆಸುಸ್ಥಾಸ/06/2011-12**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾದ ಮೇಲೆ ಇದರ ಕಾರ್ಯವ್ಯಾಪ್ತಿಯು 800 ಚದರ ಕಿಲೋಮೀಟರ್ ವಿಸ್ತಾರಗೊಂಡಿದ್ದು, ಅದನ್ನು ಆಡಳಿತಾತ್ಮಕ ದೃಷ್ಟಿಯಿಂದ 8 ವಲಯಗಳಿಗಾಗಿ ವಿಂಗಡಿಸಲಾಗಿದೆ. ವಲಯಮಟ್ಟದಲ್ಲಿರುವ ಪ್ರತಿಯೊಂದು ಇಲಾಖೆಗೂ ಅಧಿಕಾರಿಗಳನ್ನು ನೇಮಿಸಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯು 1971 ರಲ್ಲಿ ತಯಾರಿಸಿದ್ದು, ತಹಲ್‌ವರೆವಿಗೂ ಸದರಿ ನಿಯಮಾವಳಿಗಳ ಅನುಸಾರ ಆಡಳಿತಾತ್ಮಕ ಕಾರ್ಯವನ್ನು ನಿರ್ವಹಿಸಿಕೊಂಡು ಬರುತ್ತಿದೆ. ಪ್ರಸ್ತುತ 7 ನಗರ ಸಭೆ ಮತ್ತು 110 ಪಂಚಾಯತಿಗಳನ್ನು ಸೇರ್ಪಡೆ ಮಾಡಿಕೊಂಡಿದ್ದು, ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮವಳಿಗಳಿಗೆ ಹಲವಾರು ಹುದ್ದೆಗಳನ್ನು ಸೇರ್ಪಡಿಸಿಕೊಂಡು ಪಾಲಿಕೆಯ ಆಡಳಿತಾತ್ಮಕ ಕೆಲಸಕಾರ್ಯಗಳು ಸುಗಮವಾಗಿ ನಿರ್ವಹಿಸಲು ರೂಢಿಸಿಕೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಹೊಸದಾಗಿ ಹುದ್ದೆಗಳನ್ನು ಸೃಜಿಸಿಕೊಳ್ಳುವ ಸಲುವಾಗಿ ದಕ್ಷರಾದಂತಹ ಹಾಗೂ ಸೇವಾ ವಿಷಯಗಳಲ್ಲಿ ಪರಿಣಿತಿ ಹೊಂದಿದ ಅಧಿಕಾರಿಯೊಬ್ಬರು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಹಾಗೂ ಹಾಲಿ ವೃಂದ ಮತ್ತು ನೇಮಕಾತಿ ನಿಯಮವಳಿಯನ್ನು ಪುನರ್ ಪರಿಷ್ಕರಿಸಿರುವ/ ಪರಿಶೀಲನಾ ಸಮಿತಿ ರಚನೆಯಾಗಿದ್ದು ಸದರಿ ಸಮಿತಿಗೆ ಸದಸ್ಯ

ಕಾರ್ಯದರ್ಶಿಯಾಗಿರುವ ಸಹಾಯಕ ಆಯುಕ್ತರು (ಆಡಳಿತ-II) ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಹರಿಣಿ ವನಜಕುಮಾರಿ, ಕೆ.ಎ.ಎಸ್ ರವರು ಇದೇ ತಿಂಗಳ 30 ರಂದು ವಯೋಮಿತಿಗನುಗುಣವಾಗಿ ನಿವೃತ್ತಿಹೊಂದುತ್ತಿದ್ದು ಸದರಿಯವರು ಸೇವಾ ವಿಷಯಗಳಲ್ಲಿ ಹೆಚ್ಚಿನ ಅನುಭವ ಹೊಂದಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮವಳಿಗಳನ್ನು ಮಾರ್ಪಡಿಸಲು ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರ ಸೇವಾ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸುವ ಕಾರ್ಯವನ್ನು ನಿರ್ವಹಿಸುವ ಸಲುವಾಗಿ ಒಂದು ವರ್ಷದ ಅವಧಿಗೆ ಮಾಹೆಯಾನ ರೂ. 15,000/- ಗಳ ಸಂಚಿತ ವೇತನ ಆಧಾರದ ಮೇಲೆ ನೇಮಿಸಿಕೊಳ್ಳಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

**(ಹೆಚ್. ಆರ್. ಕೃಷ್ಣಪ್ಪ)**
**ಅಧ್ಯಕ್ಷರು,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ**

ಆಯುಕ್ತರು 30/6/11

Addl Commr (Admn) 30/06/11

Deputy Mayor

30/6/11

L. Rukmini 30/6/2011

30/6

30/6

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 27-06-2011 ರಂದು ಕೈಗೊಂಡ ಬೊಮ್ಮನಹಳ್ಳಿ ವಲಯ ಕಛೇರಿಯ ತಪಾಸಣಾ ವರದಿ

**ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ**

1. ಹೆಚ್. ಆರ್ ಕೃಷ್ಣಪ್ಪ –ಅಧ್ಯಕ್ಷರು
2. ಎಂ.ಇ ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಫೌಜಿಯಾ ಬೇಗಂ – ಸದಸ್ಯರು
5. ಲಲಿತ ಮುಕುಂದರಾವ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಧಿಕ ಕೌನ್ಸಿಲ್ ಕಾರ್ಯದರ್ಶಿ
ವಿಶೇಷ ಅಧಿಕಾರಿ
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

ಪ್ರಥಮವಾಗಿ ಈ ಕಛೇರಿಯ ಪ್ರಾಂಗಣದಲ್ಲಿ ಜೆರಾಕ್ಸ್ ಮಳಿಗೆ ಒಂದಕ್ಕೆ ಬಾಡಿಗೆ ನೀಡಿದ್ದು ಅಂಗಡಿಯವರು ಕಛೇರಿಯ ಆವರಣದಲ್ಲಿ ಜೆರಾಕ್ಸ್ ಯಂತ್ರವನ್ನು ಉಪಯೋಗಿಸುತ್ತಿರುವುದು ಕಂಥುಬಂದಿರುತ್ತದೆ. ಅಂಗಡಿಯವರಿಗೆ ಕಳೆದ ಫೆಬ್ರವರಿ ಮಾಹೆಯಲ್ಲಿ ಹಿಂದಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿಯು ಸ್ಥಳ ಪರಿಶೀಲನೆ ಕೈಗೊಂಡಾಗ ಇದೇ ರೀತಿಯಲ್ಲಿ ಕಂಡುಬಂದಿದ್ದು, ತೆರವುಗೊಳಿಸಲು ಸೂಚಿಸಿದರೂ ಸಹ ಯಾವುದೇ ಕ್ರಮಕೈಗೊಳ್ಳದಿರುವುದು ಕಂಡುಬಂದಿರುತ್ತದೆ. ಉಪ ಆಯುಕ್ತರು (ಬೊಮ್ಮನಹಳ್ಳಿ) ಅನಧಿಕೃತವಾಗಿ ಅತಿಕ್ರಮಿಸಿಕೊಂಡಿರುವ ಸ್ಥಳ ತೆರವುಗೊಳಿಸಲು ಸೂಚಿಸಿದರೂ ಸಹ ತಹಲ್‌ವರೆವಿಗೂ ಯಾವುದೇ ಕ್ರಮಕೈಗೊಂಡದಿದ್ದು ಅವರ ಅಸಹಾಯಕತೆ ತೋರಿಸಿರುತ್ತದೆ.

ಬೊಮ್ಮನಹಳ್ಳಿ ಸಹಾಯಕ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಂಜುನಾಥ್ ಕಂದಾಯ ವಸೂಲಿಗಾರರು ಅನಧಿಕೃತವಾಗಿ ವ್ಯಕ್ತಿಯೊಬ್ಬನ್ನು ನೇಮಿಸಿಕೊಂಡಿದ್ದು ಅವರಿಂದ ಕಛೇರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದು ಕಂಡುಬಂದಿದ್ದು ಪ್ರತಿಯೊಂದು ಅರ್ಜಿಯನ್ನು ತುಂಬಲು (ತೆರಿಗೆ ಪಾವತಿ ಕುರಿತಂತೆ) ರೂ. 25.00 ಗಳನ್ನು ಅವರಿಗೆ ನೀಡುತ್ತಿರುವುದಾಗಿ ತಿಳಿಸಿದ್ದು, ಕಳೆದ ಎರಡು ವರ್ಷಗಳಿಂದ ಈ ಕ್ರಮವು ನಡೆಯುತ್ತಿರುವುದಾಗಿ ಕಂಡುಬಂದಿದ್ದು ಈ ವ್ಯವಸ್ಥೆಯ ಬಗೆಗೂ ಸಹ ಹಾಜರಿದ್ದ ಉಪ ಆಯುಕ್ತರು ತಮಗೆ ಸಮರ್ಪಕವಾದ ಮಾಹಿತಿ ಇಲ್ಲವೆಂಬುದು ಸೂಚಿಸಿದ್ದು ಇದು ಅವರ ಅಸಹಾಯಕತೆಯನ್ನು ತೋರಿಸುತ್ತದೆ. ಇಂತಹ ಅನಧಿಕೃತ ಕಾರ್ಯಗಳನ್ನು ನಡೆಸುತ್ತಿರುವ ಕಂದಾಯ ವಸೂಲಿಗಾರ ಶ್ರೀ ಮಂಜುನಾಥರವರನ್ನು ಕೂಡಲೇ ಅಮಾನುತ್ತು ಗೊಳಿಸಬೇಕೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಈ ಸಹಾಯಕ ಕೇಂದ್ರದ ಒಳಭಾಗ ಕೊಠಡಿಯಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಸಂಬಂಧಿಸಿದ ಅರ್ಜಿಗಳ ನಮೂನೆಯನ್ನು ಕಸದ ರಾಶಿ ರೀತಿಯಲ್ಲಿ ಸುರಿದಿದ್ದು, ಒಂದು ಪಕ್ಷ ಗಣಕ ಯಂತ್ರದಲ್ಲಿ ದಾಖಲಿಸಿರುವ ಮಾಹಿತಿಯು ನಾಶವಾದ ಪಕ್ಷದಲ್ಲಿ ಸಾರ್ವಜನಿಕರು ಪಾಲಿಕೆಗೆ ಪಾವತಿಸಿರುವ ಆಸ್ತಿ ತೆರಿಗೆ ಬಗ್ಗೆ ಯಾವ ಮಾಹಿತಿಯು ದೊರಕುವ ಸಾಧ್ಯತೆ ಇಲ್ಲದೆಂಬುದನ್ನು ಸಮಿತಿಯು ಗಮನಿಸುತ್ತದೆ. ಈ ಸಂಧರ್ಭದಲ್ಲಿ ಸಹ ಉಪ ಆಯುಕ್ತರು ಸಮಿತಿಗೆ ಪೊಳ್ಳು ಭರವಸೆ ನೀಡುವಲ್ಲಿ ಯಶಸ್ವಿಯಾಗಿರುತ್ತಾರೆ.

ಈ ಲೋಪದ ಬಗ್ಗೆ ಕಂದಾಯ ಇಲಾಖೆಯ ಯಾವ ಅಧಿಕಾರಿಯು ಗಮನ ಹರಿಸದೇ ಇರುವುದು ಪಾಲಿಕೆಯ ದುರಂತ ಎಂದರೆ ತಪ್ಪಾಗಲಾರದು. ಇದೇ ಕೊಠಡಿಯಲ್ಲಿ ಮತದಾರ ಪಟ್ಟಿ, ಜನಗಣತಿಯ ಮಾಹಿತಿ ದಾಖಲೆಗಳ ಪ್ರತಿಗಳು ಸಹ ಕಸದ ರಾಶಿ ರೀತಿ ಇರುವುದು ಶೋಚನೀಯ ಈ ಸ್ಥಳದಲ್ಲಿ ದಾಖಲೆಗಳ ಪತ್ರ ಯಾವುದು ಅನುಪಯುಕ್ತ ಕಸ ಕಡ್ಡಿ ಯಾವುದು ಎಂಬುದು ಗುರುತಿಸುವಲ್ಲಿ ಉಪ ಆಯುಕ್ತರೇ ವಿಫಲರಾಗಿರುತ್ತಾರೆ. ಈ ಕೇಂದ್ರದ ಗಣಕ ಯಂತ್ರವು ಬಹಳ ಹಳೆಯದಾಗಿದ್ದು ಇದರಲ್ಲಿ ಮಾಹಿತಿಯನ್ನು ಪಡೆಯಬೇಕಾದಲ್ಲಿ ಕನಿಷ್ಟ ಅರ್ಧ ಗಂಟೆ ಬೇಕಾಗಿದ್ದು ಇನ್ನು ಸಾರ್ವಜನಿಕರಿಗೆ ಯಾವ ವಿಧದಲ್ಲಿ ಸೌಲಭ್ಯ ದೊರಕಬಹುದು ಎಂಬುದು ಊಹಿಸಬಹುದಾಗಿರುತ್ತದೆ. ಈ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸುವಂತೆ ಸಮಿತಿಯು ಉಪ ಆಯುಕ್ತರು ತೀವ್ರವಾಗಿ ಸೂಚಿಸುತ್ತದೆ. ಸಹಾಯಕ ನಿರ್ದೇಶಕರ ನಗರ ಯೋಜನೆಯ ಕಛೇರಿಯಲ್ಲಿ ಸಹ ಹಳೆಯ ದಾಖಲೆಗಳನ್ನು ಕಸದ ರಾಶಿಯ ರೀತಿಯಲ್ಲಿ ಸಂಗ್ರಹಿಸಿಟ್ಟಿರುವುದು ಶೋಚನೀಯ. ಕಛೇರಿಯಲ್ಲಿ ಯಾವುದೇ ವಹಿಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದು ಹಾಜರಿದ್ದ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಶ್ರೀನಿವಾಸಯ್ಯ ರವರು ಸಮಿತಿಯು ಕೇಳುವ ಮಾಹಿತಿಗೆ ಬೇಜವಾಬ್ದಾರಿತನದಿಂದ ಉತ್ತರಿಸುತ್ತಾರೆ. ಇವರು ಬಹಳ ವರ್ಷದಿಂದ ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಕೂಡಲೇ ಇವರನ್ನು ಬೇರೆಡೆಗೆ ವರ್ಗಾಯಿಸಲು ಕ್ರಮಕೈಗೊಳ್ಳತಕ್ಕದ್ದು. ಕಛೇರಿಯ ನಾಲ್ಕನೇ ದರ್ಜೆ ನೌಕರರು ಅನಧಿಕೃತ ಗೈರುಹಾಜರಾಗಿದ್ದು ಇದರ ಬಗ್ಗೆ ಯಾವುದೇ ಕ್ರಮಕೈಗೊಳ್ಳದಿರುವುದು ಶೋಚನೀಯ. ಕಛೇರಿಯ ವಹಿಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಕಂಡಬಂದಿರುತ್ತದೆ. ಈ ಬಗ್ಗೆ ಬಟವಾಡೆ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಲು ಹಾಗೂ ಉಪ ಆಯುಕ್ತರು ಸಹ ತಮ್ಮ ಅಧೀನ ಸಿಬ್ಬಂದಿ ಬಗ್ಗೆ ಸೂಕ್ತ ನಿಗವಹಿಸಲು ಸಮಿತಿಯು ಸೂಚಿಸುತ್ತದೆ. ಸಮಿತಿಯು ಜಂಟಿ ಆಯುಕ್ತರು/ಉಪ ಆಯುಕ್ತರು (ಬೊಮ್ಮನಹಳ್ಳಿ) ಕಛೇರಿಯನ್ನು ಪರಿಶೀಲಿಸಲಾಗಿ ಕಛೇರಿಯ ವ್ಯವಸ್ಥಾಪಕರು, (ಹಾಲಿ ಕಂದಾಯ ಅಧಿಕಾರಿಗಳು) ವ್ಯವಸ್ಥಿತವಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ಅಸಮರ್ಥರಾಗಿದ್ದು ಇಂತಹವರಿಗೆ ಯಾವ ಆಧಾರದ ಮೇಲೆ ಪ್ರಭಾರದ ಕಂದಾಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ನಿಯೋಜಿಸಿರುತ್ತಾರೆಂಬುದು ಯಕ್ಷ ಪ್ರಶ್ನೆ ಕಛೇರಿಯಲ್ಲಿನ ಹಾಜರಾತಿ ಪುಸ್ತಕ, ಸಾಂಧರ್ಭಿಕ ರಜೆ ಪುಸ್ತಕ, ಸಿಬ್ಬಂದಿಗಳ ವೇತನ ಪಾವತಿ ವಹಿ, ಚಲನವಲನ ಪುಸ್ತಕ, ಖಾಲಿ ಹುದ್ದೆಗಳ ವಿವರ Schedule of Establishment ಇವುಗಳ ಬಗ್ಗೆ ಸಮರ್ಪಕವಾದ ಮಾಹಿತಿ ಇರುವುದಿಲ್ಲ. ಗೈರು ಹಾಜರಾಗಿದ್ದ ವ್ಯವಸ್ಥಾಪಕರನ್ನು ಕೇಳಲಾಗಿ ಮುಖ್ಯ ಕಛೇರಿಯಲ್ಲಿ ಸಭೆಯೊಂದಕ್ಕೆ ಹಾಜರಾಗಿರುವುದಾಗಿ ಉಪ ಆಯುಕ್ತರು ತಿಳಿಸಿದ್ದು, ಮುಖ್ಯ ಕಛೇರಿಯನ್ನು ಸಂಪರ್ಕಿಸಲಾಗಿ ಸಭೆಯ ರದ್ದಗಿರುವುದಾಗಿ ತಿಳಿದುಬಂದಿದ್ದು ಆದರೂ ಸಹ ಮದ್ಯಾಹ್ನ 2 ಗಂಟೆವರೆಗೂ ವ್ಯವಸ್ಥಾಪಕರು ಕಛೇರಿಗೆ ಬಾರದೇ ಇರುವುದು ಅವರ ಕರ್ತವ್ಯಲೋಪ ಎತ್ತಿತೋರಿಸುತ್ತದೆ. ಇತರಿಗೆ ಮಾದರಿಯಾಗಬೇಕಾಗಿದ್ದ ಇವರೇ ಬೇಜವಾಬ್ದಾರಿತನದಿಂದ ವರ್ತಿಸಿದ್ದು, ಕೂಡಲೇ ಇವರ ಮೇಲೆ ಶಿಸ್ತಿನ ಕ್ರಮಕೈಗೊಂಡು ಇವರನ್ನು ಸಾರ್ವಜನಿಕರ ಸಂಪರ್ಕವಿಲ್ಲದ ಸ್ಥಳಕ್ಕೆ ವರ್ಗಾಯಿಸಲು ಸಮಿತಿಯ ಅಭಿಪ್ರಾಯಿಸುತ್ತದೆ. ಈ ಕಛೇರಿಯಲ್ಲಿ ವಾಲ್‌ಮ್ಯಾನ್‌ಯಾಗಿ ಕಾರ್ಯನಿರ್ವಹಿಸುತ್ತಿರುವ ಶಿವಶಂಕರ್, ಯಲ್ಲಪ್ಪ, ಮುನಿಕರಗಪ್ಪ ನಾಲ್ಕನೇ ದರ್ಜೆ ನೌಕರರ ರವರು ಹಲವು ತಿಂಗಳುಗಳಿಂದ ಅನಧಿಕೃತ ಗೈರುಹಾಜರಿಯಾಗಿದ್ದರೂ ಸಹ ವೇತನ ಪಾವತಿಯಾಗಿರುವುದು

ಕಂಡುಬಂದಿದ್ದು ಈ ಬಗೆಗೂ ಸಂಬಂಧಪಟ್ಟ ಸಿಬ್ಬಂದಿವರ್ಗದವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಈ ಕಛೇರಿಯಲ್ಲಿ ಹೊಸದಾಗಿ ಎರಡು ಹಂದಿ ಹಿಡಿಯುವ ಹಾಗೂ ಧನ ಹಿಡಿಯುವ ವಾಹನಗಳು ಇದ್ದು ಈ ವಾಹನಗಳು ತಹಲ್‌ವರೆವಿಗೂ ಉಪಯೋಗವಾಗದೇ ಇದ್ದು ಈ ವಾಹನದ ಚಾಲಕರುಗಳು ಯಾವುದೇ ವಿಧವಾದ ಕಾರ್ಯನಿರ್ವಹಿಸದೇ ಇದ್ದು ವೇತನವನ್ನು ಪಡೆಯುತ್ತಿರುವುದು ಕಂಡುಬಂದಿರುತ್ತದೆ ಹಾಗೂ ಈ ಸಂಬಂಧಪಟ್ಟ ಇಂದನ ಪಡೆಯುವ ಬಗ್ಗೆ ಪುಸ್ತಕ ಒದಗಿಸಲು ಚಾಲಕರಾಗಲಿ ಬಟವಾಡೆ ಅಧಿಕಾರಿಗಳಾಗಲಿ ವಿಫಲರಾಗಿರುತ್ತಾರೆ. ಉಪಸ್ಥಿತರಿದ್ದ ಉಪ ಆಯುಕ್ತರು ರವರು ಈ ವಿಷಯವು ತಮಗೆ ತಿಳಿಯದೇ ಇರುವ ಹಾಗೇ ವರ್ತಿಸಿರುತ್ತಾರೆ. ಇದು ಇವರ ಅಸಮರ್ಥತೆಯನ್ನು ತೋರಿಸುತ್ತದೆ. ಕೂಡಲೇ ಈ ವಲಯಕ್ಕೆ ಉಪಯೋಗಕ್ಕೆ ಬಾರದೇ ಇರುವ ಎರಡು ವಾಹನವನ್ನು ಹೆಚ್ಚಿನ ಉಪಯುಕ್ತತೆ ಇರುವ ವಲಯಕ್ಕೆ ನೀಡುವುದೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಈ ಕಛೇರಿಯ ಸೆಲರ್‌ನಲ್ಲಿ ಖಾಸಗಿ ವಾಹನಗಳ ನಿಲ್ದಾಣವಾಗಿದ್ದು ಭದ್ರತಾ ದಳದವರು ವಾಹನದ ನಿಲುಗಡೆ ಶುಲ್ಕವನ್ನು ಪಡೆಯುತ್ತಿರುವುದು ಸಮಿತಿಯು ಮನಗಂಡಿರುತ್ತದೆ. ಉಪ ಆಯುಕ್ತರ ಕಛೇರಿ ಪಕ್ಕದಲ್ಲಿರುವ ಶೌಚಾಲಯ ದುರ್ಗಂಧದಿಂದ ನಾರುತ್ತಿದ್ದು, ಕಛೇರಿಯ ವಾತಾವರಣವು ಕಲುಷಿತಗೊಂಡಿದ್ದರು ಸಹ ಅಧಿಕಾರಿಗಳು ಇದನ್ನು ಗಮನಿಸದೆ ನಿಸಹಾಯಕತೆಯಿಂದ ವರ್ತಿಸುತ್ತಿರುವುದು ಇವರ ಬಗ್ಗೆ ಸಮಿತಿಯು ತನ್ನ ಅನುಕಂಪ ತೋರಿಸುತ್ತದೆ. ಈ ಕಛೇರಿಯ ಪರಿಸರವು ಅವ್ಯವಸ್ಥೆಯ ಹಗರವಾಗಿರುತ್ತದೆ. ಶುಚಿತ್ವದ ಬಗ್ಗೆ ಯಾವ ಅಧಿಕಾರಿಯು ಗಮನ ಹರಿಸದೇ ಇರುವುದು ಕಂಡುಬಂದಿದ್ದು ಇದು ಸಾರ್ವಜನಿಕರಿಗೆ ಪಾಲಿಕೆಯು ಶುಚಿತ್ವ ಕಾಪಾಡಲು ಎಷ್ಟರ ಮಟ್ಟಿಗೆ ವಿಫಲವಾಗಿದೆ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಹಿರಿಯ ಅಧಿಕಾರಿಯಾದ ವಲಯ ಜಂಟಿ ಆಯುಕ್ತರು ಇದರ ಬಗ್ಗೆ ಮೇಲುಸ್ತಾವಾರಿಯನ್ನು ವಹಿಸದೇ ಇದ್ದು ಅವರ ವೈಫಲ್ಯತೆಯನ್ನು ಎತ್ತಿ ತೋರಿಸುತ್ತದೆ. ಒಟ್ಟಾರೇ ಈ ಕಛೇರಿಯ ವಾತಾವರಣವಾಗಲಿ, ಕಾರ್ಯಚಟುವಟಿಕೆವಾಗಲಿ ಸಮಪರ್ಕಕತೆ ಇಲ್ಲದಿದ್ದು ಇದು ಅತಿ ಖಂಡನೀಯ ಅಂಶವಾಗಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ
3. ಮಾನ್ಯ ಆಯುಕ್ತರವರ ಅವಗಾಹನೆಗೆ
4. ಅಪರ ಆಯುಕ್ತರು (ಆಡಳಿತ) ರವರಿಗೆ ಸೂಕ್ತಕ್ರಮಕ್ಕಾಗಿ
5. ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತಕ್ರಮಕ್ಕಾಗಿ
6. ಕಛೇರಿ ಕಡತಕ್ಕೆ

# ಪತ್ರಿಕಾ ಪ್ರಕಟಣೆಗಾಗಿ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 04-07-2011 ರಂದು ಕೈಗೊಂಡ ಈಶಾನ್ಯ ವಲಯ ಕಛೇರಿಯ ತಪಾಸಣಾ ವರದಿ

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | ಹಾಜರಿದ್ದ ಅಧಿಕಾರಿಗಳು |
|---|---|
| 1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 2. ಎಂ.ಇ ಪಿಳ್ಳಪ್ಪ – ಸದಸ್ಯರು | ವಿಶೇಷ ಅಧಿಕಾರಿ |
| 3. ಮುನಿಸ್ವಾಮಿಗೌಡ – ಸದಸ್ಯರು | ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ |
| 4. ಫೌಜಿಯಾ ಬೇಗಂ – ಸದಸ್ಯರು | |
| 5. ಲಲಿತ ಮುಕುಂದರಾವ್ – ಸದಸ್ಯರು | |
| 6. ಎ. ವಿಜಯ ರಮೇಶ್ – ಸದಸ್ಯರು | |
| 7. ವೀಣಾ ನಾಗರಾಜ್ – ಸದಸ್ಯರು | |

ತಪಾಸಣೆ ಹೋಗುವ ಸಂದರ್ಭದಲ್ಲಿ ಚಾಲುಕ್ಯ ವೃತದ ಸಿಗ್ನಲ್ ಬಳಿ ಪಾಲಿಕೆ ಗುತ್ತಿಗೆದಾರರಿಗೆ ಸಂಬಂಧಿಸಿದ ಕಸ ಸಾಗಿಸುವ ಲಾರಿಯು ದುಸ್ಥಿತಿಯಲ್ಲಿ ಇದ್ದು ಇದು ಪೂರ್ಣ ಪ್ರಮಾಣದಲ್ಲಿ ತೆರೆದಿದ್ದು, ಇದರಲ್ಲಿ ತುಂಬಿದಂತಹ ಕಸವು ದಾರಿ ಉದ್ದಕ್ಕೂ ಸುರಿಯುತ್ತಿದ್ದು, ಈ ಬಗ್ಗೆ ಆ ಸ್ಥಳದಲ್ಲಿ ಸಾರ್ವಜನಿಕರು ಪಾಲಿಕೆ ಬಗ್ಗೆ ಕೀಳಿಹಿರಿಮೆಯಿಂದ ಮಾತನಾಡುತ್ತಿದ್ದು, ಸಂಬಂಧಪಟ್ಟ ಲಾರಿಯ ಚಾಲಕನನ್ನು ವಿಚಾರಿಸಲಾಗಿ ಆತನ ಬಳಿ ವಾಹನದ ಯಾವುದೇ ದಾಖಲೆ ಪತ್ರಗಳು ಲಭ್ಯವಿಲ್ಲದಿದ್ದು, ಆತನ ಚಾಲನ ಪರವನಾಗಿ ಸಹ ಇಲ್ಲದಿದ್ದು, ವಾಹನದ ಮಾಲೀಕತ್ವದ ಬಗ್ಗೆ ವಿಚಾರಿಸಲಾಗಿ ಚಾಲಕರು ಈ ವಾಹನವು ಪಾಲಿಕೆಯ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ನಾಗಭೂಷಣ್ ರವರಿಗೆ ಸೇರಿರುವುದಾಗಿ ಇವರ ಬಳಿ 8 ಲಾರಿಗಳಿದ್ದು ಈ ಪೈಕಿ 5 ಲಾರಿಗಳು ಮಾತ್ರ ಚಾಲನೆಯಲ್ಲಿ ಇದ್ದು ಹಾಗೂ 16 ಆಟೋಗಳು ಇರುವುದಾಗಿಯೂ ಚಾಲಕ ಶ್ರೀ ಶ್ರೀನಿವಾಸ ರವರು ತಿಳಿಸಿರುತ್ತಾರೆ.

ಸಮಿತಿಯು ಈಶಾನ್ಯ ವಲಯ ಕಛೇರಿಯಲ್ಲಿನ ಕಂದಾಯ ಇಲಾಖೆಯ ಸಹ ಕಂದಾಯ ಅದಿಕಾರಿ ಹೆಬ್ಬಾಳ, ಕಾಡುಗೊಂಡನಹಳ್ಳಿ, ವಸಂತನಗರ ಮತ್ತು ಪುಲಿಕೇಶಿನಗರ ಕಛೇರಿಗಳನ್ನು ಪರಿಶೀಲಿಸಲಾಗಿ ಕಛೇರಿಯ ಯಾವುದೇ ದಾಖಲೆಗಳು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ಸಹ ಕಂದಾಯ ಅಧಿಕಾರಿ (ಹೆಬ್ಬಾಳ) ಕಛೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ಕಛೇರಿಯ

ಕಾರ್ಯನಿರ್ವಾಹಕ ಸಿಬ್ಬಂದಿಗಳಾದ ಶ್ರೀ ಎಂ. ರಾಮಕೃಷ್ಣ ರವರು ದಿನಾಂಕ: 30-06-2011 ರಂದು ಹಾಗೂ ಶ್ರೀ ಜೆ. ಜಯರಾಂ ರವರು ದಿನಾಂಕ: 29-06-2011, 30-06-2011 ರಂದು ಹಾಜರಾತಿಗೆ ಸಹಿ ಮಾಡದೇ ಇಲ್ಲದಿರುವುದು ಕಂಡುಬಂದಿದ್ದು, ಸದರಿ ನೌಕರರುಗಳಿಗೆ ಜೂನ್ ಮಾಹೆಯ ಪೂರ್ಣ ವೇತನ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿವರ ನೀಡುವಲ್ಲಿ ಸಹ ಕಂದಾಯ ಅಧಿಕಾರಿಗಳು ವಿಫಲರಾಗಿರುತ್ತಾರೆ. ಸಾರ್ವತ್ರಿಕ ರಜೆ ದಿನವಾದ ಭಾನುವಾರ ಸಹ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದು ಕಂಡುಬಂದಿರುತ್ತದೆ. ಕಛೇರಿಯ ಹಾಜರಾತಿ ವಹಿ, ಕೆಟಿಆರ್ ವಹಿ, ಎಂ.ಆರ್. ವಹಿ, ಪಿ.ಆರ್.ವಹಿ ಗಳು ಯಾವುದೇ ಅಧಿಕಾರಿಗಳಿಂದ ದೃಢೀಕರಿಸದೇ ಇರುವುದು ಸದರಿ ಅಧಿಕಾರಿಗಳ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಸಹ ಕಂದಾಯ ಅಧಿಕಾರಿ (ಕಾಡುಗೊಂಡನಹಳ್ಳಿ ವಿಭಾಗ) ಕಛೇರಿಯ ಹಾಜರಾತಿ ಪರಿಶೀಲಿಸಲಾಗಿ ಶ್ರೀ ಎಂ. ಮಹೇಶ್, ಮೌಲ್ಯಮಾಪಕರು, ರಜೆ ಚೀಟಿಯನ್ನು ಬರೆದಿಟ್ಟು ಹಾಜರಾತಿಯಲ್ಲಿ ಸಹಿ ಮಾಡಿರುವುದು ಸಮಿತಿಯ ಪರಿಶೀಲನೆ ವೇಳೆಯಲ್ಲಿ ಕಂಡುಬಂದಿದ್ದು, ಇದನ್ನು ಸಮರ್ಪಕವಾಗಿ ಪರಿಶೀಲಿಸದೇ ನೌಕರಿಗೆ ಸದರಿ ವೇತನ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಕಛೇರಿಗಳ ಚಲನವಲನ ವಹಿಗಳಲ್ಲಿ ಕಛೇರಿ ಬಿಡುವ ಸಮಯವನ್ನು ನಮೂದಿಸಿ ಪುನ: ಕಛೇರಿಗೆ ಬಂದ ಬಗ್ಗೆ ಯಾವುದೇ ಮಾಹಿತಿಯನ್ನು ನಮೂದಿಸದೇ ಇರುವುದು ಕಂಡುಬಂದಿರುತ್ತದೆ. ಮೇಲ್ಕಂಡ ಎಲ್ಲಾ ಸಹ ಕಂದಾಯ ಅಧಿಕಾರಿಗಳ ಕಛೇರಿಯ ವಿಷಯ ನಿರ್ವಾಹಕ ಮ್ಯಾಟೇಷನ್ ವಹಿಗಳನ್ನು ಪರಿಶೀಲಿಸಲಾಗಿ ಹಲವಾರು ಖಾತಾ ನೊಂದಾಣಿ ದಾಖಲೆಗಳಿಗೆ ಸಹ ಕಂದಾಯ ಅಧಿಕಾರಿಗಳು ದೃಢೀಕರಿಸದೇ ಇರುವುದು ಕಂಡುಬಂದಿದ್ದು, ಹಾಗೂ ಮ್ಯಾಟೇಷನ್‌ವಹಿಯಲ್ಲಿ ಹಲವು ಹಾಳೆಗಳನ್ನು ಖಾಲಿ ಬಿಟ್ಟು ನಂತರ ಖಾತೆಗಳ ದಾಖಲೆಗಳನ್ನು ಮಾಡಿರುವುದು ಹಲವು ಅನುಮಾನಗಳಿಗೆ ಅಸ್ಪದ ನೀಡುತ್ತದೆ. 2006-07ರಿಂದ ತಹಲ್‌ವರೆವಿಗೂ ಮೇಲ್ಕಂಡ ಎಲ್ಲಾ ಸಹ ಕಂದಾಯ ಅಧಿಕಾರಿ ಕಛೇರಿಗಳ ಲೆಕ್ಕ ಪರಿಶೋಧನಾ ಆಕ್ಷೇಪಣಾ ವರದಿ ಹಾಗೂ ಅವುಗಳಿಗೆ ನೀಡಿರುವ ಅನುಸರಣ ವರದಿಗಳ ಬಗ್ಗೆ ಮಾಹಿತಿ ನೀಡುವಲ್ಲಿ ಸದರಿ ಅಧಿಕಾರಿಗಳು ವಿಫಲರಾಗಿದ್ದು, 2007-08ನೇ ಸಾಲಿನಿಂದ ತಹಲ್‌ವರೆವಿಗೂ ಲೆಕ್ಕ ಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ಸಮಿತಿಯ ತಪಾಸಣೆ ವೇಳೆ ಕಂಡುಬಂದಿದ್ದು, ಸದರಿ ಅಕ್ಷೇಪಣೆ ಮೊತ್ತವನ್ನು ವಸೂಲಿ ಮಾಡಿ ಪಾಲಿಕೆಗೆ ಜಮಾ ಮಾಡುವಲ್ಲಿ ಸದರಿ ಅಧಿಕಾರಿಗಳು ವಿಫಲರಾಗಿದ್ದು ಈ ಬಗ್ಗೆ ಈ ಕೂಡಲೇ ಕ್ರಮಕೈಗೊಳ್ಳಬೇಕೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಸದರಿ ಕಛೇರಿಗಳಲ್ಲಿ ಕಂದಾಯ ಪಾವತಿ ಆಗಿರುವ ಬೌನ್ಸ್ ಚೆಕ್‌ಗಳ ಬಗ್ಗೆ ಪರಿಶೀಲಿಸಲಾಗಿ ಸುಮಾರು ರೂ. 3,88,671/- ಚೆಕ್‌ಗಳು ಬೌನ್ಸ್ ಆಗಿರುವುದು ಕಂಡುಬಂದಿದ್ದು, ಇದರ ಬಗ್ಗೆ ಕ್ರಮಕೈಗೊಳ್ಳುವಲ್ಲಿ ಸದರಿ ಸಹ ಕಂದಾಯ ಅಧಿಕಾರಿಗಳು ವಿಫಲರಾಗಿರುತ್ತಾರೆ.

ಈ ವಲಯ ಕಛೇರಿಯ ಕಟ್ಟಡವು ದುಸ್ಥಿತಿಯಲ್ಲಿ ಇದ್ದು, ಈ ಕಟ್ಟಡಕ್ಕೆ ವಾರ್ಷಿಕ ದುರಸ್ಥಿ ಕೈಗೊಂಡು ಹಲವಾರು ವರ್ಷಗಳು ಕಳೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಕಚೇರಿಯ ಪ್ರಾಂಗಣದಲ್ಲಿ ಮುರಿದ ಪೀಠೋಪಕರಣಗಳು ಹಳೇಯ ಕಡತಗಳು ರಾಶಿಗಳು, ಹಳೇಯ ರಸೀದಿ ಪುಸ್ತಕಗಳು,

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ತುಂಬಿರುವುದು ಕಂಡುಬಂದಿರುತ್ತದೆ. ಇಲ್ಲಿನ ಶೌಚಾಲಯಗಳು ಶಿಥಿಲ ಸ್ಥಿತಿಯಲ್ಲಿದ್ದು, ನೀರಿನ ಸರಬರಾಜ ಇಲ್ಲದೇ ಹದಗೆಟ್ಟ ಸ್ಥಿತಿಯಲ್ಲಿದ್ದು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ನಿಗವಹಿಸದೇ ಇರುವುದ ಪಾಲಿಕೆಯ ದುರದುಷ್ಟಕರವೆಂದರೆ ತಪ್ಪಾಗಾಲಾರದು. 2006ನೇ ಸಾಲಿನಲ್ಲಿಯೇ ಬೆಂಗಳೂರು ಮಹಾನಗ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಮಾರ್ಪಾಟಿದ್ದರೂ ಸಹ ಎಲ್ಲ ನಾಮಫಲಕಗಳಲ್ಲಿಯೂ ಬೆಂಗಳೂರು ಮಹಾನಗರ ಪಾಲಿಕೆಯೆಂದು ಹಾಗೂ ಕಛೇರಿಯ ನಾಮಫಲಕಗಳ ಈ ವಲಯಕ್ಕೆ ಒಳಪಡುವ ವಾರ್ಡ್ ಸಂಖ್ಯೆಯು ಸಹ ಹಳೆಯದೆ ಇದ್ದು, ಇದನ್ನು ತಿದ್ದುಪಡಿಸಲ ಕ್ರಮಕೈಗೊಳ್ಳಲು ಯಾವ ಒಬ್ಬ ಅಧಿಕಾರಿಯು ನಿಗಾವಹಿಸದೇ ಇರುವುದು ಅವರ ಕಾರ್ಯವೈಫಲ್ಯತೆಯನು ಎತ್ತಿ ತೋರಿಸುತ್ತದೆ ಹಾಗೂ ಈ ವಲಯದ ಅತಿ ಮುಖ್ಯರಸ್ತೆಯಲ್ಲಿನ ನಾಮಫಲಕಗಳ ಮೇಲೆಯೂ ಸ ಬೆಂಗಳೂರು ಮಹಾನಗರ ಪಾಲಿಕೆ ಎಂಬುದು ರಾರಾಜಿಸುತ್ತಿದ್ದು ಈ ಬಗೆಗೂ ಸಹ ಅಧಿಕಾರಿಗಳ ನಿಗವಹಿಸದೇ ಇರುವುದು ಖಂಡನೀಯ ಅಂಶವಾಗಿದೆ. ಸಾರ್ವಜನಿಕವಾಗಿ ಶುಚಿತ್ವ ಕುರಿತಂತೆ ಗಮ ಹರಿಸದೇ ಇರುವುದು ಕಂಡು ಬಂದಿರುತ್ತದೆ. ಈ ವಲಯ ಕಛೇರಿಯಲ್ಲಿನ ಅಧಿಕಾರಿ/ಸಿಬ್ಬಂದಿ ವರ್ಗದವರು ಸುಮಾರು 8 ರಿಂದ 10 ವರ್ಷಗಳಿಂದ ಇದೇ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಇವರ ಕಛೇರಿ ಕೆಲಸ ಕಾರ್ಯಗಳ ಬಗ್ಗೆ ಅಲಕ್ಷ್ಯ ಮಾನೋಭಾವನೆ ಇದ್ದು ಕೂಡಲೇ 3 ವರ್ಷಗಳಿಗಿಂತ ಅಧಿಕವಾ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಈ ವಲಯ ಕಛೇರಿಯಿಂದಲೇ ವರ್ಗಾಯಿಸಿದ ಇತರೇ ನೌಕರರುಗಳು ಹೆಚ್ಚಿನ ದಕ್ಷತೆಯಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಟ್ಟಂತಾಗುತ್ತದೆಂದ ಭಾವಿಸುತ್ತೇನೆ.

*(signature)*

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
5. ಅಪರ ಆಯುಕ್ತರು (ಆಡಳಿತ)( ಪೂರ್ವ)ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಂಡು, ವರದಿ ನೀಡಲು ಸೂಚಿಸಿದೆ.
6. ಕಛೇರಿ ಪ್ರತಿ

## ಪತ್ರಿಕಾ ಪ್ರಕಟಣೆಗಾಗಿ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 18-07-2011 ರಂದು ಕೈಗೊಂಡ ಸಹಾಯಕ ಕಂದಾಯ ಅಧಿಕಾರಿ ಥಣಿಸಂದ್ರ ಉಪವಿಭಾಗ, ಯಲಹಂಕ ವಲಯ ಕಛೇರಿಯ ತಪಾಸಣಾ ವರದಿ**

**ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ**

1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು
2. ವೀಣಾ ನಾಗರಾಜ್ – ಸದಸ್ಯರು
3. ಎ.ವಿಜಯ ರಮೇಶ್ – ಸದಸ್ಯರು
4. ವೈ.ಆರ್. ಗೌರಮ್ಮ – ಸದಸ್ಯರು
5. ಎಂ.ಇ. ಪಿಳ್ಳಪ್ಪ – ಸದಸ್ಯರು
6. ಕೆ.ವಿ.ಯಶೋಧ – ಸದಸ್ಯರು
7. ಲಲಿತ ಮುಕುಂದರಾವ್ – ಸದಸ್ಯರು
8. ಮುನಿಸ್ವಾಮಿಗೌಡ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಧಿಕ ಕೌನ್ಸಿಲ್ ಕಾರ್ಯದರ್ಶಿ

ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

ಥಣಿಸಂದ್ರ ಉಪವಿಭಾಗದ ದಾಸರಹಳ್ಳಿ ಸಹಾಯ ಕೇಂದ್ರಕ್ಕೆ ಭೇಟಿ ನೀಡಿ ಉಪಸ್ಥಿತರಿದ್ದ ಕಂದಾಯ ವಸೂಲಿಗಾರರನ್ನು ಕಂದಾಯ ವಸೂಲಾತಿ ಬಗ್ಗೆ ವಿಚಾರಿಸಲಾಗಿ ವಾರ್ಡ್-7 ಕ್ಕೆ ಸಂಬಂಧಿಸಿದ ಕಂದಾಯ ವಸೂಲಿಗಾರರು ತಮ್ಮ ವ್ಯಾಪ್ತಿಗೆ ಬರುವ ಸುಮಾರು 2000 ಸ್ವತ್ತುಗಳ ಪೈಕಿ 500 ಸ್ವತ್ತುಗಳಿಗೆ ಕಂದಾಯ ಪಾವತಿಸದೇ ಇರುವ ಭೂಮಾಲೀಕರಿಗೆ ನೋಟೀಸ್ ಜಾರಿ ಮಾಡಬೇಕಾಗಿದ್ದು, ಇವುಗಳ ಪೈಕಿ 200 ಸ್ವತ್ತುಗಳಿಗೆ ನೋಟೀಸ್ ಜಾರಿ ಮಾಡಬೇಕಾರುವುದಾಗಿ ತಿಳಿಸಿದ್ದು, ಸದರಿ ಸ್ವತ್ತುಗಳಿಗೆ ಕೂಡಲೇ ನೋಟೀಸ್ ಜಾರಿ ಮಾಡಿ ಕಂದಾಯ ವಸೂಲಿ ಮಾಡುವಂತೆ ಸಮಿತಿಯು ಸದರಿಯವರಿಗೆ ಸೂಚಿಸಲಾಯಿತು.

ನಂತರ ಸಮಿತಿಯು ಸಹಾಯಕ ಕಂದಾಯ ಅಧಿಕಾರಿ, ಥಣಿಸಂದ್ರ ಕಛೇರಿಗೆ ಭೇಟಿ ನೀಡಿ ಕಛೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ಏಪ್ರಿಲ್ ಮಾಹೆಯಲ್ಲಿ ಶ್ರೀ ಹೊನ್ನರಾಜು, ಕಂದಾಯ ವಸೂಲಿಗಾರರು ದಿನಾಂಕ: 01-04-2011 ಮತ್ತು 19-04-2011 ರಂದು ಹಾಜರಾತಿಯಲ್ಲಿ ಸಹಿ ಮಾಡದೇ ಇರುವುದು ಕಂಡುಬಂದಿದ್ದು, ಈ ಬಗ್ಗೆ ವಿಚಾರಿಸಲಾಗಿ ಸಹಾಯಕ ಕಂದಾಯ ಅಧಿಕಾರಿಗಳು ತಿರಸ್ಕೃತ ಚೆಕ್‌ಗಳನ್ನು ವಸೂಲಿ ಮಾಡುವಲ್ಲಿ ವಿಳಂಬ ಮಾಡಿರುವ ಕಾರಣ ಎಲ್ಲಾ ಕಾರ್ಯನಿರ್ವಾಹಕ ಸಿಬ್ಬಂದಿಗಳ ವೇತನವನ್ನು ಏಪ್ರಿಲ್ ಮಾಹೆಯಿಂದ ತಡೆಹಿಡಿದಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಕೂಡಲೇ ತಿರಸ್ಕೃತ ಚೆಕ್‌ಗಳ ಬಗ್ಗೆ ಕ್ರಮಕೈಗೊಂಡು ಶ್ರೀ ಹೊನ್ನರಾಜು, ಕಂದಾಯ ವಸೂಲಿಗಾರರವರ ಏಪ್ರಿಲ್ ಮಾಹೆಯ ವೇತನದಲ್ಲಿ 2 ದಿನಗಳ ವೇತನವನ್ನು ಕಟಾವು ಮಾಡುವಂತೆ ಸಮಿತಿಯು ಸೂಚಿಸಿರುತ್ತದೆ. ಸದರಿ ಕಛೇರಿಯ ಸಾಂಧರ್ಭಿಕ ರಜೆ ವಹಿ, ಖಾಲಿ ಹುದ್ದೆಗಳ ವಹಿ, ದಾಸ್ತಾನು ವಹಿ, ವೇತನ ಬಟವಾಡೆ ವಹಿ, ತಿರಸ್ಕೃತ ಚೆಕ್‌ಗಳ ವಹಿ ಹಾಗೂ ಇತ್ಯಾದಿ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಲು ಸೂಚಿಸಲಾಗಿ ಸಂಬಂಧಪಟ್ಟ ಗುಮಾಸ್ತರು ರಜೆಯಲ್ಲಿ ಇರುತ್ತಾರೆ ಎಂಬ ಕಾರಣಗಳನ್ನು ನೀಡಿ ಸಮಿತಿಯ ತಪಾಸಣೆಗೆ ಸದರಿ ಸಹ ಕಂದಾಯ ಅಧಿಕಾರಿಗಳು ಸರಿಯಾಗಿ ಸ್ಪಂದಿಸದೇ ಬೇಜವಾಬ್ದಾರಿತನದಿಂದ ವರ್ತಿಸಿರುತ್ತಾರೆ. ಕಛೇರಿಯ ಹಾಜರಾತಿ ವಹಿ, ಕೆಟಿಆರ್ ವಹಿ, ಎಂ.ಆರ್. ವಹಿ, ಪಿ.ಆರ್.ವಹಿ ಗಳು ಯಾವುದೇ ಅಧಿಕಾರಿಗಳಿಂದ ದೃಢೀಕರಿಸದೇ ಇರುವುದು ಸದರಿ ಅಧಿಕಾರಿಗಳ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಕಚೇರಿಯ ಕಂದಾಯ ಪರಿವೀಕ್ಷಕರಾದ ಶ್ರೀ ಚಂದ್ರಶೇಖರ್ ರವರು ಕಳೆದ 4 ದಿನಗಳಿಂದ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೇ ಇರುವುದು ಕಂಡುಬಂದಿದ್ದು ಈ ಬಗ್ಗೆ ಸಹ

ಕಂದಾಯ ಅಧಿಕಾರಿಗಳನ್ನು ವಿಚಾರಿಸಲಾಗಿ ಸದರಿ ನೌಕರರನ್ನು ಬೇರೆ ವಲಯದ ಕಟ್ಟಡಗಳ ಪರಿಶೀಲನೆಗೆ ನಿಯೋಜಿಸಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಚಲನವಲನ ವಹಿಯಲ್ಲಿ ಸಹ ನಮೂದಿಸಿದೇ ಇರುವುದು ಕಂಡುಬಂದಿರುತ್ತದೆ. ಕಛೇರಿಯ ಸಿಬ್ಬಂದಿಗಳು ಗುರುತಿನ ಚೀಟಿ ಯಾವೊಬ್ಬ ಸಿಬ್ಬಂದಿಯು ಧರಿಸದೇ ಇರುವುದು ಹಾಗೂ ನಾಲ್ಕನೇ ದರ್ಜೆಯ ನೌಕರರಗಳು ಸಮವಸ್ತ್ರಗಳು ಧರಿಸದೇ ಇರುವುದು ಕಂಡುಬಂದಿದ್ದು ಈ ಬಗ್ಗೆ ವಿವರ ನೀಡುವಲ್ಲಿ ಸಹ ಕಂದಾಯ ಅಧಿಕಾರಿಗಳು ವಿಫಲರಾಗಿರುತ್ತಾರೆ.

ವಾರ್ಡ್–6 ರ ವಿಷಯ ನಿರ್ವಾಹಕರಾದ ಶ್ರೀ ರಾಮಣ್ಣ ರವರ ಕೆಟಿಆರ್ ವಹಿ, ಮ್ಯೂಟೇಷನ್ ವಹಿಗಳನ್ನು ಪರಿಶೀಲಿಸಲಾಗಿ ಸದರಿಯವರ ಕೆಟಿಆರ್ ವಹಿಯಲ್ಲಿ ಖಾತಾ ವರ್ಗಾವಣೆ/ವಿಭಜನೆ/ನೊಂದಾವಣೆ ಕಡತಗಳ ವಿವರಣೆ ಬಗ್ಗೆ ಸರಿಯಾಗಿ ನಮೂದಿಸದೇ ಮುಕ್ತಾಯವಾಗಿರುವ ಕಡತಗಳ ಬಗ್ಗೆ ಕೆಟಿಆರ್ ವಹಿಯಲ್ಲಿ ದಾಖಲಿಸದೇ ಪ್ರತಿ ಮಾಹೆಯಾನ ಘೋಷ್ವರೆಯನ್ನು ಮೇಲಾಧಿಕಾರಿಗಳಿಂದ ದೃಢೀಕರಿಸದೇ ಇರುವುದು ಕಂಡುಬಂದಿದ್ದು, ಈ ಬಗ್ಗೆ ವಿವರಣೆ ನೀಡುವಲ್ಲಿ ಸದರಿಯವರು ವಿಫಲರಾಗಿದ್ದು, ಮುಕ್ತಾಯಗೊಂಡಿರುವ ಕಡತಗಳ ಬಗ್ಗೆ ವಿಚಾರಿಸಲಾಗಿ ಸಾರ್ವಜನಿಕರ ಕೋಟ್ಯಾಂತರ ರೂಪಾಯಿಗಳಿಗೆ ಬೆಲೆಬಾಳುವ ಆಸ್ತಿಗಳಿಗೆ ಸಂಬಂಧಪಟ್ಟ ಕಡತಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ಸದರಿಯವರು ನಿರ್ವಹಿಸಿದ್ದ ಖಾತಾ ವರ್ಗಾವಣೆ ಹಾಗೂ ಖಾತಾ ನೊಂದಾವಣೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಸಂಬಂಧಪಟ್ಟ ವಿಷಯ ನಿರ್ವಾಹಕರಾಗಲಿ ಅಥವಾ ಅಧಿಕಾರಿಯಾಗಲಿ ದೃಢೀಕರಿಸದೇ ಇರುವುದು ಕಂಡುಬಂದಿದ್ದು, ಸದರಿ ವಲಯವು ಹೊಸ ವಲಯವಾಗಿದ್ದು, ನಕಲಿ ಖಾತೆಗಳನ್ನು ನೀಡುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬಂದಿರುವ ಹಿನ್ನಲೆಯಲ್ಲಿ ದಾಖಲಾತಿಗಳನ್ನು ಪರಿಶೀಲಿಸದೇ ಕಾನೂನು ವಿರುದ್ಧವಾಗಿ ಖಾತೆಗಳನ್ನು ನೀಡಿರುವ ಬಗ್ಗೆ ಸಮಿತಿಯು ಗಂಭೀರವಾಗಿ ಪರಿಗಣಿಸಿ ಕೂಡಲೇ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಹಾಗೂ ಯಾವುದೇ ಕಡತಗಳನ್ನು ದೃಢೀಕರಿಸದೇ ಕೆಟಿಆರ್ ವಹಿಯಲ್ಲಿ ದಾಖಲಿಸದೇ ಖಾತಾಗಳನ್ನು ನೀಡಿರುವ ವಿಷಯ ನಿರ್ವಾಹಕರಾದ ಶ್ರೀ ರಾಮಣ್ಣ ರವರು ಸುಮಾರು 10 ವರ್ಷಗಳಿಂದ ಇದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸಾರ್ವಜನಿಕರ ಕೆಲಸಕಾರ್ಯಗಳಲ್ಲಿ ನಿರ್ಲಕ್ಷತೆ ತೋರುತ್ತಿರುವುದು ಸಮಿತಿಯ ಪರಿಶೀಲನೆ ವೇಳೆಯಲ್ಲಿ ಕಂಡುಬಂದಿರುವುದರಿಂದ ಸದರಿಯವರನ್ನು ಕೂಡಲೇ ಅಮಾನುತ್ತು ಪಡಿಸಿ ಬೇರೆ ವಲಯಕ್ಕೆ ವರ್ಗಾವಣೆ ಮಾಡಲು ಸಂಬಂಧಪಟ್ಟವರಿಗೆ ಆದೇಶಿಸಲು ಮಾನ್ಯ ಆಯುಕ್ತರನ್ನು ಕೋರಲಾಗಿದೆ.

ಸದರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಲವು ನೌಕರರುಗಳು ದಿನಕೂಲಿ ನೌಕರರಾಗಿದ್ದು, ಅಂತಹವರು ಜವಾಬ್ದಾರಿಯುತವಾದ ಹುದ್ದೆಗಳಾದ ಕಂದಾಯ ವಸೂಲಿಗಾರರು ಹಾಗೂ ವಿಷಯ ನಿರ್ವಾಹಕರ ಹುದ್ದೆಗಳನ್ನು ನಿರ್ವಹಿಸುತ್ತಿದ್ದು, ಈ ಬಗ್ಗೆ ಸಹ ಕಂದಾಯ ಅಧಿಕಾರಿಗಳು ಸದರಿ ನೌಕರರುಗಳು ಹಿಂದಿನಿಂದಲೂ ಇದೇ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆಂದು ತಿಳಿಸಿದ್ದು, ಕಂದಾಯ ವಸೂಲಿಗಾರದಂತಹ ಜವಾಬ್ದಾರಿಯುತ ಹುದ್ದೆಯನ್ನು ನಿರ್ವಹಿಸಲು ಖಾಯಂ ಕಂದಾಯ ವಸೂಲಿಗಾರರಿಗೆ ಮಾತ್ರ ಅರ್ಹತೆಯಿದ್ದು, ಈ ಬಗ್ಗೆ ಕೂಡಲೇ ಕ್ರಮಕೈಗೊಂಡು ಖಾಯಂ ಕಂದಾಯ ವಸೂಲಿಗಾರರನ್ನು ಹಾಗೂ ಹುದ್ದೆಗಳಿಗೆ ಅರ್ಹತೆವುಳ್ಳವರನ್ನು ಈ ಉಪವಿಭಾಗಕ್ಕೆ ನಿಯೋಜಿಸಿದಲ್ಲಿ ಸದರಿ ಕಛೇರಿಯ ಆಡಳಿತದಲ್ಲಿ ಸುಧಾರಣೆ ತರಬಹುದೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

ಈ ಉಪವಿಭಾಗದ ಕಛೇರಿಯಲ್ಲಿನ ಅಧಿಕಾರಿ/ಸಿಬ್ಬಂದಿ ವರ್ಗದವರೂ ಸುಮಾರು 8 ರಿಂದ 10 ವರ್ಷಗಳಿಂದ ಇದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಇವರಲ್ಲಿ ಕಛೇರಿ ಕೆಲಸ ಕಾರ್ಯಗಳ ಬಗ್ಗೆ ಅಲಕ್ಷ್ಯ ಮಾನೋಭಾವನೆ ಇದ್ದು ಕೂಡಲೇ 3 ವರ್ಷಗಳಿಗಿಂತ ಅಧಿಕವಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಈ ವಲಯ ಕಛೇರಿಯಿಂದಲೇ ವರ್ಗಾಯಿಸಿದಲ್ಲಿ ಇತರೇ ನೌಕರರುಗಳು ಹೆಚ್ಚಿನ ದಕ್ಷತೆಯಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಟ್ಟಂತಾಗುತ್ತದೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 01-08-2011 ರಂದು ಮಹದೇವಪುರ ವಲಯ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಹೆಚ್. ಆರ್ ಕೃಷ್ಣಪ್ಪ | – ಅಧ್ಯಕ್ಷರು | ಜಂಟಿ ಆಯುಕ್ತರು |
| 2. ಮುನಿಸ್ವಾಮಿಗೌಡ | – ಸದಸ್ಯರು | ಉಪ ಆಯುಕ್ತರು |
| 3. ಎ.ವಿಜಯ ರಮೇಶ್ | – ಸದಸ್ಯರು | ಮುಖ್ಯ ಅಭಿಯಂತರರು |
| 4. ಲಲಿತ ಮುಕುಂದರಾವ್ | – ಸದಸ್ಯರು | ಅಧೀಕ್ಷಕ ಅಭಿಯಂತರರು |
| 5. ವೀಣಾ ನಾಗರಾಜ್ | – ಸದಸ್ಯರು | ಕಾರ್ಯಪಾಲಕ ಅಭಿಯಂತರರುಗಳು |
| 6. ಕೆ.ಎ ಯಶೋಧ | – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| 7. ಎಂ.ಇ ಪಿಳ್ಳಪ್ಪ | – ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 8. ವೈ.ಆರ್. ಗೌರಮ್ಮ | – ಸದಸ್ಯರು | ವಿಶೇಷ ಅಧಿಕಾರಿ |
| | | ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ |

ಜಂಟಿ ಆಯುಕ್ತರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಸದಸ್ಯರುಗಳು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ತಮ್ಮ ವಲಯ ಕಛೇರಿ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ಸಭೆಯ ಗಮನಕ್ಕೆ ತರುತ್ತಾ, ಪ್ರಸ್ತುತ ಸಾಲಿನಲ್ಲಿ ಮಹದೇವಪುರ ವಲಯದಲ್ಲಿ ಶೇಕಡ 80 ಕ್ಕೂ ಅಧಿಕವಾಗಿ ಕಂದಾಯ ವಸೂಲಾತಿ ಮಾಡಿರುವುದಾಗಿ ತಿಳಿಸಿ ಮುಂದಿನ 3 ತಿಂಗಳ ಅವಧಿಯೊಳಗಾಗಿ ಪೂರ್ಣ ಪ್ರಮಾಣದ ವಸೂಲಾತಿ ಮಾಡಲಾಗುವುದಾಗಿ ತಿಳಿಸಿದರು. ಪ್ರಸುತ್ತ ವಲಯ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆಯಿದ್ದು, ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮಕೈಗೊಂಡ ಪಕ್ಷದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕಛೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ವಲಯ ಕಛೇರಿಯಲ್ಲಿ ಹಲವಾರು ಪ್ರಮುಖ ರಸ್ತೆಗಳು ಇದ್ದು, ಈ ರಸ್ತೆಗಳ ಪಕ್ಕದ ಫುಟ್‌ಬಾತ್‌ಗಳಲ್ಲಿ ತಾತ್ಕಾಲಿಕ ವಾಹನಗಳಲ್ಲಿ ಹಾಗೂ ಅನಧಿಕೃತವಾಗಿ ಅಂಗಡಿಗಳನ್ನು ನಿರ್ಮಾಣವಾಗಿದ್ದ ಅಂಗಡಿಗಳನ್ನು ತೆರವುಗೊಳಿಸಲು ಸಾಕಷ್ಟು ಕ್ರಮಕೈಗೊಂಡಿರುವುದಾಗಿ ತಿಳಿಸಿರುತ್ತಾರೆ. ಈ ವಲಯದಲ್ಲಿ ಇರುವ ಕೆರೆಗಳ ಸುತ್ತುಮುತ್ತಲೂ ಗಿಡಗಳನ್ನು ನೆಡಲು ಸಾಕಷ್ಟು ಶ್ರಮವಹಿಸಲಾಗಿದೆ ಎಂದು ತಿಳಿಸಿರುತ್ತಾರೆ ಹಾಗೂ ಈ ವಲಯದ ಸರ್ವಾಂಗೀಣ ಅಭಿವೃದ್ದಿಗಾಗಿ ಪ್ರತಿಯೊಬ್ಬ ಸಿಬ್ಬಂದಿ ವರ್ಗದವರು ಶ್ರಮ ವಹಿಸಿರುವುದಾಗಿ ತಿಳಿಸಿರುತ್ತಾರೆ. ಜಂಟಿ ಆಯುಕ್ತರು ರವರು ನೀಡಿದ ವಲಯ ಕಛೇರಿಯ ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳ ಬಗ್ಗೆ ವರದಿಯನ್ನು ಕೇಳಲಾಗಿ ಅವರುಗಳಿಂದ ಸಮರ್ಪಕವಾದ ರೀತಿಯಲ್ಲಿ ವಿವರಣೆಯನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಈ ವಲಯದಲ್ಲಿನ ಪಾಲಿಕೆಯ ಆಸ್ತಿಯನ್ನು ಗುರುತಿಸುವಲ್ಲಿ ಯಾವೊಬ್ಬ ಅಧಿಕಾರಿಯು ಕ್ರಮಜರುಗಿಸಿರುವುದು ಕಂಡುಬಂದಿರುವುದಿಲ್ಲ. ನಗರಸಭೆ ದಾಖಲಾತಿ ಪುಸ್ತಕದಿಂದ ಖಾತಾ ದಾಖಲಾತಿಗಳನ್ನು ಪರಿಶೀಲಿಸದೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತು ದಾಖಲಾತಿ ಪುಸ್ತಕದಲ್ಲಿ ಖಾತೆಗಳನ್ನು ವರ್ಗಾವಣೆ ಮಾಡಿಕೊಳ್ಳುತ್ತಿರುವ ಬಗ್ಗೆ ಹಲವಾರು ದೂರುಗಳು ಬಂದಿರುವ ಹಿನ್ನಲೆಯಲ್ಲಿ ಅನಧಿಕೃತವಾಗಿ ದಾಖಲಾಗಿರುವ ಖಾತೆಗಳ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ವಲಯದಲ್ಲಿ ಸಿಬ್ಬಂದಿ ವರ್ಗದವರ ವಿವರಣೆ ಕುರಿತಂತೆ Schedule of Establishment ಬಗೆಗಿನ ಮಾಹಿತಿ ಲಭ್ಯವಿರುವುದಿಲ್ಲ. 2008–

09ನೇ ಸಾಲಿನ ಆಡಿಟ್ ವರದಿಯ ಆಕ್ಷೇಪಣೆ ಕುರಿತಂತೆ ತಹಲ್‌ವರೆವಿಗೂ ಅನುಸರಣ ವರದಿಯನ್ನು ನೀಡದೇ ಇರುವುದು ಹಲವು ಅನುಮಾನಗಳಿಗೆ ಅಸ್ಪದ ಉಂಟು ಮಾಡಿರುತ್ತದೆ. ವಲಯದಲ್ಲಿ ಸಸಿಗಳನ್ನು ನೆಟ್ಟಿರುವ ಕುರಿತಂತೆ ಸಮರ್ಪಕವಾದ ವರದಿಯನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ. ಸ್ವಚ್ಛತೆ ಕುರಿತಂತೆ ಕರೆದಿರುವ ಗುತ್ತಿಗೆ ಕರಾರಿನ ರೀತ್ಯಾ ಪೌರಕಾರ್ಮಿಕರಿಗೆ ಇಎಸ್‌ಐ ಹಾಗೂ ಪಿ.ಎಫ್ ಬಗೆಗಿನ ಮಾಹಿತಿಯನ್ನು ಕಲೆಹಾಕುವಂತೆ ಈ ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದರೂ ಸಹ ಈ ಬಗೆಗಿನ ಮಾಹಿತಿಯು ಕಛೇರಿಯಲ್ಲಿ ಲಭ್ಯವಿಲ್ಲದಿದ್ದು, ಈ ಬಗ್ಗೆ ಅಧೀಕ್ಷಕ ಅಭಿಯಂತರಾಗಲಿ/ಸಹಾಯಕ ನಿಯಂತ್ರಕರು (ಹಣಕಾಸು)ರವರಾಗಲಿ ಮಾಹಿತಿ ಸಂಗ್ರಹಿಸಲು ವಿಫಲರಾಗಿರುತ್ತಾರೆ. ಜನನ ಮತ್ತು ಮರಣ ಪ್ರಮಾಣಪತ್ರಗಳನ್ನು ಸಮರ್ಪಕವಾಗಿ ವಿತರಿಸುವ ಕುರಿತಂತೆ ಹಲವಾರು ದೂರುಗಳು ಇದ್ದು ಈ ಬಗೆಗೂ ಸಹ ಸೂಕ್ತ ಕ್ರಮಕೈಗೊಳ್ಳುವಂತೆ ಈ ಸಂದರ್ಭದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಪಶುಸಂಗೋಪನೆ ಇಲಾಖೆಯ ಅಧಿಕಾರಿಗಳು ತಮ್ಮಗೆ ವಹಿಸಿರುವ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲರಾಗಿದ್ದು, ಅವರಿಗೂ ಸಹ ಸೂಕ್ತ ಎಚ್ಚರಿಕೆಯನ್ನು ನೀಡಲಾಗಿರುತ್ತದೆ. ಈ ವಲಯ ಕಛೇರಿಯಲ್ಲಿ ಒಟ್ಟು ಆರು ಜನ ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರನ್ನು ನಿಯೋಜಿಸಿದ್ದು, ಕಛೇರಿಯ ಕೆಲಸಕಾರ್ಯಗಳನ್ನು ಗಮನಿಸಿದಾಗ ಇವರುಗಳ ಸಂಖ್ಯೆ ಹೆಚ್ಚುವರಿಯಾಗಿದ್ದು, ಅವಶ್ಯವಿರುವಷ್ಟು ಅಧಿಕಾರಿಗಳನ್ನು ಉಳಿಸಿಕೊಂಡು ಹೆಚ್ಚುವರಿಯಾಗಿರುವ ನಿರ್ದೇಶಕರುಗಳನ್ನು ಈ ವಲಯ ಕಛೇರಿಯಿಂದ ಬಿಡುಗಡೆ ಮಾಡಬಹುದಾಗಿರುತ್ತದೆ. ಅತಿ ಮುಖ್ಯವಾಗಿ ಅಧಿಕಾರಿಗಳು ತಮ್ಮಗಳಿಗೆ ವಾಹನ ಸೌಲಭ್ಯಗಳನ್ನು ಹಿಂಪಡೆದಿರುವುದರಿಂದ ಕಛೇರಿ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸಾಧ್ಯವಾಗದೇ ಇರುವುದರಿಂದ ಕೂಡಲೇ ಈ ಹಿಂದೆ ನೀಡಿದಂತೆ ವಾಹನದ ಸೌಲಭ್ಯವನ್ನು ನೀಡಲು ಕೋರಿದ್ದು, ಇವರ ಕೋರಿಕೆಯನ್ನು ಪರಿಗಣಿಸಿದ ಪಕ್ಷದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ವಲಯ ಕಛೇರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದೆಂದು ಜಂಟಿ ಆಯುಕ್ತರು ರವರು ಸೂಚಿಸಿರುತ್ತಾರೆ. ಒಟ್ಟಾರೆ ಈ ವಲಯ ಕಛೇರಿಯ ಸಿಬ್ಬಂದಿವರ್ಗದವರು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಮಾದರಿ ವಲಯವನ್ನಾಗಿ ಗುರುತಿಸಲು ಸಾಧ್ಯವೆಂಬುದನ್ನು ತಿಳಿಸಲು ಇಚ್ಛಿಸುತ್ತಾ, ಮೇಲ್ಕಂಡ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.

*ಅಧ್ಯಕ್ಷರು*
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

*ಪ್ರತಿಯನ್ನು:* 4/8/2011

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.* 4/8/11 4/8/11
5. *ಅಪರ ಆಯುಕ್ತರು (ಆಡಳಿತ)/ಜಂಟಿ ಆಯುಕ್ತರು (ಮಹದೇವಪುರ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.*
6. *ಕಛೇರಿ ಪ್ರತಿ*

4/8/11 04/08/11

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 01-08-2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಹೆಚ್. ಆರ್ ಕೃಷ್ಣಪ್ಪ | - ಅಧ್ಯಕ್ಷರು | ಅಪರ ಆಯುಕ್ತರು (ಆಡಳಿತ) |
| 2. ಮುನಿಸ್ವಾಮಿಗೌಡ | - ಸದಸ್ಯರು | ಮುಖ್ಯ ಲೆಕ್ಕಾಧಿಕಾರಿಗಳು |
| 3. ಎ.ವಿಜಯ ರಮೇಶ್ | - ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 4. ಲಲಿತ ಮುಕುಂದರಾವ್ | -ಸದಸ್ಯರು | ವಿಶೇಷ ಅಧಿಕಾರಿಗಳು |
| 5. ವೀಣಾ ನಾಗರಾಜ್ | - ಸದಸ್ಯರು | |
| 6. ಕೆ.ಎ ಯಶೋಧ | - ಸದಸ್ಯರು | |
| 7. ಎಂ.ಇ ಪಿಳ್ಳಪ್ಪ | - ಸದಸ್ಯರು | |
| 8. ವೈ.ಆರ್. ಗೌರಮ್ಮ | - ಸದಸ್ಯರು | |
| 9. ಎಸ್.ಎಂ ಮುರುಗೇಶ್ ಮೊದಲಿಯಾರ್ | - ಸದಸ್ಯರು | |

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

### ವಿಷಯ ಸಂಖ್ಯೆ: ಸಿಆಸುಸ್ಥಾಸ/01/2011-12

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀ ಎಂ. ಪ್ರಭಾಕರ, ನಿವೃತ್ತ ಕೆ.ಎ.ಎಸ್ ಅಧಿಕಾರಿ ಇವರನ್ನು ಈ ಕಛೇರಿ ಸಮ ಸಂಖ್ಯೆಯ ಆದೇಶ ದಿನಾಂಕ: 29-09-2007 ಹಾಗೂ 15-12-2008 ರ ಆದೇಶಗಳಂತೆ ಪಾಲಿಕೆಯಲ್ಲಿ ವಿಶೇಷ ಅಧಿಕಾರಿ (ಹಣಕಾಸು) ಆಗಿ ಕಾರ್ಯನಿರ್ವಹಿಸಲು ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲಾಗಿದ್ದು, ಸದರಿಯವರ ನಿಯೋಜನಾ ಅವಧಿಯ ದಿನಾಂಕ: 28-09-2008ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿಯವರ ನಿಯೋಜನಾವಧಿ ದಿನಾಂಕ: 28-09-2008 ರಂದು ಮುಗಿದ ನಂತರ ಪಾಲಿಕೆಯಲ್ಲಿ ಸದರಿಯವರನ್ನು ಮುಂದುವರೆಸಲು ಸದರಿ ನಿವೃತ್ತ ಅಧಿಕಾರಿಯವರಾಗಲೀ ಅಥವಾ ಮುಖ್ಯ ಲೆಕ್ಕಾಧಿಕಾರಿಯವರಾಗಲೀ ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸದೇ ಇದ್ದುದರಿಂದ ಈ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರ ಅಭಿಪ್ರಾಯ ಕೋರಲಾದಂತೆ ಮುಖ್ಯ ಲೆಕ್ಕಾಧಿಕಾರಿಯವರ ಅಭಿಪ್ರಾಯದ ವರದಿ ದಿ: 29-10-2010 ರಂತೆ ಸದರಿಯವರನ್ನು ದಿನಾಂಕ: 31-12-2010ರ ವರೆಗೆ ಹಾಲಿ ಇರುವ ಷರತ್ತು ಹಾಗೂ ನಿಬಂಧನೆಗಳನ್ವಯ ಮುಂದುವರೆಸಬಹುದಾಗಿರುತ್ತದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದರೆ ಕೆ.ಸಿ.ಎಸ್.ಆರ್ ನಿಯಮ 313 (ಬಿ) (i) ರನ್ವಯ ಒಂದು ವರ್ಷ ಮೀರಿದ ನಂತರ ಇವರನ್ನೇ ಮುಂದುವರೆಸಬೇಕಾದರೆ ಮತ್ತೊಮ್ಮೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯಬೇಕಾಗಿರುತ್ತದೆ. ಆದುದರಿಂದ ಸದರಿಯವರನ್ನು ದಿನಾಂಕ: 29-09-2008 ರಿಂದ ಅನ್ವಯವಾಗುವಂತೆ ಪಾಲಿಕೆಯಲ್ಲಿ ಮುಂದುವರೆಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಮಂಡಿಸಿರುವ ಆಯುಕ್ತರ ಸಂಖ್ಯೆ: ಬಿ12 (ಸಿ1) ಪಿ.ಆರ್/74/07-08 ದಿನಾಂಕ: 24-02-2011ರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ: 14-03-2011 ರ ನಿರ್ಣಯ, ಸದರಿ ನಿರ್ಣಯವನ್ನು ದಿನಾಂಕ: 29-03-2011 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಈ ಕಡತವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ಕುರಿತು

**ನಿರ್ಣಯ:** ವಿಷಯದ ಬಗ್ಗೆ ಧೀರ್ಘವಾದ ಚರ್ಚೆಯ ನಂತರ ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ಸಭೆಯಲ್ಲಿ ಮೇಲ್ಕಂಡ ನಿವೃತ್ತಿ ಅಧಿಕಾರಿಗಳ ಸೇವೆಯು ಪ್ರಸುತ್ತ ಪಾಲಿಕೆಯ ಕೆಲಸಕಾರ್ಯಗಳಿಗೆ ಅವಶ್ಯಕತೆ ಇರುವುದರಿಂದ ದಿನಾಂಕ: 31-03-2012 ರವರೆಗೆ ಮುಂದುವರೆಸಲು ಕೋರಿರುವ ಮೇರೆಗೆ ಈ ಮಾರ್ಪಾಡಿನೊಂದಿಗೆ ದಿನಾಂಕ: 24-02-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/07/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಸೇವಾವಧಿಯಲ್ಲಿ ಏಕೈಕ ಮುಂಬಡ್ತಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ಪರಿವೀಕ್ಷಕರುಗಳನ್ನು ಆಯುಕ್ತರ ಕಛೇರಿಯ ಆದೇಶದಂತೆ ಆರೋಗ್ಯ ಇಲಾಖೆಯನ್ನು ಪುನರ್‌ವಿಂಗಡಿಸಿ, ಸಿವಿಲ್ ಕಾರ್ಯಗಳಿಗಾಗಿ ನೇಮಕಾತಿ ಹೊಂದಿದ್ದ ಸಹಾಯಕ ಅಭಿಯಂತರರುಗಳನ್ನು ಪರಿಸರ ಅಭಿಯಂತರರುಗಳನ್ನಾಗಿ ನೀಡಲಾಗಿರುತ್ತದೆ. ಕೆ.ಎಂ.ಸಿ ಕಾಯ್ದೆ ಪ್ರಕಾರ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ಸ್ವಚ್ಛತಾ ಕಾರ್ಯದ ಮೇಲ್ವಿಚಾರಣೆ, ಉದ್ದಿಮೆಗಳ ತಪಾಸಣೆ, ಸಾಂಕ್ರಾಮಿಕ ರೋಗಗಳ ಬಗ್ಗೆ ಮುನ್ನೆಚ್ಚರಿಕೆ, ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಾಂವಿಧಾನಿಕ ಜವಾಬ್ದಾರಿ ಹೊಂದಿರುತ್ತಾರೆ. ಆದರೆ ಈ ಕಾರ್ಯಕ್ಕೆ ಪರಿಸರ ಅಧಿಕಾರಿಗಳಾಗಿ ಸಹಾಯಕ ಅಭಿಯಂತರರುಗಳನ್ನು ನಿಯೋಜಿಸಲಾಗಿರುತ್ತದೆ.

ಸಾಂವಿಧಾನಿಕ ಜವಾಬ್ದಾರಿ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ತಮ್ಮ ಸೇವಾವಧಿಯಲ್ಲಿ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದುತ್ತಿರುವ ಹಿನ್ನಲೆಯಲ್ಲಿ ಈ ನೌಕರರುಗಳಿಗೆ ಪತ್ರಾಂಕಿತ ಹುದ್ದೆಗೆ ಮುಂಬಡ್ತಿ ನೀಡಿ, ಉಪ ವಿಭಾಗವಾರು ಒಂದು ಹುದ್ದೆಯನ್ನು ಸೃಜಿಸಿ, ಈ ಇಲಾಖೆಯನ್ನು ಆರ್ಥಿಕವಾಗಿ ಬಲಪಡಿಸುವುದು ಸೂಕ್ತವಾಗಿರುತ್ತದೆಯೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಮುಖ್ಯ ಆರೋಗ್ಯಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಆರೋಗ್ಯಾಧಿಕಾರಿಗಳು ನೀಡಿರುವ ಅಭಿಪ್ರಾಯ ವರದಿಯನ್ನು ಈ ಕೆಳಕಂಡಂತೆ ತಿಳಿಸಿರುತ್ತಾರೆ.

" ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದವರಿಂದ ಕಡ್ಡಾಯವಾಗಿ 10 ವರ್ಷಗಳ ಹಿರಿಯ ಆರೋಗ್ಯ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿದ್ದವರನ್ನು ಮತ್ತು ಸಂಬಂಧಿಸಿದ ಇಲಾಖಾ ಪರೀಕ್ಷೆಗಳನ್ನು ಪಾಸಾಗಿರುವ ಅಭ್ಯರ್ಥಿಗಳನ್ನು ಹೆಲ್ತ್ ಸೂಪರ್‌ವೈಸರ್ ಹುದ್ದೆಗೆ ಆಯ್ಕೆ ಮಾಡಬಹುದಾಗಿರುತ್ತದೆ ಹಾಗೂ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಹಿಂದೆ 27 ಆರೋಗ್ಯ ವೈದ್ಯಾಧಿಕಾರಿಗಳ ಹುದ್ದೆಯಿದ್ದು, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರನ್ನು ಆಸ್ಪತ್ರೆಯ ಕೆಲಸಕಾರ್ಯಗಳಿಗೆ ನಿಯೋಜಿಸಲಾಗಿರುತ್ತದೆ. ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವಂತೆ 27-ವಿಧಾನ ಸಭಾ ಕ್ಷೇತ್ರವಾರು ಹೆಲ್ತ್ ಸೂಪರ್‌ವೈಸರ್ ಗಳನ್ನು ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ನಿಯೋಜಿಸಬಹುದೆಂದು ತಿಳಿಸಿರುತ್ತಾರೆ ".

ಪ್ರಸ್ತುತ ಪಾಲಿಕೆಯಲ್ಲಿ ' **ಕಿರಿಯ ಆರೋಗ್ಯ ಪರಿವೀಕ್ಷಕರ**' 282- ಮಂಜೂರಾತಿ ಹುದ್ದೆಯಿದ್ದು, 'ನಾಲ್ಕನೇ ದರ್ಜೆ ನೌಕರರ' ಮತ್ತು 'ಪೌರಕಾರ್ಮಿಕರ' ವೃಂದದಿಂದ **ಈ ಕೆಳಕಂಡ ಅರ್ಹತೆಗನುಸಾರವಾಗಿ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ.**

| ಕ್ರ ಸಂ | ಹುದ್ದೆ ಮತ್ತು ವೇತನ ಶ್ರೇಣಿ | ಮಂಜೂರಾದ ಹುದ್ದೆ | ಮುಂಬಡ್ತಿ ಅರ್ಹತೆ |
|---|---|---|---|
| 1 | ಕಿರಿಯ ಆರೋಗ್ಯ ಪರಿವೀಕ್ಷಕರು<br><br>ರೂ. **6250-12000** | 282 | • ಎಸ್.ಎಸ್.ಎಲ್.ಸಿ<br>• ಸ್ಯಾನಿಟರಿ ಇನ್ಸಪೆಕ್ಟರ್ ಡಿಪ್ಲೊಮೋ ಪರೀಕ್ಷೆ<br>ಇಲಾಖಾ ಪರೀಕ್ಷೆಗಳು:<br>1. ಅಕೌಂಟ್ಸ್ ಹೈಯರ್<br>2. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ |

ಹಾಗೂ **"ಹಿರಿಯ ಆರೋಗ್ಯ ಪರಿವೀಕ್ಷಕರ'** 130-ಮಂಜೂರಾತಿ ಹುದ್ದೆಯಿದ್ದು, **'ಕಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ 'ಈ ಕೆಳಕಂಡಂತೆ ಅರ್ಹತೆಗನುಸಾರವಾಗಿ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ.**

| ಕ್ರ ಸಂ | ಹುದ್ದೆ ಮತ್ತು ವೇತನ ಶ್ರೇಣಿ | ಮಂಜೂರಾದ ಹುದ್ದೆ | ಮುಂಬಡ್ತಿ ಅರ್ಹತೆ |
|---|---|---|---|
| 1 | ಹಿರಿಯ ಆರೋಗ್ಯ ಪರಿವೀಕ್ಷಕರು<br>ರೂ. 8000-14800 | 130 | • ಹಿರಿಯ ಆರೋಗ್ಯ ಪರಿವೀಕ್ಷಕರ' ಹುದ್ದೆಗಳನ್ನು 'ಕಿರಿಯ ಆರೋಗ್ಯ ಪರಿವೀಕ್ಷಕರ' ವೃಂದದಿಂದ ಶೇ 75. ರಷ್ಟು ಹುದ್ದೆಯನ್ನು ಮುಂಬಡ್ತಿ ಮೂಲಕ ತುಂಬಲು ಮತ್ತು ಶೇ.25 ರಷ್ಟು ಹುದ್ದೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳಲು ಅವಕಾಶವಿರುತ್ತದೆ. |

| | | | |
|---|---|---|---|
| | | | • **ಇಲಾಖಾ ಪರೀಕ್ಷೆಗಳು:**<br>1. ಅಕೌಂಟ್ಸ್ ಹೈಯರ್<br>2.ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್<br>3. ಜನರಲ್ ಲಾ ಭಾಗ-1 & 2<br>4. ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ವಿನಾಯ್ತಿ ಪಡೆದಿರಬೇಕು. |

ಮುಂದುವರೆದು, ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆ ಭಾಗ-2ರ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/6/ಆರ್‌ಸಿಹೆಚ್/85, ದಿನಾಂಕ: 29-01-1987ರಲ್ಲಿ ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಲಾಗಿದ್ದು, ಸದರಿ ಹುದ್ದೆಯ ವೇತನ ಶ್ರೇಣಿ ರೂ. 8,825-16,000ಗಳಾಗಿರುತ್ತದೆ.

ಆದರೆ, 1971 ರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಾಮವಳಿಯನ್ವಯ ಆರೋಗ್ಯ ಇಲಾಖೆಯಲ್ಲಿ 'ಹಿರಿಯ ಆರೋಗ್ಯ ಪರಿವೀಕ್ಷಕರ' ವೃಂದದಿಂದ ಯಾವುದೇ ಹುದ್ದೆಗೆ ಮುಂಬಡ್ತಿಗಾಗಿ ಅವಕಾಶವಿರುವುದಿಲ್ಲ, ಹಾಗೂ 'ಹಿರಿಯ ಆರೋಗ್ಯ ಪರಿವೀಕ್ಷಕರ' ಹುದ್ದೆಯಲ್ಲಿಯೇ ಸೇವೆಯು ಸ್ಥಗಿತಗೊಳ್ಳಲಿದ್ದು, 'ಹೆಲ್ತ್ ಸೂಪರ್‌ವೈಸರ್' ಹುದ್ದೆಗೆ ಯಾವುದೇ ಪ್ರಸ್ತಾಪವಿರುವುದಿಲ್ಲ.

ಈ ಹಿನ್ನಲೆಯಲ್ಲಿ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ಅರ್ಹತೆ ಹೊಂದಿರುವ 'ಹಿರಿಯ ಆರೋಗ್ಯ ಪರಿವೀಕ್ಷಕರ' ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ವಿಧಾನಸಭಾ ಕ್ಷೇತ್ರವಾರು 27- ಹುದ್ದೆಗಳು ಹಾಗೂ 'ಲೀವ್ ರಿಸರ್ವ್' ಗಾಗಿ ಅಧಿಕ 03-ಹುದ್ದೆಗಳು ಸೇರಿದಂತೆ ಒಟ್ಟು 30 'ಹೆಲ್ತ್ ಸೂಪರ್‌ವೈಸರ್' ಹುದ್ದೆಗಳನ್ನು ಸೃಜಿಸಿ, ಈ ಕೆಳಕಂಡಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸೇರ್ಪಡಿಸಬೇಕಾಗಿರುತ್ತದೆ.

- Must have passed SSLC examination with 2 years Sanitary Inspector Training Course
- Must have put in a service not less than 10 years in the cadre of Senior Health Inspector.

ಹಾಗೂ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ 'ಹೆಲ್ತ್ ಸೂಪರ್‌ವೈಸರ್' ಹುದ್ದೆಗಳನ್ನು ಸೃಜಿಸಿದ್ದಲ್ಲಿ ಮಾಹೆಯಾನ ತಗಲುವ ವೇತನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| **ವೇತನ ಶ್ರೇಣಿ ರೂ. 8825-16,000** | | |
| 1 | ಮೂಲ ವೇತನ | 8,825-00 |
| 2 | ತುಟ್ಟಿ ಭತ್ಯೆ (62.5%) | 5,516-00 |
| 3 | ಮನೆ ಬಾಡಿಗೆ ಭತ್ಯೆ (25%) | 2,206-00 |
| 4 | ನಗರ ಪರಿಹಾರ ಭತ್ಯೆ | 300-00 |
| 5 | ವೈದ್ಯಕೀಯ ಭತ್ಯೆ | 50-00 |
| | **ಒಟ್ಟು ವೇತನ ರೂ.** | **16,897-00** |

ಒಬ್ಬರಿಗೆ ಮಾಹೆಯಾನ ವೇತನ ರೂ. 16,897-00 ಗಳಾಗಿದ್ದಲ್ಲಿ

- ಮಾಹೆಯಾನ ವೇತನ – ರೂ, 5,06,910-00 (16,897X30) ಗಳಾಗುತ್ತದೆ.
- ವಾರ್ಷಿಕ ವೇತನ – ರೂ. 60,82,920-00 (16,897 X30 X12) ಗಳಾಗುತ್ತದೆ.

ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ವಿಧಾನಸಭಾ ಕ್ಷೇತ್ರವಾರು ಒಟ್ಟು-30 'ಹೆಲ್ತ್ ಸೂಪರ್‌ವೈಸರ್' ಹುದ್ದೆಗಳನ್ನು ಸೃಜಿಸಿ, ಅರ್ಹತೆ ಹೊಂದಿರುವ 'ಹಿರಿಯ ಆರೋಗ್ಯ ಪರಿವೀಕ್ಷಕರ' ವೃಂದದಿಂದ ಮುಂಬಡ್ತಿ ಮೂಲಕ ತುಂಬುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:12-07-2011 ರ ಬಿ12 (14) ಪಿಆರ್/26/11-12 ರ ಟಿಪ್ಪಣಿ.

**ನಿರ್ಣಯ:** ವಿಷಯದ ಬಗ್ಗೆ ಧೀರ್ಘವಾದ ಚರ್ಚೆಯ ನಂತರ ದಿ: 12-07-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/08/2011-12**

ಶ್ರೀ ಜಿ.ಪಿ ಸೋಮಸುಂದರ್, ಪ್ರಥಮ ದರ್ಜೆ ಗುಮಾಸ್ತರು, ಕಾನೂನು ಕೋಶದ ಮುಖ್ಯಸ್ಥರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸದರಿಯವರಿಗೆ ಪ್ರಥಮ ದರ್ಜೆ ಗುಮಾಸ್ತ ವೃಂದದಿಂದ ಕಿರಿಯ ಕಾನೂನು ಅಧಿಕಾರಿ ಹುದ್ದೆಗೆ ಆಯ್ಕೆ ಮೂಲಕ ಮುಂಬಡ್ತಿಗೆ ಪರಿಗಣಿಸಲು ಶಿಫಾರಸ್ಸು ಮಾಡಲಾಗಿದ್ದು ಕಡತದಲ್ಲಿನ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಹಿಂದೆ ಪಾಲಿಕೆಯಲ್ಲಿ ಕಿರಿಯ ಕಾನೂನು ಅಧಿಕಾರಿಗಳ ಹುದ್ದೆಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿಯ ಮೂಲಕ ಹಾಗೂ ಬ್ಯಾಕ್‌ಲಾಗ್ ವಿಶೇಷ ನೇಮಕಾತಿ ಅಡಿಯಲ್ಲಿ ತುಂಬಿರುವ ಬಗ್ಗೆ ಮಾಹಿತಿಗಳು ಲಭ್ಯವಿರುತ್ತದೆ. ಆದರೆ ಈ ಪ್ರಕರಣದಲ್ಲಿ 'ಸಿ' ದರ್ಜೆಯ ವೃಂದದ ಪ್ರಥಮ ದರ್ಜೆ ಗುಮಾಸ್ತ ವೃಂದದಿಂದ ಮುಂದಿನ ಹಂತದ ಹುದ್ದೆಯಾದ ವ್ಯವಸ್ಥಾಪಕರ ಹುದ್ದೆಗೆ ಮುಂಬಡ್ತಿ ಇಲ್ಲದೆಯೆ ನೇರವಾಗಿ ಕಿರಿಯ ಕಾನೂನು ಅಧಿಕಾರಿ ಹುದ್ದೆಗೆ ಮುಂಬಡ್ತಿಗೆ ಪರಿಗಣಿಸಿರುವುದು ಸಮಂಜಸವೆ ಎಂಬ ಬಗ್ಗೆ ಪರಿಶೀಲಿಸಬೇಕಾಗುತ್ತದೆ. ಕಡತದಲ್ಲಿನ ಕೆಲವು ದಾಖಲೆಗಳ ಪ್ರಕಾರ ಪ್ರಸ್ತಾಪಿತ ನೌಕರರನ್ನು ಸಂದರ್ಶನದ ಮೂಲಕ ಕಿರಿಯ ಕಾನೂನು ಅಧಿಕಾರಿ ಹುದ್ದೆಗೆ ನೇಮಕಾತಿ ಮಾಡಲು ಸಭೆಯನ್ನು ಕರೆಯಲಾಗಿದ್ದು ಈ ಸಂದರ್ಶನದ ಸಭೆಯಲ್ಲಿ ಅಭ್ಯರ್ಥಿಯು (ನೌಕರರು) ಗಳಿಸಿರುವ ಅಂಕಗಳ ವಿವರವನ್ನು ಸಹ ಪರಿಶೀಲಿಸಿದ್ದು ಈ ಒಂದು ಅಂಶದಿಂದ ಈ ಪ್ರಸ್ತಾವನೆಯಲ್ಲಿ ನೌಕರರನ್ನು ಆಯ್ಕೆ ಮೂಲಕ ಮುಂಬಡ್ತಿಗೆ ಪರಿಗಣಿಸಲಾಗುತ್ತಿದೆಯೆ ಅಥವ ನೇರ ನೇಮಕಾತಿಯ ಮೂಲಕ ಖಾಲಿ ಇರುವ ಹುದ್ದೆಯನ್ನು ತುಂಬಲಾಗುತ್ತಿದೆಯೆ ಎಂಬ ಬಗ್ಗೆ ಪರಿಶೀಲಿಸುವುದು ಅಗತ್ಯವಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಕಡತದ ವರದಿಯಲ್ಲಿನ ಗೊಂದಲದಿಂದಾಗಿ ಸಮಿತಿಯು ಸೂಕ್ತ ನಿರ್ಣಯ ಕೈಗೊಳ್ಳಲು ಸಾಧ್ಯವಿಲ್ಲದಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/09/2011-12**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿದ್ಯಾಇಲಾಖೆಯ ವಿವಿಧ ಪಾಠಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಭೋದಕ ಸಿಬ್ಬಂದಿಗಳಾಗಿ ನೇಮಕ ಹೊಂದಿ ಭೋದಕೇತರ ಕೆಲಸಕಾರ್ಯ ನಿರ್ವಹಿಸುತ್ತಿರುವ ಹಲವಾರು ಶಿಕ್ಷಕರುಗಳಿಂದಾಗಿ ಪಾಠಶಾಲೆ/ ಪದವಿ ಪೂರ್ವ ಕಾಲೇಜುಗಳಲ್ಲಿ ಭೋದಕ ಸಿಬ್ಬಂದಿಗಳ ಸಂಖ್ಯೆಯಲ್ಲಿ ಕೊರತೆ ಉಂಟಾಗಿದ್ದು, ಈ ಹಿನ್ನಲೆಯಲ್ಲಿ ಶಾಲಾ ಕಾಲೇಜುಗಳಲ್ಲಿ ಫಲಿತಾಂಶವು ಮಂದಗತಿಯಲ್ಲಿದ್ದು ಹಾಗೂ ಸಾರ್ವಜನಿಕರಲ್ಲಿ ಪಾಲಿಕೆಯ ಶಾಲಾ ಕಾಲೇಜುಗಳ ಬಗ್ಗೆ ಸದಾಭಿಪ್ರಾಯ ಉಂಟಾಗದಿದ್ದು, ಈ ನಿಟ್ಟಿನಲ್ಲಿ ಪಾಲಿಕೆಯ ಶಾಲಾ ಕಾಲೇಜುಗಳ ಫಲಿತಾಂಶವು ಅಭಿವೃದ್ಧಿಗೊಳಿಸಬೇಕಾದ ಪಕ್ಷದಲ್ಲಿ ಪಾಲಿಕೆಯ ಭೋದಕ ಸಿಬ್ಬಂದಿಗಳು ವಿವಿಧ ಕಛೇರಿಗಳಲ್ಲಿ ಭೋಧಕೇತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಯೋಜನೆಯನ್ನು ಕೂಡಲೇ ರದ್ದುಪಡಿಸಿ ಶಾಲಾ ಕಾಲೇಜುಗಳಲ್ಲಿ ಭೋದಕ ಕಾರ್ಯವನ್ನು ನಿರ್ವಹಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳತಕ್ಕದ್ದೆಂದು ಸಮಿತಿಯು ಸರ್ವಾನುಮತದಿಂದ ಅಭಿಪ್ರಾಯಿಸುತ್ತದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/10/2011-12**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಮತ್ತು 'ಡಿ' ವೃಂದ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ತುಂಬುವ ಸಂಬಂಧ ನೇಮಕಾತಿ ಸಮಿತಿ ರಚಿಸುವ ಕುರಿತಂತೆ ದಿನಾಂಕ: 27-11-2010 ರಂದು ಪಾಲಿಕೆಯ ಸಭೆಯಲ್ಲಿ ತೀರ್ಮಾನವಾಗಿದ್ದು, ಈ ಸಂಬಂಧ ದಿ: 15-12-2010 ರಂದು ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿರುತ್ತದೆ. ಆದರೆ ಈಗಾಗಲೇ ಸುಮಾರು 8 ತಿಂಗಳುಗಳು ಕಳೆದಿದ್ದು ತಹಲ್‌ವರೆವಿಗೂ ಈ ಬಗ್ಗೆ ಸರ್ಕಾರದಿಂದ ಸ್ಪಷ್ಟ ಆದೇಶ ಬಾರದೇ ಇರುವ ಕಾರಣ ನೇರ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದ್ದು ಆಡಳಿತಾತ್ಮಕ ಕೆಲಸಕಾರ್ಯಗಳಿಗೆ ಆಡಚಣೆ ಉಂಟಾಗುತ್ತಿರುವುದರಿಂದ ಹಾಗೂ ಹಿಂದಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅವಧಿಯು ಪೂರ್ಣಗೊಂಡಿದ್ದು ಹಾಲಿ ಪಾಲಿಕೆಯಲ್ಲಿ ಅಸ್ತಿತ್ವದಲ್ಲಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅಧ್ಯಕ್ಷರು, ಸದಸ್ಯರನ್ನೊಳಗೊಂಡಂತೆ ನೇಮಕಾತಿ ಸಮಿತಿಯನ್ನು ರಚಿಸಿ ಈ ಬಗ್ಗೆ ಸರ್ಕಾರದಿಂದ ಜರೂರಾಗಿ ಆದೇಶವನ್ನು ಪಡೆಯುವಂತೆ ಆಯುಕ್ತರವರನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 08-08-2011 ರಂದು ರಾಜರಾಜೇಶ್ವರಿನಗರ ವಲಯ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು**

| **ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ** | **ಹಾಜರಿದ್ದ ಅಧಿಕಾರಿಗಳು** |
|---|---|
| 1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು | ಜಂಟಿ ಆಯುಕ್ತರು |
| 2. ಮುನಿಸ್ವಾಮಿಗೌಡ – ಸದಸ್ಯರು | ಉಪ ಆಯುಕ್ತರು |
| 3. ಎ.ವಿಜಯ ರಮೇಶ್ – ಸದಸ್ಯರು | ಮುಖ್ಯ ಅಭಿಯಂತರರು |
| 4. ಲಲಿತ ಮುಕುಂದರಾವ್ –ಸದಸ್ಯರು | ಕಂದಾಯ ಅಧಿಕಾರಿಗಳು |
| 5. ಕೆ.ಎ ಯಶೋಧ – ಸದಸ್ಯರು | ಸಹಾಯಕ ನಿಯಂತ್ರಕರು (ಹಣಕಾಸು) |
| 6. ಎಂ.ಇ ಪಿಳ್ಳಪ್ಪ – ಸದಸ್ಯರು | ಕಾರ್ಯಪಾಲಕ ಅಭಿಯಂತರರುಗಳು |
| 7. ವೈ.ಆರ್. ಗೌರಮ್ಮ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| | ಸಹಾಯಕ ಕಂದಾಯ ಅಧಿಕಾರಿಗಳು |
| | ಪರಿಸರ ಅಧಿಕಾರಿಗಳು |
| | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| | ವಿಶೇಷ ಅಧಿಕಾರಿಗಳು |
| | ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ |

10/8
Ti, 5.15.PM

ಜಂಟಿ ಆಯುಕ್ತರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ತಮ್ಮ ವಲಯ ಕಛೇರಿ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ಸಭೆಯ ಗಮನಕ್ಕೆ ತರುತ್ತಾ, ಪ್ರಸ್ತುತ ರಾಜರಾಜೇಶ್ವರಿನಗರ ವಲಯದಲ್ಲಿ ಇಬ್ಬರೂ ಶಾಸಕರ ಕ್ಷೇತ್ರವಿದ್ದು ಇದರಲ್ಲಿ 14 ವಾರ್ಡ್‌ಗಳಿದ್ದು, ಕಳೆದ ಎರಡು ತಿಂಗಳಿನಿಂದ ಕಂದಾಯ ವಸೂಲಾತಿ ಕಾರ್ಯವು ತ್ವರಿತಗತಿಯಲ್ಲಿ ನಡಯುತ್ತಿದ್ದು ಈಗಾಗಲೇ ಶೇ. 75ರಷ್ಟು ಕಂದಾಯ ವಸೂಲಿಯಾಗಿರುತ್ತದೆ ಎಂದು ತಿಳಿಸಿದರು ಹಾಗೂ ಹಾಜರಿದ್ದ ಕಂದಾಯ ಅದಿಕಾರಿಗಳು, ಈ ವಲಯದಲ್ಲಿ ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿರುವ ಸಾವಿರಾರು ಆಸ್ತಿಗಳು ಇದ್ದು, ಈ ಆಸ್ತಿಗಳಿಗೆ ಪಿ.ಐ.ಡಿ ಸಂಖ್ಯೆಯನ್ನು ನೀಡಿದ ಪಕ್ಷದಲ್ಲಿ ಕಂದಾಯ ಪಾವತಿಯಿಂದ ತಪ್ಪಿಸಿಕೊಂಡಿರುವ ಆಸ್ತಿಗಳನ್ನು ಗುರುತಿಸಬಹುದಾಗಿದ್ದು ಇದರಿಂದಾಗಿ ವಾರ್ಷಿಕವಾಗಿ ಹಲವಾರು ಕೋಟಿ ರೂ ಆದಾಯವು ಪಾಲಿಕೆಗೆ ಬರುವ ನಿರೀಕ್ಷೆ ಇದ್ದು ಈ ಬಗ್ಗೆ ಮಾಹಿತಿ ತಂತ್ರಜ್ಞಾನ ಸಲಹೆಗಾರರನ್ನು ಕೂಡಲೇ ಈ ವಲಯದಲ್ಲಿರುವ ಆಸ್ತಿಗಳ ಕುರಿತಂತೆ ಪಿ.ಐ.ಡಿ ಸಂಖ್ಯೆ ನಮೂದಿಸಲು ಕ್ರಮಕೈಗೊಳ್ಳಲು ಕೋರಿದ್ದು, ಅವರ ಕಚೇರಿಯಿಂದ ತಹಲ್‌ವರೆವಿಗೂ ಯಾವುದೇ ವಿಧವಾದ ಕ್ರಮಕೈಗೊಳ್ಳದೇ ಇರುವುದರಿಂದ ಈ ಪ್ರಕ್ರಿಯೆ ತಡವಾಗುತ್ತಿದ್ದು, ಕೂಡಲೇ ಮಾಹಿತಿ ತಂತ್ರಜ್ಞಾನದ ಅಧಿಕಾರಿಗಳು ಈ ಬಗ್ಗೆ ಕಟ್ಟುನಿಟ್ಟಿನ ಕ್ರಮಜರುಗಿಸಿ ವಲಯದಲ್ಲಿ ಆಸ್ತಿಯಿಂದ ತಪ್ಪಿಸಿಕೊಂಡಿರುವ ಆಸ್ತಿಗಳನ್ನು ಗುರುತಿಸಲು ಪಿ.ಐ.ಡಿ ಸಂಖ್ಯೆಯನ್ನು ನಮೂದಿಸಲು ಸೂಕ್ತ ಕ್ರಮಕೊಳ್ಳತಕ್ಕದ್ದು.

ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದಂತೆ ವಲಯದ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರುಗಳು ತಮ್ಮ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಹಾಗೂ ಚಾಲ್ತಿಯಲ್ಲಿರುವ ಕಾಮಗಾರಿಗಳ ಬಗ್ಗೆ ಸಮಿತಿಗೆ ಮಾಹಿತಿ ಒದಗಿಸಿದರು ಹಾಗೂ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಅತಿಜರೂರಾಗಿ ಮುಗಿಸಲು ಮತ್ತು ಮುಂದಿನ ಆಯವ್ಯಯಕ್ಕೆ ಹೆಚ್ಚಿನ ರೀತಿಯಲ್ಲಿ Spill over ಆಗದಂತೆ ತ್ವರಿತಗತಿಯಿಂದ ಪ್ರಸಕ್ತ ಆಯವ್ಯಯಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಸೂಚಿಸಲಾಗಿರುತ್ತದೆ. ಕೆಂಗೇರಿ ವಲಯಕ್ಕೆ ಸಂಬಂಧಿಸಿದಂತೆ ಯಾವೊಬ್ಬ

ಆಸ್ತಿಯ ಮಾಲೀಕರು ನಕ್ಷೆ ಮಂಜೂರಾತಿ ಪಡೆಯದೇ ಇದ್ದು ಇವರುಗಳು ಅನಧಿಕೃತ ರಸ್ತೆ ಅಗೆತಗಳನ್ನು ಮಾಡಿಕೊಂಡಿದ್ದು ಅನಧಿಕೃತವಾಗಿ ಕುಡಿಯುವ ನೀರು ಹಾಗೂ ಒಳಚರಂಡಿಗಳ ಸೌಲಭ್ಯಗಳನ್ನು ಉಪಯೋಗಿಸಿಕೊಂಡಿದ್ದು ಇವುಗಳನ್ನು ಕ್ರಮಬದ್ಧಗೊಳಿಸಲು ಕೋರಿದ್ದು, ಅವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲದೇ ಇದ್ದು ಇದರಿಂದ ಯಾವುದೇ ಒಂದು ಅಭಿವೃದ್ಧಿ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದೇ ಇರುವುದನ್ನು ಗಮನಿಸಿ ಈ ವಲಯದ ವಾರ್ಡ್‌ಗಳ ಜನಪ್ರತಿನಿಧಿಗಳೊಂದಿಗೆ ಅಧಿಕಾರಿಗಳು ಕಾಲಕಾಲಕ್ಕೆ ಸಭೆಗಳನ್ನು ನಡೆಸಿ ವಾರ್ಡ್‌ಗಳ ನಿವಾಸಿಗಳ ಕುಂದುಕೊರತೆಗಳನ್ನು ನಿರ್ವಹಿಸಲು ಸೂಕ್ತಕ್ರಮಕೈಗೊಳ್ಳಲು ಸೂಚಿಸಲಾಯಿತು.

ಅನಧಿಕೃತ ರಸ್ತೆ ಅಗೆತಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುವಲ್ಲಿ ಕಾಮಗಾರಿ ವಿಭಾಗದ ಅಧಿಕಾರಿಗಳು ವಿಫಲರಾಗಿದ್ದು, ತಹಲ್‌ವರೆವಿಗೂ ಈ ವಲಯದಲ್ಲಿ ಅನಧಿಕೃತ ರಸ್ತೆ ಅಗೆತ ಕುರಿತಂತೆ ಯಾವುದೇ ವಿಧವಾದ ದಂಡ ವಿಧಿಸದೇ ಇರುವುದಾಗಿ ತಿಳಿಸಿದ್ದು ಹಾಗೂ ಅನಧಿಕೃತ ನಿರ್ಮಾಣ ಹಾಗೂ ನಕ್ಷೆ ಮಂಜೂರಾತಿ ವಿರುದ್ಧವಾಗಿ ಕಟ್ಟಡದ ನಿರ್ಮಾಣ ಕುರಿತಂತೆ ಪಿ.ಓ ಸಿ.ಓ ನೋಟಿಸ್ ತಹಲ್‌ವರೆವಿಗೂ ನೀಡದೇ ಇರುವುದಾಗಿ ತಿಳಿಸಿರುತ್ತಾರೆ ಹಾಗೂ ಈ ವಲಯ ಕಛೇರಿಯಲ್ಲಿ ಅನಧಿಕೃತ ನಿರ್ಮಾಣ ಹಾಗೂ ನಕ್ಷೆ ಮಂಜೂರಾತಿ ವಿರುದ್ಧವಾಗಿ ಕಟ್ಟುವ ಕಟ್ಟಡಗಳ ನಿಯಂತ್ರಣದ ಬಗ್ಗೆ ಯಾವುದೇ ಕ್ರಮಜರುಗಿಸದೇ ಇರುವುದು ಕಂಡುಬಂದಿದ್ದು, ಈ ಸಂಬಂಧ ಸೂಕ್ತ ಕ್ರಮಕೈಗೊಳ್ಳುವಂತೆ ವಲಯದ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚಿಸಲಾಯಿತು.

ವಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಗುರುತಿನ ಚೀಟಿ ಧರಿಸದೇ ಇರುವುದು ಕಂಡುಬಂದಿರುತ್ತದೆ. 2007–08ನೇ ಸಾಲಿನ ಲೆಕ್ಕ ಪರಿಶೋಧನಾ ಆಕ್ಷೇಪಣಾ ವರದಿಯಲ್ಲಿ ತಿಳಿಸಿರುವಂತೆ ಒಟ್ಟು ಆಕ್ಷೇಪಣಾ ಮೊತ್ತ ರೂ. 9,47,04,887.00 ಗಳನ್ನು ವಸೂಲು ಮಾಡಿರುವ ಬಗ್ಗೆ ಮಾಹಿತಿ ನೀಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದು, ಈ ಸಂಬಂಧ ಕೂಡಲೇ ವಸೂಲಾತಿಗೆ ಕ್ರಮಕೈಗೊಂಡು ಲೋಪದೋಷಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಕೈಗೊಳ್ಳುವಂತೆ ಜಂಟಿ ಆಯುಕ್ತರಿಗೆ ಸೂಚಿಸಲಾಯಿತು. ವಲಯದ ಸಿಬ್ಬಂದಿ ವರ್ಗದವರ ವಿವರಣೆ ಕುರಿತಂತೆ Schedule of Establishment ಬಗೆಗಿನ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಈ ರೀತಿಯ ಹೆಚ್ಚುವರಿ ವೇತನವನ್ನು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಾವತಿಸಲಾಗುತ್ತಿದೆ ಎಂಬ ಬಗ್ಗೆ ವರದಿ ನೀಡುವುದು. ಹೇರೋಹಳ್ಳಿ ಸಹಾಯ ಕೇಂದ್ರದಲ್ಲಿ ಕಂದಾಯ ವಸೂಲಿಗಾರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ರಮೇಶ್ ಮತ್ತು ಶೇಖರಪ್ಪ ಎಂಬುವವರ ವಿರುದ್ಧ ನಕಲಿ ರಶೀದಿ ಪುಸ್ತಕ ತಯಾರಿಸಿ ಪಾಲಿಕೆಗೆ ಅರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ ಗಂಭೀರ ಆರೋಪವಿದ್ದಾಗ್ಯೂ ಸಹ ಸದರಿ ನೌಕರರುಗಳ ವಿರುದ್ಧ ಯಾವುದೇ ಕ್ರಮಕೈಗೊಳ್ಳದೇ ಜವಾಬ್ದಾರಿಯುತ ಕಂದಾಯ ವಸೂಲಿಗಾರರ ಹುದ್ದೆ ನೀಡಿರುವುದಕ್ಕೆ ಸಮಿತಿಯ ತೀವ್ರತರವಾದ ಆಕ್ಷೇಪ ವ್ಯಕ್ತಪಡಿಸುತ್ತಾ ಈ ಬಗ್ಗೆ ಕೂಡಲೇ ಕ್ರಮಕೈಗೊಳ್ಳುವಂತೆ ಜಂಟಿ ಆಯುಕ್ತರವರಿಗೆ ಸೂಚಿಸಲಾಯಿತು. ಸದರಿಯವರುಗಳನ್ನು ಕೂಡಲೇ ಸಾರ್ವಜನಿಕ ಸಂಪರ್ಕವಿಲ್ಲದ ಸ್ಥಳಕ್ಕೆ ವರ್ಗಾಹಿಸಲು ಕೋರಿದೆ ಹಾಗೂ ಸದರಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಶಾರದಮ್ಮ ದ್ವಿತೀಯ ದರ್ಜೆ ಗುಮಾಸ್ತರವರು ಸಾರ್ವಜನಿಕರೊಂದಿಗೆ ಅಸಭ್ಯವಾಗಿ ವರ್ತಿಸಿರುವುದಾಗಿ ತಿಳಿದುಬಂದಿದ್ದು, ಕೂಡಲೇ ಇವರನ್ನೂ ಸಹ ಸಾರ್ವಜನಿಕ ಸಂಪರ್ಕವಿಲ್ಲದೇ ಸ್ಥಳಕ್ಕೆ ನಿಯೋಜಿಸಲು ಆದೇಶಿಸಿದೆ. ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳು ಸರಿಯಾಗಿ ಕಛೇರಿ ಕೆಲಸ ನಿರ್ವಹಿಸದೇ ಕೆಲವು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಬಗ್ಗೆ ಹಲವಾರು ದೂರುಗಳು ಬಂದಿರುವ ಹಿನ್ನಲೆಯಲ್ಲಿ ಈ ಬಗ್ಗೆ ಸೂಕ್ತ ಕ್ರಮವಹಿಸಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು. ಈ ವಲಯದಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ, ಆಯುಕ್ತರವರಿಂದ ಆದೇಶವನ್ನು ಪಡೆಯದೇ ವೇತನ ಪರಿಷ್ಕರಣೆ ಮಾಡಿರುವುದು ಈ ಸಂದರ್ಭದಲ್ಲಿ ತಿಳಿದುಬಂದಿದ್ದು, ಇದು ನಿಯಮಬಾಹಿರ ಕ್ರಮವಾಗಿದ್ದು ಈ ಬಗ್ಗೆ ಸೂಕ್ತ ವಿವರಣೆ ನೀಡತಕ್ಕದ್ದು.

ಈ ವಲಯದ ನಕ್ಷೆ ಮಂಜೂರಾತಿ ಸಂಬಂಧಪಟ್ಟಂತೆ ಲೇಬರ್ ಸೆಸ್ ಹಾಗೂ ನಕ್ಷೆ ಮಂಜೂರಾತಿ ಶುಲ್ಕಗಳನ್ನು ಬ್ಯಾಂಕ್‌ಗೆ ಪಾವತಿ ಮಾಡಿರುವ ಬಗ್ಗೆ ವಿವರ ನೀಡುವಲ್ಲಿ ಸಹಾಯಕ ನಿರ್ದೇಶಕರು (ನಗರ ಯೋಜನೆ) ವಿಫಲರಾಗಿದ್ದು, ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಸಹಾಯಕ ನಿರ್ದೇಶಕರು (ಪಶುಸಂಗೋಪನೆ)ರವರು ತಮ್ಮ ಕಾರ್ಯ ವ್ಯಾಪ್ತಿಯ ಬಗ್ಗೆ ವಿವರ ನೀಡಲು ವಿಫಲರಾಗಿದ್ದು, ಯಾವುದೇ ದೂರುಗಳು ಇಲ್ಲವೆಂದು ತಿಳಿಸಿದ್ದು, ಸದರಿ ಅಧಿಕಾರಿಗಳಿಗೆ ಯಾವುದೇ ಕೆಲಸ ಕಾರ್ಯಗಳು ಇಲ್ಲದೇ ಇರುವುದು ಕಂಡುಬಂದಿರುವುದರಿಂದ ಸದರಿಯರವರನ್ನು ಹೆಚ್ಚಿನ ಕೆಲಸಕಾರ್ಯಗಳು ಇರುವ ವಲಯಕ್ಕೆ ವರ್ಗಾಯಿಸಲು ಸಮಿತಿಯು ಅಭಿಪ್ರಾಯಿಸುತ್ತದೆ. ಶೇ.22.75 ರ ಅಡಿಯಲ್ಲಿ ನಡೆಯುವ ಕಲ್ಯಾಣ ಕಾರ್ಯಕ್ರಮಗಳನ್ನು ಸ್ಥಳೀಯ ಪಾಲಿಕೆಯ ಸದಸ್ಯರೊಂದಿಗೆ ಚರ್ಚಿಸಿ ಸೂಕ್ತ ಫಲಾನುಭವಿಗಳನ್ನು ಗುರುತಿಸಿ ಕಲ್ಯಾಣ ಯೋಜನೆಗಳನ್ನು ವಿಳಂಬ ಮಾಡದೇ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.

ಈ ವಲಯದಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನದ ನಾಲ್ಕನೇ ದರ್ಜೆ ನೌಕರರುಗಳು ಕಂದಾಯ ವಸೂಲಿಗಾರರಾಗಿ ಕಾರ್ಯನಿರ್ವಹಿಸುತ್ತಿದ್ದು ಕೂಡಲೇ ಅಂತಹ ನೌಕರರುಗಳನ್ನು ಮೂಲ ಹುದ್ದೆಗೆ ಹಿಂತಿರುಗಿಸಿ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಈ ವಲಯದ ಪರಿಸರ ವಿಭಾಗದಲ್ಲಿ ಸಹಾಯಕ ಅಭಿಯಂತರರುಗಳ ಕೊರತೆ ಇದ್ದು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿದ್ದಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಕಛೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸುವುದಾಗಿ ತಿಳಿಸಿದರು. ಅತಿ ಮುಖ್ಯವಾಗಿ ಅಧಿಕಾರಿಗಳು ತಮಗೆ ವಾಹನ ಸೌಲಭ್ಯಗಳನ್ನು ಹಿಂಪಡೆದಿರುವುದರಿಂದ ಕಛೇರಿ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ ಕೂಡಲೇ ಈ ಹಿಂದೆ ನೀಡಿದಂತೆ ವಾಹನ ಸೌಲಭ್ಯ ನೀಡಿದ್ದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕಛೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಸೂಕ್ತಕ್ರಮಕೈಗೊಳ್ಳಲು ಆಯುಕ್ತರಿಗೆ ಸೂಚಿಸಲಾಗುವುದು. ಒಟ್ಟಾರೆ ಈ ವಲಯ ಕಛೇರಿಯಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಂಡು ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಆಡಳಿತ ಸುಧಾರಣೆ ಕಾಣುವುದೆಂದು ಅಭಿಪ್ರಾಯಿಸುತ್ತಾ, ಮೇಲ್ಕಂಡ ಲೋಪದೋಷಗಳನ್ನು ಸರಿಪಡಿಸಕೊಳ್ಳಲು ಸೂಚಿಸಿದೆ.

*ಅಧ್ಯಕ್ಷರು*
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

*ಪ್ರತಿಯನ್ನು:*

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಅಪರ ಆಯುಕ್ತರು (ಆಡಳಿತ)/ಅಪರ ಆಯುಕ್ತರು (ರಾಜರಾಜೇಶ್ವರಿನಗರ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.*
6. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 08-08-2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಹೆಚ್. ಆರ್ ಕೃಷ್ಣಪ್ಪ | – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2. ಮುನಿಸ್ವಾಮಿಗೌಡ | – ಸದಸ್ಯರು | ವಿಶೇಷ ಅಧಿಕಾರಿಗಳು |
| 3. ಲಲಿತ ಮುಕುಂದರಾವ್ | – ಸದಸ್ಯರು | |
| 4. ವೀಣಾ ನಾಗರಾಜ್ | – ಸದಸ್ಯರು | |
| 5. ಕೆ.ಎ ಯಶೋಧ | – ಸದಸ್ಯರು | |
| 6. ಎಂ.ಇ ಪಿಳ್ಳಪ್ಪ | – ಸದಸ್ಯರು | |
| 7. ವೈ.ಆರ್. ಗೌರಮ್ಮ | – ಸದಸ್ಯರು | |
| 8. ಮಲ್ಲೇಶ್ ಟಿ. | – ಸದಸ್ಯರು | |
| 9. ಫೌಜಿಯಾ ಬೇಗಂ | – ಸದಸ್ಯರು | |
| 10. ಎಸ್.ಎಂ ಮುರುಗೇಶ್ ಮೊದಲಿಯಾರ್ | – ಸದಸ್ಯರು | |

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/13/2011-12**

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಾಮಾವಳಿಗಳ ರೀತ್ಯಾ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ ಮಾತ್ರ ಅಭಿಯಂತರರುಗಳನ್ನು ನಿಯೋಜಿಸಿಕೊಳ್ಳಲು ಅವಕಾಶವಿದ್ದು ಪ್ರಸ್ತುತ ಪಾಲಿಕೆಗೆ ನಿಯೋಜನೆ ಮೇರೆಗೆ KPTCL, KPC, BESCOM, BWSSB, KSFC ಹಾಗೂ ಇನ್ನಿತರೆ ಸಂಸ್ಥೆಗಳ ಅಭಿಯಂತರರುಗಳು ಸರ್ಕಾರದ ಆದೇಶದ ರೀತ್ಯಾ ಹಾಜರಾತಿ ಸಲ್ಲಿಸುತ್ತಿರುವುದು ಸರಿಯಷ್ಟೇ ಆದರೆ ಈ ಪೈಕಿ KPTCL, KPC, BESCOM, BWSSB, KSFC ಹಾಗೂ ಇನ್ನಿತರೆ ಸಂಸ್ಥೆಗಳಿಂದ ಬರುವ ಅಭಿಯಂತರರ ವೇತನ ಶ್ರೇಣಿಯು PWD/ ಪಾಲಿಕೆಯ ಅಭಿಯಂತರರ ವೇತನ ಶ್ರೇಣಿಗಿಂತ ಹೆಚ್ಚಿನದಾಗಿದ್ದು ಇದರಿಂದಾಗಿ ವಿನಾಕಾರಣ ಪಾಲಿಕೆಗೆ ಆರ್ಥಿಕವಾಗಿ ಹೆಚ್ಚಿನ ಹೊರೆಯುಂಟಾಗುತ್ತಿರುವುದು ಸರಿಯಷ್ಟೇ, ಸದರಿ ಸಂಸ್ಥೆಗಳಿಂದ ಬರುತ್ತಿರುವ ಅಭಿಯಂತರರುಗಳು ಯಾವುದೇ ವಿಧವಾದ ಹೆಚ್ಚಿನ ತಾಂತ್ರಿಕ ಕೌಶಲ್ಯತೆಯಾಗಲಿ, ಸಾಕಷ್ಟು ಅನುಭವವಾಗಲಿ ಹೊಂದಿಲ್ಲದೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಇದ್ದು ಇವರು ಸಾಮಾನ್ಯ ಪರಿಜ್ಞಾನ ಉಳ್ಳವರಾಗಿದ್ದು ಇವರುಗಳಿಂದ ಪಾಲಿಕೆಗೆ ಯಾವುದೇ ವಿಧವಾದ ಹೆಚ್ಚಿನ ಉಪಯುಕ್ತತೆ ಇಲ್ಲದಿರುವುದು ಸ್ಪಷ್ಟವಾಗಿದ್ದಾಗ್ಯೂ ಸಹ ಇವರುಗಳನ್ನು ನಿಯೋಜಿಸಿಕೊಂಡು ಪಾಲಿಕೆಯು ಅತಿ ಹೆಚ್ಚಿನ ಆರ್ಥಿಕ ಹೊರೆಯನ್ನು ಭರಿಸುತ್ತಿರುವುದು ದುರದೃಷ್ಟಕರವೆಂದು ಪರಿಗಣಿಸಿ, ಈ ಹಿನ್ನೆಲೆಯಲ್ಲಿ 1977 ರ ಕರ್ನಾಟಕ ಪೌರ ನಿಗಮಗಳ ನಿಯಮ 26ಎ ಅನ್ನು ಕಾಯಿದೆಯಿಂದ ಕೈ ಬಿಡಲು ಸೂಕ್ತ ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಆಯುಕ್ತರನ್ನು ಕೋರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 30-08-2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಹೆಚ್. ಆರ್ ಕೃಷ್ಣಪ್ಪ | – ಅಧ್ಯಕ್ಷರು | ಅಪರ ಆಯುಕ್ತರು (ಆಡಳಿತ) |
| 2. ಮುನಿಸ್ವಾಮಿಗೌಡ | – ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3. ಲಲಿತ ಮುಕುಂದರಾವ್ | – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ-I) |
| 4. ವೀಣಾ ನಾಗರಾಜ್ | – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ-II) |
| 5. ಕೆ.ವಿ. ಯಶೋಧ | – ಸದಸ್ಯರು | ಸಹಾಯಕ ಆಯುಕ್ತರು |
| 6. ಎಂ.ಇ ಪಿಳ್ಳಪ್ಪ | – ಸದಸ್ಯರು | (ನೇಮಕಾತಿ ಮತ್ತು ವಿಚಾರಣೆ) |
| 5. ವೈ.ಆರ್. ಗೌರಮ್ಮ | – ಸದಸ್ಯರು | ಉಪ ಅರಣ್ಯ ಸಂರಕ್ಷಣಾಧಿಕಾರಿ |
| 6. ಮಲ್ಲೇಶ್ ಟಿ. | – ಸದಸ್ಯರು | (ಉತ್ತರ ವಿಭಾಗ) |
| 7. ಫೌಜಿಯಾ ಬೇಗಂ | – ಸದಸ್ಯರು | ಮುಖ್ಯ ಆಡಳಿತಾಧಿಕಾರಿಗಳು (JNNURM) |
| 8. ಎಸ್.ಎಂ ಮುರುಗೇಶ್ ಮೊದಲಿಯಾರ್ | – ಸದಸ್ಯರು | ವಿಶೇಷ ಅಧಿಕಾರಿಗಳು |

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/11/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ JNNURM ಮಾರ್ಗದರ್ಶನಗಳಿಗನುಸಾರವಾಗಿ ಬೆಂಗಳೂರು ನಗರದಲ್ಲಿ CVTC ತಂಡದ ರಚನೆಯಾಗಬೇಕಿದ್ದು, ಈ ಉದ್ದೇಶಕ್ಕೆ ಅರ್ಹ ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ಪ್ರಕಟಣೆ ನೀಡಲಾಗಿತ್ತು. ಈ ಪ್ರಕಟಣೆ ಅನುಸಾರ ವಿವಿಧ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ವ್ಯಕ್ತಿಗಳಿಂದ ಒಟ್ಟು 47 ಅರ್ಜಿಗಳನ್ನು ಬಂದಿರುತ್ತದೆ.

JNNURM ಮಾರ್ಗದರ್ಶನದಂತೆ CVTC (ನಗರ ಸ್ವಯಂಸೇವಾ ತಾಂತ್ರಿಕ ಪಡೆ) ಈ ಕೆಳಕಂಡ 9 ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿದ ತಂಡಗಳನ್ನು ರಚಿಸಬೇಕಿರುತ್ತದೆ.

1. Urban Engineering
2. Urban Planning
3. Urban Poverty Alleviation
4. Urban Community Development and Social Audit
5. Legal Services
6. Urban Governances
7. Heritage
8. Urban Environment
9. Urban Financial Services



O/C 3/9/11

ಪ್ರತಿ ತಂಡದಲ್ಲಿ ಗರಿಷ್ಠ 5 ಜನರಿಗೆ ಮಾತ್ರ ಅವಕಾಶ ಇದ್ದು ಸ್ವೀಕರಿಸಿರುವ ಎಲ್ಲಾ 47 ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅರ್ಜಿದಾರರ ಶೈಕ್ಷಣಿಕ ಅರ್ಹತೆ, ಕೆಲಸದ ಅನುಭವ/ಪರಿಣಿತಿ ಹಾಗೂ ಅವರು ಆಯ್ಕೆ ಮಾಡಿರುವ ವಿಷಯಗಳನ್ನು (Area of interest in 9 Committees-CVTC) ಪರಿಗಣನೆಗೆ ತೆಗೆದುಕೊಂಡು 43 ನಗರ ಸ್ವಯಂಸೇವಾ ತಾಂತ್ರಿಕ ಪಡೆಯ ಪಟ್ಟಿಯನ್ನು ಅನುಮೋದನೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:03–08–2011 ರ ಟಪ್ಪಣಿ.

**ನಿರ್ಣಯ: ದಿನಾಂಕ: 03–08–2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**ವಿಷಯ ಸಂಖ್ಯೆ: ಸಿಆಸುಸ್ಥಾಸ/12/2011–12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಇದರ ಕಾರ್ಯವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಸುಮಾರು 225 ಚ.ಕಿಮೀ ನಿಂದ 800 ಚ.ಕಿಮೀ.ಗೆ ಭೌಗೋಳಿಕ ವಿಸ್ತಾರಗೊಂಡು, ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯೂ ಸಹ ವಿಸ್ತಾರಗೊಂಡಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಲು ಹಾಗೂ ತೊಂದರೆಗೆ ಸಿಲುಕಿಕೊಂಡ ಕೋತಿ, ಹಾವು, ನಾಯಿ ಹಾಗೂ ಇನ್ನಿತರೆ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಿ ಮತ್ತು ಮನುಷ್ಯರಿಂದಾಗಲಿ ಅಥವಾ ಪ್ರಾಣಿ ಪಕ್ಷಿಗಳಿಂದಾಗಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಕಾರ್ಯನಿರ್ವಹಿಸಲು ಪರಿಸರ ಸಲಹೆಗಾರರ ತಂಡವಾಗಿ ಶ್ರೀ ಶರತ್ ಬಾಬು, ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡವನ್ನು ಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಆಗಸ್ಟ್ 2007ರಿಂದ ಮಾರ್ಚ್ 2011ರವರೆಗೆ ಪಾಲಿಕೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸದರಿ ವನ್ಯಜೀವಿ ಸಲಹೆಗಾರರು ಏಪ್ರಿಲ್ 2011 ರಿಂದ ಮಾರ್ಚ್ 2012 ರವರೆಗೆ ಗುತ್ತಿಗೆ ಆಧಾರದ ಮೇಲೆ ಮುಂದುವರೆಸಲು ಹಾಗೂ ಮಾಸಿಕ ವೇತನ ಪರಿಷ್ಕರಣೆ ಮಾಡಲು ಕೋರಿರುತ್ತಾರೆ. ಈಗಾಗಲೇ 2009–10ನೇ ಹಾಗೂ 2010–11ನೇ ಸಾಲಿನಲ್ಲಿ ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಪಾಲಿಕೆ ವತಿಯಿಂದ ನಿಶ್ಚಿತ ಮಾಸಿಕ ಸಂಭಾವನೆಯನ್ನು (ವೈದ್ಯಕೀಯ ವೆಚ್ಚ ಹಾಗೂ ಪೆಟ್ರೋಲ್ ವೆಚ್ಚವನ್ನೊಳಗೊಂಡಂತೆ) ಈ ಕೆಳಕಂಡಂತೆ ನೀಡಲಾಗಿರುತ್ತದೆ. ಸದರಿ ವನ್ಯ ಜೀವಿ ಸಂರಕ್ಷಣಾ ಸಲಹೆಗಾರರು ಏಪ್ರಿಲ್ 2011 ರಿಂದ ಮಾರ್ಚ್ 2012ರವರೆಗೆ ಹೊರಗುತ್ತಿಗೆ ಅವಧಿಯನ್ನು ಮುಂದುವರೆಸಲು ಹಾಗೂ ಈ ಹಿಂದೆ ನೀಡಲಾಗುತ್ತಿದ್ದ ಮಾಸಿಕ ಸಂಭಾವನೆಯಲ್ಲಿ ಪರಿಷ್ಕರಣೆ ಮಾಡಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ ವಲಯ) ರವರು ಸಹ ವನ್ಯಜೀವಿ ಸಂರಕ್ಷಣಾ ಸಲಹೆಗಾರರನ್ನು ಮುಂದುವರೆಸಲು ಹಾಗೂ ಮಾಸಿಕ ಸಂಭಾವನೆಗಳ ಬಗ್ಗೆ ವರದಿ ಸಲ್ಲಿಸಿ ಕೋರಿರುತ್ತಾರೆ.

| ಕ್ರ ಸಂ | ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದ ವಿವರ | 2009–10ನೇ ಸಾಲಿನಲ್ಲಿ (ರೂ.ಗಳಲ್ಲಿ) | 2010–11ನೇ ಸಾಲಿನಲ್ಲಿ (ರೂ.ಗಳಲ್ಲಿ) | 2011–12ನೇ ಸಾಲಿಗೆ ಪರಿಷ್ಕರಣೆಗೊಳಿಸುವಂತೆ ಕೋರಿರುವ ನಿಶ್ಚಿತ ಮಾಸಿಕ ಸಂಭಾವನೆ |
|---|---|---|---|---|
| 1 | ಶ್ರೀ ಶರತ್ ಬಾಬು (ಪರಿಸರ ಸಲಹೆಗಾರರು) | 14000/– | 13000/– | 16000/– |
| 2 | ಶ್ರೀ ಮಂಜುನಾಥ್ (ಪರಿಸರ ಸಹಾಯಕರು) | 5000/– | 5000/– +1000/– | 9000/– |

| | | | | |
|---|---|---|---|---|
| 3 | ಶ್ರೀ ಕುಮಾರ್ (ಪರಿಸರ ಸಹಾಯಕರು) | 5000/- | 5000/- +1000/- | 9000/- |
| 4 | ಶ್ರೀ ಮೋಹನ್, ಹಿರಿಯ ಪರಿಸರ ಸಹಾಯಕರು | 8000/- | 8000/- +1000/- | 8000/- + 1000/- |
| 5 | ಮಹೇಶ್‌ಕುಮಾರ್ ಬಿ.ಆರ್ ಹಿರಿಯ ಪರಿಸರ ಸಹಾಯಕರು | 8000/- | 8000/- + 1000/- | 8000/- + 1000/- |
| 6 | ಶ್ರೀ ಶಿವರಾಜ್, ಹಿರಿಯ ಪರಿಸರ ಸಹಾಯಕರು | 8000/- | 8000/- + 1000/- | 8000/- + 1000/- |

ಏಪ್ರಿಲ್ 2011 ರಿಂದ ಮಾರ್ಚ್-2012 ರವರೆಗೆ ವನ್ಯಜೀವಿ ಸಲಹೆಗಾರರ ತಂಡವನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಮುಂದುವರೆಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಉತ್ತರ ವಲಯ ರವರು ಕೋರಿರುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:08-08-2011 ರ ಬಿ12 (5ಹೆಚ್) ಪಿಆರ್/352/11-12 ರ ಟಪ್ಪಣಿ.

**ನಿರ್ಣಯ:** ದಿನಾಂಕ: 08-08-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದ ಗೌರವಧನವನ್ನು ಪ್ರತಿಮಾಹೆ ನೀಡುವುದು ಎಂಬುದಾಗಿ ಸಮಿತಿಯು ತೀರ್ಮಾನಿಸಿತು.

**ವಿಷಯ ಸಂಖ್ಯೆ: ಸಿಆಸುಸ್ಥಾಸ/14/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರು ದಿ: 23-03-2011 ರಂದು ಮನವಿ ಸಲ್ಲಿಸಿ, ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಅಧಿಸೂಚನೆ ಸಂಖ್ಯೆ: ನಅಇ 92 ಎಂಎನ್‌ವೈ 2006 ದಿನಾಂಕ: 16-01-2007 ರಂದು ಈ ಹಿಂದೆ ಇದ್ದ ಬೆಂಗಳೂರು ಮಹಾನಗರ ಪಾಲಿಕೆಯು 110 ಗ್ರಾಮಗಳು, 7 ನಗರಸಭೆ ಮತ್ತು 1 ಪುರಸಭೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಯಾಗಿದ್ದು, ಸದರಿ 110 ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಹಂಗಾಮಿ ಕಂದಾಯ ವಸೂಲಿಗಾರರು, ಗಣಕಯಂತ್ರ ನಿರ್ವಾಹಕರು, ಜವಾನರು, ಎಲೆಕ್ಟ್ರೀಷಿಯನ್, ಜಲಗಾರರು, ಪೌರಕಾರ್ಮಿಕರುಗಳು ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿದ್ದು, ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ ಮಾಹೆಯಾನ ರೂ. 2500, ಗುಮಾಸ್ತರಿಗೆ ಮಾಹೆಯಾನ ರೂ. 2042, ಜಲಗಾರರಿಗೆ ಮಾಹೆಯಾನ ರೂ. 2250, ಪೌರಕಾರ್ಮಿಕರಿಗೆ ಮಾಹೆಯಾನ 1750 ಹಾಗೂ ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ ರೂ.3000 ಮತ್ತು ಜವಾನರಿಗೆ ಮಾಹೆಯಾನ ರೂ. 1000 ಗಳನ್ನು ಪಾವತಿಸಲಾಗುತ್ತಿತ್ತು. ನಂತರದಲ್ಲಿ ಅಪರ ಆಯುಕ್ತರು (ಆಡಳಿತ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ದಿನಾಂಕ: 07-07-2010 ರ ಆದೇಶದಂತೆ ಸರ್ಕಾರದ ಕಾರ್ಮಿಕ ಆಯುಕ್ತರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಪಿಟಿಎನ್/ಸಿಆರ್-118/09-10 ದಿನಾಂಕ: 07-01-2010 ರ ಪತ್ರದನ್ವಯ ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ, ಗುಮಾಸ್ತರಿಗೆ ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ

ರೂ. 2874, ಜಲಗಾರರಿಗೆ, ಪೌರಕಾರ್ಮಿಕರಿಗೆ, ಜವಾನರಿಗೆ ಮಾಹೆಯಾನ ರೂ. 2632.00 ಗಳಿಗೆ ಕನಿಷ್ಠ ವೇತನವನ್ನು ಹೆಚ್ಚಿಸಿ ಆದೇಶ ಹೊರಡಿಸಿರುತ್ತಾರೆ. ಅದರಂತೆ, ಹೆಚ್ಚಳ ಮಾಡಿರುವ ಕನಿಷ್ಠ ವೇನತವನ್ನು ಪಡೆಯುತ್ತಿದ್ದು, ಈಗ ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರು ಘನತೆವೆತ್ತ ರಾಜ್ಯಪಾಲರ ಆದೇಶಾನುಸಾರ ದಿನಾಂಕ: 21-02-2011 ರಂದು ಅಧಿಸೂಚನೆ ಹೊರಡಿಸಿ, ಕನಿಷ್ಠ ವೇತನವನ್ನು ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ, ಗುಮಾಸ್ತರಿಗೆ, ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ ರೂ. 5881/- ಜಲಗಾರರಿಗೆ, ಪೌರಕಾರ್ಮಿಕರಿಗೆ ಮಾಹೆಯಾನ ರೂ. 5647.00 ಗಳನ್ನು ಜವಾನರಿಗೆ ಮಾಹೆಯಾನ ರೂ. 5179.00 ಗಳನ್ನು ಪರಿಷ್ಕರಿಸಿ, ಕನಿಷ್ಠ ವೇತನವನ್ನು ಹೆಚ್ಚಿಸಿ ಅಧಿಸೂಚನೆ ಹೊರಡಿಸಿರುತ್ತಾರೆ. ಆದ್ದರಿಂದ ಸದರಿ ಸರ್ಕಾರದ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಪಾವತಿಸಬೇಕೆಂದು ಕೋರಿರುತ್ತಾರೆ.

ಸರ್ಕಾರದ ಕಾರ್ಮಿಕ ಇಲಾಖೆಯ ಸಂಖ್ಯೆ: ಕಾಇ/152/ಎಲ್‌ಡಬ್ಲ್ಯೂಎ/2008 ದಿ: 21-02-2011 ರ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಯಾವುದೇ " ನಗರ ಸ್ಥಳೀಯ ಸಂಸ್ಥೆಗಳು" ಹಾಗೂ " ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಎಂಬ ಅನುಸೂಚಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಿರ್ದಿಷ್ಟಪಡಿಸಿರುವ ಕನಿಷ್ಠ ವೇತವವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆಯ ಭಾಗ-4 (ಎ) ರಲ್ಲಿ ದಿನಾಂಕ: 30-09-2010 ರಂದು ಪ್ರಕಟಿಸಿ, ಕನಿಷ್ಠ ವೇತನ ಕಾಯ್ದೆ 1948 ರ (ಕೇಂದ್ರಾನಿಧಿಯಮ ಸಂ: (XI) ಸೆಕ್ಷನ್ 5 (1) (ಬಿ) ಪ್ರಕಾರ ಇದರಿಂದ ಭಾದಿತರಾಗುವ/ಸಂಬಂಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ/ಆಕ್ಷೇಪಣೆಗಳನ್ನು ಕನಿಷ್ಠ ವೇತನ ಸಲಹಾ ಮಂಡಳಿಯಲ್ಲಿ ಮಂಡಿಸಲಾಗಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರಕ್ಕೆ ಶಿಫಾರಸ್ಸು ನೀಡಿರುವಂತೆ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಪರಿಶೀಲಿಸಿ, ಕರಡು ಅಧಿಸೂಚನೆಯಲ್ಲಿ ನಿಗಧಿಪಡಿಸಿದ್ದ ವೇತನ ದರಗಳು ಇತರೆ ಅನುಸೂಚಿತ ಉದ್ದಿಮೆಗಳಿಗಿಂತ ಹಾಗೂ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ರಾಷ್ಟ್ರೀಯ ಕನಿಷ್ಠ ವೇತನ ದರಕ್ಕಿಂತ ಗಣನೀಯವಾಗಿ ಹೆಚ್ಚಾಗಿರುವುದನ್ನು ಸರ್ಕಾರವು ಗಮನಿಸಿ, ಈ ರೀತಿ ಗಣನೀಯವಾಗಿ ಕನಿಷ್ಠ ವೇತನವನ್ನು ಹೆಚ್ಚಾಗಿ ನಿಗಧಿಪಡಿಸಿರುವುದರಿಂದ ಇತರ ಅನುಸೂಚಿತ ಉದ್ದಿಮೆಗಳಿಗೆ ತಾರತಮ್ಯ ಮಾಡಿದಂತಾಗುತ್ತದೆ ಎನ್ನುವುದನ್ನು ಮನಗಂಡು ಕರಡು ಅಧಿಸೂಚನೆಯಲ್ಲಿನ ದರಗಳನ್ನು ಕಡಿತಗೊಳಿಸಲು ತೀರ್ಮಾನಿಸಿ, ಕನಿಷ್ಠ ವೇತನ ಕಾಯ್ದೆ 1948 ರ ಸೆಕ್ಷನ್ 3(1)(ಬಿ) ಹಾಗೂ 5 (1) (ಬಿ) ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ ಯಾವುದೇ " ನಗರ ಸ್ಥಳೀಯ ಸಂಸ್ಥೆಗಳು" ಹಾಗೂ " ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆಯೆಂದು ಅಧಿಸೂಚನೆ ಹೊರಡಿಸಿರುತ್ತದೆ.

## ಅನುಸೂಚಿ

| ಕ್ರಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು (ರೂಪಾಯಿಗಳಲ್ಲಿ) | | | | | |
|---|---|---|---|---|---|---|---|
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು | | ಎಲ್ಲಾ ನಗರ ಸಭೆಗಳು | | ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು | |
| | | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| 1 | 2 | 3 | 4 | 5 | 6 | 7 | 8 |
| 1 | ಗುಮಾಸ್ತ/ಕ್ಲರ್ಕ್/ಕಂಪ್ಯೂಟರ್ ಆಪರೇಟರ್/ ಡಾಟಾ ಎಂಟ್ರೀ ಆಪರೇಟರ್/ಕರ ವಸೂಲಿಗಾರರು/ ಎಲೆಕ್ಟ್ರೀಷಿಯನ್ ಹಾಗೂ ಇತರೆ ಕುಶಲ ಕಾರ್ಮಿಕರು | 5881-20 | 226-20 | 5532-80 | 212-20 | 4919-20 | 189-20 |
| 2 | ಪಂಪ್ ಆಪರೇಟರ್/ಮೆಕ್ಯಾನಿಕ್/ ಬಾಲವಾಡಿ ಕಾರ್ಯಕರ್ತೆಯರು/ ವಾಹನ ಚಾಲಕರು ಮತ್ತು ಇತರೆ ಅರೆ ಕುಶಲ ಕಾರ್ಮಿಕರು | 5647-20 | 217-20 | 5304-00 | 204-00 | 4808-70 | 184-90 |
| 3 | ವಾಟರ್‌ಮ್ಯಾನ್ (ನೀರು ಗಂಟೆ) | 5413-20 | 208-20 | 5075-20 | 195-20 | 4698-20 | 180-70 |
| 4 | ಜವಾನರು, ಅಟೆಂಡರ್ | 5179-20 | 199-20 | 4846-40 | 186-40 | 4587-70 | 176-45 |
| 5 | ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ರಸ್ತೆಗಳನ್ನು ಗುಡಿಸುವುದು, ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಚಗೊಳಿಸುವುದು ಹಾಗೂ ಇತರೆ ಕುಶಲರಲ್ಲದ ಕಾರ್ಮಿಕರು | 5044-00 | 194-00 | 4264-00 | 164-00 | 3484-00 | 134-00 |

**ತುಟ್ಟಿಭತ್ಯೆ:-**

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳನ್ನು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿಭತ್ಯೆ ನೀಡತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು, ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ, ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಂಕದ (ಜನವರಿ 2010 ರಿಂದ ಡಿಸೆಂಬರ್ 2010) ರ ಸರಾಸರಿ ಆಧಾರದ ಮೇಲೆ 2011 ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದು ಸೇರಿದಂತೆ ಲೆಕ್ಕ ಹಾಕತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:**

ಅ) ಮಾಸಿಕ ವೇತನವನ್ನು ಪಡೆಯುವವರು:

ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು × ತುಟ್ಟಿಭತ್ಯೆ ದರ × 30 ದಿನಗಳು = ತುಟ್ಟಿಭತ್ಯೆ

ಆ) ದಿನಗೂಲಿ ವೇತನ ಪಡೆಯುವವರು:

$$\frac{\text{ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು} \times \text{ತುಟ್ಟಿಭತ್ಯೆ ದರ} \times 30 \text{ ದಿನಗಳು}}{26} = \text{ತುಟ್ಟಿಭತ್ಯೆ}$$

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.
3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ಹೆಚ್ಚಾಗಿರುವ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.
4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು, ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ರಿಂದ ಭಾಗಿಸಬೇಕು, ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು.
7. ಸಂಸ್ಥೆಗಳಲ್ಲಿ ನಿಗಧಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ, ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.

10. ಅಪ್ರೆಂಟೀಸ್‌ಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. **ಕುಶಲ:**ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ, ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ ಅವಶ್ಯವಿದ್ದರೆ ಸರಳವಾದ ನಕ್ಷೆಗಳನ್ನು ಓದಿ ಮತ್ತು ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

12. **ಅರೆ ಕುಶಲ:** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರ ಉಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

13. **ಕುಶಲರಲ್ಲದವರು:** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು. ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸರ್ಕಾರದ ಕಾರ್ಮಿಕ ಆಯುಕ್ತರ ಅರೆ ಸರ್ಕಾರಿ ಪತ್ರ ಸಂಖ್ಯೆ: ಪಿಟಿಎನ್/ಸಿಆರ್–188/09–10 ದಿನಾಂಕ: 07-01-2010 ರನ್ವಯ ಸದರಿ ನೌಕರರುಗಳಿಗೆ ಕನಿಷ್ಠ ವೇತನವನ್ನು ಪಾವತಿಸಲಾಗುತ್ತಿರುತ್ತದೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ: 21–02–2011 ರಂದು ಕಾರ್ಮಿಕ ಇಲಾಖೆಯ ಪ್ರಸ್ತುತ ಅಧಿಸೂಚನೆ ಅನ್ವಯ ಪರಿಷ್ಕೃತ ವೇತನ ಶ್ರೇಣಿಯನ್ನು ಹಂಗಾಮಿ ಕಾರ್ಮಿಕರುಗಳಿಗೆ ನೀಡುವುದರಲ್ಲಿ ಯಾವುದೇ ಬಾದಕವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ದಿನಾಂಕ: 21–02–2011 ರಂದು ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು, ಪಾಲಿಕೆಯ ಮಹದೇವಪುರ ವಲಯ, ಬೊಮ್ಮನಹಳ್ಳಿ ವಲಯ, ದಾಸರಹಳ್ಳಿ ವಲಯ, ರಾಜರಾಜೇಶ್ವರಿನಗರ ವಲಯ ಮತ್ತು ಯಲಹಂಕ ವಲಯಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಮುಂದುವರೆದು ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸದರಿ ಅಧಿಸೂಚನೆ ಹೊರಡಿಸಿದ ದಿನಾಂಕ: 21–02–2011 ರಿಂದ ಅನ್ವಯವಾಗುವಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ: 20–06–2011 ರ ನಿರ್ಣಯ ಕುರಿತಂತೆ ದಿನಾಂಕ: 28–07–2011 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಸಿಬ್ಬಂದಿ ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ಕುರಿತಂತೆ

**ನಿರ್ಣಯ: ಮಾಹಿತಿಗಾಗಿ ಮುಂದೂಡಿದೆ.**

**ವಿಷಯ ಸಂಖ್ಯೆ: ಸಿಆಸುಸ್ಥಾಸ/15/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಶುಶ್ರೂಷಕಿಯರು, ಫಾರ್ಮಾಸಿಸ್ಟ್ ಮತ್ತು ವಿವಿಧ ವಿಧಗಳ ಗ್ಯಾಂಗ್‌ಮೆನ್ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಿಕೊಳ್ಳಲು ಅನುಮೋದನೆ ನೀಡಿದ್ದು, ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆಗಳು |
|---|---|---|
| 1. | ಶುಶ್ರೂಷಕಿಯರು | 30 |
| 2. | ಫಾರ್ಮಾಸಿಸ್ಟ್ | 01 |
| 3. | ಸ್ಪೆಷಲ್ ಗ್ಯಾಂಗ್‌ಮೆನ್ | 58 |
| 4. | ಎಂ.ಸಿ. ಗ್ಯಾಂಗ್‌ಮೆನ್ | 258 |
| 5. | ಎ.ಎಲ್.ಒ ಗ್ಯಾಂಗ್‌ಮೆನ್ | 268 |
| 6. | ಸೈನೊಸಿಸ್ ಗ್ಯಾಂಗ್‌ಮೆನ್ | 06 |
| 7. | ಡಿಸ್‌ಇನ್‌ಫೆಕ್ಟೆಂಟ್ ಗ್ಯಾಂಗ್‌ಮೆನ್ | 13 |
| | **ಒಟ್ಟು** | **634** |

ಈ ಹುದ್ದೆಗಳಲ್ಲಿ ಶುಶ್ರೂಷಕಿಯರು, ಫಾರ್ಮಾಸಿಸ್ಟ್ ಹುದ್ದೆಗಳು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ನಮೂದಾಗಿರುವುದಿಲ್ಲದಿರುವ ಮೇರೆಗೆ ಹಾಗೂ ಗ್ಯಾಂಗ್‌ಮೆನ್ ಹುದ್ದೆಗಳಿಗೆ ಯಾವುದೇ ವಿದ್ಯಾರ್ಹತೆ ನಮೂದಿಸಿರದ ಕಾರಣ ಈ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ. ಸದರಿ ಹುದ್ದೆಗಳ ವಿದ್ಯಾರ್ಹತೆಗೆ ಸಂಬಂಧಪಟ್ಟಂತೆ ಹಾಗೂ C& R ನಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತಿದ್ದುಪಡಿ ವಿದ್ಯಾರ್ಹತೆಯನ್ನು ತಯಾರಿಸಿ C& R Amendment ಗಾಗಿ ದಿನಾಂಕ: 12-05-2011 ರಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ದೊರೆತಿರುವುದಿಲ್ಲ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಶುಶ್ರೂಷಕಿಯರು, ಫಾರ್ಮಾಸಿಸ್ಟ್ & ಗ್ಯಾಂಗ್‌ಮೆನ್ ಹುದ್ದೆಗಳ ಅವಶ್ಯಕತೆ ತುಂಬಾ ಇರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಹುದ್ದೆಗಳ C& R Amendment ಗೆ ಸರ್ಕಾರದ ಅನುಮೋದನೆ ನಿರೀಕ್ಷಿಸಿ ನೇಮಕಾತಿ ವಿಭಾಗದಿಂದ ಅಧಿಸೂಚನೆ ಹೊರಡಿಸಿ ಭರ್ತಿ ಮಾಡಿಕೊಳ್ಳಲು ಅನುಮೋದನೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:18-08-2011 ರ ಸಆ(ನೇ) ಪಿಆರ್-79/11-12 ರ ಟಪ್ಪಣಿ.

**ನಿರ್ಣಯ: ಮಾಹಿತಿಗಾಗಿ ಮುಂದೂಡಿದೆ.**

**ವಿಷಯ ಸಂಖ್ಯೆ: ಸಿಆಸುಸ್ಥಾಸ/ 16/2011-12**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು 3 ವರ್ಷಗಳಿಗೂ ಅಧಿಕವಾಗಿ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಅದರಲ್ಲೂ ಅತಿಮುಖ್ಯವಾಗಿ ಕಾರ್ಯನಿರ್ವಾಹಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಹಾಗೂ ಇತರೆ ಸಿಬ್ಬಂದಿಗಳು ಕೆಳಹಂತದ ಹುದ್ದೆಯಿಂದ ಮೇಲಿನ

ಹುದ್ದೆಗೆ ಮುಂಬಡ್ತಿ ಹೊಂದಿದ ಮೇಲು ಅದೇ ವಲಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ. ಉದಾಹರಣೆಗೆ ಕಂದಾಯ ವಸೂಲಿಗಾರರ ಹುದ್ದೆಯಿಂದ ಕಂದಾಯ ಪರಿವೀಕ್ಷಕರ ಹುದ್ದೆಗೆ, ಸಹಾಯಕ ಅಭಿಯಂತರರ ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆ, ಕಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಯಿಂದ ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆ, ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆ, ಈ ರೀತಿಯಾಗಿ ಒಂದೇ ವಲಯ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಇವರುಗಳು ತಮಗೆ ವಹಿಸಿರುವ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲರಾಗಿ ಸಾರ್ವಜನಿಕವಾಗಿ ಪಾಲಿಕೆಯ ಬಗ್ಗೆ ಕೀಳರಿಮೆ ಉಂಟಾಗಲು ಕಾರಣಕರ್ತರಾಗಿರುವ ಹಿನ್ನಲೆಯಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಪಾಲಿಕೆಯ 8 ವಲಯ ಕಛೇರಿಗಳಲ್ಲಿ 3 ವರ್ಷಗಳಿಗೂ ಅಧಿಕವಾಗಿ ವಿವಿಧ ಹುದ್ದೆಗಳಲ್ಲಿ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಸಿಬ್ಬಂದಿಗಳನ್ನು ಸದರಿ ವಲಯ ಕಛೇರಿಗಳಿಂದ ಮತ್ತೊಂದು ವಲಯ ಕಛೇರಿಗೆ ವರ್ಗಾವಣೆ ಮಾಡಲು ಕ್ರಮಕೈಗೊಳ್ಳತಕ್ಕದ್ದು ಒಂದು ಪಕ್ಷ ತಪ್ಪು ಮಾಹಿತಿಗಳನ್ನು ನೀಡಿ ಅದೇ ವಲಯ ಕಛೇರಿಗಳಲ್ಲಿ ಸಿಬ್ಬಂದಿಗಳು ಮುಂದುವರೆದ ಪಕ್ಷದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿ ಮಾಡಿ ಸೂಕ್ತ ಶಿಸ್ತಿನ ಕ್ರಮ ಜರುಗಿಸತಕ್ಕದೆಂದು ಆಯುಕ್ತರಿಗೆ ಸೂಚಿಸಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 05-09-2011 ರಂದು ಯಲಹಂಕ ವಲಯ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಎ.ವಿಜಯ ರಮೇಶ್ – ಸದಸ್ಯರು
5. ಲಲಿತ ಮುಕುಂದರಾವ್ – ಸದಸ್ಯರು
6. ಕೆ.ವಿ. ಯಶೋಧ – ಸದಸ್ಯರು
7. ವೈ.ಆರ್. ಗೌರಮ್ಮ – ಸದಸ್ಯರು
8. ಫೌಜಿಯಾಂ ಬೇಗಂ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಜಂಟಿ ಆಯುಕ್ತರು
ಉಪ ಆಯುಕ್ತರು
ಮುಖ್ಯ ಅಭಿಯಂತರರು
ಉಪ ಆರೋಗ್ಯಾಧಿಕಾರಿಗಳು
ಕಂದಾಯ ಅಧಿಕಾರಿಗಳು
ಕಾರ್ಯಪಾಲಕ ಅಭಿಯಂತರರುಗಳು
ಸಹಾಯಕ ಕಂದಾಯ ಅಧಿಕಾರಿಗಳು
ಸಹಾಯಕ ನಿಯಂತ್ರಕರು (ಹಣಕಾಸು)
ಕಲ್ಯಾಣಾಧಿಕಾರಿಗಳು
ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು
ತೋಟಗಾರಿಕಾ ಅಧೀಕ್ಷಕರು
ಸಹಾಯಕ ನಿಯಂತ್ರಕರು ( ಪಶುಸಂಗೋಪನೆ)
ಸಹಾಯಕ ನಿರ್ದೇಶಕರು (ನಗರ ಯೋಜನೆ)
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ವಿಶೇಷ ಅಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

ಜಂಟಿ ಆಯುಕ್ತರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ತಮ್ಮ ವಲಯ ಕಛೇರಿ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ಸಭೆಯ ಗಮನಕ್ಕೆ ತರುತ್ತಾ, ಇಲಾಖಾವಾರು ವರದಿಯನ್ನು ಸಭೆಗೆ ತಿಳಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು. ಕಲ್ಯಾಣ ವಿಭಾಗಕ್ಕೆ ಸಂಬಂಧಿಸಿದಂತೆ ಕಲ್ಯಾಣಾಧಿಕಾರಿಗಳು ಪ್ರಸಕ್ತ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳಿಗೆ ವಾಹನ ಸೌಲಭ್ಯ ಕಲ್ಪಿಸುವ ಹಾಗೂ ಚಾಲನಾ ತರಬೇತಿ ಮತ್ತು ಪರವಾನಗಿ ನೀಡುವ ಸಂಬಂಧ ಈಗಾಗಲೇ ಮುಕ್ತಾಯ ಹಂತದಲ್ಲಿದ್ದು ಉಳಿದ ಕಾರ್ಯಕ್ರಮಗಳಾದ ಹೊಲಿಗೆ ಯಂತ್ರ ನೀಡುವ ಬಗ್ಗೆ, ಹೊಲಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಹಾಗೂ ಇತರೆ 23 ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಕೇಂದ್ರ ಕಛೇರಿಗೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಹೊಲಿಗೆ ತರಬೇತಿ ಕೇಂದ್ರಗಳನ್ನು ಪ್ರತಿ ವಾರ್ಡ್‌ನಲ್ಲಿ ಸ್ಥಾಪಿಸುವ ಬಗ್ಗೆ ಸ್ಥಳೀಯ ಪಾಲಿಕೆ ಸದಸ್ಯರ ಜೊತೆ ಚರ್ಚಿಸಿ ಅತಿ ಶೀಘ್ರವಾಗಿ ಸದರಿ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಸಮಿತಿಯು ಸೂಚಿಸಿತು. ಮದ್ಯಪಾನ ನಿಯಂತ್ರಣದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕಲ್ಯಾಣ ಕಾರ್ಯಕ್ರಮದಡಿ ನಿರೂಪಿಸುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಖಾಸಗಿ ಸಂಸ್ಥೆಯೊಂದಕ್ಕೆ ರೂ. 75,000/– ರಂತೆ ಪಾವತಿ ಮಾಡಿರುವುದಾಗಿ ತಿಳಿಸಿದ್ದು, ಸದರಿ

ಕಾರ್ಯಕ್ರಮಗಳಿಗೆ ಮೊತ್ತವನ್ನು ಪಾವತಿ ಮಾಡುವ ಮುಂಚೆ ಇಂತಹ ಕಾರ್ಯಕ್ರಮಗಳಿಗೆ ಸರ್ಕಾರದಿಂದ ನಿಗಧಿ ಪಡಿಸಿರುವ ಮೊತ್ತವನ್ನು ನೀಡುವ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳತಕ್ಕದೆಂದು ಸೂಚಿಸಲಾಯಿತು.

ಈ ವಲಯದಲ್ಲಿ ಆಹಾರ ಕಲಬೆರಿಕೆ ಕುರಿತಂತೆ ಸರ್ಕಾರದ ಆರೋಗ್ಯ ಇಲಾಖೆಯು ಕ್ರಮಕೈಗೊಳ್ಳತ್ತಿರುವುದಾಗಿ ಸಭೆಯಲ್ಲಿ ಹಾಜರಿದ್ದ ಉಪ ಆರೋಗ್ಯಾಧಿಕಾರಿಗಳು ವಿವರಿಸಿದ್ದು, ಇದು ಸಮಿತಿಗೆ ಸೋಜಿಗದ ಅಂಶವನ್ನು ಉಂಟು ಮಾಡಿರುತ್ತದೆ. ಈ ವಲಯವು 2007 ಸಾಲಿನಲ್ಲಿ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದ್ದು, ತಹಲ್‌ವರೆಗೂ ಸರ್ಕಾರದ ಆರೋಗ್ಯ ಇಲಾಖೆಯೇ ಆಹಾರ ಕಲಬೆರಿಕೆ ಪ್ರಕರಣ ಬಗ್ಗೆ ಕಾರ್ಯನಿರ್ವಹಿಸುತ್ತಿರುವರೆಗೆ ಸೂಕ್ತ ಆದೇಶ ನೀಡಿ ಈ ಲೋಪವನ್ನು ಸರಿಪಡಿಸಲು ಕ್ರಮಕೈಗೊಳ್ಳತಕ್ಕದೆಂದು ಸಮಿತಿಯು ಸ್ಪಷ್ಟವಾಗಿ ಸೂಚಿಸಬಯಸುತ್ತದೆ.

ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದಂತೆ ವಲಯದ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರುಗಳು ತಮ್ಮ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಹಾಗೂ ಚಾಲ್ತಿಯಲ್ಲಿರುವ ಕಾಮಗಾರಿಗಳ ಬಗ್ಗೆ ಸಮಿತಿಗೆ ಮಾಹಿತಿ ಒದಗಿಸಿ ಈಗಾಗಲೇ ಶೇ.60 ರಿಂದ 70 ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ತಿಳಿಸಿದರು ಹಾಗೂ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಅತಿಜರೂಗಾಗಿ ಪೂರ್ಣಗೊಳಿಸಲು ಮತ್ತು ಮುಂದಿನ ಆಯವ್ಯಯಕ್ಕೆ ಹೆಚ್ಚಿನ ರೀತಿಯಲ್ಲಿ Spill over ಆಗದಂತೆ ತ್ವರಿತಗತಿಯಿಂದ ಪ್ರಸಕ್ತ ಆಯವ್ಯಯಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಲಾಗಿರುತ್ತದೆ. ಹೆಚ್ಚುವರಿ ಅನುದಾನದ ಕಾಮಗಾರಿಗಳು ಇನ್ನೂ ಪ್ರಾರಂಭಗೊಳ್ಳದೇ ಇರುವುದರಿಂದ ಕೂಡಲೇ ತುರ್ತಾಗಿ ಸದರಿ ಕಾಮಗಾರಿಗಳನ್ನು ಕೈಗೆತ್ತಿಗೊಂಡು ಪೂರ್ಣಗೊಳಿಸಲು ಸೂಚಿಸಲಾಯಿತು. ಜಂಟಿ ಆಯುಕ್ತರ ವ್ಯಾಪ್ತಿಯ ಅನುದಾನ ಹಾಗೂ ಇತರೆ ಹೆಚ್ಚುವರಿ ಅನುದಾನಗಳನ್ನು ಈ ವಲಯದ ಹಿಂದುಳಿದ ವಾರ್ಡ್‌ಗಳ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಉಪಯೋಗಿಸುವಂತೆ ಸೂಚಿಸಲಾಯಿತು. ಈ ವಲಯದಲ್ಲಿ ಶೇ. 22.75 ರ ಅನುದಾನದಡಿ ಮಂಜೂರಾಗಿರುವ 580 ಮನೆಗಳ ಪೈಕಿ ಈಗಾಗಲೇ 470 ಮನೆಗಳನ್ನು ಫಲಾನುಭವಿಗಳಿಗೆ ನಿರ್ಮಾಣ ಮಾಡಿಕೊಟ್ಟಿರುವುದಾಗಿ ತಿಳಿಸಿದ್ದು, ಉಳಿಕೆ ಮನೆಗಳನ್ನು ಅತಿ ಜರೂರಾಗಿ ನಿರ್ಮಿಸಿಕೊಡಲು ಸೂಚಿಸಲಾಯಿತು.

ಸದರಿ ವಲಯ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಬಗ್ಗೆ ಸಾಕಷ್ಟು ದೂರುಗಳು ಬಂದಿರುವ ಹಿನ್ನಲೆಯಲ್ಲಿ ಈ ಬಗ್ಗೆ ತುರ್ತಾಗಿ ಕ್ರಮಕೈಗೊಂಡು ಸಾರ್ವಜನಿಕರಿಗೆ ಯಾವುದೇ ರೀತಿಯಾದ ತೊಂದರೆಯಾಗದಂತೆ ಕ್ರಮಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು. ಎಲ್ಲಾ ಪೌರಕಾರ್ಮಿಕರುಗಳಿಗೆ ಇಎಸ್‌ಐ ಮತ್ತು ಪಿಎಫ್ ಗಳನ್ನು ಸೌಲಭ್ಯವನ್ನು ಒದಗಿಸಿದ ನಂತರ ಸಂಬಂಧಪಟ್ಟ ಗುತ್ತಿಗೆದಾರರಿಗೆ ಬಿಲ್ಲು ಪಾವತಿ ಮಾಡಲು ಸೂಕ್ತ ಕ್ರಮಕೈಗೊಳ್ಳತಕ್ಕದೆಂದು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚಿಸಿ ತಪ್ಪಿದಲ್ಲಿ ತಮ್ಮಗಳನ್ನೇ ನೇರ ಹೊಣೆಗಾರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಆಯುಕ್ತರವರಿಗೆ ವರದಿ ಸಲ್ಲಿಸಲಾಗುವುದೆಂದು ಸಮಿತಿಯು ತಿಳಿಸಿತು. ಯಲಹಂಕ ವಲಯ ವ್ಯಾಪ್ತಿಯಲ್ಲಿ 110 ಕ್ಕಿಂತ ಹೆಚ್ಚಿನ ಉದ್ಯಾವನಗಳು ಇದ್ದು ಈ ಪೈಕಿ 75 ಉದ್ಯಾವನಗಳು ಅಭಿವೃದ್ಧಿ ಹೊಂದಿದ್ದು, ಉಳಿಕೆ ಉದ್ಯಾವನಗಳ ಕುರಿತಂತೆ ಅಭಿವೃದ್ಧಿ ಕಾರ್ಯವನ್ನು ಶೀಘ್ರವಾಗಿ ಹಮ್ಮಿಕೊಳ್ಳಲು ಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿರುತ್ತಾರೆ. ಮಳೆ ನೀರು ಕೋಯ್ಲುನ ಬಗ್ಗೆ ಇದುವರೆಗೂ ಯಾವುದೇ ಕ್ರಮಕೈಗೊಳ್ಳದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಇನ್ನು ಮುಂದೆ ಎಲ್ಲಾ

ಕಾಮಗಾರಿಗಳಲ್ಲೂ ಸಹ ಮಳೆ ನೀರು ಕೋಯ್ಲು ಅನ್ನು ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಕಂದಾಯ ವಸೂಲಾತಿಯು ಸದರಿ ವಲಯದಲ್ಲಿ ಕುಂಠಿತವಾಗಿದ್ದು, ಇದು ಕಂದಾಯ ಇಲಾಖೆಯ ಅಧಿಕಾರಿಗಳ ಬೇಜಾವಾಬ್ದಾರಿತನವನ್ನು ತೋರಿದ್ದು, ಈ ಬಗ್ಗೆ ಸಮಿತಿಯು ತೀವ್ರವಾಗಿ ಆಕ್ಷೇಪಿಸುತ್ತಾ, ಕೂಡಲೇ ತೆರಿಗೆಯಿಂದ ವಂಚಿತವಾದ ಸ್ವತ್ತುಗಳನ್ನು ಪತ್ತೆ ಮಾಡಿ ತ್ವರಿತಗತಿಯಲ್ಲಿ ತೆರಿಗೆ ವಸೂಲಾತಿ ಮಾಡುವುದು ಹಾಗೂ 2003ನೇ ಸಾಲಿನಿಂದ ಇದುವರೆಗೂ ದಾಖಲಾಗಿರುವ ಖಾತಾಗಳನ್ನು ಪರಿಶೀಲಿಸಿ ಅಭಿವೃದ್ಧಿ ಶುಲ್ಕ ಪಾವತಿಸದೇ ಕಛೇರಿ ದಾಖಲಾತಿ ಪುಸ್ತಕದಲ್ಲಿ ಖಾತಾಗಳು ದಾಖಲಾಗಿದ್ದ ಪಕ್ಷದಲ್ಲಿ ಅಂತಹವುಗಳ ಪಟ್ಟಿ ಮಾಡಿ ಪಾಲಿಕೆಗೆ ಬರಬೇಕಾದ ಅಭಿವೃದ್ಧಿ ಶುಲ್ಕದ ಮೊತ್ತವನ್ನು ವಸೂಲಿ ಮಾಡಲು ಕ್ರಮಕೈಗೊಂಡು ಅನಧಿಕೃತವಾಗಿ ಖಾತಾಗಳನ್ನು ದಾಖಲು ಮಾಡಿದಂತಹ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

ವಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಗುರುತಿನ ಚೀಟಿ ಧರಿಸದೇ ಇರುವುದು ಕಂಡುಬಂದಿರುತ್ತದೆ. 2007–08ನೇ ಸಾಲಿನಿಂದ ತಹಲ್‌ವರೆವಿಗೂ ನಡೆದ ಲೆಕ್ಕ ಪರಿಶೋಧನಾ ಆಕ್ಷೇಪಣಾ ವರದಿಗಳಿಗೆ ಸೂಕ್ತ ಉತ್ತರ ನೀಡಿ ಆಕ್ಷೇಪಿಸಿದ ಮೊತ್ತವನ್ನು ವಸೂಲಾತಿ ಮಾಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದು ಕೂಡಲೇ ಈ ಬಗ್ಗೆ ಕ್ರಮಕೈಗೊಂಡು ವರದಿ ಸಲ್ಲಿಸುವಂತೆ ಜಂಟಿ ಆಯುಕ್ತರಿಗೆ ಸೂಸಿಸಲಾಯಿತು. ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರುಗಳು ತಮ್ಮ ತಮ್ಮ ವ್ಯಾಪ್ತಿಯ ನಕ್ಷೆ ಮಂಜೂರಾತಿ ಬಗ್ಗೆ ವಿವರಗಳನ್ನು ನೀಡಲು ಪೂರ್ಣವಾಗಿ ವಿಫಲರಾಗಿದ್ದು, ಇವರುಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕಾಗುತ್ತದೆ. ಹಾಲಿ ಕಛೇರಿಯಲ್ಲಿ 3 ವರ್ಷಗಳಿಗೂ ಅಧಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಮರ್ಪಕ ಮಾಹಿತಿ ನೀಡುವಲ್ಲಿ ಸಹ ಅಧಿಕಾರಿಗಳು ವಿಫಲರಾಗಿರುತ್ತಾರೆ.

ಯೋಜನೆ ವಿಭಾಗದ ಕಾರ್ಯಪಾಲಕ ಅಭಿಯಂತರರು ಈ ವಲಯ ವ್ಯಾಪ್ತಿಯ ಹಾಗೂ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಅಗಲೀಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಲವಾರು ರಸ್ತೆಗಳ ಅಗಲೀಕರಣ ಮುಕ್ತಾಯಗೊಂಡಿದ್ದು, ಬಿ.ಬಿ.ಎಂ.ಪಿ ವ್ಯಾಪ್ತಿಗೊಳಪಡದ ಕೆಲವು ಸ್ವತ್ತುಗಳನ್ನು ರಸ್ತೆ ಅಗಲೀಕರಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿದ್ದು, ಸದರಿ ಸ್ವತ್ತುಗಳಿಗೆ ಪರಿಹಾರ ನೀಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದಿಂದ ಅನುಮೋದನೆ ದೊರೆತ ನಂತರ ಸ್ವಾಧೀನ ಪಡಿಸಿಕೊಂಡ ಸ್ವತ್ತುಗಳಿಗೆ ಪರಿಹಾರ ನೀಡಲಾಗುವುದೆಂದು ಸಮಿತಿಗೆ ತಿಳಿಸಿದರು. ಆದರೆ ಪಾಲಿಕೆ ವ್ಯಾಪ್ತಿಗೆ ಬಾರದ ಆಸ್ತಿಗಳನ್ನು ರಸ್ತೆ ಅಗಲೀಕರಣಕ್ಕಾಗಿ ವಶಪಡಿಸಿಕೊಂಡಿದ್ದು ತಹಲ್‌ವರೆವಿಗೂ ಭೂಮಾಲೀಕರಿಗೆ ಪರಿಹಾರ ಧನ ನೀಡದೇ ಇರುವುದರಿಂದ ಅವರುಗಳು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದು, ಕೂಡಲೇ ಸದರಿ ಭೂಮಾಲೀಕರಿಗೆ ಪರಿಹಾರ ಧನ ನೀಡುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿದ್ದು ಈ ಬಗ್ಗೆ ತುರ್ತು ಕ್ರಮಕೈಗೊಳ್ಳತಕ್ಕದೆಂದು ಸಮಿತಿಯು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು.

ಸದರಿ ವಲಯದಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನದ ನಾಲ್ಕನೇ ದರ್ಜೆ ನೌಕರರುಗಳು ಕಂದಾಯ ವಸೂಲಿಗಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರುಗಳು ಹಣ ದುರಪಯೋಗ ಪಡಿಸಿಕೊಂಡ ಪಕ್ಷದಲ್ಲಿ ಅವರುಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಸಾಧ್ಯವಿಲ್ಲದಿರುವುದರಿಂದ ಕೂಡಲೇ ಸದರಿ ಸ್ಥಳದಿಂದ ಅವರುಗಳುನ್ನು ತೆರವುಗೊಳಿಸಿ ಅವರ ಮೂಲ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಿ ಪಾಲಿಕೆಯ ಅಧಿಕೃತ ತೆರಿಗೆ ವಸೂಲಿಗಾರರನ್ನು ನೇಮಿಸತಕ್ಕದೆಂದು ಸಮಿತಿಯು ಕಟ್ಟುನಿಟ್ಟಾಗಿ ಆದೇಶಿಸುತ್ತದೆ. ಒಂದು ಪಕ್ಷ ಈ ಆದೇಶವನ್ನು ಪಾಲಿಸದಿದ್ದಲ್ಲಿ ಸದರಿ ನೌಕರರುಗಳಿಂದ ಕರ್ತವ್ಯ ಲೋಪ ಉಂಟಾದ ಪಕ್ಷದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳನ್ನೇ ನೇರ ಜವಾಬ್ದಾರನ್ನಾಗಿ ಮಾಡಲಾಗುವುದು ಈ ಬಗ್ಗೆ ಬಟವಾಡೆ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

ಸದರಿ ವಲಯದಲ್ಲಿ ಬೀದಿ ನಾಯಿಗಳಿಂದ ಕಚ್ಚಿಸಿಕೊಳ್ಳವರಿಗೆ ನೀಡುವ ಆಂಟಿ ರೇಬೀಸ್ ಚುಚ್ಚುಮದ್ದುಗಳನ್ನು ಸಂಗ್ರಹಿಸಲಾಗಿದ್ದು, ಈ ಚುಚ್ಚುಮದ್ದುಗಳ ಅವಧಿಯು ಕೇವಲ ಒಂದು ವರ್ಷಗಳಾಗಿದ್ದು, ಒಂದು ವರ್ಷಗಳ ಅವಧಿ ನಂತರ ಈ ಔಷಧಿಗಳ ವಾಯಿದೆಯು ಪೂರ್ಣಗೊಂಡು ಸದರಿ ಔಷಧಿಗಳು ನಿಶ್ಕ್ರಿಯಗೊಳ್ಳುವುದರಿಂದ ಇವುಗಳ ಸಂಗ್ರಹಿಸಿಡುವ ಬದಲು ನಾಯಿ ಕಚ್ಚಿದ ತಕ್ಷಣ ಔಷಧಿ ಅಂಗಡಿಯಿಂದ ಖರೀದಿಸಿ ನೀಡುವ ಕ್ರಮವನ್ನು ಜಾರಿಗೊಳಿಸಿದ ಪಕ್ಷದಲ್ಲಿ ಪಾಲಿಕೆಗೆ ಆರ್ಥಿಕವಾಗಿ ಹೆಚ್ಚಿನ ಉಳಿತಾಯವಾಗುವುದೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

ಈ ವಲಯಲದಲ್ಲಿರುವ ಕೆರೆಗಳ ಅಭಿವೃದ್ಧಿ ಕುರಿತಂತೆ ಇನ್ನು ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿದಲ್ಲಿ ಕೆರೆ ಸಂರಕ್ಷಿಸುವಲ್ಲಿ ಫಲಪ್ರದವಾಗುವುದರಲ್ಲಿ ಸಂಶಯವಿಲ್ಲವೆಂಬ ಅಂಶವನ್ನು ಸಮಿತಿಯು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತದೆ. ಈ ವಲಯದಲ್ಲಿ 8 ಬೃಹತ್ ರಸ್ತೆಗಳು ಇದ್ದು, ಇವುಗಳನ್ನು ಅಗಲೀಕರಣ ಮಾಡುವ ಸಂದರ್ಭದಲ್ಲಿ ರಸ್ತೆಗಳ ಮಧ್ಯದಲ್ಲಿ ಇದ್ದದಂತಹ ವಿದ್ಯುತ್ ಕಂಬಗಳನ್ನು ತೆರವುಗೊಳಿಸದೆ ಇದ್ದು ಈ ರಸ್ತೆಗಳ ವಿಸ್ತಾರಣೆಗಾಗಿ ಕೋಟ್ಯಾಂತರ ರೂಗಳು ವೆಚ್ಚವಾಗಿದ್ದು, ರಸ್ತೆ ಮಧ್ಯೆ ವಿದ್ಯುತ್ ಕಂಬಗಳು ಇರುವುದರಿಂದ ಸಾರ್ವಜನಿಕರು ಸುಗಮವಾಗಿ ಈ ರಸ್ತೆಗಳನ್ನು ಉಪಯೋಗಿಸಲು ಸಾಧ್ಯವಿಲ್ಲದೇ ಇದ್ದು ಕೂಡಲೇ ಸಂಬಂಧಪಟ್ಟ ಅಭಿಯಂತರರುಗಳು ರಸ್ತೆ ಮಧ್ಯದಲ್ಲಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳತಕ್ಕದ್ದು.

ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ವಿವರಣೆ ಕುರಿತಂತೆ Schedule of Establishment ಬಗೆಗಿನ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಈ ರೀತಿಯ ಹೆಚ್ಚುವರಿ ವೇತನವನ್ನು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಾವತಿಸಲಾಗುತ್ತಿದೆ ಎಂಬ ಬಗ್ಗೆ ವರದಿ ನೀಡುವುದು.

ಅತಿ ಮುಖ್ಯವಾಗಿ ಅಧಿಕಾರಿಗಳು ತಮಗೆ ವಾಹನ ಸೌಲಭ್ಯಗಳನ್ನು ಹಿಂಪಡೆದಿರುವುದರಿಂದ ಕಛೇರಿ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ ಕೂಡಲೇ ಈ ಹಿಂದೆ ನೀಡಿದಂತೆ ವಾಹನ ಸೌಲಭ್ಯ ನೀಡಿದ್ದಲ್ಲಿ ಇನ್ನೂ ಹೆಚ್ಚಿನ ಶ್ರದ್ದೆಯಿಂದ ಕಛೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಸೂಕ್ತಕ್ರಮಕೈಗೊಳ್ಳಲು ಆಯುಕ್ತರಿಗೆ ಸೂಚಿಸಲಾಗುವುದು. ಒಟ್ಟಾರೆ ಈ ವಲಯ ಕಛೇರಿಯಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಂಡು ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಆಡಳಿತದಲ್ಲಿ ಸುಧಾರಣೆ ಕಾಣಬಹುದೆಂದು ಅಭಿಪ್ರಾಯಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಅಧ್ಯಕ್ಷರು**
**ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
5. ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಜಂಟಿ ಆಯುಕ್ತರು (ಯಲಹಂಕ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
7. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ಹೊರಡಿಸಲು ಸೂಚಿಸಿದೆ.
8. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 12-09-2011 ರಂದು ದಾಸರಹಳ್ಳಿ ವಲಯ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಹೆಚ್. ಆರ್ ಕೃಷ್ಣಪ್ಪ | - ಅಧ್ಯಕ್ಷರು | ಉಪ ಆಯುಕ್ತರು |
| 2. ಎಂ.ಇ. ಪಿಳ್ಳಪ್ಪ | - ಸದಸ್ಯರು | ಕಾರ್ಯಪಾಲಕ ಅಭಿಯಂತರರುಗಳು |
| 3. ಮುನಿಸ್ವಾಮಿಗೌಡ | - ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| 4. ಎ.ವಿಜಯ ರಮೇಶ್ | - ಸದಸ್ಯರು | ಸಹಾಯಕ ಕಂದಾಯ ಅಧಿಕಾರಿಗಳು |
| 5. ಲಲಿತ ಮುಕುಂದರಾವ್ | - ಸದಸ್ಯರು | ಸಹಾಯಕ ನಿಯಂತ್ರಕರು (ಹಣಕಾಸು) |
| 6. ವೀಣಾ ನಾಗರಾಜ್ | - ಸದಸ್ಯರು | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು |
| 7. ಎಸ್.ಎಂ ಮುರುಗೇಶ್ | | ಸಹಾಯಕ ನಿರ್ದೇಶಕರು (ನಗರ ಯೋಜನೆ) |
| ಮುದಲಿಯಾರ್ | -ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 8. ಫೌಜಿಯಾ ಬೇಗಂ | - ಸದಸ್ಯರು | ವಿಶೇಷ ಅಧಿಕಾರಿಗಳು |
| | | ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ |

ಉಪ ಆಯುಕ್ತರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ತಮ್ಮ ವಲಯ ಕಛೇರಿ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ. ಇಂದಿನ ಸಭೆ ಕುರಿತಂತೆ ಜಂಟಿ ಆಯುಕ್ತರವರಿಗೆ ಸಭೆಯ ತಿಳುವಳಿಕೆ ಪತ್ರವನ್ನು ದಿನಾಂಕ: 08-09-2011 ರಂದು ಅವರ ಕಛೇರಿಗೆ ಕಳುಹಿಸಿದ್ದು ಸದರಿ ಸಭೆಯ ತಿಳುವಳಿಕೆ ಪತ್ರವು ಸ್ವೀಕೃತವಾಗಿದ್ದರೂ ಸಹ ಜಂಟಿ ಆಯುಕ್ತರವರು ದಿನಾಂಕ: 12-09-2011 ಯಾತ್ರೆಯೊಂದಕ್ಕೆ ಹೋಗುವುದಾಗಿ ತಿಳಿಸಿ ರಜೆ ಅರ್ಜಿಯನ್ನು ಹಿರಿಯ ಅಧಿಕಾರಿಗಳಿಗೆ ಕಳುಹಿಸಿ ರಜೆ ಮಂಜೂರಾತಿ ಆಗದಿದ್ದರೂ ಸಹ ಕೇಂದ್ರ ಸ್ಥಾನವನ್ನು ಬಿಟ್ಟು ಹೋಗಿರುವುದು ನಿಯಾಮಾನುಸಾರ ಹಿರಿಯ ಅಧಿಕಾರಿಯೊಬ್ಬರ ಸಲ್ಲದ ಕಾರ್ಯವಾಗಿರುತ್ತದೆ, ಇದು ಸಮಿತಿಗೆ ಅಸಮಾಧಾನವನ್ನು ಉಂಟು ಮಾಡಿರುತ್ತದೆ.

ಈ ವಲಯ ಕಛೇರಿಯಲ್ಲಿ ಸಭೆಯ ಸಂದರ್ಭದಲ್ಲಿ ಹಾಜರಿದ್ದಂತಹ ಯಾವೊಬ್ಬ ಅಧಿಕಾರಿ/ಸಿಬ್ಬಂದಿವರ್ಗದವರು ಗುರುತಿನ ಚೀಟಿಯನ್ನು ಧರಿಸದೇ ಇರುವುದು ಕಂಡುಬಂದಿದ್ದು, ಈ ಬಗ್ಗೆ ಕೇಳಲಾಗಿ ಸದರಿ ಅಧಿಕಾರಿಗಳು ಅಸಮಪರ್ಕವಾದ ವಿವರಣೆಯನ್ನು ನೀಡಿದ್ದು ಇದು ಇವರುಗಳ ಕರ್ತವ್ಯಲೋಪವನ್ನು ಎತ್ತಿ ತೋರಿಸುತ್ತದೆ.

ಸಭೆಯ ಬಗ್ಗೆ ತಿಳುವಳಿಕೆ ಇದ್ದರೂ ಸಹ ಉಪ ಆರೋಗ್ಯ ಅಧಿಕಾರಿಗಳು, ಕಲ್ಯಾಣಾಧಿಕಾರಿಗಳು, ತೋಟಗಾರಿಕೆ ಅಧೀಕ್ಷಕರು, ಕಂದಾಯ ಅಧಿಕಾರಿಗಳು ಯಾವುದೇ ವಿವರಣೆ ನೀಡದೇ ಗೈರು ಹಾಜರಿ ಆಗಿರುವುದು ಕಂಡುಬಂದಿದ್ದು, ಈ ಬಗ್ಗೆ ಉಪ ಆಯುಕ್ತರು ವಿವರಣೆ ನೀಡಲು ಅಸಮರ್ಥರಾಗಿರುತ್ತಾರೆ.

ಈ ಕಛೇರಿಯಲ್ಲಿ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಅವರುಗಳ ಹೇಳಿಕೆ ರೀತ್ಯಾವೇ ಈ ವಲಯ ಕಛೇರಿಯಲ್ಲಿ ಹೆಚ್ಚುವರಿಯಾಗಿರುವ

ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಬಹುದೆಂದು ತಿಳಿಸಿರುತ್ತಾರೆ. 104 ಜನ ನೀರು ಸರಬರಾಜುಗಾರು ಕಾರ್ಯನಿರ್ವಹಿಸುತ್ತಿದ್ದು, ಈ ವಲಯದಲ್ಲಿರುವ 8 ವಾರ್ಡ್‌ಗಳಿಗೆ ಇವರ ಸಂಖ್ಯೆಯ ಹೆಚ್ಚಿನದಾಗಿದ್ದು, ಕೂಡಲೇ ಅವಶ್ಯವಿದ್ದಷ್ಟು ಸಿಬ್ಬಂದಿಗಳನ್ನು ಉಳಿಸಿಕೊಂಡು ಹೆಚ್ಚುವರಿ ಸಿಬ್ಬಂದಿಗಳನ್ನು ಅವಶ್ಯವಿರುವ ಇತರೇ ವಲಯ ಕಛೇರಿಗಳಿಗೆ ನಿಯೋಜಿಸಬಹುದಾಗಿದೆ ಎಂದು ಸಮಿತಿಯು ಅಭಿಪ್ರಾಯಿಸುತ್ತದೆ.

ಸಭೆಗೆ ತಡವಾಗಿ ಆಗಮಿಸಿದ ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರು ಅಪ್ರಬುದ್ದವಾದ ಹೇಳಿಕೆಯೊಂದನ್ನು ನೀಡಿ ಸಭೆಗೆ ಮುಜುಗರವನ್ನು ಉಂಟು ಮಾಡಿರುತ್ತಾರೆ ಕೂಡಲೇ ಇವರಿಗೆ ತೀವ್ರತರವಾದ ಎಚ್ಚರಿಕೆಯನ್ನು ನೀಡಿ ಇನ್ನು ಮುಂದೆ ಇಂತಹ ಹೇಳಿಕೆಯನ್ನು ನೀಡತಕ್ಕದಲ್ಲವೆಂದು ತಿಳಿಸುವುದು. ವಲಯದ ಕಾರ್ಯಪಾಲಕ ಅಭಿಯಂತರರುಗಳು ತಮ್ಮ ವಲಯ ವ್ಯಾಪ್ತಿಯಲ್ಲಿ ಅನುಷ್ಠಾನದಲ್ಲಿರುವ ಕಾಮಗಾರಿಗಳ ಬಗ್ಗೆ ವಿವರಣೆಯನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ. ಈ ವಲಯ ಕಛೇರಿಯಲ್ಲಿ ಅನಧಿಕೃತ ಕಟ್ಟಡಗಳ ನಿರ್ವಹಣೆಯ ಬಗ್ಗೆ ಯಾವುದೇ ವಿಧವಾದ ಕ್ರಮಜರುಗಿಸದೇ ಇರುವುದು ಸಹ ಕಂಡುಬಂದಿದ್ದು, ಅಧಿಕಾರಿಗಳು ವಿವರಣೆ ನೀಡಲು ಅಸಮರ್ಥರಾಗಿರುತ್ತಾರೆ. ಸಭೆಯಲ್ಲಿನ ಚರ್ಚೆಯ ಸಂದರ್ಭದಲ್ಲಿ ಹಾಲಿ ಈ ವಲಯದಲ್ಲಿ ಪಾಲಿಕೆ ಕಛೇರಿ ಮುಂದೆ ಸುಮಾರು ಸಂಖ್ಯೆಯಲ್ಲಿ ನೀರಿನ ವಾಹನಗಳು ಉಪಯೋಗಿಸಿದೇ ಇದ್ದು, ಈ ವಾಹನಗಳಿಗೆ ಚಾಲಕರು ಇಲ್ಲದೇ ಇರುವ ಕಾರಣ ಇವುಗಳನ್ನು ಉಪಯೋಗಿಸುತ್ತಿಲ್ಲವೆಂದು ತಿಳಿಸಿದ್ದು, ಸದರಿ ನೀರಿನ ವಾಹನಗಳನ್ನು ಉಪಯೋಗಿಸಲು ಸೂಚಿಸಲಾಯಿತು.

ಘನತ್ಯಾಜ್ಯ ವಸ್ತು ನಿರ್ವಹಣೆ ಕುರಿತಂತೆ ಸಾಕಷ್ಟು ದೂರುಗಳು ಇದ್ದು ಸಭೆಯಲ್ಲಿ ಈ ವಲಯಕ್ಕೆ ಸಂಬಂಧಪಟ್ಟ ಸದಸ್ಯರುಗಳಾದ ಶ್ರೀ ಚಂದ್ರಶೇಖರ್, ಶ್ರೀಮತಿ ಆರ್.ಪಿ ಶಶಿ, ಶ್ರೀಮತಿ ಪುಟ್ಟಮ್ಮ ರವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ಸ್ವಚ್ಛತೆ ಹಾಗೂ ಕುಡಿಯುವ ನೀರಿನ ಬಗ್ಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಈ ವಲಯದಲ್ಲಿ ಸಂಗ್ರಹವಾಗುವ ಘನತ್ಯಾಜ್ಯ ವಸ್ತುವನ್ನು ಕುಂಬಳಗೂಡು ಪ್ರದೇಶಕ್ಕೆ ಸಾಗಿಸುತ್ತಿದ್ದು, ಈ ವಲಯದಿಂದ ಮೇಲ್ಕಂಡ ಘನತ್ಯಾಜ್ಯ ವಸ್ತು ಸಂಗ್ರಹಿಸುವ ಸ್ಥಳವು ಸುಮಾರು 45 ಕಿ.ಮೀ ನಷ್ಟು ದೂರವಿದ್ದು ಈ ಬದಲಿಗೆ ಈ ವಲಯಕ್ಕೆ ಸಮೀಪವಿರುವ ಮಾವಳ್ಳಿಪುರ ಘನತ್ಯಾಜ್ಯ ಸಂಗ್ರಹಣೆ ಸ್ಥಳಕ್ಕೆ ಸಾಗಿಸಿದ್ದಲ್ಲಿ ಸುಮಾರು 20 ಕಿ.ಮೀ ಗಳಷ್ಟು ಸಮೀಪವಾಗುವುದನ್ನು ಅಧಿಕಾರಿಗಳು ಗಮನಿಸುವುದು ಸೂಕ್ತವೆಂದು ಸಮಿತಿಯು ಈ ಸಂಧರ್ಬದಲ್ಲಿ ತಿಳಿಸುತ್ತದೆ.

ಈ ವಲಯದಲ್ಲಿನ ಪಶುಸಂಗೋಪನೆ ಇಲಾಖೆ ಅಧಿಕಾರಿಗಳು ಬೀದಿ ನಾಯಿಗಳ ನಿಯಂತ್ರಣ ಕುರಿತಂತೆ ಸಮರ್ಪಕವಾದ ರೀತಿಯಲ್ಲಿ ವಿವರಣೆ ನೀಡಲು ವಿಫಲರಾಗಿರುತ್ತಾರೆ. ಈ ವಲಯ ಕಛೇರಿಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಕಂದಾಯ ವಸೂಲಾತಿ ಕುರಿತಂತೆ ಸಮರ್ಪಕವಾದ ರೀತಿಯಲ್ಲಿ ಕಾರ್ಯನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ಸಭೆಯಲ್ಲಿ ಹಾಜರಿದ್ದಂತಹ ಸಹ ಕಂದಾಯ ಅಧಿಕಾರಿಗಳು ಬಾಕಿ ಇರುವ ಕಂದಾಯ ವಸೂಲಾತಿ ಬಗ್ಗೆ ತೀವ್ರತರನಾದ ಕ್ರಮ ಜರುಗಿಸದೇ ಇರುವುದರಿಂದ ಸಾಕಷ್ಟು ಮೊತ್ತ ಆಸ್ತಿ ತೆರಿಗೆ ಬಾಕಿ ಇದ್ದು ಈ ನಿಟ್ಟಿನಲ್ಲಿ ಜಂಟಿ ಆಯುಕ್ತರಾಗಲಿ, ಉಪ ಆಯುಕ್ತರಾಗಲಿ ತಮ್ಮ ಅಧೀನ ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವಲ್ಲಿ ವಿಫಲರಾಗಿರುತ್ತಾರೆ. ಅತೀ ಸ್ವಾರಸ್ಯಕರವಾದ ಸಂಗತಿಯೆಂದರೆ ಶ್ರೀಮತಿ ಲೋಕಮಾತಾ, ವ್ಯವಸ್ಥಾಪಕರು ರವರು ಪ್ರಭಾರದ ಮೇಲೆ ಸಹ ಕಂದಾಯ ಅಧಿಕಾರಿ (ಜಾಹೀರಾತು) (ಶೆಟ್ಟಿಹಳ್ಳಿ) ಹಾಗೂ (ದಾಸರಹಳ್ಳಿ) ಈ ಮೂರು ಕಛೇರಿಯಲ್ಲಿ

ಸ್ವಾರಸ್ಯಕರವಾದ ಸಂಗತಿಯೆಂದರೆ ಶ್ರೀಮತಿ ಲೋಕಮಾತಾ, ವ್ಯವಸ್ಥಾಪಕರು ರವರು ಪ್ರಭಾರದ ಮೇಲೆ ಸಹ ಕಂದಾಯ ಅಧಿಕಾರಿ (ಜಾಹೀರಾತು) (ಶೆಟ್ಟಿಹಳ್ಳಿ) ಹಾಗೂ (ದಾಸರಹಳ್ಳಿ) ಈ ಮೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಕಂದಾಯ ವಸೂಲಾತಿ ಕಾರ್ಯವು ಸಮರ್ಪಕವಾಗಿ ನಡೆಯದೇ ಇರುವುದು ಕಂಡುಬಂದಿರುತ್ತದೆ. ಸಭೆಯ ಸಂದರ್ಭದಲ್ಲಿ ಶ್ರೀ ಚಂದ್ರಶೇಖರ್, ಸದಸ್ಯರು ವಾರ್ಡ್-14 ರವರು ಪಾಲಿಕೆಯ ಸ್ವತ್ತೊಂದನ್ನು ಸಾರ್ವಜನಿಕರೊಬ್ಬರು ಖಾಸಗೀ ಬಡಾವಣೆಯನ್ನಾಗಿ ನಿರ್ಮಿಸಿ ನಿವೇಶನಗಳನ್ನಾಗಿ ಹಂಚಿಕೆ ಮಾಡುತ್ತಿದ್ದು (ಸೌಂದರ್ಯ ಲೇಔಟ್) ಈ ಬಗ್ಗೆ ವಲಯದ ಕಂದಾಯ ಅಧಿಕಾರಿಗಳು ಗಮನ ಹರಿಸದೇ ಇದ್ದು, ಇದರಿಂದಾಗಿ ಕೋಟ್ಯಾಂತರ ರೂಗಳ ಪಾಲಿಕೆಯ ಸ್ವತ್ತು ದುರ್ವಿನಿಯೋಗವಾಗಿರುತ್ತದೆ. ಈ ನಿಟ್ಟಿನಲ್ಲಿ ಕೂಡಲೇ ಮೇಲ್ಕಂಡ ಮೂರು ವಿಭಾಗಗಳ ಪೈಕಿ ಯಾವುದಾದರೂ ಒಂದು ವಿಭಾಗಕ್ಕೆ ಶ್ರೀಮತಿ ಲೋಕಮಾತಾ ರವರನ್ನು ನೇಮಿಸಿ ಉಳಿದ ಎರಡು ಉಪವಿಭಾಗಗಳಿಗೆ ಸಹ ಕಂಧಾಯ ಅಧಿಕಾರಿ ಕಛೇರಿಗಳಲ್ಲಿನ ಸೇವಾ ಹಿರಿಯರಾದ ಸಿಬ್ಬಂದಿವರ್ಗದವರನ್ನು ಸಹ ಕಂದಾಯ ಅಧಿಕಾರಿಗಳಾಗಿ ಪ್ರಭಾರದ ಮೇಲೆ ನೇಮಿಸಲು ಕ್ರಮಕೈಗೊಳ್ಳತಕ್ಕದ್ದು. ಈ ವಲಯದ ಸಹ ಕಂದಾಯ ಅಧಿಕಾರಿಗಳ ಕಛೇರಿಗಳಲ್ಲಿ ನಾಲ್ಕನೇ ದರ್ಜೆ ನೌಕರರು/ಸಮಾನ ಕೆಲಸಕ್ಕೆ ಸಮಾನ ವೇತನದ ಸಿಬ್ಬಂದಿಗಳನ್ನು ಕಂದಾಯ ವಸೂಲಾತಿ ಕಾರ್ಯಗಳಿಗೆ ನೇಮಿಸಿರುವುದು ನಿಯಾಮಾಬಾಹಿರ ಕ್ರಮವಾಗಿದ್ದು ಕೂಡಲೇ ಇದನ್ನು ಸರಿ ಪಡಿಸಲು ಕ್ರಮಕೈಗೊಳ್ಳತಕ್ಕದ್ದು.

ಈ ವಲಯದಲ್ಲಿ ಮಳೆ ನೀರಿನ ಸಂಗ್ರಹಣೆ ಕುರಿತಂತೆ ಯಾವುದೇ ವಿಧವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಧಿಕಾರಿಗಳು ವಿಫಲರಾಗಿದ್ದು, ಈ ಬಗ್ಗೆ ಉಪ ಆಯುಕ್ತರಾಗಲಿ, ಜಂಟಿ ಆಯುಕ್ತರಾಗಲಿ ನಿಗವಹಿಸದೇ ಇರುವುದು ಶೋಚನೀಯ.

ಒಟ್ಟಾರೆ ಈ ವಲಯ ಕಛೇರಿಯಲ್ಲಿನ ಹಲವಾರು ನ್ಯೂನತೆಗಳನ್ನು ಕಂಡುಬಂದಿದ್ದು, ಈ ನ್ಯೂನತೆಗಳನ್ನು ಸರಿಪಡಿಸಿಕೊಂಡು ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರು ಪಾಲಿಕೆಯ ಬಗ್ಗೆ ಸಾರ್ವಜನಕರಲ್ಲಿ ಗೌರವಯುತ ಭಾವನೆ ತರುವ ನಿಟ್ಟಿನಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಆಡಳಿತದಲ್ಲಿ ಸುಧಾರಣೆ ಕಾಣಬಹುದೆಂದು ಅಭಿಪ್ರಾಯಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

O/C.

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
5. ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಜಂಟಿ ಆಯುಕ್ತರು (ದಾಸರಹಳ್ಳಿ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
7. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ಹೊರಡಿಸಲು ಸೂಚಿಸಿದೆ.
8. ಕಛೇರಿ ಪ್ರತಿ

13/9/11 13/9/11 13/9/11 13/9/11 13/9

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 26-09-2011 ರಂದು ಬೊಮ್ಮನಹಳ್ಳಿ ವಲಯ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್.ಆರ್. ಕೃಷ್ಣಪ್ಪ – ಅಧ್ಯಕ್ಷರು
2. ವೀಣಾ ನಾಗರಾಜ್ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಎ. ವಿಜಯ ರಮೇಶ್ –ಸದಸ್ಯರು
5. ವೈ.ಆರ್. ಗೌರಮ್ಮ –ಸದಸ್ಯರು
6. ಎಸ್.ಎಂ ಮುರುಗೇಶ್ ಮುದಲಿಯಾರ್ –ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಜಂಟಿ ಆಯುಕ್ತರು
ಉಪ ಆಯುಕ್ತರು
ಮುಖ್ಯ ಅಭಿಯಂತರರುಗಳು
ಕಾರ್ಯಪಾಲಕ ಅಭಿಯಂತರರುಗಳು
ಸಹಾಯಕ ನಿಯಂತ್ರಕರು (ಹಣಕಾಸು)
ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು
ಕಂದಾಯ ಅಧಿಕಾರಿಗಳು
ಸಹಾಯಕ ಕಂದಾಯ ಅಧಿಕಾರಿಗಳು
ಸಹಾಯಕ ನಿರ್ದೇಶಕರು (ಪಶುಪಾಲನೆ)
ಸಹಾಯಕ ನಿರ್ದೇಶಕರು (ನಗರ ಯೋಜನೆ)
ಅರಣ್ಯಾಧಿಕಾರಿಗಳು

ಜಂಟಿ ಆಯುಕ್ತರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸ್ಥಾಯಿ ಸಮಿತಿಯ ಸದಸ್ಯರುಗಳು ಸದರಿ ವಲಯಕ್ಕೆ ಸಂಬಂಧಪಟ್ಟ ವಾರ್ಡ್‌ಗಳ ಸದಸ್ಯರುಗಳು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ತಮ್ಮ ವಲಯ ಕಛೇರಿ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

ಪ್ರಥಮವಾಗಿ ಕಂದಾಯ ಇಲಾಖೆಯ ಅಧಿಕಾರಿಗಳ ಕುಂದುಕೊರತೆಗಳನ್ನು ಕೇಳಲಾಗಿ ಅವರುಗಳು ಸಿಬ್ಬಂದಿಗಳ ಕೊರತೆಯಿಂದಾಗಿ ದೈನಂದಿನ ಕಛೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಅಡಚಣೆ ಉಂಟಾಗಿರುವುದಾಗಿ ತಿಳಿಸಿದ್ದು, ಈ ವಲಯ ಕಛೇರಿಯ ಕಂದಾಯ ಇಲಾಖೆಗಳಿಗೆ ವ್ಯವಸ್ಥಾಪಕರು, ಗುಮಾಸ್ತರುಗಳು ಹಾಗೂ ಪತ್ರ ರವಾನೆಗಾರರನ್ನು ನೇಮಿಸಿಕೊಟ್ಟಲ್ಲಿ ಇನ್ನು ಹೆಚ್ಚಿನ ಶ್ರದ್ದೆ ವಹಿಸಿ ಕೆಲಸಕಾರ್ಯ ನಿರ್ವಹಿಸುವುದಲ್ಲದೇ ಕಂದಾಯ ವಸೂಲಿ ಮಾಡುವುದರಲ್ಲಿ ಸಹ ಅನುಕೂಲವಾಗುವುದೆಂಬ ಅಂಶವನ್ನು ತಿಳಿಸಿರುತ್ತಾರೆ. ಈ ಸಂಬಂಧ ಜಂಟಿ ಆಯುಕ್ತರಿಗೆ ಸೂಕ್ತ ಆದೇಶವನ್ನು ನೀಡಿ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ತ್ವರಿತವಾಗಿ ತುಂಬಲು ಆದೇಶಿಸಲಾಗಿರುತ್ತದೆ.

ಈ ವಲಯ ವ್ಯಾಪ್ತಿಯಲ್ಲಿ ಪಾಲಿಕೆಗೆ ಸೇರಿದ್ದಂತಹ ಹಲವಾರು ಸ್ವತ್ತುಗಳು ಇದ್ದು ಇವುಗಳನ್ನು ಗುರುತಿಸಿ ಸಂರಕ್ಷಿಸುವ ಬಗ್ಗೆ ಅಧಿಕಾರಿಗಳು ಗಮನಹರಿಸದೇ ಇದ್ದು ಕೂಡಲೇ ಪಾಲಿಕೆಗೆ ಸೇರಿರುವ ಆಸ್ತಿಗಳನ್ನು ಗುರುತಿಸಿ ಅವುಗಳನ್ನು ಸಂರಕ್ಷಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

ಈ ವಲಯ ವ್ಯಾಪ್ತಿಗೆ ಒಳಪಡುವ ಸಹಾಯಕ ಕಂದಾಯ ಅಧಿಕಾರಿಗಳು ಕಂದಾಯ ವಸೂಲಿ ಮಾಡುವಲ್ಲಿ ಕ್ರಮವಹಿಸದೇ ಇದ್ದು ಇದರಿಂದಾಗಿ ಕಂದಾಯ ವಸೂಲಾತಿಯಲ್ಲಿ ಹಿನ್ನಡೆ ಹೊಂದಿರುವುದರಿಂದ ಕೂಡಲೇ ಜಂಟಿ ಆಯುಕ್ತರು ಗಮನ ಹರಿಸಿ ಕಂದಾಯ ವಸೂಲಾತಿಯಲ್ಲಿ ಉಂಟಾಗಿರುವ ತೊಡಕುಗಳನ್ನು ನಿವಾರಿಸಲು ಸೂಚಿಸಲಾಯಿತು. ವಲಯ ವ್ಯಾಪ್ತಿಯಲ್ಲಿ ಕಂದಾಯ

ಪಾವತಿಯಿಂದ ತಪ್ಪಿಸಿಕೊಂಡಿರುವ ಆಸ್ತಿಗಳನ್ನು ಗುರುತಿಸಿ ಅವರುಗಳಿಂದಲೂ ಸಹ ಕಂದಾಯ ವಸೂಲಿ ಮಾಡಲು ಆದ್ಯ ಗಮನವನ್ನು ಹರಿಸಲು ಸಹ ಈ ಸಂದರ್ಭದಲ್ಲಿ ಸೂಚಿಸಲಾಯಿತು. ಅಭಿವೃದ್ಧಿ ಶುಲ್ಕ ವಸೂಲಾತಿ ಮಾಡದೇ ಖಾತೆ ದಾಖಲಿಸಿರುವ ಬಗ್ಗೆ ಮಾಹಿತಿ ಕೊಡಲು ಹಾಜರಿದ್ದ ಕಂದಾಯ ಅಧಿಕಾರಿಗಳು ವಿಫಲರಾಗಿರುತ್ತಾರೆ. ಈ ಬಗೆಗೂ ಸಹ ಜಂಟಿ ಆಯುಕ್ತರವರಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

ಕಾಮಗಾರಿ ಇಲಾಖೆಯ ಅಧಿಕಾರಿಗಳಿಗೆ ಕಾಮಗಾರಿ ಪ್ರಗತಿ ಕುರಿತಂತೆ ಚರ್ಚಿಸಲಾಗಿ ವಿವಿಧ ಹಂತದಲ್ಲಿರುವ ಕಾಮಗಾರಿಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಹಾಗೂ ಪ್ರಗತಿ ಕಾರ್ಯದಲ್ಲಿ ವಿಳಂಬವಾಗಿರುವ ಬಗ್ಗೆ ವಿವರಿಸಲು ಅಭಿಯಂತರರುಗಳು ವಿಫಲರಾಗಿರುತ್ತಾರೆ. ಸಂಬಂಧಪಟ್ಟ ಅಭಿಯಂತರರುಗಳು ವಾರ್ಡ್‌ನ ಮಾನ್ಯ ಸದಸ್ಯರೊಂದಿಗೆ ಚರ್ಚಿಸಿ ಶೀಘ್ರವಾಗಿ ಕಾಮಗಾರಿಗಳ ಪ್ರಗತಿಯ ಬಗ್ಗೆ ಗಮನಹರಿಸಲು ಈ ಸಂದರ್ಭದಲ್ಲಿ ಸೂಚಿಸಲಾಯಿತು ಹಾಗೂ ವಾರ್ಡ್ ಮಟ್ಟದಲ್ಲಿ ಮುಂದಿನ ಅವಧಿಗಳಿಗೆ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿ ಕುರಿತಂತೆ ಮಾನ್ಯ ಶಾಸಕರು ಹಾಗೂ ಸದಸ್ಯರುಗಳ ಅಭಿಪ್ರಾಯವನ್ನು ಹಾಗೂ ಸಲಹೆಸೂಚನೆಗಳನ್ನು ತಪ್ಪದೇ ಪಡೆಯತಕ್ಕದ್ದೆಂದು ಸಹ ಈ ಸಂದರ್ಭದಲ್ಲಿ ಸೂಚಿಸಲಾಯಿತು. ಅತಿ ಮುಖ್ಯವಾಗಿ ರಸ್ತೆ ದುರಸ್ತಿ, ಕುಡಿಯುವ ನೀರಿನ ಸರಬರಾಜು ಹಾಗೂ ಒಳಚರಂಡಿಗಳ ದುರಸ್ತಿ ಕುರಿತಂತೆ ತೀವ್ರವಾಗಿ ಗಮನ ಹರಿಸಿ ಸಾರ್ವಜನಿಕರಿಗೆ ಉತ್ತಮವಾದ ಸೇವೆಯನ್ನು ಒದಗಿಸಲು ಸಹ ಸೂಚಿಸಲಾಯಿತು. ವಾರ್ಡ್‌ಗಳಿಗೆ ಹಂಚಿಕೆ ಮಾಡಿರುವ ಆಯವ್ಯಯ ಕುರಿತಂತೆ ಮಾನ್ಯ ಸದಸ್ಯರೊಂದಿಗೆ ವಿವರವಾಗಿ ಚರ್ಚಿಸಲು ಸಹ ಈ ಸಂದರ್ಬದಲ್ಲಿ ಸೂಚಿಸಲಾಯಿತು. ಅತಿ ಮುಖ್ಯವಾಗಿ ಬೀದಿ ದೀಪ ವಿಷಯಗಳಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ದೂರು ನೀಡುತ್ತಿದ್ದು, ಪಾಲಿಕೆಯಿಂದ ಈ ವಿಭಾಗಕ್ಕೆ ಸಾಕಷ್ಟು ಹೆಚ್ಚಿನ ಮೊತ್ತದಲ್ಲಿ ಆಯವ್ಯಯವನ್ನು ಒದಗಿಸಿದ್ದರೂ ಸಹ ಅಧಿಕಾರಿಗಳು ಸಮಗ್ರವಾದ ಯೋಜನೆಯನ್ನು ರೂಪಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ವಿಫಲರಾಗಿದ್ದು, ಕೂಡಲೇ ಪ್ರತಿ ದಿವಸ ಸಂಜೆ 6.30 ರ ನಂತರ ಸ್ಥಳ ಪರಿಶೀಲಿಸಿ ಅವಶ್ಯಕತೆ ಇರುವ ಸ್ಥಳಗಳಲ್ಲಿ ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸಲು ಕ್ರಮಕೈಗೊಳ್ಳಲು ಸಹ ಈ ಸಂದರ್ಭದಲ್ಲಿ ಸೂಚಿಸಲಾಯಿತು.

ವಲಯ ಅರಣ್ಯ ಅಧಿಕಾರಿಗಳು ಸಮರ್ಪಕವಾದ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ಉಪಸ್ಥಿತರಿದ್ದ ವಲಯದ ಎಲ್ಲಾ ಸದಸ್ಯರುಗಳು ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದ್ದು ಈ ಬಗೆಗೂ ಸಹ ಸೂಕ್ತ ಕ್ರಮಕೈಗೊಳ್ಳುವಂತೆ ಜಂಟಿ ಆಯುಕ್ತರಿಗೆ ಸೂಚಿಸಲಾಯಿತು. ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಫಲಾನುಭವಿಗಳಿಗೆ ಸೂಕ್ತ ಸಮಯದಲ್ಲಿ ಸಹಾಯ ದೊರಕದೇ ಇರುವುದು ಸಹ ಈ ಸಂದರ್ಭದಲ್ಲಿ ಕಂಡುಬಂದಿದ್ದು ಈ ಬಗೆಗೂ ಸಹ ತೀವ್ರತರವಾದ ಕ್ರಮಕೈಗೊಳ್ಳಬೇಕೆಂದು ಸೂಚಿಸಲಾಯಿತು.

ಈ ವಲಯ ವ್ಯಾಪ್ತಿಯಲ್ಲಿ ಇರುವ ಕೆರೆಗಳ ಸಂರಕ್ಷಣೆ ಕುರಿತಂತೆ ಮುಖ್ಯ ಕಛೇರಿಯ ಅಧಿಕಾರಿಗಳೊಂದಿಗೆ ಸಂಪರ್ಕವನ್ನು ಹೊಂದಿ ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಸ್ಪಂದಿಸತಕ್ಕದ್ದೆಂದು ಸಹ ಸೂಚಿಸಲಾಯಿತು.

ಸದರಿ ವಲಯದಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನದ ನಾಲ್ಕನೇ ದರ್ಜೆ ನೌಕರರುಗಳು ಕಂದಾಯ ವಸೂಲಿಗಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರುಗಳು ಹಣ ದುರಪಯೋಗ ಪಡಿಸಿಕೊಂಡ

ಪಕ್ಷದಲ್ಲಿ ಅವರುಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಸಾಧ್ಯವಿಲ್ಲದಿರುವುದರಿಂದ ಕೂಡಲೇ ಸದರಿ ಸ್ಥಳದಿಂದ ಅವರುಗಳುನ್ನು ತೆರವುಗೊಳಿಸಿ ಅವರ ಮೂಲ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಿ ಪಾಲಿಕೆಯ ಅಧಿಕೃತ ತೆರಿಗೆ ವಸೂಲಿಗಾರರನ್ನು ನೇಮಿಸತಕ್ಕದೆಂದು ಸಮಿತಿಯು ಕಟ್ಟುನಿಟ್ಟಾಗಿ ಆದೇಶಿಸುತ್ತದೆ. ಒಂದು ಪಕ್ಷ ಈ ಆದೇಶವನ್ನು ಪಾಲಿಸದಿದ್ದಲ್ಲಿ ಸದರಿ ನೌಕರರುಗಳಿಂದ ಕರ್ತವ್ಯ ಲೋಪ ಉಂಟಾದ ಪಕ್ಷದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳನ್ನೇ ನೇರ ಜವಾಬ್ದಾರನ್ನಾಗಿ ಮಾಡಲಾಗುವುದು ಈ ಬಗ್ಗೆ ಬಟವಾಡೆ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ವಿವರಣೆ ಕುರಿತಂತೆ Schedule of Establishment ಬಗೆಗಿನ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಈ ರೀತಿಯ ಹೆಚ್ಚುವರಿ ವೇತನವನ್ನು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಾವತಿಸಲಾಗುತ್ತಿದೆ ಎಂಬ ಬಗ್ಗೆ ವರದಿ ನೀಡುವುದು.

ಈ ವಲಯದ ಅಧೀನದಲ್ಲಿ ಇರುವ ಅಧಿಕಾರಿಗಳ ಅತಿ ಮುಖ್ಯವಾಗಿ ಮಹಿಳಾ ಅಧಿಕಾರಿಗಳ ಕುಂದುಕೊರತೆಗಳ ಬಗ್ಗೆ ವಿಚಾರಿಸಲಾಗಿ ಶೌಚಾಲಯದ ಸೌಲಭ್ಯ ಹಾಗೂ ವಾಹನದ ಸೌಲಭ್ಯವಿಲ್ಲದೆ ಇರುವುದರಿಂದ ತ್ವರಿತವಾಗಿ ಕ್ರಮಕೈಗೊಂಡು ಮೇಲ್ಕಂಡ ಸೌಲಭ್ಯಗಳನ್ನು ಒದಗಿಸತಕ್ಕದೆಂದು ಕೋರಿರುತ್ತಾರೆ. ಈ ಬಗೆಗೂ ಸಹ ಕೂಡಲೇ ಕಟ್ಟುನಿಟ್ಟಿನ ಕ್ರಮಕೈಗೊಳ್ಳತಕ್ಕದ್ದೆಂದು ಜಂಟಿ ಆಯುಕ್ತರಿಗೆ ಸೂಚಿಸಿ ಅಧಿಕಾರಿಗಳಿಗೆ ವಾಹನ ಒದಗಿಸುವ ಕುರಿತಂತೆ ಮಾನ್ಯ ಆಯುಕ್ತರೊಂದಿಗೆ ಚರ್ಚಿಸುವುದಾಗಿ ಈ ಸಂಧರ್ಬದಲ್ಲಿ ತಿಳಿಸಲಾಗಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

*ಅಧ್ಯಕ್ಷರು*
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

*ಪ್ರತಿಯನ್ನು:*

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.*
5. *ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.*
6. *ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
7. *ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ಹೊರಡಿಸಲು ಸೂಚಿಸಿದೆ.*
8. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ:26–09–2011 ರಂದು ನಡೆದ ಸಭೆಯ ನಡವಳಿಗಳು

**ವಿಷಯ ಸಂಖ್ಯೆ: ಸಿಆಸುಸ್ಥಾಸ/17/2011–12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀ ಕೆ. ಮುನಿಸ್ವಾಮಿ, ಸಹ ಶಿಕ್ಷಕರು, ಶ್ರೀ ಲಕ್ಷ್ಮೀನರಸಿಂಹ ಶಿಕ್ಷಣ ಸಂಸ್ಥೆ ದೊಡ್ಡಕೇತಹಳ್ಳಿ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಸರ್ಕಾರಧ ಆದೇಶದಂತೆ ಪಾಲಿಕೆಗೆ ಎರಡು ವರ್ಷದ ಅವಧಿಗೆ ಎರವಲು ಸೇವೆಯ ಮೇಲೆ ನಿಯೋಜಿಸಲಾಗಿರುತ್ತದೆ. ಸದರಿ ಸಹ ಶಿಕ್ಷಕರು ಸರ್ಕಾರದ ಆದೇಶದಂತೆ ಪಾಲಿಕೆಯಲ್ಲಿ ಸಲ್ಲಿಸಿದ ಹಾಜರಾತಿ ವರದಿಯನ್ನು ಪರಿಗಣಿಸಿ, ಕರ್ತವ್ಯದ ಮೇಲೆ ತೆಗೆದುಕೊಳ್ಳಲಾಗಿರುತ್ತದೆ. ಸರ್ಕಾರವು ಸದರಿ ಸಹ ಶಿಕ್ಷಕರ ಪಾಲಿಕೆಯ ಎರವಲು ಸೇವೆಯನ್ನು ದಿನಾಂಕ: 30–04–2007 ರವರೆಗೆ ಮುಂದುವರೆಸಲು ಅನುಮತಿ ನೀಡಲಾಗಿರುತ್ತದೆ. ಇದರಂತೆ, ಸದರಿ ಸಹ ಶಿಕ್ಷಕರನ್ನು ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ದಿನಾಂಕ: 06–08–2005 ರಿಂದ 30–04–2007ರ ವರೆವಿಗೆ ಮುಂದುವರೆಸಲಾಗಿರುತ್ತದೆ. ಸರ್ಕಾರವು ಸದರಿ ಸಹ ಶಿಕ್ಷಕರನ್ನು ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ದಿನಾಂಕ: 01–05–2007 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿರುತ್ತದೆ. ಸದರಿ ಸಹ ಶಿಕ್ಷಕರನ್ನು ಸರ್ಕಾರದ ಆದೇಶದಂತೆ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ದಿನಾಂಕ: 01–05–2007 ರಿಂದ 30–04–2008 ರ ವರೆವಿಗೆ ಮುಂದುವರೆಸಲಾಗಿರುತ್ತದೆ. ದಿನಾಂಕ: 12–12–2007 ರಂದು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಖಾಸಗಿ ಅನುದಾನಿತ ಶಾಲೆಗಳಿಂದ ನಿಯೋಜನೆಯ ಮೇಲೆ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ವಿಲೀನಗೊಳಿಸದಿರಲು ಮತ್ತು ಹಾಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಉಪನ್ಯಾಸಕರುಗಳನ್ನು ಈ ಸಾಲಿನ ಶೈಕ್ಷಣಿಕ ವರ್ಷದವರೆವಿಗೆ ಮಾತ್ರ ಮುಂದುವರೆಸಲು ಅನುಮತಿ ನೀಡಬಹುದೆಂದು ತೀರ್ಮಾನಿಸಲಾಗಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಾಲಿಕೆಯ ಶಾಲಾ ಕಾಲೇಜುಗಳಲ್ಲಿ ವಿವಿಧ ಅನುದಾನಿತ ಖಾಸಗಿ ಶಾಲೆಗಳಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಉಪನ್ಯಾಸಕರುಗಳನ್ನು 2007–08ನೇ ಶೈಕ್ಷಣಿಕ ವರ್ಷದವರೆವಿಗೆ ಮಾತ್ರ ಪಾಲಿಕೆಯಲ್ಲಿ ಮುಂದುವರೆಸಲು ನಿರ್ಧರಿಸಿ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿರುವಂತೆ, ಪಾಲಿಕೆಯ ಶಾಲೆ ಕಾಲೇಜುಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಶಿಕ್ಷಕರು/ಉಪನ್ಯಾಸಕರುಗಳಿಗೆ ಮುಂಚಿತವಾಗಿ ತಿಳುವಳಿಕೆ ನೀಡಿ ಅವಧಿಯು ನಂತರ ಬಿಡುಗಡೆ

ಮಾಡಲು ಅಗತ್ಯ ಕ್ರಮತೆಗೆದುಕೊಳ್ಳಲು ವಿದ್ಯಾಧಿಕಾರಿಯವರಿಗೆ ಆಂತರಿಕ ಕಛೇರಿ ಟಿಪ್ಪಣಿ ಮೂಲಕ ಸೂಚಿಸಲಾಗಿರುತ್ತದೆ.

ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಶ್ರೀ ಕೆ. ಮುನಿಸ್ವಾಮಿ, ಸಹ ಶಿಕ್ಷಕರು ರವರನ್ನು ಒಳಗೊಂಡಂತೆ ಕಾರ್ಯನಿರ್ವಹಿಸುತ್ತಿದ್ದ ಅನುದಾನಿತ ಶಾಲಾ ಕಾಲೇಜುಗಳ ಶಿಕ್ಷಕರು ಮತ್ತು ಉಪಾನ್ಯಾಸಕರು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ತೀರ್ಮಾನದ ವಿರುದ್ಧ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 2203/208 ರಂತೆ ದಾವೆ ಹೂಡಿ ಪಾಲಿಕೆಯ ಎರವಲು ಸೇವೆಯ ಮೇಲೆ ಮುಂದಿನ ಆದೇಶದವರೆವಿಗೂ ಮುಂದುವರೆಯಲು ದಿನಾಂಕ: 14-02-2008 ರಂತೆ ಉಚ್ಚ ನ್ಯಾಯಾಲಯದಿಂದ ಮಧ್ಯಂತರ ಆದೇಶವನ್ನು ಪಡೆದು ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಮುಂದುವರೆದಿದ್ದರು. ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 2203/2008 ನ್ನು ದಿನಾಂಕ: 11-02-2011 ರಂದು ವಜಾಗೊಳಿಸಿರುವುದನ್ನು ಪರಿಗಣಿಸಿ ಶ್ರೀ ಕೆ. ಮುನಿಸ್ವಾಮಿ ಸಹ ಶಿಕ್ಷಕರು ರವರನ್ನು ಒಳಗೊಂಡಂತೆ ಒಟ್ಟು 9 ಮಂದಿ ಸಹ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಮೂರು ಷರತ್ತುಗಳಿಗೆ ಒಳಪಡಿಸಿ, ಪಾಲಿಕೆಯ ಸೇವೆಯಿಂದ ದಿನಾಂಕ: 22-03-2011 ರ ಅಪರಾಹ್ನದಂದು ಬಿಡುಗಡೆ ಮಾಡಿ ಅವರುಗಳನ್ನು ಮಾತೃ ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ.

ಸರ್ಕಾರದ ಪತ್ರದಲ್ಲಿ ಸದರಿ ಸಹ ಶಿಕ್ಷಕರನ್ನು ಪಾಲಿಕೆಯಲ್ಲಿ ನಿಯೋಜನೆ ಮೇಲೆ ಮುಂದುವರೆಸಲು/ವಿಲೀನಗೊಳಿಸಲು ಅಭಿಪ್ರಾಯವನ್ನು ಕೋರಲಾಗಿತ್ತು. ಇದರಂತೆ ಪಾಲಿಕೆಯ ವತಿಯಿಂದ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಶ್ರೀ. ಕೆ. ಮುನಿಸ್ವಾಮಿ, ಸಹ ಶಿಕ್ಷಕರು ಇವರನ್ನು ಪಾಲಿಕೆಯ ಎರವಲು ಸೇವೆಯಿಂದ ಉಚ್ಛ ನ್ಯಾಯಾಲಯದ ದಿನಾಂಕ: 11-02-2011 ರ ಆದೇಶದಂತೆ ದಿನಾಂಕ: 22-03-2011ರ ಅಪರಾಹ್ನದಂದು ಬಿಡುಗಡೆ ಮಾಡಿ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ ಹಾಗೂ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಸರ್ಕಾರಿ ಮತ್ತು ಅನುದಾನಿತ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪಾಲಿಕೆಯ ಸೇವೆಗೆ ಎರವಲು ಸೇವೆಯ ಮೇಲೆ ನಿಯೋಜಿಸಲು/ವಿಲೀನಗೊಳಿಸಲು ಅವಕಾಶವಿರುವುದಿಲ್ಲವೆಂಬ ಮಾಹಿತಿ ನೀಡಲಾಗಿರುತ್ತದೆ.

ಶ್ರೀ ಕೆ. ಮುನಿಸ್ವಾಮಿ, ಸಹ ಶಿಕ್ಷಕರು ಮನವಿ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಮುಂದುವರೆಸಲು ಕೋರಿರುತ್ತಾರೆ.

ಈ ಮೇಲ್ಕಂಡ ವಿವರವಾದ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ. ಮುನಿಸ್ವಾಮಿ, ಸಹ ಶಿಕ್ಷಕರು, ಶ್ರೀ ಲಕ್ಷ್ಮೀನರಸಿಂಹ ಶಿಕ್ಷಣ ಸಂಸ್ಥೆ, ದೊಡ್ಡಕೇತಹಳ್ಳಿ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಸದರಿಯವರ ಮಾತೃ ಸಂಸ್ಥೆಯು ಕಾರಣಾಂತರಗಳಿಂದ ಮುಚ್ಚಲ್ಪಟ್ಟಿರುವುದರಿಂದ ಮಾತೃ ಸಂಸ್ಥೆಗೆ ಹೋಗಲು ಸಾಧ್ಯವಿಲ್ಲದೇ ಇರುವುದರಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಮುಂದುವರೆಸಲು ಕೋರಿರುವ ಮನವಿಯ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:07-09-2011 ರ ಬಿ12 (3) ಪಿಆರ್/06/2011-12 ರ ಟಿಪ್ಪಣಿ.

**ನಿರ್ಣಯ:** ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಎರವಲು ಸೇವೆಯ ಮೇಲೆ ಶಿಕ್ಷಕರನ್ನು ಮುಂದುವರೆಸುವ ಬಗ್ಗೆ ಅವಕಾಶವಿಲ್ಲದಿರುವುದರಿಂದ ಪ್ರಸ್ತಾವನೆಯನ್ನು ಕೈಬಿಡಲು ತೀರ್ಮಾನಿಸಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

| ಕ್ರಮ ಸಂಖ್ಯೆ | ಸದಸ್ಯರುಗಳ ಹೆಸರು | ಪದನಾಮ | ಸಹಿ/- |
|---|---|---|---|
| 1 | ಹೆಚ್. ಆರ್. ಕೃಷ್ಣಪ್ಪ | ಅಧ್ಯಕ್ಷರು | |
| 2 | ಎಂ.ಇ. ಪಿಳ್ಳಪ್ಪ | ಸದಸ್ಯರು | |
| 3 | ವೀಣಾ ನಾಗರಾಜು | ಸದಸ್ಯರು | Veeranagaraju |
| 4 | ಮುನಿಸ್ವಾಮಿಗೌಡ | ಸದಸ್ಯರು | |
| 5 | ಎ. ವಿಜಯ ರಮೇಶ್ | ಸದಸ್ಯರು | A. Vijaya Ramesh |
| 6 | ಕೆ.ವಿ.ಯಶೋಧ | ಸದಸ್ಯರು | |
| 7 | ವೈ.ಆರ್. ಗೌರಮ್ಮ | ಸದಸ್ಯರು | |
| 8 | ಲಲಿತ ಮುಕುಂದರಾವ್ | ಸದಸ್ಯರು | Lalitha M Rao |
| 9 | ಫೌಜಿಯಾ ಬೇಗಂ | ಸದಸ್ಯರು | |
| 10 | ಟಿ. ಮಲ್ಲೇಶ್ | ಸದಸ್ಯರು | |
| 11 | ಎಸ್.ಎಂ ಮುರುಗೇಶ್ ಮೊದಲಿಯಾರ್ | ಸದಸ್ಯರು | |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 24-10-2011 ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ**

1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ.ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಎ.ವಿಜಯ ರಮೇಶ್ – ಸದಸ್ಯರು
5. ಲಲಿತ ಮುಕುಂದರಾವ್ – ಸದಸ್ಯರು
6. ಫೌಜಿಯಾ ಬೇಗಂ – ಸದಸ್ಯರು
7. ವೈ.ಆರ್. ಗೌರಮ್ಮ – ಸದಸ್ಯರು
8. ಕೆ.ವಿ.ಯಶೋಧ – ಸದಸ್ಯರು
9. ವೀಣಾ ನಾಗರಾಜ್ – ಸದಸ್ಯರು
10. ಟಿ. ಮಲ್ಲೇಶ್ – ಸದಸ್ಯರು
11. ಎಸ್.ಎಂ ಮುರುಗೇಶ್ ಮೊದಲಿಯಾರ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/20/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ದಿನಾಂಕ: 31-05-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಈ ಕೆಳಕಂಡ ನಿರ್ಣಯ ಕೈಗೊಳ್ಳಲಾಗಿರುತ್ತದೆ. "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ/ನೌಕರರುಗಳ ಹಲವಾರು ಸ್ವಯಂ ಘೋಷಿತ ಸಂಘಗಳಿದ್ದು, ಈ ಸಂಘಗಳ ಪೈಕಿ ಎರಡು ಸಂಘಗಳ ಸ್ವಯಂ ಘೋಷಿತ ಪದಾಧಿಕಾರಿಗಳು ಪರಸ್ಪರ ಕಿತ್ತಾಟದಲ್ಲಿ ತೊಡಗಿದ್ದು, ಒಬ್ಬರ ವಿರುದ್ದ ಮತ್ತೊಬ್ಬರು ಪೊಲೀಸ್ ಠಾಣೆಯಲ್ಲಿ ದೂರುಗಳನ್ನು ಸಲ್ಲಿಸಿರುತ್ತಾರೆ. ಇದು ನಗರ ಪಾಲಿಕೆಯ ಹಿತದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿರುವುದಿಲ್ಲ. ಈ ಸಂಘಗಳಿಗೆ ಇದುವರೆಗೆ ಚುನಾವಣೆಯು ಸಹ ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರು, ಎಲ್ಲಾ ಪಕ್ಷದ ನಾಯಕರು ಹಾಗೂ ನಗರ ಪಾಲಿಕೆಯ ಅಪರ ಆಯುಕ್ತರ (ಆಡಳಿತ) ರವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಅಧಿಕಾರಿ/ನೌಕರರಿಗೆ ಒಂದು ಸಂಘ ಮತ್ತು

ಪೌರಕಾರ್ಮಿಕರು ಹಾಗೂ ಆರೋಗ್ಯ ಗ್ಯಾಂಗ್‌ಮೆನ್‌ರವರಿಗೆ ಒಂದು ಸಂಘ (ಎರಡು ಪ್ರತ್ಯೇಕ ಸಂಘಗಳು) ಈ ಸಂಘಗಳಿಗೆ ಮಾತ್ರ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದು. ಚುನಾಯಿತ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಲು ಕೋರುತ್ತಾ, ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೆ, ಸಂಘಗಳಿಗೆ ಹಾಲಿ ನೀಡಿರುವ ಎಲ್ಲಾ ರೀತಿಯ ಸವಲತ್ತುಗಳನ್ನು ಆಯುಕ್ತರು ಹಿಂಪಡೆದು ಮತ್ತು ಸ್ವಯಂ ಘೋಷಿತ ಸಂಘಗಳ ಪದಾಧಿಕಾರಿಗಳಿಗೆ ಯಾವುದೇ ಮಾನ್ಯತೆ ನೀಡದಂತೆ ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ".

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ, ಪಾಲಿಕೆಯಲ್ಲಿ ಚುನಾಯಿತ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಲು, ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೆ ಸಂಘಗಳಿಗೆ ಹಾಲಿ ನೀಡಿರುವ ಸವಲತ್ತನ್ನು ಹಿಂಪಡೆದು ಹಾಗೂ ಸ್ವಯಂಘೋಷಿತ ಸಂಘದ ಪದಾಧಿಕಾರಿಗಳಿಗೆ ಯಾವುದೇ ಮಾನ್ಯತೆ ನೀಡದಂತೆ ಎಲ್ಲಾ ಅಧಿಕಾರಿಗಳಿಗೆ ಆದೇಶಿಸಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಪಾಲಿಕೆಯ ಸಭೆಯ ತೀರ್ಮಾನದಂತೆ, ಮಾನ್ಯ ಆಯುಕ್ತರು, ಎಲ್ಲಾ ಪಕ್ಷದ ನಾಯಕರು ಹಾಗೂ ಅಪರ ಆಯುಕ್ತರು (ಆಡಳಿತ) ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಅಧಿಕಾರಿ/ನೌಕರರಿಗೆ ಒಂದು ಸಂಘ ಮತ್ತು ಪೌರಕಾರ್ಮಿಕರು ಹಾಗೂ ಗ್ಯಾಂಗ್‌ಮೆನ್‌ರವರಿಗೆ ಒಂದು ಸಂಘ (ಎರಡು ಪತ್ಯೇಕ ಸಂಘಗಳು) ಈ ಸಂಘಗಳಿಗೆ ಮಾತ್ರ ಚುನಾವಣೆ ನಡೆಸಲು ದಿನಾಂಕವನ್ನು ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 03-10-2011 ರ ಬಿ12 (ಸಿ1) ಪಿಆರ್/23/11-12 ರ ಟಿಪ್ಪಣಿ.

**ನಿರ್ಣಯ:** ಸಂಬಂಧಪಟ್ಟ ಮೂಲಕಡತಗಳೊಂದಿಗೆ ಮುಂದಿನ ಸಭೆಗೆ ತಪ್ಪದೇ ಮಂಡಿಸಲು ಹಿಂದಿರುಗಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/21/2011-12**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನವಾಗಿರುವ 7 ನಗರಸಭೆ ಮತ್ತು 1 ಪುರಸಭೆಯ ಖಾಯಂ ನೌಕರರ ಸೇವೆಯನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ನಆಇ 341 ಎಂಎನ್‌ವೈ 2007 ದಿನಾಂಕ: 10-01-2011 ಹಾಗೂ ಈ ಸಂಬಂಧ ಬೃಹತ್

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊಸ ಹುದ್ದೆಗಳನ್ನು ಸೃಜಿಸುವ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 141 ಎಂಎಲ್‌ಆರ್ 2002 ದಿ: 09-03-2007 ಆದೇಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಓದಿ ದಾಖಲು ಮಾಡಿಕೊಳ್ಳುವ ಸಲುವಾಗಿ ಕಡತವನ್ನು ಸಮಿತಿಯ ಮುಂದೆ ಮಂಡಿಸಿದ್ದು ಈ ಬಗ್ಗೆ ಯಾವುದೇ ವಿಧವಾದ ಆದೇಶಗಳು ಪಾಲಿಕೆಯ ವತಿಯಿಂದ ಜಾರಿ ಆಗದಿದ್ದಾಗ್ಯೂ ಸಹ 7 ನಗರ ಸಭೆ 1 ಪುರಸಭೆ ನೌಕರರುಗಳನ್ನು ಪಾಲಿಕೆಯ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿಕೊಳ್ಳುತ್ತಿದ್ದು ಈ ಕ್ರಮವು ನಿಯಮಾಬಾಹಿರವಾಗಿರುವುದರಿಂದ ಹಾಗೂ ಪಾಲಿಕೆ ಸಭೆಯಲ್ಲಿ ಓದಿ ದಾಖಲು ಮಾಡಿಕೊಳ್ಳಲು ಪಾಲಿಕೆಯಿಂದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಒಪ್ಪಿಗೆ ಪಡೆದ ನಂತರ ಓದಿ ದಾಖಲು ಮಾಡಬಹುದಾಗಿದ್ದು, ಸದರಿ ಪ್ರಕರಣದಲ್ಲಿ ಮೇಲ್ಕಂಡ ಅಂಶವನ್ನು ಪರಿಗಣಿಸದೇ ಇರುವ ಹಿನ್ನೆಲೆಯಲ್ಲಿ ಮೊದಲು ವಿಲೀನಾತಿ ಕುರಿತಂತೆ ಪ್ರಸ್ತಾವನೆಯೊಂದನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆಯ ಮುಂದೆ ಮಂಡಿಸಿ ನಂತರ ಸರ್ಕಾರದ ಅನುಮೋದನೆ ಪಡೆಯಲು ಕ್ರಮಕೈಗೊಂಡು ನಂತರ 7 ನಗರಸಭೆ, 1 ಪುರಸಭೆ ನೌಕರರುಗಳನ್ನು ಪಾಲಿಕೆಯ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿಕೊಳ್ಳತಕ್ಕದೆಂದು ಆಯುಕ್ತರನ್ನು ಕೋರಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/22/2011-12**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದಿಂದ ನಿರ್ವಹಿಸಲಾಗಿರುವ ಕಾಮಗಾರಿ ಸಂಬಂಧಿಸಿದಂತೆ, ಕರ್ತವ್ಯಲೋಪ ಎಸಗಿರುವ ಅಭಿಯಂತರರ/ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಂಡಿದ್ದು, ಈ ಕುರಿತಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 295 ಎಂಎನ್‌ಯು 2011 ದಿ: 30-08-2011 ರ ರೀತ್ಯಾ ಸದರಿ ಅಧಿಕಾರಿಗಳನ್ನು ಮಾತೃ ಇಲಾಖೆಗೆ ಹಿಂದಿರುಗಿಸಿರುವುದು ಸರಿಯಷ್ಟೇ. ಆದರೆ ತಹಲ್‌ವರೆವಿಗೂ ಈ ಕೆಳಕಂಡ ಅಧಿಕಾರಿ/ನೌಕರರುಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಿರುವುದಾಗಿ ಕಂಡುಬಂದಿರುವುದಿಲ್ಲ.

1. ಶ್ರೀ ಚಿಕ್ಕರಾಯಪ್ಪ, ಮುಖ್ಯ ಅಭಿಯಂತರರು
2. ಶ್ರೀ ರವಿಪ್ರಸಾದ್, ಸಹಾಯಕ ಕಾರ್ಯಪಾಲಕ ಅಭಿಯಂತರರು
3. ಶ್ರೀ ಶರಣಪ್ಪ ಸಹಾಯಕ ಅಭಿಯಂತರರು
4. ಶ್ರೀ ಕೆ.ಎಸ್.ವಿಜಯಕುಮಾರ್ ಸಹಾಯಕ ಅಭಿಯಂತರರು
5. ಶ್ರೀ ಅಂದಾನಯ್ಯ, ಆಡಿಟ್ ಆಫೀಸರ್

ಸದರಿ ಅಧಿಕಾರಿ/ನೌಕರರುಗಳನ್ನು ಪಾಲಿಕೆಯಿಂದ ಬಿಡುಗಡೆ ಮಾಡದೇ ಪಾಲಿಕೆಯಲ್ಲಿ ಮುಂದುವರೆಸಿ ವೃಥಾಕಾರಣ ಅವರಿಗೆ ವೇತನವನ್ನು ಪಾವತಿಸುತ್ತಿದ್ದು, ಇದರಿಂದ ಪಾಲಿಕೆಗೆ ಹೆಚ್ಚುವರಿಯಾಗಿ ಆರ್ಥಿಕ ನಷ್ಠ ಉಂಟಾಗುತ್ತಿರುವುದಲ್ಲದೇ ಸರ್ಕಾರದ ಆದೇಶವನ್ನು ಸಹ ಅನುಷ್ಠಾನಕ್ಕೆ ತಾರದೇ ಇರುವುದು ಕಂಡುಬಂದಿದ್ದು ಇದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದ್ದು, ಹಾಗೂ ಒಂದು ಪಕ್ಷ ಸದರಿ ಅಧಿಕಾರಿ/ಅಭಿಯಂತರರ ವತಿಯಿಂದ ಪಾಲಿಕೆಗೆ ಆರ್ಥಿಕ ನಷ್ಠ ಉಂಟಾಗಿದ್ದ ಪಕ್ಷದಲ್ಲಿ ಸದರಿ ಮೊತ್ತವನ್ನು ಅವರಿಂದ ವಸೂಲಿ ಮಾಡುವ ಷರತ್ತಿಗೊಳಪಡಿಸಿ, ಕೂಡಲೇ ಸರ್ಕಾರದ ಆದೇಶದ ಅನುಸಾರ ಮೇಲ್ಕಂಡ ಅಧಿಕಾರಿ/ನೌಕರರುಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದೆಂದು ಆಯುಕ್ತರಿಗೆ ನಿರ್ದೇಶಿಸಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 24-10-2011 ರಂದು ಪೂರ್ವ ವಲಯ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಹೆಚ್. ಆರ್ ಕೃಷ್ಣಪ್ಪ | – ಅಧ್ಯಕ್ಷರು | ಜಂಟಿ ಆಯುಕ್ತರು |
| 2. ಎಂ.ಇ. ಪಿಳ್ಳಪ್ಪ | – ಸದಸ್ಯರು | ಉಪ ಆಯುಕ್ತರು |
| 3. ಮುನಿಸ್ವಾಮಿಗೌಡ | – ಸದಸ್ಯರು | ಮುಖ್ಯ ಅಭಿಯಂತರರು |
| 4. ಎ.ವಿಜಯ ರಮೇಶ್ | – ಸದಸ್ಯರು | ಆರೋಗ್ಯಾಧಿಕಾರಿಗಳು |
| 5. ಲಲಿತ ಮುಕುಂದರಾವ್ | – ಸದಸ್ಯರು | ಕಂದಾಯ ಅಧಿಕಾರಿಗಳು |
| 6. ಫೌಜಿಯಾ ಬೇಗಂ | – ಸದಸ್ಯರು | ಕಾರ್ಯಪಾಲಕ ಅಭಿಯಂತರರು |
| 7. ವೈ.ಆರ್. ಗೌರಮ್ಮ | – ಸದಸ್ಯರು | ಸಹಾಯಕ ನಿರ್ದೇಶಕರು (ನಗರ ಯೋಜನೆ) |
| 8. ಕೆ.ವಿ.ಯಶೋಧ | – ಸದಸ್ಯರು | ಸಹಾಯಕ ನಿಯಂತ್ರಕರು (ಹಣಕಾಸು) |
| 9. ವೀಣಾ ನಾಗರಾಜ್ | – ಸದಸ್ಯರು | ತೋಟಗಾರಿಕಾ ಅಧೀಕ್ಷಕರು |
| 10. ಟಿ. ಮಲ್ಲೇಶ್ | – ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 11. ಎಸ್.ಎಂ.ಮುರುಗೇಶ್ | | ವಿಶೇಷ ಅಧಿಕಾರಿಗಳು |
| ಮೊದಲಿಯಾರ್ | – ಸದಸ್ಯರು | ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ |

ಜಂಟಿ ಆಯುಕ್ತರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ತಮ್ಮ ವಲಯ ಕಛೇರಿ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

ಈ ವಲಯ ಕಛೇರಿಯಲ್ಲಿ ಸಭೆಯ ಸಂದರ್ಭದಲ್ಲಿ ಹಾಜರಿದ್ದಂತಹ ಯಾವೊಬ್ಬ ಅಧಿಕಾರಿ/ಸಿಬ್ಬಂದಿವರ್ಗದವರು ಗುರುತಿನ ಚೀಟಿಯನ್ನು ಧರಿಸದೇ ಇರುವುದು ಕಂಡುಬಂದಿದ್ದು, ಈ ಬಗ್ಗೆ ಕೇಳಲಾಗಿ ಸದರಿ ಅಧಿಕಾರಿಗಳು ಅಸಮರ್ಪಕವಾದ ವಿವರಣೆಯನ್ನು ನೀಡಿದ್ದು ಇದು ಇವರುಗಳ ಕರ್ತವ್ಯಲೋಪವನ್ನು ಎತ್ತಿ ತೋರಿಸುತ್ತದೆ.

ಈ ಕಛೇರಿಯಲ್ಲಿ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಅವರುಗಳ ಹೇಳಿಕೆ ರೀತ್ಯಾವೇ ಈ ವಲಯ ಕಛೇರಿಯಲ್ಲಿ ಹೆಚ್ಚುವರಿಯಾಗಿರುವ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಬಹುದೆಂದು ತಿಳಿಸಿರುತ್ತಾರೆ. ಸದರಿ ಸಭೆಗೆ ಸಭೆಯ ತಿಳುವಳಿಕೆ ಪತ್ರವನ್ನು ಮುಂಚಿತವಾಗಿ ನೀಡಿದ್ದರೂ ಸಹ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಸರ್ವಜ್ಞನಗರ), ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ), ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರುಗಳು ಗೈರು ಹಾಜರಾಗಿದ್ದು ಇದು ಸದರಿ ಅಧಿಕಾರಿಗಳ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಇದನ್ನು ಸಮಿತಿಯು ಗಂಭೀರವಾಗಿ

ಪರಿಗಣಿಸಿ ಸದರಿ ಅಧಿಕಾರಿಗಳ ವಿರುದ್ದ ಕ್ರಮಕೈಗೊಂಡು ಸಮಿತಿಗೆ ವರದಿ ನೀಡತಕ್ಕದ್ದೆಂದು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು.

ಈ ವಲಯ ಕಛೇರಿಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಕಂದಾಯ ವಸೂಲಾತಿ ಕುರಿತಂತೆ ಸಮರ್ಪಕವಾದ ರೀತಿಯಲ್ಲಿ ಕಾರ್ಯನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ಸಭೆಯಲ್ಲಿ ಹಾಜರಿದ್ದಂತಹ ಸಹ ಕಂದಾಯ ಅಧಿಕಾರಿಗಳು ಬಾಕಿ ಇರುವ ಕಂದಾಯ ವಸೂಲಾತಿ ಬಗ್ಗೆ ತೀವ್ರತರನಾದ ಕ್ರಮ ಜರುಗಿಸದೇ ಇರುವುದರಿಂದ ಸಾಕಷ್ಟು ಮೊತ್ತದ ಆಸ್ತಿ ತೆರಿಗೆ ಬಾಕಿ ಇದ್ದು ಈ ನಿಟ್ಟಿನಲ್ಲಿ ಜಂಟಿ ಆಯುಕ್ತರಾಗಲಿ, ಉಪ ಆಯುಕ್ತರಾಗಲಿ ತಮ್ಮ ಅಧೀನ ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವಲ್ಲಿ ವಿಫಲರಾಗಿರುತ್ತಾರೆ ಹಾಗೂ 2008-09ನೇ ಸಾಲಿನಿಂದ ಬಾಕಿ ಇರುವ ಕಂದಾಯವನ್ನು ಕೂಡಲೇ ವಸೂಲಿ ಮಾಡಲು ಕ್ರಮಕೈಗೊಳ್ಳಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು. ಈ ಬಗ್ಗೆ ವಿವರಣೆ ನೀಡಿದ ಜಂಟಿ ಆಯುಕ್ತರು 2009-10ನೇ ಸಾಲಿನಲ್ಲಿ ಸುಮಾರು 210 ಕೋಟಿ, 2010-11ನೇ ಸಾಲಿನಲ್ಲಿ ಸುಮಾರು 317 ಕೋಟಿ ಹಾಗೂ 2011-12ನೇ ಸಾಲಿನಲ್ಲಿ ಈಗಾಗಲೇ 265 ಕೋಟಿಗಳಷ್ಟು ಕಂದಾಯವನ್ನು ವಸೂಲಿ ಮಾಡಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ಸುಮಾರು 400 ಕೋಟಿಗಳಷ್ಟು ಕಂದಾಯದ ವಸೂಲಾತಿಗೆ ಕ್ರಮಕೈಗೊಳ್ಳಲಾಗುವುದೆಂದು ಸಮಿತಿಗೆ ತಿಳಿಸಿರುತ್ತಾರೆ. ತೆರಿಗೆ ಪಾವತಿಯಿಂದ ಬಿಟ್ಟು ಹೋಗಿರುವ ಆಸ್ತಿಗಳನ್ನು ಗುರುತಿಸಿ ಅವರುಗಳಿಂದ ಕಂದಾಯವನ್ನು ವಸೂಲಿ ಮಾಡಲು ಸೂಕ್ತ ಕ್ರಮಕೈಗೊಳ್ಳಲು ಎಲ್ಲಾ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ಈ ವಲಯ ವ್ಯಾಪ್ತಿಯಲ್ಲಿ ಬರುವ ಪಾಲಿಕೆ/ಸರ್ಕಾರಕ್ಕೆ ಸೇರಿದ ಆಸ್ತಿಗಳನ್ನು ಗುರುತಿಸಿ ಅತಿಕ್ರಮ ಪ್ರವೇಶವಾಗದಂತೆ ತಡೆದು ಕಂದಾಯ ವಿಭಾಗದ ಅಧಿಕಾರಿಗಳು ಹಾಗೂ ಕಾಮಗಾರಿ ವಿಭಾಗದ ಅಧಿಕಾರಿಗಳು ಕ್ರಮಕೈಗೊಳ್ಳಲು ಸೂಚಿಸಲಾಯಿತು. ಈ ನಿಟ್ಟಿನಲ್ಲಿ ಈ ಎರಡು ಇಲಾಖೆಗಳ ಸಮನ್ವಯದಿಂದ ಕಾರ್ಯನಿರ್ವಹಿಸಿದ್ದಲ್ಲಿ ಪಾಲಿಕೆಗೆ ಕೋಟ್ಯಾಂತರ ರೂಗಳ ಆಸ್ತಿಯನ್ನು ಸಂರಕ್ಷಿಸಲು ಸಾಧ್ಯವಾಗುವುದೆಂದು ಸಮಿತಿಯು ಈ ಸಂದರ್ಭದಲ್ಲಿ ಸೂಚಿಸಲು ಇಚ್ಚಿಸುತ್ತದೆ.

ಈ ವಲಯ ವ್ಯಾಪ್ತಿಯ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ವರದಿಯನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳು ಸಭೆಗೆ ವಿವರಿಸಲಾಗಿ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಜರೂರಾಗಿ ಮುಕ್ತಾಯಗೊಳಿಸಲು ವಲಯದ ಎಲ್ಲಾ ಅಭಿಯಂತರರುಗಳಿಗೆ ಸೂಚಿಸಲಾಯಿತು. ಈ ವಲಯದಲ್ಲಿ ಕಾಮಗಾರಿ ಇಲಾಖೆಗೆ ಸಂಬಂಧಿಸಿದಂತೆ ಅಭಿಯಂತರರುಗಳನ್ನು ಮೇಲಿನಿಯಿಂದ ಮೇಲೆ ವರ್ಗಾವಣೆ ಮಾಡುತ್ತಿರುವುದರಿಂದ ಸಮರ್ಪಕವಾದ ರೀತಿಯಲ್ಲಿ ಮಾಹಿತಿ ಲಭ್ಯವಾಗದೇ ಇದ್ದು ಈ ನಿಟ್ಟಿನಲ್ಲಿ ಒಂದು ಆಯವ್ಯಯದ ಅವಧಿಯಿಂದ ಮತ್ತೊಂದು ಆಯವ್ಯಯದ ಅವಧಿಯವರೆವಿಗೆ ಯಾವುದೇ ಕಾರಣಕ್ಕೆ ಅಭಿಯಂತರರುಗಳನ್ನು ವರ್ಗಾಯಿಸತಕ್ಕದಲ್ಲವೆಂದು ಕೋರಿದ್ದು ಈ ಬಗ್ಗೆ ಆಯುಕ್ತರು ಗಮನ ಹರಿಸಲು ಸಮಿತಿಯು ಅಭಿಪ್ರಾಯಿಸುತ್ತದೆ.

ಈ ವಲಯ ವ್ಯಾಪ್ತಿಯ ಹಲಸೂರು ಕೆರೆಯ ಮೀನು ಸಾಗಾಣಿಕೆ ಗುತ್ತಿಗೆಗೆ ಸಂಬಂಧಿಸಿದಂತೆ ಸಾಕಷ್ಟು ಅವ್ಯವಹಾರಗಳು ನಡೆದಿದ್ದು ಈ ಬಗ್ಗೆ ಸಂಕ್ಷಿಪ್ತ ವರದಿಯೊಂದನ್ನು ಸಮಿತಿಗೆ ಮಂಡಿಸಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು ಹಾಗೂ ಇದೇ ವಲಯದ ದೊಮ್ಮಲೂರು ವಾರ್ಡ್ 112 ರ ಹಿಂದೂ ರುದ್ರಭೂಮಿಯ ಜಾಗದ ಒತ್ತುವರಿಯಾಗಿರುವ ಸ್ವತ್ತಿಗೆ ಖಾತಾ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂಲ ಕಡತವನ್ನು ಸಮಿತಿಗೆ ಪರಿಶೀಲನೆಗಾಗಿ ಮಂಡಿಸಲು ಸೂಚಿಸಿದ್ಯಾಗೂ ಸಹ ಇದುವರೆವಿಗೂ ಮೂಲ

ಕಡತವನ್ನು ಸಮಿತಿಗೆ ಕಳುಹಿಸದೇ ಇರುವ ಬಗ್ಗೆ ಸಮಿತಿಯು ತೀವ್ರತರವಾಗಿ ಆಕ್ಷೇಪಿಸುತ್ತಾ ಕೂಡಲೇ ಮೂಲ ಕಡತವನ್ನು ಸಮಿತಿಯ ಅವಗಾಹನೆಗೆ ತರಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು.

ಈ ವಲಯದ ಆರೋಗ್ಯ ವಿಭಾಗವು ಸಮರ್ಪಕವಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲವಾಗಿರುತ್ತದೆ. ಆರೋಗ್ಯ ಇಲಾಖೆಯ ವತಿಯಿಂದ ನೀಡುವ ಉದ್ಯಮಗಳ ಪರವಾನಗಿ ಹಾಗೂ ನವೀಕರಣ ಕುರಿತಂತೆ ಇನ್ನೂ ಹೆಚ್ಚಿನ ಶ್ರದ್ದೆಯಿಂದ ಕಾರ್ಯನಿರ್ವಹಿಸಿದಲ್ಲಿ ಪಾಲಿಕೆಗೆ ಹೆಚ್ಚಿನ ಆದಾಯವನ್ನು ಆರೋಗ್ಯ ಇಲಾಖೆ ವತಿಯಿಂದ ನಿರೀಕ್ಷಿಸಬಹುದಾಗಿದೆ.

ಈ ವಲಯ ವ್ಯಾಪ್ತಿಯಲ್ಲಿ ಕಲ್ಯಾಣ ವಿಭಾಗಕ್ಕೆ ಸಂಬಂಧಿಸಿದಂತೆ, ಫಲಾನುಭವಿಗಳಿಗೆ ಕಾರುಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಸಾಕಷ್ಟು ಅವ್ಯವಹಾರಗಳು ಆಗಿರುವ ಬಗ್ಗೆ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸಂಪೂರ್ಣವಾಗಿ ಪರಿಶೀಲಿಸಿ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಕಲ್ಯಾಣಾಧಿಕಾರಿಗಳ ಸಂಪೂರ್ಣ ವಿವರಗಳೊಂದಿಗೆ ವರದಿಯೊಂದನ್ನು ಸಮಿತಿಗೆ ಮಂಡಿಸಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು. ಈ ವಲಯದಲ್ಲಿ ಜಾಹೀರಾತು ಫಲಕಗಳಿಗೆ ಅನುಮತಿ ನೀಡುವ ಕುರಿತಂತೆ ಸಾಕಷ್ಟು ಲೋಪದೋಷಗಳು ಉಂಟಾಗಿದ್ದು ಇದರಿಂದಾಗಿ ಪಾಲಿಕೆಗೆ ಹಲವು ಕೋಟಿ ರೂಗಳು ನಷ್ಟವಾಗಿದ್ದು ಈ ನಿಟ್ಟಿನಲ್ಲಿ ಸಮರೋಪಾದಿಯಲ್ಲಿ ಅಧಿಕಾರಿಗಳು ಕ್ರಮ ಜರುಗಿಸಿ ತೆರಿಗೆ ವಸೂಲಿ ಮಾಡಲು ಕ್ರಮಕೈಗೊಳ್ಳುವುದು. ಈ ನಿಟ್ಟಿನಲ್ಲಿ ತೆರಿಗೆ ವಸೂಲಾತಿಯಲ್ಲಿ ಕ್ರಮಕೈಗೊಳ್ಳುವುದಾಗಿ ಹಾಗೂ ಅನಧಿಕೃತ ಜಾಹೀರಾತುಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮದ ಬಗ್ಗೆ ಸಂಪೂರ್ಣ ವರದಿಯನ್ನು ಸಮಿತಿಗೆ ಸಲ್ಲಿಸುವುದಾಗಿ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರು ತಿಳಿಸಿರುತ್ತಾರೆ.

ಹಿರಿಯ ನಾಗರೀಕರಿಗೆ ಬಿಸಿ ಊಟ ಸರಬರಾಜು ಮಾಡುವ ಪ್ರಕ್ರಿಯೆಯಲ್ಲಿ ಸಾಕಷ್ಟು ಲೋಪಗಳು ಉಂಟಾಗುತ್ತಿದ್ದು, ಪ್ರತಿದಿವಸ ಫಲಾನುಭವಿಗಳಿಗೆ ಊಟ ವಿತರಣೆ ಆಗದೇ ಇದ್ದು ಉಳಿಕೆಯಾಗುವ ಬಿಸಿ ಊಟವನ್ನು ಪ್ರತಿದಿವಸ ಚರಂಡಿಗೆ ಸುರಿಯುವ ಪದ್ಧತಿಯನ್ನು ಪಾಲಿಕೆಯ ಸಿಬ್ಬಂದಿಗಳು ಅಳವಡಿಸಿಕೊಂಡು ಬರುತ್ತಿದ್ದು ಈ ಬಗ್ಗೆ ಯಾವೊಬ್ಬ ಅಧಿಕಾರಿಯು ಗಮನ ಹರಿಸದೇ ಇರುವುದು ಪಾಲಿಕೆಯ ದುರದೃಷ್ಟ ಸಂಗತಿಯೆಂದರೆ ತಪ್ಪಾಗಲಾರದು. ಕೂಡಲೇ ವಲಯಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಅನಿರೀಕ್ಷಿತಾ ತಪಾಸಣೆ ಕೈಗೊಂಡು ಮಧ್ಯಾಹ್ನದ ಬಿಸಿ ಊಟಕ್ಕೆ ಎಷ್ಟು ಸಂಖ್ಯೆಯಲ್ಲಿ ಫಲಾನುಭವಿಗಳು ಹಾಜರಾಗುವ ಬಗ್ಗೆ ಪರಿಶೀಲಿಸಿ ಈ ಹಿನ್ನೆಲೆಯಲ್ಲಿ ಅವಶ್ಯವಿರುವಷ್ಟು ಊಟವನ್ನು ಮಾತ್ರ ಇಸ್ಕಾನ್ ಸಂಸ್ಥೆಯಿಂದ ಪಡೆಯಲು ಕ್ರಮಕೈಗೊಳ್ಳತಕ್ಕದ್ದು ಹಾಗೂ ಪ್ರತಿದಿವಸ ವಿತರಣೆಯಾಗುವ ಬಿಸಿ ಊಟದ ಬಗ್ಗೆ ಮಾಹಿತಿಯನ್ನು ಸಹ ದಾಖಲು ಮಾಡುವುದು.

ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ವಿವರಣೆ ಕುರಿತಂತೆ Schedule of Establishment ಬಗೆಗಿನ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಈ ರೀತಿಯ ಹೆಚ್ಚುವರಿ ವೇತನವನ್ನು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಾವತಿಸಲಾಗುತ್ತಿದೆ ಎಂಬ ಬಗ್ಗೆ ವರದಿ ನೀಡುವುದು.

ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದ ಜಂಟಿ ಆಯುಕ್ತರ (ಪೂರ್ವ) ರವರ ಕಛೇರಿಯ ಅಕ್ಕಪಕ್ಕದ ಪ್ರದೇಶದಲ್ಲಿ ಸ್ವಚ್ಛತೆ ಇಲ್ಲದೇ ಇರುವುದು ಕಂಡು ಬಂದಿರುವ ಈ ಬಗ್ಗೆ ಸಂಬಂಧಪಟ್ಟ ಅದಿಕಾರಿಗಳು ಗಮನಹರಿಸದೇ ಇರುವುದು ಅವರ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಈ ಬಗ್ಗೆ ಕೂಡಲೇ ಕ್ರಮಕೈಗೊಳ್ಳುವಂತೆ ಜಂಟಿ ಆಯುಕ್ತರಿಗೆ ಸೂಚಿಸಲಾಯಿತು.

ಅತಿ ಮುಖ್ಯವಾಗಿ ಅಧಿಕಾರಿಗಳು ತಮಗೆ ವಾಹನ ಸೌಲಭ್ಯಗಳನ್ನು ಹಿಂಪಡೆದಿರುವುದರಿಂದ ಕಛೇರಿ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ ಕೂಡಲೇ ಈ ಹಿಂದೆ ನೀಡಿದಂತೆ ವಾಹನ ಸೌಲಭ್ಯ ನೀಡಿದ್ದಲ್ಲಿ ಇನ್ನೂ ಹೆಚ್ಚಿನ ಶ್ರದ್ದೆಯಿಂದ ಕಛೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಸೂಕ್ತಕ್ರಮಕೈಗೊಳ್ಳಲು ಆಯುಕ್ತರಿಗೆ ಸೂಚಿಸಲಾಗುವುದು. ಒಟ್ಟಾರೆ ಈ ವಲಯ ಕಛೇರಿಯಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಂಡು ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಆಡಳಿತದಲ್ಲಿ ಸುಧಾರಣೆ ಕಾಣಬಹುದೆಂದು ಅಭಿಪ್ರಾಯಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

*ಅಧ್ಯಕ್ಷರು*
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.*
5. *ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.*
6. *ಜಂಟಿ ಆಯುಕ್ತರು (ಪೂರ್ವ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
7. *ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ಹೊರಡಿಸಲು ಸೂಚಿಸಿದೆ.*
8. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 31-10-2011 ರಂದು ಪಶ್ಚಿಮ ವಲಯ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್.ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಮುನಿಸ್ವಾಮಿಗೌಡ – ಸದಸ್ಯರು
3. ವೀಣಾ ನಾಗರಾಜ್ – ಸದಸ್ಯರು
4. ಎ.ವಿಜಯ ರಮೇಶ್ – ಸದಸ್ಯರು
5. ಫೌಜಿಯಾ ಬೇಗಂ – ಸದಸ್ಯರು
6. ವೈ.ಆರ್. ಗೌರಮ್ಮ – ಸದಸ್ಯರು
7. ಕೆ.ವಿ.ಯಶೋಧ – ಸದಸ್ಯರು
8. ವೀಣಾ ನಾಗರಾಜ್ – ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಜಂಟಿ ಆಯುಕ್ತರು
ಉಪ ಆಯುಕ್ತರು
ಕೇಂದ್ರ ಸ್ಥಾನೀಯ ಸಹಾಯಕರು
ಮುಖ್ಯ ಅಭಿಯಂತರರು
ಕಾರ್ಯಪಾಲಕ ಅಭಿಯಂತರರು
ಕಂದಾಯ ಅಧಿಕಾರಿಗಳು
ಸಹಾಯಕ ನಿರ್ದೇಶಕರು (ನಗರ ಯೋಜನೆ)
ಸಹಾಯಕ ನಿಯಂತ್ರಕರು (ಹಣಕಾಸು)
ಸಹಾಯಕ ಕಂದಾಯ ಅಧಿಕಾರಿಗಳು
ಸಹಾಯಕ ನಿರ್ದೇಶಕರು (ಪಶುಸಂಗೋಪನೆ)
ಆರೋಗ್ಯಾಧಿಕಾರಿಗಳು
ಉಪ ಆರೋಗ್ಯಾಧಿಕಾರಿಗಳು
ತೋಟಗಾರಿಕಾ ಅಧೀಕ್ಷಕರು
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷಾಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

ಜಂಟಿ ಆಯುಕ್ತರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ತಮ್ಮ ವಲಯ ಕಛೇರಿ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

ಈ ವಲಯ ಕಛೇರಿಯಲ್ಲಿ ಸಭೆಯ ಸಂದರ್ಭದಲ್ಲಿ ಹಾಜರಿದ್ದಂತಹ ಯಾವೊಬ್ಬ ಅಧಿಕಾರಿ/ಸಿಬ್ಬಂದಿವರ್ಗದವರು ಗುರುತಿನ ಚೀಟಿಯನ್ನು ಧರಿಸದೇ ಇರುವುದು ಕಂಡುಬಂದಿದ್ದು, ಈ ಬಗ್ಗೆ ಕೇಳಲಾಗಿ ಸದರಿ ಅಧಿಕಾರಿಗಳು ಅಸಮಪರ್ಕವಾದ ವಿವರಣೆಯನ್ನು ನೀಡಿದ್ದು ಇದು ಇವರುಗಳ ಕರ್ತವ್ಯಲೋಪವನ್ನು ಎತ್ತಿ ತೋರಿಸುತ್ತದೆ.

ಈ ಕಛೇರಿಯಲ್ಲಿ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹುದ್ದೆಗೆ ವೇತನ ಬಟವಾಡೆ ಕುರಿತಂತೆ ವಿವರಣೆ ನೀಡಲು ಸಹಾಯಕ ನಿಯಂತ್ರಕರು (ಹಣಕಾಸು) ರವರು ವಿಫಲರಾಗಿರುತ್ತಾರೆ. ಸಭೆಯ ತಿಳುವಳಿಕೆ ಪತ್ರವನ್ನು ಒಂದು ವಾರದ ಮೊದಲೇ ನೀಡಿದ್ದರೂ ಸಹ ಕೆಲವು ಬಟವಾಡೆ ಅಧಿಕಾರಿಗಳು ಜಂಟಿ ಆಯುಕ್ತರ ಅನುಮತಿ ಪಡೆಯದೇ ಗೈರು ಹಾಜರಾಗಿದ್ದು ಇವರುಗಳಿಂದ ವಿವರಣೆ ಪಡೆಯತಕ್ಕದ್ದು.

ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಕಲ್ಯಾಣ ಇಲಾಖೆಯ ಅಧಿಕಾರಿಗಳು ಶೇಕಡ 22.75 ರಡಿಯಲ್ಲಿ ಸೌಲಭ್ಯವನ್ನು ಪಡೆಯುವ ಫಲಾನುಭವಿಗಳನ್ನು ಗುರುತಿಸುವಲ್ಲಿ ವಿಫಲರಾಗಿರುವುದಲ್ಲದೇ ಈ ಸಂಬಂಧ ರಚಿಸಿರುವ ಆಯ್ಕೆ ಸಮಿತಿಯಲ್ಲಿ ಜನಪ್ರತಿನಿಧಿಗಳು ಇಲ್ಲದೇ ಇದ್ದು ಈ ಹಿನ್ನೆಲೆಯಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಅಧಿಕಾರಿ ವರ್ಗದವರು ವಿಫಲವಾಗುತ್ತಿರುವುದು ಈ ಸಂದರ್ಭದಲ್ಲಿ ಜಂಟಿ ಆಯುಕ್ತರವರು ಈ ಪ್ರಸ್ತಾವನೆ ಕುರಿತಂತೆ ಕೂಲಂಕುಷವಾಗಿ ಪರಿಶೀಲಿಸಿ ವರದಿ ನೀಡುವುದಾಗಿ ತಿಳಿಸಿರುತ್ತಾರೆ.

ಕಂದಾಯ ವಸೂಲಾತಿಯಲ್ಲಿ ಸಹ ಈ ವಲಯದಲ್ಲಿ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದು ಇದರಿಂದಾಗಿ ತೆರಿಗೆ ವಸೂಲಾತಿಯು ಸಹ ಸಮರ್ಪಕವಾಗಿ ಇರುವುದಿಲ್ಲ. ಈ ಬಗೆಗೂ ಸಹ ಜಂಟಿ ಆಯುಕ್ತರವರು ಕ್ರಮ ಜರುಗಿಸುವುದು ಎಂದು ಸಮಿತಿಯು ಅಭಿಪ್ರಾಯಿಸುತ್ತದೆ.

ಕಲ್ಯಾಣ ಇಲಾಖೆಯ ವತಿಯಿಂದ ವಾಹನಗಳ ವಿತರಣೆ, ಹೊಲಿಗೆ ಯಂತ್ರಗಳ ವಿತರಣೆ ಹಾಗೂ ವಿದ್ಯಾರ್ಥಿಗಳ ಆರ್ಥಿಕ ಸೌಲಭ್ಯ ವಿತರಣೆ ಕುರಿತಂತಹ ಪ್ರಕ್ರಿಯೆಗಳಲ್ಲಿ ಅಸಮರ್ಪಕತೆ ಎದ್ದು ಕಾಣುತ್ತಿದ್ದು ಈ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚಿನ ಗಮನ ಹರಿಸುವುದು ಹಾಗೂ ಜನಪ್ರತಿನಿಧಿಗಳು ಸೂಚಿಸುವ ಅಭ್ಯರ್ಥಿಗಳನ್ನು ಸಹ ಪರಿಗಣಿಸುವುದು ಸೂಕ್ತವೆಂದು ಸಮಿತಿಯು ಸೂಚಿಸಬಯಸುತ್ತದೆ.

ಕೆಲವೊಂದು ಕರ್ತವ್ಯಲೋಪಗಳಿಂದಾಗಿ ಪಾಲಿಕೆಗೆ ಹೆಚ್ಚುವರಿಯಾಗಿ ಆರ್ಥಿಕ ನಷ್ಟವನ್ನು ಉಂಟು ಮಾಡಿರುವ ಶ್ರೀ ಗುರುರಾಜ್, ದ್ವಿತೀಯ ದರ್ಜೆ ಗುಮಾಸ್ತರನ್ನು (ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರ) ಬಟವಾಡೆ ಅಧಿಕಾರಿಗಳ ಅಭಿಪ್ರಾಯ ಪಡೆಯದೇ ಸೇವೆಯಿಂದ ಬಿಡುಗಡೆಗೊಳಿಸಿ ವರ್ಗಾವಣೆಗೊಂಡಿರುವ ಸ್ಥಳದಲ್ಲಿ ಹಾಜರಾತಿ ಸಲ್ಲಿಸಲು ಕ್ರಮಕೈಗೊಂಡಂತಹ ಅದಿಕಾರಿಯ ಮೇಲೆ ಶಿಸ್ತಿನ ಕ್ರಮ ಜರುಗಿಸುವುದು ಎಂದು ಸಮಿತಿಯು ಅಭಿಪ್ರಾಯಿಸುತ್ತದೆ. ಇದನ್ನು ಹೊರತುಪಡಿಸಿ ಈ ಪ್ರಕರಣದಲ್ಲಿ ಕರ್ತವ್ಯಲೋಪ ವೆಸಗದೇ ಇರುವ ಬಟವಾಡೆ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮಕೈಗೊಳ್ಳುವ ಮುಂಚೆ ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿ ಕ್ರಮಕೈಗೊಳ್ಳುವುದು ಸೂಕ್ತವೆಂದು ಸಮಿತಿಯು ಸೂಚಿಸುತ್ತದೆ.

ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಮ್ಮ ವ್ಯಾಪ್ತಿಯ ಕಾರ್ಯವೈಖರಿಯನ್ನು ಸರಿಯಾಗಿ ಅರಿಯದೇ ಅಸಮರ್ಪಕವಾಗಿ ವಿವರಣೆಯನ್ನು ನೀಡಿದ್ದು, ಈ ಬಗ್ಗೆ ಹೆಚ್ಚಿನ ಗಮನಹರಿಸಿ ಕ್ರಮಕೈಗೊಳ್ಳಲು ಸಹ ತಿಳಿಯಪಡಿಸುತ್ತದೆ.

ಜಾಹೀರಾತು ಫಲಕಗಳ ಕುರಿತಂತೆ ತೆರವುಗೊಳಿಸುತ್ತಿದ್ದರೂ ಸಹ ಮತ್ತೆ ಮತ್ತೆ ಇವುಗಳು ರಾರಾಜಿಸುತ್ತಿರುವುದು ಕಂಡುಬಂದಿದ್ದು, ಈ ಬಗ್ಗೆ ಅಧಿಕಾರಿಗಳು ಸಮರ್ಪಕವಾಗಿ ಕಾಯನಿರ್ವಹಿಸದೇ ಇದ್ದು ಈ ನಿಟ್ಟಿನಲ್ಲಿಯು ಸಹ ಗಮನಹರಿಸುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸುತ್ತದೆ ಹಾಗೂ ಜಾಹೀರಾತು ಫಲಕಗಳ ಮಾಲೀಕರು ಪಾಲಿಕೆಯ ವಿರುದ್ದವಾಗಿ ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತಿದ್ದು ನ್ಯಾಯಾಲಯದಲ್ಲಿ ಕೆವಿಯಟ್ ಫೈಲ್ ಮಾಡಲು ಕ್ರಮ ಜರುಗಿಸದೇ ಇದ್ದು ಅವರ ಕರ್ತವ್ಯಲೋಪವನ್ನು ಸಹ ಎತ್ತಿ ತೋರಿಸುತ್ತದೆ. ಈ ಮೇರೆಗೆ ಜಾಹೀರಾತು ಫಲಕಗಳ ಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆ ತರುವ ಮುಂಚಿತವಾಗಿ ಸೂಕ್ತ ನಿಗಾವಹಿಸುವುದು ಅಧಿಕಾರಿಗಳು ಆದ್ಯ ಕರ್ತವ್ಯವಾಗಿರುತ್ತದೆ.

ಆರೋಗ್ಯಾಧಿಕಾರಿಗಳು ತಮ್ಮ ವಲಯ ವ್ಯಾಪ್ತಿಯಲ್ಲಿನ ಅನಧಿಕೃತವಾಗಿ ನಡೆಯುತ್ತಿರುವ ಉದ್ಯಮಗಳನ್ನು ತಡೆಹಿಡಿಯುವಲ್ಲಿ ವಿಫಲರಾಗಿದ್ದು, ಈ ನಿಟ್ಟಿನಲ್ಲಿ ಅವರು ಸಮರೋಪಾಧಿಯಲ್ಲಿ ಕಾರ್ಯನಿರ್ವಹಿಸಿ ಅನಧಿಕೃತ ಉದ್ಯಮಗಳನ್ನು ರದ್ದುಗೊಳಿಸಲು ಹಾಗೂ ಉದ್ಯಮ ಪರವಾನಗಿಯಿಂದ ಬರುತ್ತಿರುವ ಶುಲ್ಕವನ್ನು ಸಮರ್ಪಕವಾಗಿ ವಸೂಲಿ ಮಾಡದೇ ಇದ್ದು ಹಾಗೂ ಸಾರ್ವಜನಿಕರಲ್ಲಿ ಉದ್ಯಮಗಳ ಪರವಾನಗಿ ಪಡೆಯುವ ಕುರಿತಂತೆ ಸೂಕ್ತ ರೀತಿಯಲ್ಲಿ ಅರಿವು ಮೂಡಿಸಲು ಸಹ ಹೆಚ್ಚಿನ ರೀತಿಯಲ್ಲಿ ಕಾರ್ಯನಿರ್ವಹಿಸಿದಲ್ಲಿ ಪಾಲಿಕೆಗೆ ಹೆಚ್ಚಿನ ಆದಾಯ ಬರುವುದಲ್ಲದೇ ಅನಧಿಕೃತ ಉದ್ಯಮ ಪರವಾನಗಿಗಳನ್ನು ಸಹ ತಡೆಹಿಡಿಯಬಹುದಾಗಿದೆ.

ಈ ವಲಯ ವ್ಯಾಪ್ತಿಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರ ಸೇವಾ ಪುಸ್ತಕಗಳನ್ನು ಹಂತ ಹಂತವಾಗಿ ಪರಿಶೀಲಿಸಿ ಅದರಲ್ಲಿ ಇರುವ ಲೋಪದೋಷಗಳನ್ನು ಸರಿಪಡಿಸುವುದು ಪಾಲಿಕೆಯ ಆಡಳಿತತ್ಮಾಕ ಹಿತದೃಷ್ಟಿಯಿಂದ ಸಮಂಜಸವೆಂದು ಜಂಟಿ ಆಯುಕ್ತರಿಗೆ ಸಮಿತಿಯು ಸೂಚಿಸುತ್ತದೆ.

ಸಭೆಯಲ್ಲಿ ಉಪಸ್ಥಿತರಿದ್ದ ಅರಣ್ಯ ಇಲಾಖೆಯ ಅಧಿಕಾರಿಗಳು 16 ಸಾವಿರ ಗಿಡಗಳನ್ನು ನೆಡಲು ಕ್ರಮಕೈಗೊಳ್ಳಲಾಗಿದೆಂದು ಆದರೆ ಗಿಡಗಳನ್ನು ಸಂರಕ್ಷಿಸುವ ಬಗ್ಗೆ ಯಾವ ವಿಧವಾದ ಕ್ರಮಕೈಗೊಳ್ಳಲಾಗಿದೆ ಎಂದು ವಿವರಿಸಲು ವಿಫಲರಾಗಿರುತ್ತಾರೆ. ಶಿಥಿಲಗೊಂಡ ಮರಗಳನ್ನು ತೆಗೆದುಹಾಕಲಾಗುತ್ತಿದ್ದು, ಆದರೆ ಅದರ ಬೇರುಗಳನ್ನು ಅದೇ ಸ್ಥಳದಲ್ಲಿ ಬಿಡುತ್ತಿರುವುದರಿಂದ ಪಾದಚಾರಿಗಳಿಗೆ ಸಂಚರಿಸಲು ಕಷ್ಟವಾಗುತ್ತಿದ್ದು ಕೂಡಲೇ ಜೆಸಿಬಿ ಯಂತ್ರದಿಂದ ಇವುಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳತಕ್ಕದ್ದು.

ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ಮುನಿಸ್ವಾಮಿಗೌಡ, ಸದಸ್ಯರರವರು ಮಲ್ಲೇಶ್ವರಂ ಮಾರುಕಟ್ಟೆಯಲ್ಲಿ ಕೆಲವು ಮಳಿಗೆಗಳ ವ್ಯಾಪಾರಸ್ಥರು ತಮ್ಮ ಅಂಗಡಿಯ ಅಸುಪಾಸುನಲ್ಲಿರುವ ಮಳಿಗೆಗಳನ್ನು ಗೋಡನ್‌ಗಳಾಗಿ ಉಪಯೋಗಿಸುತ್ತಿದ್ದು, ಈ ಬಗ್ಗೆ ಸೂಕ್ತಕ್ರಮಕೈಗೊಳ್ಳಲು ಕೋರಿದ್ದು, ಜಂಟಿ ಆಯುಕ್ತರವರು ಉಪ ಆಯುಕ್ತರಿಗೆ ಸೂಚಿಸಿ ಕೂಡಲೇ ಕ್ರಮ ಜರುಗಿಸಲು ತಿಳಿಸಿರುತ್ತಾರೆ.

ವಲಯದ ಸಹಾಯಕ ನಿರ್ದೇಶಕರು (ಪಶುಸಂಗೋಪನೆ) ರವರು ಬೀದಿ ನಾಯಿಗಳ ಸಂತಾನಹರಣದ ಬಗ್ಗೆ ಸಮಿತಿಗೆ ಮಾಹಿತಿ ನೀಡಿದ್ದು, ಬೀಡಾಡಿ ಹಸುಗಳನ್ನು ಹಿಡಿದು ಹಸುವಿನ ದೊಡ್ಡಿಗೆ ಕಳುಹಿಸುತ್ತಿರುವುದಾಗಿ ಹಾಗೂ ಸದರಿ ಹಸುಗಳ ಮಾಲೀಕರಿಗೆ ಶುಲ್ಕ ವಿಧಿಸುತ್ತಿರುವುದಾಗಿ ತಿಳಿಸಿದ್ದು, ಇತ್ತೀಚೆಗೆ ಬೀಡಾಡಿ ಹಸುಗಳಿಂದ ಸಾಕಷ್ಟು ಅಪಘಾತಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಹಸುಗಳ ಮಾಲೀಕರಿಗೆ ಹಸುಗಳ ಮಾರುಕಟ್ಟೆ ದರದ ಅರ್ಧದಷ್ಟು ಶುಲ್ಕ ವಿಧಿಸಿದಲ್ಲಿ ಪಾಲಿಕೆಗೆ ಆದಾಯ ಬಂದಂತಾಗುತ್ತದೆ ಎಂದು ಸಮಿತಿಯು ಅಭಿಪ್ರಾಯಿಸುತ್ತದೆ.

ಕಾಮಗಾರಿಗೆ ವಿಭಾಗಕ್ಕೆ ಸಂಬಂಧಿಸಿದಂತೆ ವಲಯದ ಎಲ್ಲಾ ಕಾರ್ಯಪಾಲಕ ಅಭಿಯಂತರರು ಮಾಹಿತಿಯನ್ನು ನೀಡುವಲ್ಲಿ ವಿಫಲರಾಗಿದ್ದು, ಸಭೆಗೆ ಯಾವುದೇ ಮಾಹಿತಿ ತಂದಿರುವುದಿಲ್ಲವೆಂಬ ಅಸಮರ್ಪಕ ಉತ್ತರವನ್ನು ನೀಡಿ ಬೇಜವಾಬ್ದಾರಿತನ ಪ್ರದರ್ಶಿಸಿರುತ್ತಾರೆ. ಈ ಬಗ್ಗೆ ಸಮಿತಿಯು ತೀವ್ರವಾಗಿ ಆಕ್ಷೇಪಿಸುತ್ತಾ, ಇಂತಹ ಸಭೆಗಳಿಗೆ ಬರುವ ಮುನ್ನಾ ಎಲ್ಲಾ ಮಾಹಿತಿಗಳೊಂದಿಗೆ ಬರಲು ತಿಳಿಸಿ ಎಲ್ಲಾ ಅಭಿಯಂತರರುಗಳಿಗೆ ಎಚ್ಚರಿಕೆ ನೀಡಲಾಯಿತು. ವಲಯಕ್ಕೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ತುರ್ತಾಗಿ ಮುಗಿಸಲು ಸೂಚಿಸುತ್ತಾ, Spill over ಆಗದಂತೆ ಕಟ್ಟುನಿಟ್ಟಾಗಿ ಕ್ರಮಕೈಗೊಳ್ಳಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು. ವಲಯದ ಎಲ್ಲಾ ಕಾಮಗಾರಿಗಳ ಸ್ಥಳಕ್ಕೆ ಜಂಟಿ ಆಯುಕ್ತರು ಆಗಾಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಲ್ಲಿ ಕಾಮಗಾರಿಗಳ ಗುಣಮಟ್ಟವನ್ನು ಹೆಚ್ಚಿಸಬಹುದೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

ವಲಯದ ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರುಗಳು ತಮ್ಮ ತಮ್ಮ ವ್ಯಾಪ್ತಿಯ ನಕ್ಷೆ ಮಂಜೂರಾತಿ ಸಂಬಂಧಿಸಿದಂತೆ ಸಂಪೂರ್ಣ ವಿವರಗಳನ್ನು ಸಮಿತಿಯ ಮುಂದೆ ನೀಡಲು ವಿಫಲರಾಗಿರುತ್ತಾರೆ ಹಾಗೂ ನಿಯಮಬಾಹಿರವಾಗಿ ಕಟ್ಟಡದ ನಕ್ಷೆಗಳನ್ನು ಮಂಜೂರು ಮಾಡಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಪರಿಶೀಲಿಸಿ ಸೂಕ್ತಕ್ರಮಕೈಗೊಳ್ಳಲು ಜಂಟಿ... ಆಯುಕ್ತರಿಗೆ ಸೂಚಿಸಲಾಯಿತು.

ಸದರಿ ವಲಯದ 2008-09ನೇ ಸಾಲಿನಿಂದ ತಹಲ್‌ವರೆಗಿನ ಲೆಕ್ಕ ಪರಿಶೋಧನ ಆಕ್ಷೇಪಣೆಗಳ ಬಗ್ಗೆ ತೆಗೆದುಕೊಂಡ ಕ್ರಮ ಹಾಗೂ ಆಕ್ಷೇಪಣಾ ಮೊತ್ತವನ್ನು ವಸೂಲಿ ಮಾಡಿರುವ ಬಗ್ಗೆ ವಿವರಣೆ ನೀಡಲು ಎಲ್ಲಾ ಅಧಿಕಾರಿಗಳು ವಿಫಲರಾಗಿದ್ದು, ಈ ಬಗ್ಗೆ ಸಂಪೂರ್ಣ ವರದಿಯೊಂದನ್ನು ಸಮಿತಿಯ ಅವಗಾಹನೆಗೆ ಕೂಡಲೇ ಸಲ್ಲಿಸಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು.

ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ವಿವರಣೆ ಕುರಿತಂತೆ Schedule of Establishment ಬಗೆಗಿನ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಮಂಜೂರಾತಿ ಹುದ್ದೆಗಿಂತ ಹೆಚ್ಚಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಈ ರೀತಿಯ ಹೆಚ್ಚುವರಿ ವೇತನವನ್ನು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಾವತಿಸಲಾಗುತ್ತಿದೆ ಎಂಬ ಬಗ್ಗೆ ವರದಿ ನೀಡುವುದು.

ಅತಿ ಮುಖ್ಯವಾಗಿ ಅಧಿಕಾರಿಗಳು ತಮಗೆ ವಾಹನ ಸೌಲಭ್ಯಗಳನ್ನು ಹಿಂಪಡೆದಿರುವುದರಿಂದ ಕಛೇರಿ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ ಕೂಡಲೇ ಈ ಹಿಂದೆ ನೀಡಿದಂತೆ ವಾಹನ ಸೌಲಭ್ಯ ನೀಡಿದ್ದಲ್ಲಿ ಇನ್ನೂ ಹೆಚ್ಚಿನ ಶ್ರದ್ಧೆಯಿಂದ ಕಛೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ಖಾಲಿ ಇರುವ ಸ್ಥಾನಗಳನ್ನು ಕೂಡಲೇ ತುಂಬಲು ಕ್ರಮಕೈಗೊಳ್ಳಬೇಕೆಂದು ಕೇಂದ್ರ ಸ್ಥಾನೀಯ ಸಹಾಯಕರು ಕೋರಿದ್ದು, ಈ ಬಗ್ಗೆ ಸೂಕ್ತಕ್ರಮಕೈಗೊಳ್ಳಲು ಆಯುಕ್ತರಿಗೆ ಸೂಚಿಸಲಾಗುವುದು. ಒಟ್ಟಾರೆ ಈ ವಲಯ ಕಛೇರಿಯಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಂಡು ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಆಡಳಿತದಲ್ಲಿ ಸುಧಾರಣೆ ಕಾಣಬಹುದೆಂದು ಅಭಿಪ್ರಾಯಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(signature)

*ಅಧ್ಯಕ್ಷರು*
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

3/11/2011

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
5. ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
7. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ಹೊರಡಿಸಲು ಸೂಚಿಸಿದೆ.
8. ಕಛೇರಿ ಪ್ರತಿ



3/11/11

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 02-11-2011 ರಂದು ಕೈಗೊಂಡ ಆಯುಕ್ತರ ಕಛೇರಿಯ ತಪಾಸಣಾ ವರದಿ

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಹೆಚ್. ಆರ್. ಕೃಷ್ಣಪ್ಪ – ಅಧ್ಯಕ್ಷರು
2. ವೀಣಾ ನಾಗರಾಜ್ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಎ. ವಿಜಯ ರಮೇಶ್ – ಸದಸ್ಯರು
5. ಲಲಿತ ಮುಕುಂದರಾವ್ – ಸದಸ್ಯರು
6. ಫೌಜಿಯಾ ಬೇಗಂ – ಸದಸ್ಯರು
7. ವೈ.ಆರ್. ಗೌರಮ್ಮ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**
**ಶ್ರೀಯುತರುಗಳಾದ**

ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ಸಹಾಯಕ ಆಯುಕ್ತರು (ಆಡಳಿತ-1)
ವಿಶೇಷ ಅಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

ಸಮಿತಿಯು ಆಯುಕ್ತರ ಕಛೇರಿಯ ಆಡಳಿತ ಶಾಖೆಯ ತಪಾಸಣೆ ಕೈಗೊಂಡಿದ್ದು, ಪ್ರಪ್ರಥಮವಾಗಿ ಸೇವಾ ಜೇಷ್ಠತಾ ಪಟ್ಟಿ ಕುರಿತಂತೆ ಕಂದಾಯ ಇಲಾಖೆಯ ನೌಕರರೊಬ್ಬರು ಆಕ್ಷೇಪಣೆಯನ್ನು ಸಲ್ಲಿಸಿ ಪ್ರಸ್ತುತ ಹೊರಡಿಸಿರುವ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಹಲವಾರು ಲೋಪದೋಷಗಳು ಇದ್ದು ಈ ಸಂಬಂಧ ಕೂಲಂಕುಷವಾಗಿ ವಿಚಾರಣೆ ನಡೆಸಿ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ಕೋರಲಾಗಿದ್ದರೂ ಸಹ ತಮ್ಮ ಅಕ್ಷೇಪಣೆಗಳನ್ನು ಪರಿಗಣಿಸದೇ ಆತುರ ಆತುರವಾಗಿ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡಿರುವುದು ಸ್ಪಷ್ಟವಾಗಿದ್ದು, ಈ ಕುರಿತು ಪಾಲಿಕೆಯ ಖಾಯಂ ಸಿಬ್ಬಂದಿವರ್ಗದವರಿಗೆ ಬಹಳಷ್ಟು ಅನ್ಯಾಯವಾಗಿದ್ದು, ಈ ಹಿನ್ನೆಲೆಯಲ್ಲಿ ಅಂತಿಮ ಸೇವಾ ಜೇಷ್ಠತಾ ಪಟ್ಟಿಯ ಆಕ್ಷೇಪಣೆ ಕುರಿತಂತೆ ಕೂಲಂಕುಷವಾಗಿ ವಿಚಾರಣೆ ನಡೆಸಿ ನಂತರ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ಕೋರಿರುತ್ತಾರೆ. ಈ ಸಂದರ್ಭದಲ್ಲಿ ಹಾಜರಿದ್ದ ಸಹಾಯಕ ಆಯುಕ್ತರು (ಆಡಳಿತ-1) ರವರನ್ನು ವಿವರಣೆ ನೀಡಲು ಸೂಚಿಸಿದ್ದು ಅವರು ಸಮಂಜಸ ಉತ್ತರ ನೀಡುವಲ್ಲಿ ವಿಫಲರಾಗಿ ಆದಷ್ಟು ಮೌನವಾಗಿರುವಲ್ಲಿ ಸಫಲರಾಗಿರುತ್ತಾರೆ. ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಮುಂಚಿತವಾಗಿ ಆಕ್ಷೇಪಣೆ ಸಲ್ಲಿಸಿದಂತಹ ನೌಕರರುಗಳಿಂದ ವಿವರಣೆ ಪಡೆದು ಲೋಪದೋಷಗಳನ್ನು ಸರಿಪಡಿಸಿ ನಂತರ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವುದು ನಿಯಮಾನುಸಾರ ಸೂಕ್ತವೆಂಬುದು ಕಂಡುಬಂದ ಅಂಶವಾಗಿರುತ್ತದೆ. ಆದರೆ ಈ ಪ್ರಕರಣಗಳಲ್ಲಿ ಯಾವುದೇ ವಿಧವಾದ ವಿಚಾರಣೆ ಪ್ರಕ್ರಿಯೆಯಲ್ಲಿ ಆಯುಕ್ತರ ಕಛೇರಿಯ ಸಿಬ್ಬಂದಿವರ್ಗದವರು ಏಕಪಕ್ಷೀಯವಾಗಿ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿರುವುದು ಹಲವು ಅನುಮಾನಕ್ಕೆ ಆಸ್ಪದವನ್ನು ಉಂಟುಮಾಡಿರುತ್ತದೆ. ಈ ಪ್ರಕ್ರಿಯೆಯಲ್ಲಿ ಕೆಲವು ನೌಕರರ ಸೇವಾ ಪುಸ್ತಕವನ್ನು ಸಮಿತಿಯು ಪರಿಶೀಲಿಸಿದಾಗ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರಾದ ಶ್ರೀ ಜಿ.ಎಸ್. ಸಿದ್ದಲಿಂಗಪ್ಪ, ರವರು ಸದರಿ ಹುದ್ದೆಗೆ ಸಂಬಂಧಿಸಿದ ಅರ್ಹ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದೇ ಇದ್ದು ಈ ಬಗ್ಗೆ ಸೇವಾ ಪುಸ್ತಕದಲ್ಲಿನ ನ್ಯೂನತೆಗಳು ಇದ್ದು ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಕ್ರಮಜರುಗಿಸಲು ಕೋರಿ ಆಯುಕ್ತರಿಗೆ ಸೇವಾ ಪುಸ್ತಕದೊಂದಿಗೆ ಟಿಪ್ಪಣಿಯೊಂದನ್ನು ಕಳುಹಿಸಲಾಗಿದ್ದರೂ ಸಹ ಈ ಬಗ್ಗೆ ಗಮನ ಹರಿಸದೇ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಶ್ರೀ ಜಿ.ಎಸ್. ಸಿದ್ದಲಿಂಗಪ್ಪ, ಅವರ ಹೆಸರು ದಾಖಲಿಸಿ ಅರ್ಹತಾ ಇಲಾಖಾ ಪರೀಕ್ಷೆಯ ಪಟ್ಟಿಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಯಾವುದೇ ವಿಧವಾದ ದಾಖಲೆಯನ್ನು ನಮೂದಿಸದೇ ಇರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಸಹಾಯಕ ಆಯುಕ್ತರು (ಆಡಳಿತ), ಕಛೇರಿಯ ವ್ಯವಸ್ಥಾಪಕರು ಹಾಗೂ ವಿಷಯ ನಿರ್ವಾಹಕರನ್ನು ಮೋಕ್ತವಾಗಿ ವಿವರಣೆ ನೀಡಲು ಕೋರಿದ್ದು, ಆ ಸಂದರ್ಭದಲ್ಲಿ ಯಾರು ಸಹ ಸಮಂಜಸವಾದ ಉತ್ತರವನ್ನು ನೀಡದೇ ಹಿರಿಯ ಅಧಿಕಾರಿಗಳ ಮೇಲೆ ಎಲ್ಲಾ ಜವಾಬ್ದಾರಿಯನ್ನು ಎರಿರುತ್ತಾರೆ ಹಾಗೂ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ಹಿರಿಯ ಅಧಿಕಾರಿಗಳ ಆದೇಶದಂತೆ ಮಾತ್ರ ತಾವು ಕ್ರಮ ಜರುಗಿಸಿರುವುದಾಗಿ ತಿಳಿಸಿರುತ್ತಾರೆ. ತಪಾಸಣೆ ಸಂದರ್ಭದಲ್ಲಿ ಅತಿ ಮುಖ್ಯವಾಗಿ ಕಂಡುಬಂದ ಅಂಶವೆಂದರೆ ಪಾಲಿಕೆಯ ಖಾಯಂ ನೌಕರರುಗಳು ನೀಡಿರುವ ಆಕ್ಷೇಪಣೆ ಬಗ್ಗೆ ಮೋಕ್ತವಾಗಿ ವಿಚಾರಣೆ ನಡೆಸಿರುವ ಬಗ್ಗೆ

ಯಾವುದೇ ವಿಧವಾದ ದಾಖಲಾತಿ ಇರುವುದಿಲ್ಲ. ಈ ಬಗೆಗೂ ಸಹ ಸಹಾಯಕ ಆಯುಕ್ತರು (ಆಡಳಿತ) ರವರು ಯಾವುದೇ ಹೇಳಿಕೆಯನ್ನು ನೀಡಲು ಸಫಲರಾಗಿರುವುದಿಲ್ಲ. ಈ ನಿಟ್ಟಿನಲ್ಲಿ ಸಿಬ್ಬಂದಿವರ್ಗದವರ ಬೇಜಾವಾಬ್ದಾರಿತನ ಕಂಡುಬಂದಿದ್ದು ಅವರ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ, ಶಿಸ್ತಿನ ಕ್ರಮಕೈಗೊಳ್ಳುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

ಕಛೇರಿಯ ಕೆಲವು ವಿಷಯ ನಿರ್ವಾಹಕರುಗಳ ಅಲ್ಮರಾಗಳನ್ನು ಪರಿಶೀಲಿಸಿದಾಗ ಸಮರ್ಪಕವಾಗಿ ಕಡತಗಳ ವ್ಯವಹರಣೆ ನಡೆಸದೇ ಇರುವುದು ಕಂಡುಬಂದಿರುತ್ತದೆ. ಈ ಬಗೆಗೂ ಸಹ ಸಹಾಯಕ ಆಯುಕ್ತರು (ಆಡಳಿತ) ರಾಗಲಿ, ವ್ಯವಸ್ಥಾಪಕರಾಗಲಿ, ವಿಷಯ ನಿರ್ವಾಹಕರಾಗಲಿ ವಿವರಣೆಯನ್ನು ನೀಡಲು ವಿಫಲರಾಗಿರುತ್ತಾರೆ. ಒಟ್ಟಾರೆ ಆಯುಕ್ತರ ಕಛೇರಿಯ ಆಡಳಿತಾತ್ಮಕ ವಿಭಾಗದಲ್ಲಿ ಸಮರ್ಪಕವಾಗಿ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದು, ಈ ಬಗ್ಗೆ ಹಿರಿಯ ಅಧಿಕಾರಿಗಳು ಗಮನ ಹರಿಸದೇ ಇರುವುದು ಈ ವೈಫಲ್ಯಕ್ಕೆ ಕಾರಣವೆಂಬುದು ಸಮಿತಿಯು ಒಟ್ಟಾರೇ ಅಭಿಪ್ರಾಯಿಸುತ್ತಾ ಇನ್ನು ಮುಂದೆ ಇಂತಹ ಲೋಪದೋಷಗಳಿಗೆ ಅವಕಾಶ ನೀಡತಕ್ಕದಲ್ಲವೆಂದು ಸಹ ಸೂಚಿಸಲು ಇಚ್ಛಿಸುತ್ತದೆ.

ಇಂದಿನ ತಪಾಸಣೆ ಸಂದರ್ಬದಲ್ಲಿ ಕಾನೂನು ಕೋಶದ ಮುಖ್ಯಸ್ಥರ ಕಛೇರಿಯ ಆಡಳಿತ ವಿಭಾಗವನ್ನು ಪರಿಶೀಲಿಸಿದಾಗ ಶ್ರೀ ಸಪ್ತಗಿರಿ, ಹೊರಗುತ್ತಿಗೆ ನೌಕರರು, ಕಛೇರಿಯ ರಿಜಿಸ್ಟರ್‌ಗಳಲ್ಲಿ ವ್ಯವಹರಿಸಿದ್ದು ಕಂಡುಬಂದಿದ್ದು ತಮ್ಮ ಹಿರಿಯ ಅಧಿಕಾರಿಗಳ ಆದೇಶದ ರೀತ್ಯಾ ನಾನು ಈ ಕಾರ್ಯಗಳನ್ನು ನಿರ್ವಹಿಸುತ್ತಿರುವುದಾಗಿ ತಿಳಿಸಿದ್ದು, ಆ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಹಾಯಕ ಕಾನೂನು ಅಧಿಕಾರಿಗಳು ಸಮಿತಿಗೆ ತಪ್ಪು ಮಾಹಿತಿಯನ್ನು ನೀಡಲು ಪ್ರಯತ್ನಿಸಿರುತ್ತಾರೆ. ಈ ಕಛೇರಿಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಇಲಾಖಾ ಮುಖ್ಯಸ್ಥರಿಂದ ಕಾನೂನು ಅಭಿಪ್ರಾಯ ಕೋರಿ ಬರುವ ಕಡತಗಳನ್ನು ವಿನಾ: ಕಾರಣ ವಿಲೇ ಇಡುವುದು ಅಲ್ಲಿ ಕಾಯುತ್ತಿದ್ದಂತಹ ಹಿರಿಯ ನಾಗರೀಕರುಗಳಿಂದ ಕಂಡುಬಂದಿರುತ್ತದೆ. ಈ ಕಛೇರಿಯು ಅವ್ಯವಸ್ಥೆಯಿಂದ ಕೂಡಿದ್ದು ಹಿರಿಯ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸದೇ ಇರುವುದು ದುರದೃಷ್ಟಕರ ಸಂಗತಿಯೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಕಛೇರಿಯ ಸಿಬ್ಬಂದಿವರ್ಗದವರು ಗುರುತಿನ ಚೀಟಿಯನ್ನು ಧರಿಸದೇ ಇರುವುದು ಸಹ ಕಂಡುಬಂದಿರುತ್ತದೆ. ಒಟ್ಟಾರೆ ಈ ಕಛೇರಿಯುಲ್ಲಿ ಸಹ ಸಿಬ್ಬಂದಿವರ್ಗದವರು ಬಟವಾಡೆ ಅಧಿಕಾರಿಗಳ ನಿಯಂತ್ರಣದಲ್ಲಿ ಇಲ್ಲದಿರುವುದು ಸ್ಪಷ್ಟವಾಗಿರುತ್ತದೆ.

ಸಮಿತಿಯು ಇಂದಿನ ತಪಾಸಣಾ ಸಂದರ್ಭದಲ್ಲಿ ಗುರುತಿಸಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಸಾರ್ವಜನಿಕರಲ್ಲಿ ಪಾಲಿಕೆಯ ಬಗ್ಗೆ ಇರುವ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲು ಶ್ರಮವಹಿಸುವುದು ಸೂಕ್ತವೆಂದು ಅಭಿಪ್ರಾಯಿಸುತ್ತಾ, ಇಂದಿನ ತಪಾಸಣೆ ಸಂದರ್ಭದಲ್ಲಿ ಆಯುಕ್ತರ ಕಛೇರಿಯ ಆಡಳಿತಾತ್ಮಕ ವಿಭಾಗದಿಂದ ವಶಪಡಿಸಿಕೊಂತಹ ಸೇವಾ ಜೇಷ್ಠತಾ ಪಟ್ಟಿಯ ಕಡತಗಳನ್ನು ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಹಿಂದಿರುಗಿಸಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
6. *ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ಹೊರಡಿಸಲು ಸೂಚಿಸಿದೆ.*
7. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 02-11-2011 ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಹೆಚ್. ಆರ್. ಕೃಷ್ಣಪ್ಪ – ಅಧ್ಯಕ್ಷರು
2. ವೀಣಾ ನಾಗರಾಜ್ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಎ.ವಿಜಯ ರಮೇಶ್ – ಸದಸ್ಯರು
5. ಲಲಿತ ಮುಕುಂದರಾವ್ – ಸದಸ್ಯರು
6. ಫೌಜಿಯಾ ಬೇಗಂ – ಸದಸ್ಯರು
7. ವೈ.ಆರ್. ಗೌರಮ್ಮ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**
**ಶ್ರೀಯುತರುಗಳಾದ**

ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/23/2011-12**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೌಲ್ಯಮಾಪಕರು, ವ್ಯವಸ್ಥಾಪಕರು, ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು, ಪ್ರಥಮ ದರ್ಜೆ ಗುಮಾಸ್ತರು, ದ್ವಿತೀಯ ದರ್ಜೆ ಗುಮಾಸ್ತರು, ರವರುಗಳ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಹೊರಡಿಸಿರುವುದು ಸರಿಯಷ್ಟೆ. (ಈ ಪೈಕಿ ಪ್ರಥಮ ದರ್ಜೆ ಗುಮಾಸ್ತರು ಹಾಗೂ ದ್ವಿತೀಯ ದರ್ಜೆ ಗುಮಾಸ್ತರ ಸೇವಾ ಜೇಷ್ಠತಾ ಪಟ್ಟಿಯೂ ತಾತ್ಕಾಲಿಕವಾಗಿರುತ್ತದೆ. ) ಪಂಚಾಯ್ತಿ ನೌಕರರು ಹಾಗೂ ನಗರ ಸಭೆ ನೌಕರರುಗಳ ವಿಲೀನಾತಿ ಪ್ರಕ್ರಿಯೆ ಕುರಿತಂತೆ ದಿನಾಂಕ: 26-05-2011 ರಲ್ಲಿ ಕೆಲವೊಂದು ಅವಲೋಕನೆಗಳಿಗೆ ಸಂಬಂಧಿಸಿದಂತೆ ವರದಿ ನೀಡಲು ಕೋರಿದ್ದು. ಹಾಗೂ ಸಮಿತಿಯು ದಿ: 26-09-2011 ಹಾಗೂ 24-10-2011 ರಲ್ಲಿ ನಿರ್ಣಯಗಳನ್ನು ಸಹ ಕೈಗೊಳ್ಳಲಾಗಿರುತ್ತದೆ. ಈ ನಿರ್ಣಯಗಳಲ್ಲಿ ವಿಲೀನಾತಿ ಪ್ರಕ್ರಿಯೆ ಕುರಿತಂತೆ ಸಂಬಂಧಪಟ್ಟ ನೌಕರರುಗಳ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಮುಂಚಿತವಾಗಿ ನೌಕರರುಗಳ ಸೇವಾ ಪುಸ್ತಕವನ್ನು ಕೂಲಂಕುಷವಾಗಿ ಪರಿಶೀಲಿಸಿ ಲೋಪದೋಷಗಳು ಇದ್ದ ಪಕ್ಷದಲ್ಲಿ ಅವುಗಳನ್ನು ಸರಿಪಡಿಸಿ ವಿಲೀನಾತಿ ಪ್ರಕ್ರಿಯೆ ಕುರಿತಂತೆ ಈ ಸಮಿತಿಗೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ, ಮಹಾನಗರ ಪಾಲಿಕೆಯ ಸಭೆಯ ನಿರ್ಣಯದೊಂದಿಗೆ ಸರ್ಕಾರದ ಅನುಮೋದನೆಯನ್ನು ಪಡೆದು ನಂತರ ನಿಯಾಮಾನುಸಾರ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ಮೇಲ್ಕಂಡ ನಿರ್ಣಯಗಳ ರೀತ್ಯಾ ಕೋರಲಾಗಿದ್ದರೂ ಸಹ ಆಯುಕ್ತರ ಕಛೇರಿಯ ಸಿಬ್ಬಂದಿವರ್ಗದವರು ಮೇಲ್ಕಂಡ ಎಲ್ಲಾ ನಿರ್ಣಯಗಳನ್ನು ನಿರ್ಲಕ್ಷಿಸಿ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿರುವುದು ಸೋಜಿಗದ ಸಂಗತಿಯಾಗಿರುತ್ತದೆ ಹಾಗೂ ವಿಲೀನಾತಿ ಪ್ರಕ್ರಿಯೆ ಮತ್ತು ಸೇವಾ ಜೇಷ್ಠತಾ ಪಟ್ಟಿ ಕುರಿತಂತೆ ಪಾಲಿಕೆಯ ಖಾಯಂ ಸಿಬ್ಬಂದಿವರ್ಗದವರು ಆಕ್ಷೇಪಣೆಗಳನ್ನು ಸಲ್ಲಿಸಿದಾಗ್ಯೂ ಸಹ ಅವರ ಮನವಿಗಳ ಕುರಿತಂತೆ ಮೋಕ್ತ ವಿಚಾರಣೆ ನಡೆಸದೇ ಇರುವುದು ಸಹ ಕಡತ ವ್ಯವಹಾರಣೆಯಿಂದ ಕಂಡುಬಂದಿರುತ್ತದೆ. ಈ ಪ್ರಕರಣ ಕುರಿತಂತೆ ಶ್ರೀ ಜಿ.ಎಸ್. ಸಿದ್ದಲಿಂಗಪ್ಪ, ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು, ಸಹಾಯಕ ಕಂದಾಯ ಅಧಿಕಾರಿ (ವೈಟ್‌ಫೀಲ್ಡ್ ವಲಯ ಕಛೇರಿ) ರವರ ಸೇವಾ ಪುಸ್ತಕವನ್ನು

ಸಮಿತಿಯು ಪರಿಶೀಲಿಸಿದಾಗ ನೌಕರರು ಅಗತ್ಯ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದೇ ಇರುವುದು ಕಂಡುಬಂದಿದ್ದು, ಈ ಕುರಿತಂತೆ ದಿ: 19-10-2011 ರಲ್ಲಿ ಆಯುಕ್ತರಿಗೆ ಸೇವಾ ಪುಸ್ತಕದೊಂದಿಗೆ ಟಿಪ್ಪಣಿಯೊಂದನ್ನು ಕಳುಹಿಸಲಾಗಿದ್ದು, ಆದರೂ ಸಹ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಶ್ರೀ ಜಿ.ಎಸ್. ಸಿದ್ದಲಿಂಗಪ್ಪ, ಅವರ ಹೆಸರು ದಾಖಲಾಗಿರುತ್ತದೆ. ಆದರೆ ಅರ್ಹತಾ ಇಲಾಖಾ ಪರೀಕ್ಷೆಯ ಪಟ್ಟಿಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಮಾಹಿತಿ ಇರುವುದಿಲ್ಲ ಹಾಗೂ ಮೌಲ್ಯಮಾಪಕರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಕ್ರಮ ಸಂಖ್ಯೆ 10 ರಲ್ಲಿ ಶ್ರೀ ಗಿರಿಯಪ್ಪ ರವರ ಹೆಸರು ದಾಖಲಾಗಿದ್ದು, ಸದರಿ ನೌಕರರು ಅರ್ಹ ಇಲಾಖಾ ಪರೀಕ್ಷೆಗಳ ಪೈಕಿ ರೆವಿನ್ಯೂ ಹೈಯರ್ ಭಾಗ-1 ಮತ್ತು ಭಾಗ-2ರಲ್ಲಿ ಉತ್ತೀರ್ಣರಾಗಿರುವುದಿಲ್ಲ. ಮೌಲ್ಯಮಾಪಕರ ಹುದ್ದೆಯ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಕ್ರಮ ಸಂಖ್ಯೆ 11 ರ ಶ್ರೀ ವೈ. ಮುನಿಯಪ್ಪ ರವರ ಹೆಸರಿನ ಮುಂದೆ ಅರ್ಹ ಇಲಾಖಾ ಪರಿಕ್ಷೆಗಳ ಪೈಕಿ ಮು.ಲೋ.ಬೋ, ಅ.ಹೈ, ರೆ.ಹೈ-1 ಮತ್ತು 2 ಜ.ಲಾ-1 ನಮೂದಿಸಿದ್ದು, ಉಳಿದ ನೌಕರರ ಹೆಸರಿನ ಮುಂದೆಯೂ ಸಹ ಇಲಾಖಾ ಪರೀಕ್ಷೆಗಳ ಪಟ್ಟಿಯಲ್ಲಿ "ಡೀಟೋ" ಎಂದು ನಮೂದಿಸಲಾಗಿರುತ್ತದೆ. ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿ ಹೊಂದುವ ಸಂದರ್ಭದಲ್ಲಿ ಜನರಲ್ ಲಾ ಭಾಗ-2 ರ ಇಲಾಖಾ ಪರೀಕ್ಷೆಯು ಅತ್ಯವಶ್ಯಕವಾಗಿದ್ದರೂ ಸಹ ಸೇವಾ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 12 ರಿಂದ 72 ರವರೆಗಿನ ನೌಕರರುಗಳ ಯಾರೊಬ್ಬರು ಜನರಲ್ ಲಾ ಭಾಗ-2 ರ ಪರೀಕ್ಷೆಯನ್ನು ಉತ್ತೀರ್ಣರಾಗದೇ ಇರುವುದು ಕಂಡುಬಂದಿರುತ್ತದೆ. ಈ ಒಂದು ಪ್ರಕರಣದಿಂದಲೇ ಸೇವಾ ಜೇಷ್ಠತಾ ಪಟ್ಟಿಯನ್ನು ತಯಾರಿಸುವಲ್ಲಿ ಆಯುಕ್ತರ ಕಛೇರಿಯ ಸಿಬ್ಬಂದಿವರ್ಗದವರು ಪೂರ್ಣಪ್ರಮಾಣದಲ್ಲಿ ಲೋಪ ವೆಸಗಿರುವುದು ಕಂಡುಬಂದಿದ್ದು, ಇನ್ನು ಉಳಿದ ಪ್ರಕ್ರಿಯೆಗಳಲ್ಲಿ ಯಾವ ಯಾವ ವಿಧವಾದ ಲೋಪ ಉಂಟಾಗಿರಬಹುದು ಎಂಬುದು ಅನುಮಾನಕ್ಕೆ ಅಸ್ಪದವನ್ನು ಉಂಟುಮಾಡಿರುವುದರಿಂದ ಕೂಡಲೇ ಅಂತಿಮಗೊಳಿಸಿರುವ ಸೇವಾ ಜೇಷ್ಠತಾ ಪಟ್ಟಿಯನ್ನು ರದ್ದುಗೊಳಿಸಿ ಮೇಲ್ಕಂಡ ಎಲ್ಲಾ ಲೋಪದೋಷಗಳನ್ನು ಸರಿಪಡಿಸಿ ಆಕ್ಷೇಪಣೆ ನೀಡಿರುವಂತಹ ನೌಕರರುಗಳ ವಿಚಾರಣೆ ನಡೆಸಿ ನಂತರ ಸೇವಾ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಲು ಸೂಕ್ತಕ್ರಮಕೈಗೊಳ್ಳತಕ್ಕದ್ದೆಂದು ಆಯುಕ್ತರನ್ನು ಕೋರಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

3/11/11
(197) copy

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 08-11-2011 ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಹೆಚ್.ಆರ್. ಕೃಷ್ಣಪ್ಪ - ಅಧ್ಯಕ್ಷರು
2. ಎಂ.ಇ ಪಿಳ್ಳಪ್ಪ - ಸದಸ್ಯರು
3. ಮುನಿಸ್ವಾಮಿಗೌಡ - ಸದಸ್ಯರು
4. ವೈ.ಆರ್.ಗೌರಮ್ಮ - ಸದಸ್ಯರು
5. ಕೆ.ವಿ.ಯಶೋಧ - ಸದಸ್ಯರು
6. ಲಲಿತ ಮುಕುಂದರಾವ್ - ಸದಸ್ಯರು
7. ಎಸ್.ಎಂ ಮುರುಗೇಶ್ ಮುದಲಿಯಾರ್ - ಸದಸ್ಯರು
8. ವೀಣಾ ನಾಗರಾಜ್ - ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಪರ ಆಯುಕ್ತರು (ಆಡಳಿತ)
ಕೌನ್ಸಿಲ್ ಕಾರ್ಯದರ್ಶಿಗಳು
ಮುಖ್ಯ ಆರೋಗ್ಯಾಧಿಕಾರಿಗಳು
ಆರೋಗ್ಯಾಧಿಕಾರಿ (ಪೂರ್ವ)
ವಿಶೇಷ ಅಧಿಕಾರಿ (ವೃಂದ ಮತ್ತು ನೇಮಕಾತಿ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷಾಧಿಕಾರಿಗಳು (ಕೌನ್ಸಿಲ್ ಕಾರ್ಯಾಲಯ)
ವ್ಯವಸ್ಥಾಪಕರು ( ಆಯುಕ್ತರ ಕಛೇರಿ)

### ಗೈರು ಹಾಜರಿದ್ದ ಅಧಿಕಾರಿಗಳು

1. ಜಂಟಿ ಆಯುಕ್ತರು (ಆರೋಗ್ಯ)
2. ಉಪ ಆಯುಕ್ತರು (ಆಡಳಿತ)
3. ಸಹಾಯಕ ಆಯುಕ್ತರು (ಆಡಳಿತ-1)
4. ಸಹಾಯಕ ಆಯುಕ್ತರು (ನೇಮಕಾತಿ)

ಪ್ರಥಮವಾಗಿ ಅಧ್ಯಕ್ಷರು ಸಮಿತಿಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಲಾಯಿತು. ಇತ್ತೀಚೆಗೆ ಐಎಎಸ್ ಹುದ್ದೆಗೆ ಆಯ್ಕೆಯಾದ ಅಪರ ಆಯುಕ್ತರು (ಆಡಳಿತ) ಆದ ಶ್ರೀ ಬಿ.ಎಫ್.ಪಾಟೀಲ್ ರವರನ್ನು ಅಭಿನಂದಿಸಲಾಯಿತು. ಈ ಸಭೆಗೆ ಅನುಮತಿ ಪಡಯದೇ ಗೈರುಹಾಜರಾದಂತಹ ಜಂಟಿ ಆಯುಕ್ತರು (ಆರೋಗ್ಯ), ಉಪ ಆಯುಕ್ತರು (ಆಡಳಿತ), ಸಹಾಯಕ ಆಯುಕ್ತರು (ಆಡಳಿತ) ಹಾಗೂ ನೇಮಕಾತಿ ರವರಿಗೆ ಅವರ ಉದಾಸೀನ ಮನೋಭಾವನೆ ಕುರಿತಂತೆ ಕಾರಣ ಕೇಳಿ ಪತ್ರ ಜಾರಿ ಮಾಡಲು ಆದೇಶಿಸಲಾಯಿತು.

ಕೆಎಂಸಿ ಕಾಯ್ದೆಯ ರೀತ್ಯಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಕಾರ್ಯವೈಖರಿ ಕುರಿತಂತೆ ಸವಿವರವಾಗಿ ವಿವರಿಸಲು ಕೌನ್ಸಿಲ್ ಕಾರ್ಯದರ್ಶಿರವರನ್ನು ಕೋರಲಾಯಿತು. ಕೌನ್ಸಿಲ್ ಕಾರ್ಯದರ್ಶಿರವರು ಈ ಕುರಿತಂತೆ ಸಭೆಗೆ ಸವಿವರವಾಗಿ ವಿವರಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಅಪರ ಆಯುಕ್ತರು (ಆಡಳಿತ) ರವರು ಮೇಲ್ಕಂಡ ಆದೇಶದ ರೀತಿಯಲ್ಲಿಯೇ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕಾರ್ಯನಿರ್ವಹಿಸುತ್ತಿರುವುದಾಗಿ ವಿವರಣೆ ನೀಡಿದ ಸಂದರ್ಭದಲ್ಲಿ ಸಭೆಯಲ್ಲಿ ಉಪಸ್ಥಿತರಿದ್ದಂತಹ ಸದಸ್ಯರುಗಳು ಪಕ್ಷಭೇಧವನ್ನು ಮರೆತು ಸಭೆಗೆ ತಪ್ಪು ಮಾಹಿತಿ ನೀಡುತ್ತಿರುವುದಾಗಿ ಅಪರ ಆಯುಕ್ತರು (ಆಡಳಿತ) ರವರಿಗೆ ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಆ ಸಂದರ್ಭದಲ್ಲಿ ಅಪರ ಆಯುಕ್ತರು (ಆಡಳಿತ) ರವರು ಪ್ರಸ್ತುತ ತಪ್ಪು ಗ್ರಹಿಕೆಯಿಂದ ಲೋಪಉಂಟಾಗಿರುವುದಾಗಿ ತಿಳಿಸಿ ಇನ್ನು ಮುಂದೆ ಲೋಪದೋಷಗಳಿಗೆ ಆಸ್ಪದ ನೀಡುವುದಿಲ್ಲವೆಂದು ತಿಳಿಸಿ ಕೆಎಂಸಿ ಕಾಯ್ದೆಯಲ್ಲಿ ತಿಳಿಸಿರುವಂತೆ ಸಮಿತಿಯ ವ್ಯಾಪ್ತಿಗೆ ನಿಗಧಿಪಡಿಸಿರುವ ಕಾರ್ಯವೈಖರಿಯ ರೀತ್ಯಾ ತಪ್ಪದೇ ಅನುಷ್ಠಾನಗೊಳಿಸಲು ಎಲ್ಲಾ ಸಿಬ್ಬಂದಿವರ್ಗದವರಿಗೂ ತಿಳಿಸುವುದಾಗಿ ಸಭೆಯಲ್ಲಿ ವಿವರಿಸಿದರು.

ಅಧ್ಯಕ್ಷರು, ಈ ಸ್ಥಾಯಿ ಸಮಿತಿಯು ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಕೈಗೊಂಡಿದ್ದು ಈ ಬಗ್ಗೆ ತಹಲ್‌ವರೆವಿಗೂ ಯಾವ ವಿಧವಾದ ಕ್ರಮಕೈಗೊಳ್ಳಲಾಗಿದೆ ಎಂಬ ಬಗ್ಗೆ ಸಭೆಗೆ ವಿವರಿಸಲು ಸೂಚಿಸಿದ್ದು ಪ್ರಥಮವಾಗಿ ನಿಯಮ **"26ಎ"** ಅನ್ನು ರದ್ದುಪಡಿಸುವ ಸಲುವಾಗಿ ದಿನಾಂಕ: 08-08-2011 ರಂದು ಕೈಗೊಂಡ ನಿರ್ಣಯದ ಬಗ್ಗೆ ವಿವರಿಸಲು ಕೋರಿದ್ದು, ಅಪರ ಆಯುಕ್ತರು (ಆಡಳಿತ) ರವರು ಈ ವಿಷಯವು ಆಯುಕ್ತರ ವಿವೇಚನೆಗೆ ಒಳಪಟ್ಟಿರುವುದಾಗಿಯು ಈ ನಿಯಮದ ಅನುಸಾರ ಪರಿಣಿತಿ ಹೊಂದಿರುವ ಅಧಿಕಾರಿಗಳನ್ನು ಪಾಲಿಕೆಯಲ್ಲಿ ನಿಯೋಜನೆ ಮೇರೆಗೆ ನೇಮಿಸಿಕೊಳ್ಳಲು ಅವಕಾಶವಿದ್ದು ಕೆಲವೊಂದು ಸಂಧರ್ಬದಲ್ಲಿ ತುರ್ತು ಕಾರ್ಯಗಳ ನಿಮಿತ್ತ ಹೆಚ್ಚಿನ ಪರಿಣಿತಿ ಹೊಂದಿರುವ ಅಧಿಕಾರಿಗಳನ್ನು ಪಾಲಿಕೆಯ ಕೆಲಸಕಾರ್ಯಗಳ ನಿಮಿತ್ತ ನೇಮಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಅಗತ್ಯತೆಯ ಅನುಸಾರ ನಿಯೋಜಿಸಿಕೊಳ್ಳಬೇಕಾಗಿರುವುದರಿಂದ ಈ ವಿಷಯವನ್ನು ಕಾಯಿದೆಯಿಂದ ತೆಗೆದು ಹಾಕಲು ಯೋಚಿಸಬೇಕಾದ ಅಂಶವೆಂದು ತಿಳಿಸಿರುತ್ತಾರೆ ಹಾಗೂ ಈ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರೊಂದಿಗೂ ಸಹ ಸಮಲೋಚಿಸುವುದಾಗಿ ತಿಳಿಸಿದ್ದು ಆ ಸಂಧರ್ಬದಲ್ಲಿ ಸಮಿತಿಯ ಎಲ್ಲಾ ಸದಸ್ಯರು ಕಾನೂನು ಕೋಶದ ಕಾರ್ಯವೈಖರಿ ಬಗ್ಗೆ ಅತೀವ ಅಸಮಾಧಾನವನ್ನು ವ್ಯಕ್ತಪಡಿಸಿ ಕಾನೂನು ಕೋಶವು ನಿಯಮಬಾಹಿರವಾಗಿ ಕಾರ್ಯನಿರ್ವಹಿಸುತ್ತಿದ್ದು ಇದರಿಂದಾಗಿ ಪಾಲಿಕೆಗೆ ಕೆಟ್ಟ ಹೆಸರು ಬರುತ್ತಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಅಧ್ಯಕ್ಷರು ಅನ್ಯ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಬಂದಿದ್ದ 68 ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡುವ ಕುರಿತಂತಹ ಆದೇಶದಲ್ಲಿ ಕೆಲವು ಅಭಿಯಂತರರುಗಳು ಪಾಲಿಕೆಯಿಂದ ಮುಂಚಿತವಾಗಿ ಬಿಡುಗಡೆ ಹೊಂದಿ ಅವರ ಮಾತೃ ಇಲಾಖೆಯಲ್ಲಿ ಹಾಜರಾತಿ ಸಲ್ಲಿಸಿ ಕಾರ್ಯನಿರ್ವಹಿಸುತ್ತಿದ್ದರೂ ಸಹ ಅವರುಗಳ ಹೆಸರನ್ನು ಬಿಡುಗಡೆ ಪಟ್ಟಿಯಲ್ಲಿ ಸೇರ್ಪಡೆ ಮಾಡಿರುವ ಕ್ರಮವು ಆಡಳಿತ ವಿಭಾಗದ ವೈಫಲ್ಯವನ್ನು ತೋರಿದ್ದು ಈ ಬಗ್ಗೆ ಯಾವೊಬ್ಬ ಅಧಿಕಾರಿ/ನೌಕರರು ನಿಗಾವಹಿಸದೆ ಇದ್ದು ಅವರುಗಳ ಕಾರ್ಯ ನಿಸ್ವರ್ಹತೆಯಲ್ಲಿ ಲೋಪವು ಎದ್ದು ಕಂಡಿದ್ದು ಇವರುಗಳು ಕರ್ತವ್ಯಲೋಪಕ್ಕೆ ಶಿಕ್ಷಾರ್ಹರಾಗಿರುವುರೆಂಬುದು ವಿಷಾಧಿನೀಯ, ಪಾಲಿಕೆಯಲ್ಲಿ ಮುಖ್ಯ ಅಭಿಯಂತರರು (ವಿದ್ಯುತ್) ಹುದ್ದೆಯು ಮಂಜೂರಾತಿ ಇಲ್ಲದಿದ್ದರೂ ಸಹ ಅವರನ್ನು ಪಾಲಿಕೆಯಲ್ಲಿ ನೇಮಿಸಿಕೊಳ್ಳಲು ನಿಯಮಗಳಲ್ಲಿ ಅವಕಾಶವಿದೆಯೆ, ಇವರ ವೇತನ ಬಟವಾಡೆ ಕುರಿತಂತೆ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಅಗತ್ಯವಿಲ್ಲವೆ ಹಾಗೂ ಸರ್ಕಾರದಲ್ಲಿ ಇವರಿಗಿಂತ ಪರಿಣಿತ ಹಾಗೂ ಉತ್ತಮವಾದ ಅಧಿಕಾರಿಗಳು ಲಭ್ಯವಿಲ್ಲವೆ ಎಂಬ ಬಗ್ಗೆ ಕೇಳಲಾಗಿ ಅಪರ ಆಯುಕ್ತರು (ಆಡಳಿತ) ರವರು ಈ ಹಿಂದೆ ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿದ್ದು ಪಾಲಿಕೆಯ ವಿದ್ಯುತ್ ವಿಭಾಗದ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಪರಿಣಿತರಾದ ಮುಖ್ಯ ಅಭಿಯಂತರರವರನ್ನು ನಿಯೋಜಿಸಲು ಕೋರಿದ್ದು ಈ ಮೇರೆಗೆ ಸರ್ಕಾರವು ನಿಯೋಜಿಸಿರುವುದರಿಂದ ಸರ್ಕಾರದ ಆದೇಶದ ಅನುಸಾರ ಅವರ ಹಾಜರಾತಿಯನ್ನು ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಶ್ರೀ ಎಸ್.ಎಂ. ಮುರುಗೇಶ್ ಮುದಲಿಯಾರ್ ರವರು ಈ ನಿಯೋಜನೆಯು ಕ್ರಮಬದ್ಧವಾಗಿದೆಯೆ ಪಾಲಿಕೆಯಲ್ಲಿ ಮಂಜೂರಾತಿ ಹುದ್ದೆ ಇಲ್ಲದಿದ್ದರೂ ಸಹ ಸರ್ಕಾರದ ಆದೇಶ ಜಾರಿ ಮಾಡಿದೆ ಎಂಬ ನೆವದಿಂದ ಕ್ರಮಕೈಗೊಂಡಿರುವುದು ಸರಿಯೇ, ಈ ಬಗ್ಗೆ ಸರ್ಕಾರಕ್ಕೆ ಲಿಖಿತ ಮೂಲಕ ಏಕೆ ತಿಳಿಸಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿರುತ್ತಾರೆ ಹಾಗೂ ಈ ಅಧಿಕಾರಿಗಳು ಯಾವ ವಿಧವಾದ ಸಾಧನೆ ಗೈದಿರುವರು ಎಂದು ಸಮಿತಿಗೆ ವಿವರಿಸಲಾಗಿದೆಯೆ ಹಾಗೂ ಇವರ ಹಾಜರಾತಿ ಕುರಿತಂತೆ ಸಮಿತಿಯು ಸಲ್ಲಿಸಿದ ಆಕ್ಷೇಪಣೆ ಬಗ್ಗೆ ತಹಲ್‌ವರೆವಿಗೂ ಏಕೆ ವಿವರಣೆ ನೀಡಿಲ್ಲ ಎಂದು ಸಹ ಕೇಳಲಾಗಿದ್ದು ಅಪರ ಆಯುಕ್ತರು (ಆಡಳಿತ) ರವರು ಸಮಿತಿಗೆ ಈ ಬಗ್ಗೆ ವಿವರಿಸಲು ವಿಫಲರಾಗಿರುತ್ತಾರೆ.

ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಈ ಅಧಿಕಾರಿಗಳನ್ನು ಮಂಜೂರಾತಿ ಇಲ್ಲದ ಹುದ್ದೆಗೆ ನೇಮಕ ಮಾಡಿದ್ದು ಪಾಲಿಕೆಗೆ ಇವರ ಸೇವೆಯಿಂದ ಯಾವ ವಿಧವಾದ ಅನುಕೂಲವಾಗಿದೆ ಎಂದು ವಿವರಿಸಲು, ಈ ನಿಯೋಜನೆ ಕ್ರಮಬದ್ಧವಾಗಿದ್ದರೆ ಸಕಾರಣಗಳೊಂದಿಗೆ ವಿವರಣೆ ನೀಡಲು ಹಾಗೂ ಸಮಿತಿಯು ಅತಿಮುಖ್ಯವಾದ ನಿರ್ಣಯಗಳನ್ನು ಕೈಗೊಂಡಿದ್ದು **ಕೆಎಂಸಿ ಕಾಯ್ದೆ ನಿಯಮ 72ರ** ರೀತ್ಯಾ ಈ ನಿರ್ಣಯಗಳು ನಿಯಮ ಬಾಹಿರವಾಗಿದ್ದಲ್ಲಿ ಏಕೆ ರದ್ದು ಪಡಿಸಬಾರದು ಎಂದು ಸರ್ಕಾರವನ್ನು ಕೋರಬಹುದಾಗಿದ್ದರೂ ಸಹ ಕ್ರಮಕೈಗೊಳ್ಳದೆ ನಿರ್ಣಯವನ್ನು ಅನುಷ್ಠಾನಕ್ಕೆ ಜಾರಿ ಮಾಡದೆ ಇರುವ ಕುರಿತಂತೆ ಅತೀವ ಅಸಮಧಾನವನ್ನು ವ್ಯಕ್ತಪಡಿಸಿರುತ್ತಾರೆ. ಈ ಸಂದರ್ಭದಲ್ಲಿಯು ಸಹ ಅಪರ ಆಯುಕ್ತರು (ಆಡಳಿತ) ರವರು ಯಾವುದೇ ವಿಧವಾದ ವಿವರಣೆಯನ್ನು ನೀಡಲು ವಿಫಲರಾಗಿರುತ್ತಾರೆ. ಸರ್ಕಾರದ ಆದೇಶದ ರೀತ್ಯಾ 5 ಜನ ಅಭಿಯಂತರರು/ಅಧಿಕಾರಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಲು ಆದೇಶಿಸಿದ್ದು ಆದರೆ ಅವರುಗಳನ್ನು ಬಿಡುಗಡೆ ಮಾಡದೇ ಅವರಿಗೆ ಯಾವುದೇ ವಿಧವಾದ ಕಾರ್ಯವನ್ನು ವಹಿಸದೇ ವಿನಾ: ಕಾರಣ ಲಕ್ಷಾಂತರ ರೂಗಳ ವೇತನ ನೀಡುತ್ತಿರುವುದು ಸಮಂಜಸವೇ ಎಂದು ಕೇಳಲಾಗಿ ಆ ಸಂದರ್ಭದಲ್ಲಿ ಶ್ರೀ ಎಸ್.ಎಂ ಮುರುಗೇಶ್ ಮುದಲಿಯಾರ್ ರವರು ಒಂದು ಪ್ರಕರಣದಲ್ಲಿ ಸರ್ಕಾರದ ಆದೇಶದ ಅನುಸಾರ ಕ್ರಮಕೈಗೊಂಡಿರುವುದಾಗಿಯೂ ತಿಳಿಸಿದ್ದು ಈ ಪ್ರಕರಣದಲ್ಲಿ ಏಕೆ ಸರ್ಕಾರದ ಆದೇಶವನ್ನು ಪರಿಗಣಿಸಲಿಲ್ಲವೆಂದು ಕೇಳಲಾಗಿ ಅಪರ ಆಯುಕ್ತರು (ಆಡಳಿತ) ರವರು ವಿವರಣೆ ನೀಡಲು ವಿಫಲರಾಗಿರುತ್ತಾರೆ.

ಅಧ್ಯಕ್ಷರು ಸದರಿ ಅಧಿಕಾರಿಗಳಿಂದ ಪಾಲಿಕೆಗೆ ನಷ್ಟ ಉಂಟಾಗಿದ್ದ ಪಕ್ಷದಲ್ಲಿ ಅವರಿಂದ ನಷ್ಟವನ್ನು ಭರಿಸುವ ಷರತ್ತಿಗೊಳಪಡಿಸಿ ಪಾಲಿಕೆಯಿಂದ ಬಿಡುಗಡೆಗೊಳಿಸಲು ನಿರ್ಣಯ ಕೈಗೊಂಡಿದ್ದು ಈ ಬಗ್ಗೆ ಏಕೆ ಕ್ರಮಕೈಗೊಳ್ಳಲಿಲ್ಲವೆಂದು ಕೇಳಲಾಗಿ, ಅಪರ ಆಯುಕ್ತರು (ಆಡಳಿತ) ರವರು ಸಂಬಂಧಪಟ್ಟ ಕಡತವು ವಿಶೇಷ ಆಯುಕ್ತರ ಬಳಿ ಇರುವುದಾಗಿಯು ಈ ಕುರಿತು ಆಯುಕ್ತರೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳುವುದಾಗಿ ವಿವರಣೆ ನೀಡಿದರು ಅಧ್ಯಕ್ಷರು ಸದರಿ ಅಧಿಕಾರಿಗಳಿಗೆ ವಿನಾ:ಕಾರಣ ನೀಡುತ್ತಿರುವ ವೇತನವು ಬಡ ತೆರಿಗೆದಾರರ ಹಣವಾಗಿದ್ದು ಈ ರೀತಿ ಪೋಲು ಮಾಡುವುದು ಸರಿಯಲ್ಲವೆಂದು ತಿಳಿಸಿದರು, ಇದೇ ರೀತಿ ಇತ್ತೀಚಿನ ದಿನಗಳಲ್ಲಿ ನಿಯೋಜನೆ ಕುರಿತಂತೆ ಹಾಜರಾತಿ ಸಲ್ಲಿಸುವ ಸಿಬ್ಬಂದಿವರ್ಗದವರ ಕಡತಗಳನ್ನು ಸಮಿತಿಯ ಅಭಿಪ್ರಾಯ ಪಡೆಯದೇ ಕ್ರಮಜರುಗಿಸುತ್ತಿರುವುದು ಹೆಚ್ಚಾಗಿ ಕಂಡುಬರುತ್ತಿದ್ದು ಇದು ಸಮಿತಿಯ ಘನತೆಗೆ ಚ್ಯುತಿ ತರುವ ಕಾರ್ಯವಾಗಿರುವುದಾಗಿ ತಿಳಿಸಿದ್ದು ಅಪರ ಆಯುಕ್ತರು (ಆಡಳಿತ) ರವರು ಮಾನ್ಯ ಆಯುಕ್ತರ ಆದೇಶದಂತೆ ಎಲ್ಲಾ ಕಡತಗಳನ್ನು ನಿಯಮಾನುಸಾರ ಸಮಿತಿಯ ಮುಂದೆ ಮಂಡಿಸಲು ಸೂಚಿಸಿದ್ದು ಕೆಳಗಿನ ಹಂತದ ಸಿಬ್ಬಂದಿಗಳು ಈ ಬಗ್ಗೆ ಕಾರ್ಯನಿರ್ವಹಿಸದೇ ಇರುವುದಾಗಿ ತಿಳಿಸಿ ತಡವಾಗಿ ಸಭೆಗೆ ಬಂದಂತಹ ಸಹಾಯಕ ಆಯುಕ್ತರು (ಆಡಳಿತ) ರವರನ್ನು ಈ ರೀತಿಯ ಲೋಪಕ್ಕೆ ಕಾರಣ ನೀಡಲು

ಕೇಳಲಾಗಿ ಅವರು ಅಸಂಬದ್ಧವಾದ ಹೇಳಿಕೆ ನೀಡಿದ್ದು ಸದಸ್ಯರಾದ ಶ್ರೀಮತಿ ವೈ.ಆರ್. ಗೌರಮ್ಮ ರವರು ಈ ರೀತಿ ಸಭೆಯಲ್ಲಿ ಹೇಳಿಕೆ ನೀಡುವುದು ಸಮಂಜಸವಲ್ಲವೆಂದು ಸಹಾಯಕ ಆಯುಕ್ತರು (ಆಡಳಿತ) ರವರಿಗೆ ಎಚ್ಚರಿಸಿರುತ್ತಾರೆ. 5 ಜನ ಲೆಕ್ಕಾ ಅಧೀಕ್ಷರುಗಳ ( ಶ್ರೀಮತಿ ಕೆ.ಟಿ.ಗಾಯಿತ್ರಿ, ಶ್ರೀ ನರಸಿಂಹಯ್ಯ, ಶ್ರೀ ಹೆಚ್.ವಿ. ವೆಂಕಟೇಶ್, ಶ್ರೀ.ಈ.ಚಿಕ್ಕೀರಪ್ಪ, ಶ್ರೀ. ಪಿ.ಕೆ. ವಿಜಯಕುಮಾರ್) ನಿಯೋಜನೆ ಕಡತವನ್ನು ಸಹ ಸಮಿತಿಯ ಅಭಿಪ್ರಾಯ ಪಡೆಯದೇ ನೇಮಕ ಮಾಡಿಕೊಳ್ಳಲು ಯಾರು ತಮಗೆ ಆದೇಶ ನೀಡಿರುವುದಾಗಿ ಅಧ್ಯಕ್ಷರು ಕೇಳಲಾಗಿ ಅಪರ ಆಯುಕ್ತರು (ಆಡಳಿತ) ರವರು ಮುಖ್ಯ ಲೆಕ್ಕ ಪರಿಶೋಧಕರ ಕೋರಿಕೆಯ ಅನುಸಾರ ಕ್ರಮಕೈಗೊಂಡಿರುವುದಾಗಿಯು ಸಂಬಂಧಪಟ್ಟ ಕಡತವನ್ನು ಸಮಿತಿಯ ಮುಂದೆ ಮಂಡಿಸುವುದಾಗಿ ತಿಳಿಸಿರುತ್ತಾರೆ. 68 ಜನ ಅಭಿಯಂತರರ ಬಿಡುಗಡೆಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯ ಆದೇಶದ ಅನುಸಾರ ನಿಯಮವೊಂದನ್ನು ರೂಪಿಸಿ ಸರ್ಕಾರದ ಅನುಮೋದನೆಗೆ ಮಂಡಿಸಿದ್ದು ಕಡತವು ಮಾನ್ಯ ಮುಖ್ಯ ಮಂತ್ರಿಯವರ ಮೇಲ್‌ರುಜುವಿಗಾಗಿ ಇರುವುದಾಗಿ ಅಪರ ಆಯುಕ್ತರ (ಆಡಳಿತ) ರವರು ತಿಳಿಸಿದ್ದು ಸರ್ಕಾರದ ಆದೇಶ ಬಂದ ನಂತರ ನ್ಯಾಯಾಲಯಕ್ಕೆ ಮಂಡಿಸುವುದಾಗಿ ತಿಳಿಸಿದ್ದು ಸಂಬಂಧಪಟ್ಟ ನಿಯಮವನ್ನು ಪರಿಶೀಲಿಸಲಾಗಿ ಹಿಂದೆ ಇದ್ದಂತಹ ನಿಯಮವನ್ನು ಪುನ: ಸರ್ಕಾರದ ಅನುಮೋದನೆಗೆ ಮಂಡಿಸಿರುವುದು ಕಂಡುಬಂದಿದ್ದು **ಈ ನಿಯಮದಲ್ಲಿ ಅನ್ಯ ಇಲಾಖೆಗಳಿಂದ ಬರುವ ಅಭಿಯಂತರರಿಗೆ ಹೆಚ್ಚುವರಿಯಾಗಿ ಪಾವತಿಸುತ್ತಿರುವ ವೇತನದಿಂದ ಪಾಲಿಕೆಗೆ ಉಂಟಾಗುತ್ತಿರುವ ಆರ್ಥಿಕ ನಷ್ಟದ ಬಗ್ಗೆ** ಪ್ರಸ್ತಾವನೆ ಇಲ್ಲದಿರುವ ಬಗ್ಗೆ ಅಧ್ಯಕ್ಷರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದು, ಈ ಬಗ್ಗೆಗೂ ಸಹ ಅಪರ ಆಯುಕ್ತರು (ಆಡಳಿತ) ರವರು ವಿವರಣೆ ನೀಡಲು ವಿಫಲರಾಗಿರುತ್ತಾರೆ.

ಅಧ್ಯಕ್ಷರು ಮಾತನಾಡಿ ನ್ಯಾಯಾಲಯದ ಮುಂದೆ ವಾದ ಮಂಡಿಸುವ ಸಮಯದಲ್ಲಿ ಕಾನೂನು ಇಲಾಖೆಯವರು ಈ ಬಗ್ಗೆ ಏಕೆ ನ್ಯಾಯಾಲಯಕ್ಕೆ ಸೂಕ್ತವಾಗಿ ವಿವರಿಸಿಲ್ಲವೆಂದು ಕೇಳಲಾಗಿ ಅಧಿಕಾರಿಗಳು ವಿವರಣೆ ನೀಡಲು ವಿಫಲರಾಗಿರುತ್ತಾರೆ. ಶ್ರೀ ಎಂ.ಇ. ಪಿಳ್ಳಪ್ಪ, ಸದಸ್ಯರು ರವರು ಈ ವಿಷಯದ ಬಗ್ಗೆ ಚರ್ಚಿಸುತ್ತಾ ಹೆಚ್ಚುವರಿ ವೇತನ ವಿತರಣೆ ಕುರಿತಂತೆಯಾಗಲಿ ಲೆಕ್ಕ ಪರಿಶೋಧನೆಯ ಆಕ್ಷೇಪಣೆ ಬಗ್ಗೆಗಾಗಲಿ ಪಾಲಿಕೆಗೆ ಉಂಟಾಗುತ್ತಿರುವ ಆರ್ಥಿಕ ನಷ್ಟದ ಬಗ್ಗೆ ನ್ಯಾಯಲಯಕ್ಕೆ ವಿವರಣೆ ನೀಡಿದ್ದ ಪಕ್ಷದಲ್ಲಿ ಖಂಡಿತವಾಗಿ ತಡೆಯಾಜ್ಞೆ ನೀಡುತ್ತಿರಲಿಲ್ಲವೆಂದು ತಿಳಿಸಿ ಕಾನೂನು ಇಲಾಖೆಯ ವೈಫಲ್ಯದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಶ್ರೀ ಎಸ್.ಎಂ. ಮುರುಗೇಶ್ ಮುದಲಿಯಾರ್ ರವರು ಈ ಸಮಿತಿಯು ತಹಲ್‌ವರೆವಿಗೂ ನಡೆಸಿದ ಸಭೆಗಳಲ್ಲಿ ಕೇಳಿದ ಆಕ್ಷೇಪಣೆ ಕುರಿತಂತೆ ಮಾಹಿತಿಗಳು ಅಧಿಕಾರಿಗಳ ಬಳಿ ಇದೆಯೆ? ಹಾಗೂ ಸಿಬ್ಬಂದಿಗಳ ವಿವರ ಕುರಿತಂತೆ ಮಾಹಿತಿ ಇದೆಯೇ ಎಂದು ವಿವರಿಸಲು ತಿಳಿಸಿದ್ದು ಸಹಾಯಕ ಆಯುಕ್ತರು (ಆಡಳಿತ) ರವರಾಗಲಿ, ಆಯುಕ್ತರ ಕಛೇರಿಯ ವ್ಯವಸ್ಥಾಪಕರಾಗಲಿ ವಿವರಣೆಯನ್ನು ನೀಡಲು ವಿಫಲರಾಗಿರುತ್ತಾರೆ. ಶ್ರೀ ಎಸ್.ಎಂ. ಮುರುಗೇಶ್ ಮುದಲಿಯಾರ್ ರವರು ಒಬ್ಬ ಸಿಬ್ಬಂದಿಯ ವಿವಿಧ ಹುದ್ದೆಗಳಲ್ಲಿ ಒಂದೇ ಕಛೇರಿಯಲ್ಲಿ 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು ಇದರಿಂದ ಇವರುಗಳ ಕಾರ್ಯವೈಖರಿಯಲ್ಲಿ ಲೋಪ ಉಂಟಾಗುತ್ತಿದ್ದು ಈ ಬಗ್ಗೆ ಗುರುತಿಸಿ ಕ್ರಮಕೈಗೊಳ್ಳಲು ಕೋರಿದ್ದು, ಅಧ್ಯಕ್ಷರು ಒಂದೇ ವಲಯ ಕಛೇರಿ ವ್ಯಾಪ್ತಿಯಲ್ಲಿ 3 ವರ್ಷ ಸೇವೆ ಪೂರೈಸಿರುವ ಸಿಬ್ಬಂದಿಗಳನ್ನು ಕೂಡಲೇ ಮತ್ತೊಂದು ವಲಯ ಕಛೇರಿಗೆ ವರ್ಗಾಯಿಸಲು ಈಗಾಗಲೇ ದಿ: 30-08-2011 ರಂದು ಈ ಸಮಿತಿಯು ನಿರ್ಣಯ ಕೈಗೊಂಡಿದ್ದು, ಈ ಬಗ್ಗೆ ಏಕೆ ಕ್ರಮಕೈಗೊಂಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ್ದು, ಅಪರ ಆಯುಕ್ತರು (ಆಡಳಿತ) ರವರ ಪ್ರಸ್ತಾವನೆ ಕುರಿತಂತೆ ಕೂಡಲೇ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸೇವಾ ಜೇಷ್ಠತಾ ಪಟ್ಟಿ ತಯಾರಿಸಿರುವ ಸಂದರ್ಭದಲ್ಲಿ ಬಂದಂತಹ ಆಕ್ಷೇಪಣೆ ಬಗ್ಗೆ ವಿಚಾರಣೆ ನಡೆಸದೆಯೆ ಅಂತಿಮಗೊಳಿಸಿದ್ದು ಈ ಬಗ್ಗೆ ಅಧ್ಯಕ್ಷರು ವಿವರಣೆ ನೀಡಲು ಕೋರಿದ್ದು ಸಹಾಯಕ ಆಯುಕ್ತರು (ಆಡಳಿತ) ರವರು ವಿಚಾರಣೆ ನಡೆಸಿರುವುದಾಗಿಯು ನಡವಳಿಯು ಕಡತದಲ್ಲಿ ಇರುವುದಾಗಿಯು ತಿಳಿಸಿದ್ದು ಆದರೆ ದಿನಾಂಕ: 02-11-2011 ರಂದು ಆಯುಕ್ತರ ಕಚೇರಿ ತಪಾಸಣೆ ಕೈಗೊಂಡ ಸಂದರ್ಭದಲ್ಲಿ ಸಹಾಯಕ ಆಯುಕ್ತರು (ಆಡಳಿತ) ರವರು ವಿಶೇಷ ಆಯುಕ್ತರು ಆದೇಶದಂತೆ ಸೇವಾ ಜೇಷ್ಠತಾ ಪಟ್ಟಿ ಅಂತಿಮ ಮಾಡಿರುವುದಾಗಿ ತಿಳಿಸಿದ್ದು ಹಾಗೂ ಸೇವಾ ಜೇಷ್ಠತಾ ಪಟ್ಟಿಯಲ್ಲಿ **ನೇರ ನೇಮಕಾತಿ ಹಾಗೂ ಮುಂಬಡ್ತಿ ಹೊಂದಿದವರ** ಕುರಿತಂತೆ ಸುಪ್ರೀಂಕೋರ್ಟ್ ಆದೇಶದ ರೀತ್ಯಾ **ಕೆಸಿಎಸ್‌ಆರ್ ನಿಯಮಾವಳಿಗಳ ಪ್ರಕಾರ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೀಸಲು (50:50) ಗಳನ್ನು** ಅನುಸರಿಸಿ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ತಿಳಿಸಿ ದಿ: 26-09-2011 ರಂದು ನಿರ್ಣಯಕೈಗೊಂಡಿದ್ದರೂ ಸಹ ಈ ಬಗ್ಗೆ ಕ್ರಮಕೈಗೊಳ್ಳದೇ ಅಂತಿಮ ಸೇವಾ ಜೇಷ್ಠತಾ ಪಟ್ಟಿ ಹೊರಡಿಸಿರುವ ಕ್ರಮ ನಿಯಮಬಾಹಿರವಾಗಿದ್ದು ಈ ಬಗ್ಗೆ ಸಹಾಯಕ ಆಯುಕ್ತರು (ಆಡಳಿತ) ರವರನ್ನು ವಿವರಣೆ ಕೇಳಲಾಗಿ ಈ ಬಗೆಗಿನ ಅವರ ಹೇಳಿಕೆಯು ಅಪ್ರಬುದ್ಧವಾಗಿದ್ದು ಇದು ಇವರ ಬೇಜಾಬ್ದಾರಿಯನ್ನು ಎತ್ತಿ ತೋರಿಸಿದ್ದು ಇವರು ಸಮಿತಿಗೆ ಹಾಗೂ ಹಿರಿಯ ಅಧಿಕಾರಿಗಳಿಗೆ ತಪ್ಪು ಮಾಹಿತಿಯನ್ನು ನೀಡಲು ಸಮರ್ಥರಾಗಿದ್ದು ಹಾಗೂ ಬಹಳ ವರ್ಷಗಳಿಂದ ಆಯುಕ್ತರ ಆಡಳಿತ ಶಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿಕೊಂಡು ಬಂದಿದ್ದು ಉದಾಸೀನ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿರುವುದರಿಂದ ಕೂಡಲೇ ಇವರನ್ನು ವರ್ಗಾಹಿಸಿ ದಕ್ಷರಾದಂತಹ ಮತ್ತೊಬ್ಬರನ್ನು ನೇಮಿಸಲು ಆದೇಶಿಸಲಾಗಿರುತ್ತದೆ.

ಅಧ್ಯಕ್ಷರು ದಿ: 24-10-2011 ರಂದು ನಡೆದ ಈ ಸಮಿತಿಯ ಸಭೆಯ ನಿರ್ಣಯದಂತೆ ಪಾಲಿಕೆಯಲ್ಲಿ ವಿಲೀನವಾಗಿರುವ 7 ನಗರಸಭೆ ಹಾಗೂ 1 ಪುರಸಭೆ ನೌಕರರ ವಿಲೀನಾತಿ ಕುರಿತಂತೆ ಸಮಿತಿಯ ಆಕ್ಷೇಪಣೆಗಳಿಗೆ ವಿವರಣೆ ನೀಡದೇ, ಪಾಲಿಕೆಯ ಅನುಮೋದನೆ ಪಡೆಯದೇ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸಿ ಆದೇಶಿಸಿರುವ ಕ್ರಮವು ನಿಯಮಬಾಹಿರವಾಗಿದ್ದು, ಈ ಬಗ್ಗೆ ಸೂಕ್ತ ಪ್ರಸ್ತಾವನೆಯೊಂದನ್ನು ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ನಂತರ ಪಾಲಿಕೆಯ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿಕೊಳ್ಳತಕ್ಕದ್ದೆಂದು ಸೂಚಿಸಿದರೂ ಸಹ ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳದೇ ಇರುವ ಬಗ್ಗೆ ಸಮಿತಿಯು ತೀವ್ರತರವಾಗಿ ಆಕ್ಷೇಪಿಸಿದ ಹಿನ್ನೆಲೆಯಲ್ಲಿ ಅಪರ ಆಯುಕ್ತರು (ಆಡಳಿತ) ರವರು ಈ ಬಗ್ಗೆ ಕ್ರಮಕೈಗೊಂಡು ಹಿಂದೆ ಹೊರಡಿಸಿದ ಎಲ್ಲಾ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ರದ್ದುಪಡಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

ಕೆಎಂಸಿ ನಿಯಮ 88 ರ (Schedule of Establishment) ರೀತ್ಯಾ ಸಿಬ್ಬಂದಿಗಳ ವಿವರಣೆ ಹಾಗೂ ಅವರ ವೇತನ ಪಾವತಿ ಕುರಿತಂತೆ ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಅನುಮೋದನೆ ಪಡೆಯಲಾಗಿದೆಯೆ ಎಂಬ ಬಗ್ಗೆ ವಿವರಣೆ ನೀಡಲು ಅಧ್ಯಕ್ಷರು, ಅಪರ ಆಯುಕ್ತರು (ಆಡಳಿತ) ರವರನ್ನು ಕೇಳಲಾಗಿ ಸದರಿಯವರು ಸಹಾಯಕ ಆಯುಕ್ತರು (ಆಡಳಿತ) ರವರಿಗೆ ವಿವರಿಸಲು ಸೂಚಿಸಿದ್ದು ಅವರು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸೂಚಿಸಿದ್ದು ಈ ಸಂದರ್ಭದಲ್ಲಿ ಸಮಿತಿಯ ಎಲ್ಲಾ ಸದಸ್ಯರು ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದು ಈ ಕರ್ತವ್ಯ ಲೋಪದ ಬಗ್ಗೆ **" ಅಪರ ಆಯುಕ್ತರು(ಆಡಳಿತ) ರವರು ಈ ಪ್ರಕರಣದಲ್ಲಿ ತಮ್ಮ ಹಾಗೂ ತಮ್ಮ ಅಧೀನ ಸಿಬ್ಬಂದಿ ವರ್ಗದವರಿಂದ ತಪ್ಪಾಗಿರುವುದಾಗಿಯೂ** ನಿಯಮ 88 ರ ರೀತ್ಯಾ ಅಗತ್ಯ ಮಾಹಿತಿಯನ್ನು ತಯಾರಿಸಿ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಅಗತ್ಯ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರಮಕೈಗೊಳ್ಳುವುದಾಗಿ ಹಾಗೂ ಸಮಿತಿಯು ಕೋರುವ ಮಾಹಿತಿಗಳನ್ನು ಅಗತ್ಯವಾಗಿ ಕಾಲವಿಳಂಬವಾಗದಂತೆ ಒದಗಿಸುವುದಾಗಿಯೂ ಸಮಿತಿಯು ಕೈಗೊಂಡ ನಿರ್ಣಯಗಳ ಬಗ್ಗೆ ಆಯುಕ್ತರೊಂದಿಗೆ ಚರ್ಚಿಸಿ **ಒಂದು ವಾರದೊಳಗಾಗಿ ಕ್ರಮಕೈಗೊಂಡು** ಈ ಬಗ್ಗೆ ವಿವರಣೆ ನೀಡುವುದಾಗಿ ತಿಳಿಸಿರುತ್ತಾರೆ.

ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರ ವಿವರಣೆ ಕುರಿತಂತೆ, ಪಂಚಾಯ್ತಿ ನೌಕರರ ನೇಮಕಾತಿ ಬಗ್ಗೆ ವಿವರಣೆ, ಎರವಲು ಸೇವೆಯ ನೌಕರರು, ದಿನಗೂಲಿ ನೌಕರರು ಹಾಗೂ ಹೊರಗುತ್ತಿಗೆ ನೌಕರರ ವಿವರಣೆಯನ್ನು **ಒಂದು ವಾರದೊಳಗಾಗಿ** ಸಮಿತಿಗೆ ನೀಡುವುದಾಗಿ ಈ ಸಂದರ್ಭದಲ್ಲಿ ಅಪರ ಆಯುಕ್ತರು (ಆಡಳಿತ) ರವರು ತಿಳಿಸಿರುತ್ತಾರೆ ಹಾಗೂ ವೇತನ ಬಟವಾಡೆ ಕುರಿತಂತೆ ಮುಖ್ಯ ಲೆಕ್ಕಾಧಿಕಾರಿ ರವರ ಮೂಲಕ ಸಮಗ್ರ ಮಾಹಿತಿಯನ್ನು ಸಮಿತಿಗೆ ಒದಗಿಸುವುದಾಗಿಯು ತಿಳಿಸಿರುತ್ತಾರೆ. ಅತಿ ಮುಖ್ಯವಾಗಿ ಕೆಎಂಸಿ ನಿಯಮ 88 ರಲ್ಲಿನ ಅಂಶಗಳನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಆದ್ಯ ಗಮನಕ್ಕೆ ತರಲು ಸಹ ಕಟ್ಟುನಿಟ್ಟಾಗಿ ಕ್ರಮ ಜರುಗಿಸುವುದಾಗಿಯು ಸಭೆಯ ಗಮನಕ್ಕೆ ತಂದಿರುತ್ತಾರೆ ಹಾಗೂ ಹಾಲಿ ಉಂಟಾಗಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಯು ಕೈಗೊಂಡಿರುವ ನಿರ್ಣಯಗಳನ್ನು **7 ದಿನಸಗಳೊಳಗಾಗಿ ಇತ್ಯರ್ಥ ಪಡಿಸಲು ಸಹ ಸಂಬಂಧಪಟ್ಟವರಿಗೆ ತೀವ್ರವಾದ ಸೂಚನೆಯನ್ನು** ಸಹ ನೀಡುವುದಾಗಿ ಈ ಸಂದರ್ಭದಲ್ಲಿ ಅಪರ ಆಯುಕ್ತರು (ಆಡಳಿತ) ರವರು ತಿಳಿಸಿರುತ್ತಾರೆ.

ವೃಂದ ಮತ್ತು ನೇಮಕಾತಿ ನಿಯಾಮಾವಳಿ ರಚನೆ ಕುರಿತಂತೆ ಪ್ರಸ್ತುತ ಕೈಗೊಳ್ಳುತ್ತಿರುವ ಕ್ರಮದ ಬಗ್ಗೆ ವಿವರಣೆ ನೀಡಲು ತಿಳಿಸಲಾಗಿ ಈ ಕಾರ್ಯಕ್ಕಾಗಿ ನಿಯೋಜಿಸಲಾಗಿರುವ ಅಧಿಕಾರಿಗಳು ಪಾಲಿಕೆಯಲ್ಲಿ ಹಾಲಿ 18 ಇಲಾಖೆಗಳು ಪ್ರಮುಖವಾಗಿದ್ದು ಈ ಪೈಕಿ ಆರೋಗ್ಯ ಇಲಾಖೆಯಲ್ಲಿ ಶೇ.60 ರಷ್ಟು, ಕಾಮಗಾರಿ ಇಲಾಖೆಯಲ್ಲಿ ಶೇ 20 ರಷ್ಟು, ಹಾಗೂ ಇತರೆ ಇಲಾಖೆಗಳಿಂದ ಶೇ.20 ರಷ್ಟು, ಸಿಬ್ಬಂದಿಗಳು ಇರುವುದಾಗಿಯು ತಿಳಿಸಿದ್ದು ಮುಖ್ಯ ಆರೋಗ್ಯಾಧಿಕಾರಿ ರವರೊಂದಿಗೆ ಸರ್ಕಾರದ ಆರೋಗ್ಯ ಮತ್ತು ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದ ಪ್ರತಿಯನ್ನು ಪಡೆದು ಅದರಲ್ಲಿನ ಅಂಶಗಳನ್ನು ಗಮನಿಸಿ ತಿದ್ದುಪಡಿ ಮಾಡಲು ಕ್ರಮಕೈಗೊಂಡಿರುವುದಾಗಿ ತಿಳಿಸಿರುತ್ತಾರೆ ಹಾಗೂ ಉಳಿದ ಇಲಾಖೆಗಳ ವತಿಯಿಂದ ಅತಿಮುಖ್ಯವಾಗಿ ಕಾಮಗಾರಿ ಇಲಾಖೆಯಿಂದ ಮುಖ್ಯ ಕಛೇರಿಯಲ್ಲಿನ ಹಿರಿಯ ಅಧಿಕಾರಿಗಳು ಮಾಹಿತಿ ಒದಗಿಸಲು ವಿಳಂಬ ಮಾಡುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟವರಿಗೆ ಅಗತ್ಯ ಮಾಹಿತಿಯನ್ನು ಒದಗಿಸಲು ಸೂಚಿಸಲು ಕೋರಿದ್ದು ಅಧ್ಯಕ್ಷರು ಈ ಬಗ್ಗೆ ಕೆಳಕಂಡ ದಿನಾಂಕಗಳಂದು ಮುಖ್ಯ ಕಛೇರಿಯ ಸಭಾಂಗಣ-2 ರಲ್ಲಿ ಸಭೆಯನ್ನು ಕರೆದು ಆಯಾ ಇಲಾಖೆಗಳ ಮುಖ್ಯಸ್ಥರು ವೃಂದ ಮತ್ತು ನೇಮಕಾತಿ ರಚನೆಗೆ ಅಗತ್ಯ ಮಾಹಿತಿಗಳನ್ನು ತಪ್ಪದೇ ಒದಗಿಸಲು ಸೂಚಿಸಿರುತ್ತಾರೆ.

ದಿನಾಂಕ: 10-11-2011 ಬೆಳಿಗ್ಗೆ 9.00 ಗಂಟೆಗೆ ಆರೋಗ್ಯ ಇಲಾಖೆ
ದಿನಾಂಕ: 11-11-2011 ಬೆಳಿಗ್ಗೆ 9.00 ಗಂಟೆಗೆ ಕಾಮಗಾರಿ ಇಲಾಖೆ
ದಿನಾಂಕ: 15-11-2011 ಬೆಳಿಗ್ಗೆ 9.00 ಗಂಟೆಗೆ ವಿದ್ಯಾಇಲಾಖೆ
ದಿನಾಂಕ: 16-11-2011 ಬೆಳಿಗ್ಗೆ 9.00 ಗಂಟೆಗೆ ಕಂದಾಯ ಹಾಗೂ ಭೂಸ್ವಾಧೀನ ಇಲಾಖೆ
ದಿನಾಂಕ: 17-11-2011 ಬೆಳಿಗ್ಗೆ 9.00 ಗಂಟೆಗೆ ತೋಟಗಾರಿಕೆ, ಅರಣ್ಯ, ಅಂಕಿ ಅಂಶ ವಿಭಾಗ

ಈ ಇಲಾಖೆಗಳ ಮಾಹಿತಿ ಪಡೆದ ನಂತರ ಆಡಳಿತ ವಿಭಾಗ ಹಾಗೂ ಕೌನ್ಸಿಲ್ ವಿಭಾಗಗಳಿಂದ ಮಾಹಿತಿಯನ್ನು ಪಡೆಯಲು ಎಲ್ಲಾ ಇಲಾಖೆಗಳ ಸಮಗ್ರ ಮಾಹಿತಿಯನ್ನು ದಿ: 30-11-2011 ರ ಮುಂಚಿತವಾಗಿ ಅಂತಿಮಗೊಳಿಸತಕ್ಕದೆಂದು ಈ ಸಂಬಂಧ ಸಭೆಯ ತಿಳುವಳಿಕೆ ಪತ್ರಗಳನ್ನು ಅಪರ ಆಯುಕ್ತರ (ಆಡಳಿತ) ರವರು ಇಂದೇ ಜಾರಿ ಮಾಡತಕ್ಕದೆಂದು ತಿಳಿಸಿದರು. ವೃಂದ ಮತ್ತು ನೇಮಕಾತಿ ರಚನೆಗೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಕಛೇರಿಗೆ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒದಗಿಸಲು ತ್ವರಿತವಾಗಿ ಕ್ರಮಕೈಗೊಳ್ಳಲು ಸಹ ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

*ಪ್ರತಿಯನ್ನು:*

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
6. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿ: 18-11-2011 ರಂದು ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ರಚನೆ ಕುರಿತಂತೆ ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್.ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ. ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ವೈ.ಆರ್. ಗೌರಮ್ಮ – ಸದಸ್ಯರು
5. ಎ.ವಿಜಯರಮೇಶ್ – ಸದಸ್ಯರು
6. ಲಲಿತ ಮುಕುಂದರಾವ್ – ಸದಸ್ಯರು
7. ವೀಣಾ ನಾಗರಾಜ್ – ಸದಸ್ಯರು
8. ಫೌಜಿಯಾ ಬೇಗಂ – ಸದಸ್ಯರು
9. ಕೆ.ವಿ.ಯಶೋಧ – ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಉಪ ಆಯುಕ್ತರು (ಆಡಳಿತ)
ಕೌನ್ಸಿಲ್ ಕಾರ್ಯದರ್ಶಿಗಳು
ಪ್ರಧಾನ ಅಭಿಯಂತರರು
ಮುಖ್ಯ ಅಭಿಯಂತರರು (ದಕ್ಷಿಣ)
ಮುಖ್ಯ ಅಭಿಯಂತರರು (ಪೂರ್ವ)
ಮುಖ್ಯ ಅಭಿಯಂತರರು(ಬೊಮ್ಮನಹಳ್ಳಿ)
ಮುಖ್ಯ ಅಭಿಯಂತರರು (ಪಶ್ಚಿಮ)
ಮುಖ್ಯ ಅಭಿಯಂತರರು(ರಾಜರಾಜೇಶ್ವರಿನಗರ)
ಮುಖ್ಯ ಅಭಿಯಂತರರು (ರಸ್ತೆ ಮತ್ತು ಮೂಲಭೂತ ಸೌಕರ್ಯ)
ಮುಖ್ಯ ಅಭಿಯಂತರರು(ಮಹಾದೇವಪುರ)
ಮುಖ್ಯ ಅಭಿಯಂತರರು(ಯಲಹಂಕ)
ಮುಖ್ಯ ಅಭಿಯಂತರರು (ವಿದ್ಯುತ್)
ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ)
ಅಧೀಕ್ಷಕ ಅಭಿಯಂತರರು (ಯಲಹಂಕ)
ಅಧೀಕ್ಷಕ ಅಭಿಯಂತರರು (ಮಹಾದೇವಪುರ)
ಕಾರ್ಯಪಾಲಕ ಅಭಿಯಂತರರು ( ಘನತ್ಯಾಜ್ಯ ನಿರ್ವಹಣೆ)
ಕಾರ್ಯಪಾಲಕ ಅಭಿಯಂತರರು (ಕೆರೆಗಳು)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿ

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಸಮಿತಿಗೆ ತಮ್ಮಗಳ ಪರಿಚಯವನ್ನು ಮಾಡಿಕೊಂಡಿರುತ್ತಾರೆ. ಪ್ರಥಮವಾಗಿ ಮುಖ್ಯ ಅಭಿಯಂತರರು (ದಕ್ಷಿಣ) ರವರು ತಮ್ಮ ವ್ಯಾಪ್ತಿಗೆ 44 ವಾರ್ಡ್‌ಗಳು ಇದ್ದು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರು ರವರುಗಳಿಗೆ ವಾರ್ಡ್‌ನಲ್ಲಿಯೇ ಹೆಚ್ಚಿನ ಕೆಲಸಕಾರ್ಯಗಳಿದ್ದು ಇದರಿಂದಾಗಿ ಸ್ವಚ್ಚತೆ ಕಾರ್ಯದ ಬಗ್ಗೆ ಗಮನ ಹರಿಸಲು ಸಾಧ್ಯವಿಲ್ಲದೆ ಇರುವುದರಿಂದ ಹೆಚ್ಚುವರಿಯಾಗಿ 44 ವಾರ್ಡ್‌ಗಳಿಗೆ ಪರಿಸರ ಅಭಿಯಂತರರುಗಳನ್ನು ನೇಮಿಸಲು ಕೋರಿರುತ್ತಾರೆ. ಅಧ್ಯಕ್ಷರು ಪ್ರತಿ ವಾರ್ಡಿಗೆ ಒಬ್ಬ ಪರಿಸರ ಅಭಿಯಂತರರನ್ನು ನೇಮಿಸುವುದು ಅಗತ್ಯವಿಲ್ಲವೆಂದು ಹಾಗೂ ಪ್ರತಿ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Recd 10 copy
03/12/11

ಶಾಸಕರ ವಿಭಾಗಕ್ಕೆ 1 ಪರಿಸರ ಅಭಿಯಂತರರನ್ನು ನೇಮಿಸುವುದು ಸಮಂಜಸವೆಂದು ತಿಳಿಸಿ 198 ವಾರ್ಡ್‌ಗಳಿಗೆ ತಲಾ 1 ಸಹಾಯಕ ಅಭಿಯಂತರರನ್ನು 28 ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೆ 1 ಪರಿಸರ ಅಭಿಯಂತರರವರನ್ನು ನೇಮಿಸುವುದು ಸೂಕ್ತವೆಂದು ತಿಳಿಸಿರುತ್ತಾರೆ. ಮುಖ್ಯ ಅಭಿಯಂತರರು (ಯೋಜನೆ) ವ್ಯಾಪ್ತಿಗೆ ಮಾರುಕಟ್ಟೆ, ಕೆರೆಗಳು, ಎಂಪಿಇಡಿ, ಬಿಎಸ್‌ಯುಪಿ ಇಲಾಖೆಗಳನ್ನು ವಿಲೀನಗೊಳಿಸಿ ಈ ವಿಭಾಗಕ್ಕೆ ಅಗತ್ಯ ಹುದ್ದೆಗಳನ್ನು ಸೃಜಿಸಲು ಸಮಿತಿಯು ತಿಳಿಸಿರುತ್ತದೆ. ಇದೇ ರೀತಿ ಬೃಹತ್ ನೀರುಗಾಲುವೆ ಹಾಗೂ ಬೃಹತ್ ರಸ್ತೆಗಳ ವಿಭಾಗಕ್ಕೆ ಸಹ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ. ಬೃಹತ್ ನೀರುಗಾಲುವೆ ವಿಭಾಗಕ್ಕೆ ಹಾಲಿ ಇರುವ ಒಂದು ಮುಖ್ಯ ಅಭಿಯಂತರರ ಜೊತೆಗೆ ಮತ್ತೊಂದು ಮುಖ್ಯ ಅಭಿಯಂತರರ ಹುದ್ದೆಯನ್ನು ಸೃಜಿಸಿದ್ದಲ್ಲಿ ಸಮರ್ಪಕವಾಗಿ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದೆಂದು ಶ್ರೀ ಅನಂತಸ್ವಾಮಿ, ಮುಖ್ಯ ಅಭಿಯಂತರರು ಕೋರಿರುತ್ತಾರೆ. ಇದೇ ರೀತಿ ಬೃಹತ್ ರಸ್ತೆ ವಿಭಾಗದಲ್ಲಿಯೂ ಸಹ ಹಾಲಿ ಇರುವ ಮುಖ್ಯ ಅಭಿಯಂತರರ ಹುದ್ದೆಯೊಂದಿಗೆ ಮತ್ತೊಂದು ಮುಖ್ಯ ಅಭಿಯಂತರರನ್ನು ಸೃಜಿಸಿದ್ದಲ್ಲಿ ಬೃಹತ್ ರಸ್ತೆ ವಿಭಾಗ ಹಾಗೂ ರಸ್ತೆ ಅಗಲೀಕರಣ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವುದೆಂದು ಈ ಸಂದರ್ಭದಲ್ಲಿ ತಿಳಿಸಿರುತ್ತಾರೆ. ಇದೇ ರೀತಿ ಟಿವಿಸಿಸಿ ವಿಭಾಗವನ್ನು ರದ್ದುಪಡಿಸಿ ಜಾಗೃತಿ ಹಾಗೂ ಗುಣನಿಯಂತ್ರಣ (VQC) ವಿಭಾಗವನ್ನು ಬಲಪಡಿಸುವುದು ಹಾಗೂ ಕಾಮಗಾರಿ ನಡೆಯುತ್ತಿರುವ ಸಂದರ್ಬದಲ್ಲಿಯೆ ಈ ವಿಭಾಗದ ಅಭಿಯಂತರರುಗಳು ಸ್ಥಳ ಪರಿಶೀಲಿಸಿ ಕಾಮಗಾರಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ದೃಢೀಕರಣ ಪತ್ರ ನೀಡಿದ ನಂತರ ಬಿಲ್ಲು ರಿಜಿಸ್ಟರ್‌ನಲ್ಲಿ ಹಣ ಪಾವತಿ ಕುರಿತಂತೆ ದಾಖಲಾತಿ ಮಾಡುವುದು ಹಾಗೂ ಈ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಕಾಮಗಾರಿಗಳ ಲೋಪದೋಷಗಳ ಕುರಿತಂತೆ ಸ್ಥಳ ಪರಿಶೀಲನೆ ನಡೆಸಿ ಕ್ರಮ ಜರುಗಿಸುವುದು ಸೂಕ್ತವಲ್ಲವೆಂದು ಸಮಿತಿಯು ಅಭಿಪ್ರಾಯಿಸುತ್ತದೆ ಹಾಗೂ ಕಾಮಗಾರಿ ನಡೆಯುವ ಸಂದರ್ಭದಲ್ಲಿಯೇ ಈ ವಿಭಾಗದ ಅಭಿಯಂತರರುಗಳು ಕಾಮಗಾರಿ ಬಳಸುತ್ತಿರುವ ಸಾಮಗ್ರಿಗಳ ಗುಣಮಟ್ಟ ಕುರಿತಂತೆ ಕೂಲಂಕುಷ ಪರಿಶೀಲನೆ ಅಗತ್ಯವೆಂಬುದು ಸಹ ಮನದಟ್ಟು ಮಾಡಿಕೊಳ್ಳುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸುತ್ತದೆ ಹಾಗೂ VQC ವಿಭಾಗಕ್ಕೂ ಸಹ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಲು ಕ್ರಮಕೈಗೊಳ್ಳತಕ್ಕದ್ದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿ ಇಲಾಖೆಯ ದಕ್ಷತೆ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಧಾನ ಅಭಿಯಂತರರಿಗೆ ಹೆಚ್ಚಿನ ಪರಿಣಿತ ಹೊಂದಿರುವ ಅಧೀನ ಸಿಬ್ಬಂದಿಗಳನ್ನು ಒದಗಿಸಿ ಪಾಲಿಕೆಯ ಕಾಮಗಾರಿ ಇಲಾಖೆಯ ಕಾರ್ಯವೈಖರಿಯು ಉತ್ತಮ ಮಟ್ಟವನ್ನು ತಲುಪಲು ಅಗತ್ಯ ಕ್ರಮಕೈಗೊಳ್ಳಲು ಸಹ ಸಮಿತಿಯು ಅಭಿಪ್ರಾಯಿಸುತ್ತದೆ. ಈ ವಿಭಾಗದಲ್ಲಿ ಕೆಲಸ ಪರಿವೀಕ್ಷಕರುಗಳಿಗೆ ಯಾವುದೇ ನಿಗದಿತ ಜವಾಬ್ದಾರಿಯನ್ನು ವಹಿಸದೇ ಇದ್ದು ಇದರಿಂದಾಗಿ ಅವರುಗಳಿಂದ ಸಾಕಷ್ಟು ಕರ್ತವ್ಯ ಲೋಪಗಳು ಉಂಟಾಗುತ್ತಿದ್ದು, ಇವರುಗಳ ಬಟವಾಡೆ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅಧಿಕಾರಿಗಳು ಇವರ ದೈನಂದಿನ ಕಾರ್ಯವೈಖರಿ ಕುರಿತಂತೆ ಪ್ರತಿ ದಿವಸ ಮೇಲುಸ್ತುವಾರಿ ವಹಿಸುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

ಪ್ರಸ್ತುತ ನಕ್ಷೆ ಮಂಜೂರಾತಿ ಕುರಿತಂತೆ ವಲಯಗಳಲ್ಲಿ ಅನಗತ್ಯವಾಗಿ ಹಾಗೂ ಹೆಚ್ಚುವರಿ ಸಂಖ್ಯೆಯಲ್ಲಿ ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರುಗಳನ್ನು ನೇಮಕ ಮಾಡಿದ್ದು ಇವರುಗಳು ಕೇವಲ ನಕ್ಷೆ ಮಂಜೂರಾತಿ ಕಾರ್ಯನಿರ್ವಹಿಸುತ್ತಿದ್ದು, ಈ ವಿಭಾಗಗಳಲ್ಲಿ ಇವರುಗಳ ಕಾರ್ಯವೈಖರಿ ಸಮರ್ಪಕವಾಗಿ ಇಲ್ಲದೇ ಇದ್ದು ಸಾರ್ವಜನಿಕರಿಂದ ಸಾಕಷ್ಟು ದೂರುಗಳಿಗೆ ಆಸ್ಪದ ನೀಡುತ್ತಿದ್ದು ಹಾಗೂ ಅಗತ್ಯ ವಿದ್ಯಾರ್ಹತೆ ಹಾಗೂ ಅನುಭವವನ್ನು ಹೊಂದದೇ ಇದ್ದರೂ ಸಹ ಶಿಫಾರಸ್ಸು ಮೂಲಕ ಸಹಾಯಕ ನಿರ್ದೇಶಕರುಗಳ ಹುದ್ದೆಯಲ್ಲಿ ನಿಯೋಜನೆ ಹೊಂದುತ್ತಿದ್ದು, ಹಾಲಿ 1200 ಚದರ ಅಡಿ ನಿವೇಶನಗಳಲ್ಲಿ ನಕ್ಷೆ ಮಂಜೂರಾತಿ ಕುರಿತಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ಪ್ರತ್ಯಾಯೋಜನೆ ನೀಡಿದ್ದು ಇದೇ ರೀತಿ ಈ ಹಿಂದೆ ಇದ್ದಂತೆ ವಲಯ ಕಾರ್ಯಪಾಲಕ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರುಗಳ ಪರಿವಿಧಿಯಲ್ಲಿಯೆ ನಿವೇಶನಗಳ ಅಳತೆಗಳ ಅನುಸಾರ ನಕ್ಷೆ ಮಂಜೂರಾತಿಗೆ ಪ್ರತ್ಯಾಯೋಜನೆ ನೀಡತಕ್ಕದ್ದೆಂದು ಹಾಗೂ ಬಹುಮಹಡಿ ಕಟ್ಟಡಗಳ ನಿರ್ಮಾಣ ಕುರಿತಂತೆ ಮುಖ್ಯ ಕಛೇರಿಯಲ್ಲಿನ ಜಂಟಿ ನಿರ್ದೇಶಕರ ವ್ಯಾಪ್ತಿಗೆ ಮಂಜೂರಾತಿಗೆ ಕಡತವನ್ನು ಸಲ್ಲಿಸಲು ಸೂಚಿಸಬಹುದೆಂದು ಈ ನಿಟ್ಟಿನಲ್ಲಿ ವಲಯಗಳಲ್ಲಿನ ಸಹಾಯಕ ನಿರ್ದೇಶಕರು (ನಗರ ಯೋಜನೆ) ವಿಭಾಗ/ಹುದ್ದೆಗಳನ್ನು ರದ್ದುಪಡಿಸುವುದು ಸಮಂಜಸವೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಹಾಲಿ ಮಹಾನಗರ ಪಾಲಿಕೆಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ಯಾಂಗ್‌ಮೆನ್‌ಗಳು ಪ್ರತಿದಿವಸ ಕಛೇರಿಗೆ ಹಾಜರಾಗದೇ ಇರುವುದೇ ಅಲ್ಲದೇ ವೇತನ ಪಡೆಯುತ್ತಿರುವ ಇಲಾಖೆಗಳಿಂದ ವಿವಿಧ ಇಲಾಖೆಗಳಿಗೆ ಇತರೆ ಹುದ್ದೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಕೂಡಲೇ ಇವರುಗಳ ನಿಯೋಜನೆಯನ್ನು ರದ್ದುಪಡಿಸಿ ಕ್ರಮವಾಗಿ 6 ಜನ ಗ್ಯಾಂಗ್‌ಮೆನ್‌ಗಳನ್ನು 198 ವಾರ್ಡ್‌ಗಳಿಗೂ ಅವರ ವೇತನ ಬಟವಾಡೆ ಸ್ಥಳದೊಂದಿಗೆ ವರ್ಗಾಯಿಸುವುದು ಸೂಕ್ತವೆಂದು ಅಭಿಪ್ರಾಯಿಸುತ್ತಾ, ಈ ದಿವಸವೇ ಈ ಕುರಿತಂತೆ ಕಛೇರಿಯ ಆದೇಶವನ್ನು ಹೊರಡಿಸಲು ಅಪರ ಆಯುಕ್ತರು (ಆಡಳಿತ) ರವರಿಗೆ ಸೂಚಿಸಲಾಯಿತು. ಹಾಲಿ ಪಾಲಿಕೆಯಲ್ಲಿ ಉಗ್ರಾಣ ಹಾಗೂ ಕಾರ್ಯಗಾರ ಇಲಾಖೆಯು ಕಾರ್ಯನಿರ್ವಹಿಸದೇ ಇರುವುದರಿಂದ ಈ ವಿಭಾಗದಲ್ಲಿ ಮಂಜೂರಾತಿಯಾಗಿರುವ ಹಲವಾರು ಅನುಪಯುಕ್ತ ಹುದ್ದೆಗಳನ್ನು ರದ್ದುಪಡಿಸಿ ಈ ಹುದ್ದೆಗಳ ಅಡಿಯಲ್ಲಿ ಬೆರಳೆಣಿಕೆಷ್ಟು ಕಾರ್ಯವನ್ನು ನಿರ್ವಹಿಸುತ್ತಿದ್ದು ಅವರುಗಳನ್ನು ಇತರೆ ಇಲಾಖೆಯಲ್ಲಿನ ಸಮನಾಂತರ ಹುದ್ದೆಗೆ ವರ್ಗಾಯಿಸತಕ್ಕದ್ದು. ಇದೇ ರೀತಿ ಪಾಲಿಕೆಯಲ್ಲಿನ ಈಜು ಕೊಳ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಂತಹ ಈಜು ಮಾರ್ಗದರ್ಶಕರು ಹಾಗೂ ಇನ್ನೂ ಇತರೆ ಹುದ್ದೆಗಳನ್ನು ರದ್ದುಪಡಿಸಿ ಇವರುಗಳನ್ನು ಸಹ ಇತರೆ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಇಲಾಖೆಯಲ್ಲಿನ ಸಮನಾಂತರ ಹುದ್ದೆಗೆ ವರ್ಗಾಯಿಸತಕ್ಕದ್ದು. ಹಾಲಿ ಇರುವ ಕ್ರಿಮಿಟೋರಿಯಲ್ ಆಪರೇಟರ್ ಹುದ್ದೆಯನ್ನು 40 ಸಂಖ್ಯೆಗಳಿಗೆ ಹೆಚ್ಚಿನ ಸೃಜಿಸಲು ಸಹ ಕ್ರಮಕೈಗೊಳ್ಳಲು ಸೂಚಿಸಿದೆ.

ಸಾರಿಗೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಲಿನರ್ ಹುದ್ದೆಗಳನ್ನು ರದ್ದುಪಡಿಸಿ ಹೊಸ ವಾರ್ಡ್‌ಗಳಲ್ಲಿ ಅವಶ್ಯವಿರುವ ಗ್ಯಾಂಗ್‌ಮೆನ್‌ಗಳ ಹುದ್ದೆಗೆ ವೇತನ ಬಟವಾಡೆ ಸ್ಥಳದೊಂದಿಗೆ ವರ್ಗಾಯಿಸತಕ್ಕದ್ದು. ಅತಿ ಮುಖ್ಯವಾಗಿ ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು ಹುದ್ದೆಗಳನ್ನು ವಾರ್ಡ್‌ಗಳಿಗೆ ಹಂಚುವ ಸಂದರ್ಭದಲ್ಲಿ ಹೆಚ್ಚುವರಿಯಾಗಿ 100 ಜನ ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರುಗಳು ಕಾರ್ಯನಿರ್ವಹಿಸುತ್ತಿದ್ದು, ಕೂಡಲೇ ಇವರುಗಳ ನಿಯೋಜನೆಯನ್ನು ರದ್ದುಪಡಿಸಿ ಅವರ ಮಾತೃ ಇಲಾಖೆಗೆ ಹಿಂದಿರುಗಿಸಿದ ಪಕ್ಷದಲ್ಲಿ ಪಾಲಿಕೆಗೆ ಉಂಟಾಗುತ್ತಿರುವ ಆರ್ಥಿಕ ನಷ್ಟವನ್ನು ತಡೆಯಲು ಸಾಧ್ಯವೆಂದು ಈ ಸಂಧರ್ಭದಲ್ಲಿ ಸಮಿತಿಯು ತಿಳಿಸಲು ಇಚ್ಛಿಸುತ್ತದೆ. ಇದೇ ರೀತಿ ಸಾರಿಗೆ ವಿಭಾಗದಲ್ಲಿ ಹಲವಾರು ಚಾಲಕರುಗಳು ಯಾವುದೇ ವಾಹನಗಳಿಗೆ ಕಾರ್ಯನಿರ್ವಹಿಸಲು ನಿಯೋಜಿಸಲ್ಪಡದೇ ವೃಥಾ ವೇತನವನ್ನು ಪಡೆಯುತ್ತಿದ್ದು ಈ ಬಗ್ಗೆ ಸಹ ಆಯುಕ್ತರು ಗಮನಹರಿಸುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯ ಪಡುತ್ತಾ ಇಂದಿನ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
6. ವಿಶೇಷ ಅಧಿಕಾರಿಗಳು (ವೃಂದ ಮತ್ತು ನೇಮಕಾತಿ ನಿಯಮಾವಳಿ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
7. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿ: 22-11-2011 ರಂದು ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ರಚನೆ ಕುರಿತಂತೆ ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಹೆಚ್.ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ. ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ವೈ.ಆರ್. ಗೌರಮ್ಮ – ಸದಸ್ಯರು
5. ಎ.ವಿಜಯರಮೇಶ್ – ಸದಸ್ಯರು
6. ಲಲಿತ ಮುಕುಂದರಾವ್ – ಸದಸ್ಯರು
7. ವೀಣಾ ನಾಗರಾಜ್ – ಸದಸ್ಯರು
8. ಫೌಜಿಯಾ ಬೇಗಂ – ಸದಸ್ಯರು
9. ಕೆ.ವಿ.ಯಶೋಧ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಪರ ಆಯುಕ್ತರು (ಆಡಳಿತ)
ಕೌನ್ಸಿಲ್ ಕಾರ್ಯದರ್ಶಿಗಳು
ಜಂಟಿ ಆಯುಕ್ತರು (ಆರೋಗ್ಯ ಮತ್ತು ಕಲ್ಯಾಣ)
ಮುಖ್ಯ ಆರೋಗ್ಯಾಧಿಕಾರಿ
ಜಂಟಿ ನಿರ್ದೇಶಕರು (ಸಾಂಖ್ಯಿಕ)
ಜಂಟಿ ನಿರ್ದೇಶಕರು (ಪಶುಪಾಲನೆ)
ಉಪ ಆಯುಕ್ತರು (ಕಲ್ಯಾಣ)
ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ/ದಕ್ಷಿಣ)
ಆರೋಗ್ಯಾಧಿಕಾರಿ (ಪೂರ್ವ/ಕ್ಲಿನಿಕಲ್)
ಆರೋಗ್ಯಾಧಿಕಾರಿ (ದಕ್ಷಿಣ/ ಕ್ಲಿನಿಕಲ್)
ವಿದ್ಯಾಧಿಕಾರಿಗಳು
ಸಹಾಯಕ ವಿದ್ಯಾಧಿಕಾರಿಗಳು
ವಲಯ ಅರಣ್ಯಾಧಿಕಾರಿ (ಬೊಮ್ಮನಹಳ್ಳಿ)
ಕಲ್ಯಾಧಿಕಾರಿ (ರಾಜರಾಜೇಶ್ವರಿನಗರ)
ತೋಟಗಾರಿಕೆ ಅಧೀಕ್ಷಕರು (ಪಶ್ಚಿಮ)
ತೋಟಗಾರಿಕೆ ಅಧೀಕ್ಷಕರು (ಪೂರ್ವ)
ತೋಟಗಾರಿಕೆ ಅಧೀಕ್ಷಕರು (ದಕ್ಷಿಣ)
ತೋಟಗಾರಿಕೆ ಅಧೀಕ್ಷಕರು (ಮಹಾದೇವಪುರ)
ತೋಟಗಾರಿಕೆ ಅಧೀಕ್ಷಕರು (ಯಲಹಂಕ)
ತೋಟಗಾರಿಕೆ ಅಧೀಕ್ಷಕರು (ರಾಜರಾಜೇಶ್ವರಿನಗರ)
ತೋಟಗಾರಿಕೆ ಅಧೀಕ್ಷಕರು (ಬೊಮ್ಮನಹಳ್ಳಿ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

Recd 10 copy 03/12/11

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಸಮಿತಿಗೆ ತಮ್ಮ ಪರಿಚಯ ಮಾಡಿಕೊಂಡಿರುತ್ತಾರೆ. ಪ್ರಥಮವಾಗಿ ಜಂಟಿ ನಿರ್ದೇಶಕರು (ಸಾಂಖ್ಯಿಕ) ರವರು ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಿತರಣೆ ಕುರಿತಂತೆ ಹಾಲಿ ತಮ್ಮ ಕಛೇರಿಯಲ್ಲಿ ಸಾರ್ವಜನಿಕರಿಂದ ಹೆಚ್ಚಿನ ರೀತಿಯಲ್ಲಿ ಒತ್ತಡ ಉಂಟಾಗುತ್ತಿದ್ದು ಈ ಒಂದು ಒತ್ತಡವನ್ನು ಪರಿಹರಿಸಬೇಕಾದ ಪಕ್ಷದಲ್ಲಿ ಎಲ್ಲಾ 8 ವಲಯಗಳಿಗೂ ಸಹ ಜನನ ಮತ್ತು ಮರಣ ಪ್ರಮಾಣ ಪತ್ರಗಳ ನೀಡಲು ಆದೇಶ ಹೊರಡಿಸುವುದು ವಲಯ ಜಂಟಿ ಆಯುಕ್ತರ ಅಧೀನದಲ್ಲಿ ಜನನ ಮತ್ತು ಮರಣ ಪ್ರಮಾಣ ಪತ್ರಗಳ ವಿತರಣೆ ಕುರಿತಂತೆ ಸಿಬ್ಬಂದಿಗಳನ್ನು ನೇಮಕ ಮಾಡಲು ಹಾಗೂ ಜನನ ಮತ್ತು ಮರಣ ಪ್ರಮಾಣ ಪತ್ರಗಳ ಅಗತ್ಯ ತಿದ್ದುಪಡಿ ಕುರಿತಂತೆ ವಲಯ ವ್ಯಾಪ್ತಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿದ ಪಕ್ಷದಲ್ಲಿ ಸಾಮಾನ್ಯವಾದ ದೂರುಗಳಿಗೆ ಆಸ್ಪದ ಇಲ್ಲದಂತೆ ಕಾರ್ಯನಿರ್ವಹಿಸಲು ಸಾಧ್ಯವಾಗುವುದೆಂದು ತಿಳಿಸಿರುತ್ತಾರೆ. ಎಲ್ಲಾ 8 ವಲಯಗಳಿಗೂ ಸಹ ಸಬ್ ರಿಜಿಸ್ಟರ್ ಹುದ್ದೆ ಬದಲಿಗೆ ನೊಂದಾಣಿ ಸಹಾಯಕರ ಹೆಸರಿನಲ್ಲಿ ನೇಮಿಸಲು ಹಾಗೂ ಹಾಲಿ ಇರುವ ಸಬ್ ರಿಜಿಸ್ಟರ್ ಹುದ್ದೆಗಳನ್ನು ದ್ವಿತೀಯ ದರ್ಜೆ ಹುದ್ದೆಯ ಬದಲಾವಣೆ ಮಾಡಲು ಸೂಚಿಸಿರುತ್ತಾರೆ. ಜಂಟಿ ನಿರ್ದೇಶಕರು (ಸಾಂಖ್ಯಿಕ) ಹುದ್ದೆಯನ್ನು ಜಂಟಿ ಆಯುಕ್ತರು (ಸಾಂಖ್ಯಿಕ) ಹುದ್ದೆಗೆ ಮರು ನಾಮಕರಣ ಮಾಡುವುದು ಸಮಂಜಸವೆಂದು ತಿಳಿಸಿರುತ್ತಾರೆ. ಪ್ರಸ್ತುತ ವಲಯ ವ್ಯಾಪ್ತಿಯಲ್ಲಿ ಉಪ ಆರೋಗ್ಯಾಧಿಕಾರಿಗಳು ಜನನ ಮತ್ತು ಮರಣ ಪ್ರಮಾಣ ಪತ್ರಗಳ ವಿತರಣೆಗೆ ಸಹಿ ಮಾಡುತ್ತಿದ್ದು, ಇದರಿಂದಾಗಿ ಹಾಲಿ ಇರುವ ಅವರ ಕಾರ್ಯವೈಖರಿಯೊಂದಿಗೆ ಜನನ ಮತ್ತು ಮರಣ ಪ್ರಮಾಣ ಪತ್ರಗಳಲ್ಲಿ ಸಹಿ ಮಾಡುವುದು ಹೆಚ್ಚುವರಿಯಾಗಿ ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ಸಕಾಲದಲ್ಲಿ ವಿತರಿಸುವುದು ಕಷ್ಟಕರವಾಗಿರುವುದರಿಂದ ಈ ವಿಭಾಗಕ್ಕೆ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಿಸುವುದು ಸೂಕ್ತವೆಂದು ಅಭಿಪ್ರಾಯಿಸುತ್ತಾರೆ.

ಪಶುಸಂಗೋಪನೆ ಇಲಾಖೆಯ ಜಂಟಿ ನಿರ್ದೇಶಕರು ಮಾತಾನಾಡುತ್ತಾ ಈ ಇಲಾಖೆಯು ಮಂಜೂರಾತಿಯಾಗದೇ ಇದ್ದು, ಆರೋಗ್ಯ ಇಲಾಖೆಯ ಆದೇಶದ ಅನುಸಾರ ಕೆಲಸಕಾರ್ಯ ನಿರ್ವಹಿಸುತ್ತಿದ್ದು, ಬೀದಿ ಧನ, ಬೀದಿ ನಾಯಿಗಳ ನಿಯಂತ್ರಣ ಕಾರ್ಯಗಾರವನ್ನು ಹಮ್ಮಿಕೊಂಡಿದ್ದು ಈ ಇಲಾಖೆಗೂ ಸಹ ಅಗತ್ಯ ಹುದ್ದೆಗಳನ್ನು ಸೃಜಿಸಲು ಕೋರಿರುತ್ತಾರೆ. ಹಾಲಿ ಬೀದಿ ನಾಯಿಗಳ ಹಾಗೂ ಧನಗಳನ್ನು ಹಿಡಿಯಲು ಖಾಸಗಿಯವರಿಗೆ ಗುತ್ತಿಗೆ ನೀಡಿರುವುದರಿಂದ ಪ್ರಸ್ತುತ ಪಾಲಿಕೆಯಲ್ಲಿ ಮಂಜೂರಾತಿಯಾಗಿರುವ ಹುದ್ದೆಗಳಲ್ಲಿನ ಸಿಬ್ಬಂದಿಗಳನ್ನು ಅವಶ್ಯವಿರುವ ಇತರೆ ಇಲಾಖೆಗಳಲ್ಲಿ ಸಮಾಂತರ ಹುದ್ದೆಗೆ ವರ್ಗಾಯಿಸುವುದು ಸಮಂಜಸವೆಂದು ತಿಳಿಸಿರುತ್ತಾರೆ. ಪ್ರಾಣಿವದಾಗಾರಗಳಲ್ಲಿ ಶುಚಿತ್ವಕ್ಕಾಗಿ ನಿಯೋಜಿಸಿರುವ ಪೌರಕಾರ್ಮಿಕರುಗಳನ್ನು ಅಗತ್ಯವಿರುವ ಇನ್ನಿತರೆ ಇಲಾಖೆಗೆ ವರ್ಗಾಯಿಸುವುದು ಸೂಕ್ತವೆಂದು ಸೂಚಿಸಿರುತ್ತಾರೆ. ಸ್ಮಶಾನಗಳಲ್ಲಿ ಸಿಬ್ಬಂದಿಗಳ ಕೊರತೆಯಿದ್ದು ಅವುಗಳನ್ನು ತುಂಬಲು ಸಹ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕೋರುತ್ತಾ, ಈ ಸಂಬಂಧ ಮುಖ್ಯ ಆರೋಗ್ಯಾಧಿಕಾರಿಗಳು ಅಗತ್ಯ ಮಾಹಿತಿಯನ್ನು ಒದಗಿಸಬಹುದೆಂದು ಸಮಿತಿಗೆ ತಿಳಿಸಿರುತ್ತಾರೆ.

ಜಂಟಿ ಆಯುಕ್ತರು (ಆರೋಗ್ಯ) ರವರು ಸಮಿತಿಗೆ ವಿವರಿಸುತ್ತಾ ಹಾಲಿ ಇರುವ ಮುಖ್ಯ ಆರೋಗ್ಯಾಧಿಕಾರಿಗಳ ಹುದ್ದೆಯೊಂದಿಗೆ ಮತ್ತೊಂದು ಆರೋಗ್ಯಾಧಿಕಾರಿಗಳ ಹುದ್ದೆಯನ್ನು ಸೃಜಿಸಿ ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಮತ್ತು ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಎಂದು ಸೃಜಿಸಲು ಇದೇ ಹಿನ್ನೆಲೆಯಲ್ಲಿ ಈ ಎರಡು ವಿಭಾಗಗಳಿಗೆ ಸಂಬಂಧಿಸಿದಂತೆ ಅಧಿಕ ಹುದ್ದೆಗಳನ್ನು ಸೃಜಿಸತಕ್ಕದ್ದೆಂದು ಈ ಹಿನ್ನೆಲೆಯಲ್ಲಿ ಆರೋಗ್ಯ ವಿಭಾಗಕ್ಕೆ ಸಂಬಂಧಪಟ್ಟಂತೆ ವಿವಿಧ ಹುದ್ದೆಗಳನ್ನು ಸೃಜಿಸಲು ಕೋರುತ್ತಾ, ಈ ಸಂಬಂಧ ಸೂಕ್ತ ಟಿಪ್ಪಣಿಯನ್ನು ನೀಡಿರುತ್ತಾರೆ. 198 ವಾರ್ಡ್‌ಗಳಲ್ಲಿನ ಕೆಲಸಕಾರ್ಯಗಳನ್ನು ಬಲಪಡಿಸಲು ವಾರ್ಡ್‌ಗೆ ಒಂದರಂತೆ ಹಿರಿಯ ಹಾಗೂ ಕಿರಿಯ ಆರೋಗ್ಯಾ ಪರಿವೀಕ್ಷಕರುಗಳನ್ನು ನೇಮಕ ಮಾಡಲು ಸಹ ಕೋರಿರುತ್ತಾರೆ. ಪಾಲಿಕೆಯು ನಿರ್ವಹಿಸುತ್ತಿರುವ ಆಸ್ಪತ್ರೆಗಳನ್ನು ವಾರದ ಎಲ್ಲಾ ದಿವಸಗಳಲ್ಲಿಯು 24 ಗಂಟೆಗಳ ಸೇವೆಯನ್ನು ಒದಗಿಸಲು ಮೂರು ಪಾಳಿಯಲ್ಲಿ ಕಾರ್ಯನಿರ್ವಹಿಸುವ ಸಲುವಾಗಿ ಅಗತ್ಯ ಸಿಬ್ಬಂದಿಗಳನ್ನು ಒದಗಿಸಲು ಕೋರಿರುತ್ತಾರೆ. ಸ್ತ್ರೀರೋಗತಜ್ಞರು, ಮಕ್ಕಳತಜ್ಞರು ಹಾಗೂ ಅರಿವಳಿಕೆ ತಜ್ಞರುಗಳನ್ನು ಹೆಚ್ಚುವರಿಯಾಗಿ ಸೃಜಿಸಲು ಕೋರಿತ್ತಾರೆ. ಎಲ್ಲಾ 198 ವಾರ್ಡ್‌ಗಳಲ್ಲಿಯು ಸಹ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಲು ಅಗತ್ಯ ಸಿಬ್ಬಂದಿಗಳ ಅವಶ್ಯಕತೆ ಇದ್ದು ಈ ಬಗೆಗೂ ಸಹ ಹೆಚ್ಚಿನ ಗಮನ ಹರಿಸಲು ಸಹ ಕೋರಿರುತ್ತಾರೆ.

ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಸಭೆಗೆ ತಮ್ಮ ಇಲಾಖೆಯ ಸಿಬ್ಬಂದಿಗಳನ್ನು ಪರಿಚಯ ಮಾಡಿಸುತ್ತಾ, ಪ್ರಸ್ತುತ 198 ವಾರ್ಡ್‌ಗಳು ಇದ್ದು, ಹಾಲಿ ಇರುವ ಸಿಬ್ಬಂದಿಗಳು ಹೊಸದಾಗಿ ಸೇರ್ಪಡೆಯಾಗಿರುವ ಪಾಲಿಕೆಯ ಹೊಸ ವಲಯಗಳಲ್ಲಿ ಸಸಿ ನೆಡುವ ಮತ್ತು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸುವುದು. 8 ವಲಯಗಳಲ್ಲಿ ತೋಟಗಾರಿಕೆ ಅಧೀಕ್ಷಕರು/ ಉಪ ಸಂರಕ್ಷಣಾಧಿಕಾರಿಗಳನ್ನು ಸೃಜಿಸಲು 28 ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ತೋಟಗಾರಿಕೆ ನಿರೀಕ್ಷಕರನ್ನು ಸೃಜಿಸಲು ಹಾಗೂ ಇವರ ಅಧೀನದಲ್ಲಿ 17 ಸಸ್ಯಾಭಿವೃದ್ಧಿಗಾರನ್ನು ಸೃಜಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರ ವಿಭಾಗಗಳ ಅನುಗುಣವಾಗಿ 66 ಮೇಲ್ವಿಚಾರಣೆಗಾರನ್ನು ಸೃಜಿಸಲು, ಹಾಲಿ ಇರುವ 870 ತೋಟಗಾರರ ಪೈಕಿ ಹಲವಾರು ನೌಕರರು ನಿಯೋಜನೆ ಮೇಲೆ ಕಾರ್ಯನಿರ್ವಹಿಸಲು ಕಂಡುಬಂದಿದ್ದು ಕೂಡಲೇ ಇವರುಗಳ ನಿಯೋಜನೆಯನ್ನು ರದ್ದುಪಡಿಸತಕ್ಕದ್ದೆಂದು ಹಾಗೂ ಇನ್ನು ಮುಂದೆ ಈ ಹುದ್ದೆಗಳಲ್ಲಿ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಕಾರ್ಯನಿರ್ವಸುತ್ತಿರುವ ಸಿಬ್ಬಂದಿಗಳು ಹುದ್ದೆ ಬದಲಾವಣೆ ಕೋರಿಕೆಯ ಪ್ರಕರಣಗಳನ್ನು ಕಡ್ಡಾಯವಾಗಿ ಪರಿಗಣಿಸತಕ್ಕದ್ದಲ್ಲವೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಅರಣ್ಯ ಇಲಾಖೆಯ ಸಿಬ್ಬಂದಿ ಕುರಿತಂತೆ 8 ವಲಯಗಳಿಗೂ ವಲಯ ಅರಣ್ಯ ಅಧಿಕಾರಿಗಳ ಅಡಿಯಲ್ಲಿಯೇ 16 ಜನ ವಲಯ ಉಪ ಅರಣ್ಯ ಅಧಿಕಾರಿಗಳು ಅವರ ಅಧೀನದಲ್ಲಿ ಅಗತ್ಯತೆ ಅನುಸಾರ ಗಾರ್ಡ್‌ಗಳ ಹುದ್ದೆಗಳನ್ನು ಸೃಜಿಸಲು ಕೋರಿರುತ್ತಾರೆ. ಹಾಲಿ ಈ ವಿಭಾಗದಲ್ಲಿರುವ 2 ನೀರಿನ ಟ್ಯಾಂಕರ್‌ಗಳಿಗೆ ಖಾಯಂ ಚಾಲಕರು ಇಲ್ಲದೇ ಇರುವುದರಿಂದ ಕೂಡಲೇ 2 ವಾಹನಗಳಿಗೆ ಇಬ್ಬರೂ ಖಾಯಂ ಚಾಲಕರುಗಳನ್ನು ನೇಮಕ ಮಾಡಲು ಸಂಬಂಧಪಟ್ಟವರಿಗೆ ಆದೇಶಿಸಲಾಗಿರುತ್ತದೆ.

ಪಾಲಿಕೆಯ ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ ಇಲಾಖೆಗಳಿಗೆ ತೋಟಗಾರಿಕಾ ಅಧೀಕ್ಷಕರುಗಳು/ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಎರವಲು ಸೇವೆಯ ಮೇಲೆ ನೇಮಿಸಿಕೊಳ್ಳುವ ಬದಲು, ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ನೌಕರರುಗಳು ಮೇಲ್ಕಂಡ ಹುದ್ದೆಗಳಿಗೆ ಅಗತ್ಯವಾದ ವಿದ್ಯಾರ್ಹತೆಯನ್ನು ಹೊಂದಿದ್ದು ಅಂತಹವರುಗಳನ್ನು ಮುಂಬಡ್ತಿ ಹಾಗೂ ಎರವಲು ಸೇವೆಯ ಮೇಲೆ ನೇಮಕ ಮಾಡಿಕೊಂಡಲ್ಲಿ ಪಾಲಿಕೆಗೆ ಆರ್ಥಿಕ ಹೊರೆ ಉಂಟಾಗುವುದನ್ನು ತಡೆಯಬಹುದಾಗಿದೆ ಹಾಗೂ ವಿದ್ಯಾರ್ಹತೆ ಹೊಂದಿರುವ ನೌಕರರುಗಳಿಗೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತಾ ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸೂಕ್ತ ತಿದ್ದುಪಡಿ ತರಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.

ಮೇಲ್ಕಂಡ ಎಲ್ಲಾ ಇಲಾಖೆಗಳಿಗೂ ಪ್ರತ್ಯೇಕವಾದ ಲೆಕ್ಕಾ ಪತ್ರ ಇಲಾಖೆಯನ್ನು ಸೃಜಿಸಲು ಲೆಕ್ಕಾಧೀಕ್ಷರೊಬ್ಬರನ್ನು ನೇಮಿಸಿ ಲೆಕ್ಕ ಪತ್ರ ಕಾರ್ಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಕ್ರಮಕೈಗೊಳ್ಳಲು ಸೂಚಿಸಿದೆ.

ಕಲ್ಯಾಣ ಇಲಾಖೆಯ ಉಪ ಆಯುಕ್ತರು (ಕಲ್ಯಾಣ) ರವರು ಸಮಿತಿಗೆ ವಿವರಣೆ ನೀಡುತ್ತಾ ಪ್ರಸ್ತುತ 8 ವಲಯಗಳಲ್ಲಿ ಅಧೀನ ಸಿಬ್ಬಂದಿಗಳ ಕೊರತೆಯಿದ್ದು, 8 ವಲಯಗಳಿಗೂ ಸಹ ಕಲ್ಯಾಣಧಿಕಾರಿಗಳು ಹಾಗೂ ಅಗತ್ಯತೆ ಅನುಸಾರ ಅಧೀನ ಸಿಬ್ಬಂದಿಗಳನ್ನು ಸೃಜಿಸಲು ಹಾಗೂ ಮುಖ್ಯ ಕಚೇರಿಯಲ್ಲಿ ತಮ್ಮ ಅಧೀನದಲ್ಲಿ ತಾಂತ್ರಿಕ ಸಹಾಯಕರನ್ನಾಗಿ ಒಬ್ಬ ಕಲ್ಯಾಣಧಿಕಾರಿಯ ಹುದ್ದೆಯನ್ನು ಸೃಜಿಸಿದ್ದಲ್ಲಿ ಈ ವಿಭಾಗವು ತೃಪ್ತಿಕರವಾಗಿ ಕಾರ್ಯನಿರ್ವಹಿಸುವುದೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶಿಕ್ಷಣ ಇಲಾಖೆಯಿಂದ ಹಾಜರಿದ್ದ ವಿದ್ಯಾಧಿಕಾರಿಗಳು ಪ್ರಸ್ತುತ ಇರುವಂತಹ ವಿದ್ಯಾಧಿಕಾರಿ ಹುದ್ದೆಯನ್ನು ಮುಖ್ಯ ವಿದ್ಯಾಧಿಕಾರಿ ಹುದ್ದೆ ಎಂದು ಮರುನಾಮಕರಣ ಮಾಡಲು ಹಾಗೂ ಅವರ ಅಧೀನದಲ್ಲಿ ಸಹಾಯಕ ವಿದ್ಯಾಧಿಕಾರಿ ಹುದ್ದೆಯನ್ನು ಸೃಜಿಸಲು ಕೋರಿರುತ್ತಾರೆ. ಈ ಹಿಂದೆ ವಿದ್ಯಾಧಿಕಾರಿ ಹುದ್ದೆಯನ್ನು ಮುಖ್ಯ ಶಿಕ್ಷಕರ ಹುದ್ದೆಯಿಂದ ಮುಂಬಡ್ತಿ ನೀಡಲಾಗುತ್ತಿದ್ದು, ಹಾಲಿ ಪ್ರಾಂಶುಪಾಲರುಗಳ ಹುದ್ದೆಯಿಂದ ಮುಖ್ಯ ವಿದ್ಯಾಧಿಕಾರಿ ಹುದ್ದೆಯಿಂದ ಮುಂಬಡ್ತಿ ಮೂಲಕ ಹಾಗೂ ಮುಖ್ಯ ಶಿಕ್ಷಕರ ಹುದ್ದೆಯಿಂದ ಸಹಾಯಕ ವಿದ್ಯಾಧಿಕಾರಿಗಳ ಮುಂಬಡ್ತಿಗೆ ಪರಿಗಣಿಸಲು ಕೋರಿತ್ತಾರೆ. ಹಾಲಿ ಇರುವ 11 ಪ್ರಾಂಶುಪಾಲರ ಹುದ್ದೆಯೊಂದಿಗೆ 5 ಹುದ್ದೆಗಳನ್ನು ಸೃಜಿಸಲು ಉಪನ್ಯಾಸಕರು ಹಾಗೂ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿಮಾಡಿದ್ದಲ್ಲಿ ಪಾಲಿಕೆಯ ವಿದ್ಯಾ ಇಲಾಖೆಗೆ ಒಳ್ಳೆಯ ಹೆಸರು ಬರುವುದೆಂದು ತಿಳಿಸಿರುತ್ತಾರೆ. ಹಾಲಿ ದೈಹಿಕ ಶಿಕ್ಷಕರುಗಳಿಗೆ ಆಟದ ಮೈದಾನ ಮೇಲ್ವಿಚಾರಕರ ಹುದ್ದೆಗೆ ಮುಂಬಡ್ತಿಗೆ ಪರಿಗಣಿಸಬಹುದಾಗಿರುತ್ತದೆ. ಖಾಲಿ ಇರುವ ಗ್ರಂಥಾಪಾಲಕರ ಹುದ್ದೆಗಳನ್ನು ತುಂಬಲು ಸಹ ಕೋರಿರುತ್ತಾರೆ ಹಾಗೂ ಅತಿಅವಶ್ಯಕವಾಗಿ ಭೋಧಕ ಸಿಬ್ಬಂದಿಗಳ ಅವಶ್ಯಕತೆಯು ಈ ಇಲಾಖೆಗೆ ಬೇಕಾಗಿರುವುದರಿಂದ ಕೂಡಲೇ ಈ ಹುದ್ದೆಗಳನ್ನು ಭರ್ತಿ ಮಾಡಲು ಕೋರಿರುತ್ತಾರೆ. ಅಧ್ಯಕ್ಷರು ಹಾಲಿ ಭೋಧಕ ಸಿಬ್ಬಂದಿಗಳ ಪೈಕಿ ನಿಯೋಜನೆ ಮೇರೆಗೆ ಭೋಧಕೇತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಕೂಡಲೇ ನಿಯೋಜನೆಗಳನ್ನು ರದ್ದುಪಡಿಸಿ ವಾಪಸ್ಸು ಕರೆಸಲು ಅಪರ ಆಯುಕ್ತರು (ಆಡಳಿತ) ರವರಿಗೆ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

*ಪ್ರತಿಯನ್ನು:*

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.*
5. *ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ. ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
6. *ವಿಶೇಷ ಅಧಿಕಾರಿಗಳು (ವೃಂದ ಮತ್ತು ನೇಮಕಾತಿ ನಿಯಮಾವಳಿ) ರವರಿಗೆ ಕಳುಹಿಸುತ್ತಾ. ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
7. *ಕಛೇರಿ ಪ್ರತಿ*

1) ~~ಮಾನ್ಯ~~ ಮಹಾಪೌರರು 3/12/2011

2) ಉಪ ಮಹಾಪೌರರು 3/12/11

3) ಮಾನ್ಯ ಆಯುಕ್ತರು 3/12/11

4) ಅಪರ ಆಯುಕ್ತರು (ಆಡಳಿತ) 03-12-11

5) ಉಪ ಆಯುಕ್ತರು (ಆಡಳಿತ) 3/12/11

6) ವಿಶೇಷ ಅಧಿಕಾರಿ (ಪ್ರ.ಮ.ಸ) R.R 3/12/11

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿ: 23-11-2011 ರಂದು ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ರಚನೆ ಕುರಿತಂತೆ ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್.ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ. ಪಿಳ್ಳಪ್ಪ – ಸದಸ್ಯರು
3. ಟಿ. ಮಲ್ಲೇಶ್ – ಸದಸ್ಯರು
4. ವೈ.ಆರ್. ಗೌರಮ್ಮ – ಸದಸ್ಯರು
5. ಫೌಜಿಯಾ ಬೇಗಂ – ಸದಸ್ಯರು
6. ಎಸ್.ಎಂ ಮುರುಗೇಶ್ ಮೊದಲಿಯಾರ್ – ಸದಸ್ಯರು
7. ವೀಣಾ ನಾಗರಾಜ್ – ಸದಸ್ಯರು
8. ಎ.ವಿಜಯ ರಮೇಶ್ – ಸದಸ್ಯರು
9. ವೀಣಾ ನಾಗರಾಜ್ – ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಉಪ ಆಯುಕ್ತರು (ದಾಸರಹಳ್ಳಿ)
ಉಪ ಆಯುಕ್ತರು (ರಾಜರಾಜೇಶ್ವರಿನಗರ)
ಉಪ ಆಯುಕ್ತರು (ದಕ್ಷಿಣ)
ವಿಶೇಷ ಭೂಸ್ವಾಧೀನಾಧಿಕಾರಿ
ಸಹಾಯಕ ಆಯುಕ್ತರು (ಟಿಡಿಆರ್)
ಸಹಾಯಕ ಆಯುಕ್ತರು (ಆಸ್ತಿಗಳು)
ಕಂದಾಯ ಅಧಿಕಾರಿಗಳು (ಬೊಮ್ಮನಹಳ್ಳಿ)
ಕಂದಾಯ ಅಧಿಕಾರಿಗಳು (ರಾಜರಾಜೇಶ್ವರಿನಗರ)
ಕಂದಾಯ ಅಧಿಕಾರಿಗಳು ( ಮಹಾದೇವಪುರ)
ಕೇಂದ್ರ ಸ್ಥಾನೀಯ ಸಹಾಯಕರು (ದಕ್ಷಿಣ)
ಕೇಂದ್ರ ಸ್ಥಾನೀಯ ಸಹಾಯಕರು (ಪಶ್ಚಿಮ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿ

ಕಂದಾಯ ವಿಭಾಗಕ್ಕೆ ಸಂಬಂಧಪಟ್ಟಂತೆ ಉಪ ಆಯುಕ್ತರು (ಕಂದಾಯ) ರವರು ಸಭೆಯಲ್ಲಿ ಹಾಜರಿದ್ದಂತಹ ಎಲ್ಲಾ ಅಧಿಕಾರಿ ವರ್ಗದವರನ್ನು ಸಭೆಗೆ ಪರಿಚಯಿಸಿರುತ್ತಾರೆ. ಪ್ರಥಮವಾಗಿ ಭೂಸ್ವಾಧೀನ ಇಲಾಖೆಗೆ ಸಂಬಂಧಪಟ್ಟಂತೆ ಉಪಸ್ಥಿತರಿದ್ದಂತಹ ಸಹಾಯಕ ಆಯುಕ್ತರು (ಭೂಸ್ವಾಧೀನ)ರವರು ಸದರಿ ಇಲಾಖೆಯು ಮಂಜೂರಾತಿಯಾಗಿಲ್ಲದೇ ಇದ್ದು, ಪ್ರಸ್ತುತ ಉಪ ಆಯುಕ್ತರು ಹಾಗೂ ಸಹಾಯಕ ಆಯುಕ್ತರ ಹುದ್ದೆಗಳು ಮಂಜೂರಾತಿಯಾಗಿದ್ದು ಅಧೀನ ಸಿಬ್ಬಂದಿವರ್ಗದವರ ಹುದ್ದೆಗಳು ಈ ಇಲಾಖೆಗೆ ಅತ್ಯವಶ್ಯವಾಗಿದ್ದು ಕೂಡಲೇ ಶಿರಸ್ತೇದಾರರು, ತಹಸೀಲ್ದಾರರು, ಪ್ರಥಮ ದರ್ಜೆ ಗುಮಾಸ್ತರುಗಳು ಹಾಗೂ ಪ್ರತಿ ವಲಯಕ್ಕೆ ಸಂಬಂಧಿಸಿದಂತೆ 8 ಜನ ಪ್ರಥಮ ದರ್ಜೆ ಸರ್ವೇಯರುಗಳು, 8 ಜನ ದ್ವಿತೀಯ ದರ್ಜೆ ಸರ್ವೇಯರ್‌ಗಳನ್ನು ಸೃಜಿಸಲು ಕೋರಿದ್ದು, ಈ ಹುದ್ದೆಗಳು ಮಂಜೂರಾತಿ ಆದ ಪಕ್ಷದಲ್ಲಿ ಭೂಸ್ವಾಧೀನ ವಿಭಾಗಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದೆಂದು ವಿವರಿಸಿರುತ್ತಾರೆ ಹಾಗೂ ಕಚೇರಿಯ ಸಿಬ್ಬಂದಿಗಳ ಹುದ್ದೆಗಳು ಅಂದರೆ ಶ್ರೀಘ್ರಲಿಪಿಗಾರರು, ಪ್ರಥಮ ದರ್ಜೆ ಗುಮಾಸ್ತರು, ದ್ವಿತೀಯ ದರ್ಜೆ ಗುಮಾಸ್ತರು, ನಾಲ್ಕನೇ ದರ್ಜೆ ನೌಕರರು, ಡೇಟಾ ಎಂಟ್ರಿ ಆಪರೇಟರ್ ನೌಕರರುಗಳ ಹುದ್ದೆಗಳನ್ನು

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

10 copy
03/12/11

ಸಹ ಸೃಜಿಸಲು ಕೋರಿರುತ್ತಾರೆ ಹಾಗೂ ಟಪಾಲು ರವಾನೆಗಾರರ ಹುದ್ದೆಯು ಅತ್ಯವಶ್ಯವೆಂದು ಸೂಚಿಸಿರುತ್ತಾರೆ.

**ಆಸ್ತಿಗಳ ವಿಭಾಗ:** ಪ್ರಸ್ತುತ ಆಸ್ತಿವಿಭಾಗದಲ್ಲಿ ಉಪ ಆಯುಕ್ತರು (ಆಸ್ತಿಗಳು) ರವರು ಇಲಾಖಾ ಮುಖ್ಯಸ್ಥರಾಗಿದ್ದು ಇವರ ಅಧೀನದಲ್ಲಿ ಸಹಾಯಕ ಆಯುಕ್ತರು (ಆಸ್ತಿಗಳು) ಹಾಗೂ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳು ಇದ್ದು ಈ ಕಛೇರಿಗೆ ಅತ್ಯವಶ್ಯಕವಾಗಿ ಸರ್ವೇ ಸೂಪರ್‌ವೈಸರ್‌ಗಳು ಹಾಗೂ ಸರ್ವೇಯರ್‌ಗಳ ಅವಶ್ಯಕತೆ ಇದ್ದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಆಸ್ತಿಗಳನ್ನು ಗುರುತಿಸಲು ಈ ಹೆಚ್ಚುವರಿ ಹುದ್ದೆಗಳು ಸೃಜಿಸಬೇಕಾಗಿರುತ್ತದೆ. ಈ ಪೈಕಿ ಸಿಎಂಸಿ ಪ್ರದೇಶದಲ್ಲಿ ಪಾಲಿಕೆಯ ಸ್ವತ್ತುಗಳನ್ನು ಗುರುತಿಸಿ ಅದನ್ನು ಸಂರಕ್ಷಿಸುವ ಸಲುವಾಗಿ ಹೊಸ ಹುದ್ದೆಗಳನ್ನು ಸೃಜಿಸುವುದು ಅತ್ಯವಶ್ಯಕವಾಗಿದ್ದು ಹುದ್ದೆವಾರು ವಿವರಗಳನ್ನು ಒಳಗೊಂಡ ಪಟ್ಟಿಯನ್ನು ಪ್ರತ್ಯೇಕವಾಗಿ ನೀಡುವುದಾಗಿ ತಿಳಿಸಿರುತ್ತಾರೆ.

**ಜಾಹೀರಾತು ವಿಭಾಗ:** ಪ್ರಸ್ತುತ ಜಾಹೀರಾತು ಇಲಾಖೆಯ ಕಾರ್ಯವೈಖರಿಯನ್ನು 8 ವಲಯ ವ್ಯಾಪ್ತಿಗಳಿಗೆ ಪ್ರತ್ಯಾಯೋಜನೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದ್ದು ಈ ಹಿನ್ನೆಲೆಯಲ್ಲಿ ಮುಖ್ಯ ಕಛೇರಿಯಲ್ಲಿರುವ ಜಂಟಿ ಆಯುಕ್ತರು (ಜಾಹೀರಾತು) ವಿಭಾಗಕ್ಕೆ ತಾಂತ್ರಿಕ ಸಹಾಯಕರನ್ನಾಗಿ ಒಬ್ಬ ಸಹಾಯಕ ಕಂದಾಯ ಅಧಿಕಾರಿಗಳನ್ನು ಸೃಜಿಸಲು ಕೋರಲಾಗಿರುತ್ತದೆ. ಈ ಇಲಾಖೆಗೆ ಪ್ರತಿ ವಲಯ ಕಛೇರಿಗೂ ಒಬ್ಬ ಸಹಾಯಕ ಕಂದಾಯ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ನೇಮಿಸಿ ಅವರ ಅಧೀನದಲ್ಲಿ ಕಂದಾಯ ಪರೀವೀಕ್ಷಕರು ಹಾಗೂ ಸಹಾಯಕ ಅಭಿಯಂತರರುಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸಿದ್ದಲ್ಲಿ ಈ ವಿಭಾಗವು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವೆಂಬುದನ್ನು ಉಪಸ್ಥಿತರಿದ್ದಂತಹ ಕಂದಾಯ ಅಧಿಕಾರಿ (ಜಾಹೀರಾತು) ರವರು ಸಭೆಗೆ ತಿಳಿಸಿರುತ್ತಾರೆ.

**ಕಂದಾಯ ಇಲಾಖೆ:** ಉಪ ಆಯುಕ್ತರು (ಕಂದಾಯ)ರವರು ಸಭೆಗೆ ಕಂದಾಯ ಇಲಾಖೆಯ ಕೆಲಸಕಾರ್ಯಗಳ ವಿವರಣೆ ನೀಡುತ್ತಾ ಹಾಲಿ 8 ವಲಯಗಳ ಉಪ ಆಯುಕ್ತರುಗಳಿಗೆ ಕಂದಾಯ ಇಲಾಖೆಯ ಪೂರ್ಣ ಪ್ರಮಾಣದ ಕಾರ್ಯಭಾರವನ್ನು ವಹಿಸುವುದು ಅತ್ಯವಶ್ಯಕವೆಂದು ತಿಳಿಸಿರುತ್ತಾರೆ. ಪ್ರಸ್ತುತ ವಲಯ ಕಛೇರಿಗಳಲ್ಲಿ ಜಂಟಿ ಆಯುಕ್ತರುಗಳೇ ಕಂದಾಯ ಇಲಾಖೆಯ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದು ಅವರುಗಳ ಹೆಚ್ಚುವರಿ ಕೆಲಸ ಕಾರ್ಯಗಳ ಒತ್ತಡದಿಂದಾಗಿ ಕಂದಾಯ ಇಲಾಖೆಯ ಕಾರ್ಯವೈಖರಿಯನ್ನು ಸೂಕ್ಷ್ಮವಾಗಿ ಅವಲೋಕಿಸಲು ಸಾಧ್ಯವಿಲ್ಲದೇ ಇದ್ದು ಕಂದಾಯ ವಸೂಲಾತಿಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಈ ನಿಟ್ಟಿನಲ್ಲಿ ಪೂರ್ಣಪ್ರಮಾಣದಲ್ಲಿ ಕಂದಾಯ ಇಲಾಖೆಗಳ ಕೆಲಸಕಾರ್ಯಗಳನ್ನು ವಲಯ ಉಪ ಆಯುಕ್ತರಿಗೆ ವಹಿಸಿದ್ದಲ್ಲಿ ಈ ಇಲಾಖೆಯು ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವೆಂದು ಸಮಿತಿಗೆ ತಿಳಿಸಿರುತ್ತಾರೆ. ಇದೇ ರೀತಿ 5 ಹೊಸ ವಲಯಗಳಿಗೆ ಕೇಂದ್ರೀಯ ಸ್ಥಾನೀಯ ಸಹಾಯಕ ಹುದ್ದೆಗಳನ್ನು ಹಾಗೂ 28 ಶಾಸಕರ ಸಂಖ್ಯೆಗೆ ಅನುಗುಣವಾಗಿ ಕಂದಾಯ ಅಧಿಕಾರಿಗಳನ್ನು 66 ವಿಭಾಗಗಳಿಗೆ ಸಹಾಯಕ ಕಂದಾಯ ಅಧಿಕಾರಿಗಳನ್ನು ಸಹಾಯಕ ಕಂದಾಯ ಅಧಿಕಾರಿಗಳ ತಾಂತ್ರಿಕ ಅಧಿಕಾರಿಗಳಾಗಿ ಮೌಲ್ಯಮಾಪಕರುಗಳನ್ನು ಹಾಗೂ 8 ವಲಯದ ಜಾಹೀರಾತುಗಳಿಗೆ ಸಂಬಂಧಪಟ್ಟಂತೆ 8 ಜನ ಸಹಾಯಕ ಕಂದಾಯ ಅಧಿಕಾರಿಗಳು ಹಾಗೂ ಅವರಿಗೆ ತಾಂತ್ರಿಕ ಸಹಾಯಕರಾಗಿ 8 ಜನ ಮೌಲ್ಯಮಾಪಕರುಗಳನ್ನು ಸೃಜಿಸಲು 198 ವಾರ್ಡ್‌ಗಳಿಗೆ ತಲಾ ಒಬ್ಬ ಕಂದಾಯ ಪರಿವೀಕ್ಷಕರುಗಳನ್ನು ಹಾಗೂ ಈ ವಾರ್ಡ್‌ಗಳ ಪೈಕಿ 20 ಸಾವಿರಗಿಂತ ಅಧಿಕವಾಗಿರುವ ಆಸ್ತಿಗಳಿರುವ ವಾರ್ಡ್‌ಗೆ ಅಧಿಕವಾಗಿ ಕಂದಾಯ ಪರಿವೀಕ್ಷಕರನ್ನು ನೇಮಿಸಲು ಹಾಗೂ ವಾರ್ಡ್‌ಗೆ ಒಬ್ಬರಿಂದ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮೂರು ಜನ ಕಂದಾಯ ವಸೂಲಿಗಾರನ್ನು ನೇಮಿಸಬಹುದೆಂದು ಕೋರಿರುತ್ತಾರೆ. ಹಾಲಿ ಕಂದಾಯ ಇಲಾಖೆಯಲ್ಲಿ ಮಂಜೂರಾತಿಯಾಗಿರುವ ದಫ್ತರ್‌ಬಂದ್ ಹುದ್ದೆಗಳನ್ನು 8 ವಲಯದ ರೇಕಾರ್ಡ್ ರೂಮುಗಳಿಗೆ ನೇಮಿಸಬಹುದೆಂದು ಹಾಗೂ ಜಪ್ತಿ ಸಹಾಯಕರ ಹುದ್ದೆ ಸಹಾಯಕರ ಬಿಲ್ಲು ಕಲೆಕ್ಟರುಗಳ ಹುದ್ದೆಗಳನ್ನು ಸಹ 8 ವಲಯದ ಕಂದಾಯ ಇಲಾಖೆಗಳಿಗೆ ಸಮಾನಂತರವಾಗಿ ಹಂಚಬಹುದೆಂದು ಕೋರಿರುತ್ತಾರೆ.

ಅತಿ ಮುಖ್ಯವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂಧಾಯ ಅಧಿಕಾರಿಗಳ ಹುದ್ದೆಗಳನ್ನು ವ್ಯವಸ್ಥಾಪಕರು, ಮೌಲ್ಯಮಾಪಕರು ಹಾಗೂ ವರದಿಗಾರರ ವೃಂದದಿಂದ ಅನುಪಾತದ ಅನುಸಾರ ಮುಂಬಡ್ತಿಗೆ ಪರಿಗಣಿಸಲಾಗುತ್ತಿದ್ದು, ಇವರುಗಳಿಗೆ ಅಗತ್ಯ ವಿದ್ಯಾರ್ಹತೆ ಇಲ್ಲದೇ ಇದ್ದು ಇದರಿಂದಾಗಿ ಇವರಿಗೆ ಅಗತ್ಯ ತಿಳುವಳಿಕೆ ಇಲ್ಲದೆ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಅಸಮರ್ಪಕತೆ ಇದ್ದು ಇದರಿಂದಾಗಿ ಪಾಲಿಕೆಯ ಕಂದಾಯ ಇಲಾಖೆಯ ಬಗ್ಗೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡುತ್ತಿದ್ದು ಇದನ್ನು ತಪ್ಪಿಸಲು ಸಹಾಯಕ ಕಂದಾಯ ಅಧಿಕಾರಿ ಹುದ್ದೆಗೆ ಮುಂಬಡ್ತಿ ಸಂದರ್ಬದಲ್ಲಿ ಅಗತ್ಯ ಕನಿಷ್ಠ ವಿದ್ಯಾರ್ಹತೆಯಾಗಿ ಯಾವುದಾದರೂ ವಿಷಯದಲ್ಲಿ ಪದವೀಧರರಾಗಿರುವುದು ಅತಿಅಗತ್ಯವೆಂದು ಪರಿಗಣಿಸುವುದು ಸೂಕ್ತವೆಂದು ಉಪ ಆಯುಕ್ತರು (ಕಂದಾಯ) ರವರು ಸಭೆಗೆ ತಿಳಿಸಿರುತ್ತಾರೆ.

ಅಧ್ಯಕ್ಷರು ಈ ಸಭೆಯಲ್ಲಿ ಉಪಸ್ಥಿತರಿದ್ದು ಸಲಹೆ ಸೂಚನೆ ನೀಡಿದ್ದಂತಹ ಎಲ್ಲಾ ಅಧಿಕಾರಿಗಳಿಗೂ ವಂದನೆ ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

*<u>ಪ್ರತಿಯನ್ನು:</u>*

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.*
5. *ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
6. *ವಿಶೇಷ ಅಧಿಕಾರಿಗಳು (ವೃಂದ ಮತ್ತು ನೇಮಕಾತಿ ನಿಯಮಾವಳಿ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.*
7. *ಕಛೇರಿ ಪ್ರತಿ*

1) ಶ್ರೀ ಮಹಾಪೌರರು 3/12/2011

2) ಉಪ ಮಹಾಪೌರರು 3/12/11

3) ಮಾನ್ಯ ಆಯುಕ್ತರು 3/12/11

4) ಅಪರ ಆಯುಕ್ತರು (ಆಡಳಿತ) 03-12-11

5) ಉಪ ಆಯುಕ್ತರು (ಆಡಳಿತ) 3/12/11

6) ಮುಖ್ಯ ಲೆಕ್ಕಾಧಿಕಾರಿ (ಪ್ರ. ಮ. ನಿ.) P.R. 3/12/11

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿ: 03-12-2011 ರಂದು ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ರಚನೆ ಕುರಿತಂತೆ ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್.ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ. ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಎ. ವಿಜಯ ರಮೇಶ್ – ಸದಸ್ಯರು
5. ವೈ.ಆರ್.ಗೌರಮ್ಮ – ಸದಸ್ಯರು
6. ವೀಣಾ ನಾಗರಾಜ್ – ಸದಸ್ಯರು
7. ಲಲಿತ ಮುಕುಂದರಾವ್ – ಸದಸ್ಯರು
8. ಕೆ.ವಿ.ಯಶೋಧ – ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಅಪರ ಆಯುಕ್ತರು (ಆಡಳಿತ)
ಕೌನ್ಸಿಲ್ ಕಾರ್ಯದರ್ಶಿಗಳು
ಮುಖ್ಯ ಲೆಕ್ಕಾಧಿಕಾರಿಗಳು
ಸಹಾಯಕ ಆಯುಕ್ತರು (ಆಡಳಿತ-1)
ಉಪ ನಿಯಂತ್ರಕರು (ಹಣಕಾಸು)
ಕಾನೂನು ಕೋಶದ ಮುಖ್ಯಸ್ಥರು
ಉಪ ಕಾನೂನು ಅಧಿಕಾರಿ
ಸಹಾಯಕ ಕಾನೂನು ಅಧಿಕಾರಿಗಳು
ಕಿರಿಯ ಕಾನೂನು ಅಧಿಕಾರಿಗಳು
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿ
ಲೆಕ್ಕ ಅಧೀಕ್ಷಕರು

ಪ್ರಥಮವಾಗಿ ಮುಖ್ಯ ಲೆಕ್ಕಾಧಿಕಾರಿಗಳು, ವೃಂದ ಮತ್ತು ನೇಮಕಾತಿ ನಿಯಮಾವಳಿ ಕುರಿತಂತೆ ತಮ್ಮ ಇಲಾಖೆಗೆ ಕೆಲವೊಂದು ಹುದ್ದೆಗಳನ್ನು ಸೃಜಿಸುವುದು ಅತ್ಯವಶ್ಯವೆಂದು ಕೋರಿರುತ್ತಾರೆ. ಹಾಲಿ ಇರುವ ಮುಖ್ಯ ಲೆಕ್ಕಾಧಿಕಾರಿಗಳೊಂದಿಗೆ ಅಧಿಕವಾಗಿ ಇನ್ನೊಂದು ಹುದ್ದೆಯನ್ನು ಸೃಜಿಸಿ ಅವರಿಗೆ ಕಂದಾಯ ವಸೂಲಾತಿ, ಸಂಪನ್ಮೂಲ ಕ್ರೋಢಿಕರಣ, ಲೆಕ್ಕಪತ್ರಗಳ ಹೊಂದಾಣಿಕೆ ಕುರಿತಂತೆ ವ್ಯವಹರಿಸಲು ಒಬ್ಬ ಮುಖ್ಯ ಲೆಕ್ಕಾಧಿಕಾರಿಗಳನ್ನು ಉಳಿದಂತೆ ಆರ್ಥಿಕ ವ್ಯವಹರಣೆ ಸಂಬಂಧಪಟ್ಟಂತೆ ಹಾಲಿ ಇರುವ ಮುಖ್ಯ ಲೆಕ್ಕಾಧಿಕಾರಿಗಳು ಕಾರ್ಯನಿರ್ವಹಿಸುವುದು ಸಮಂಜಸವೆಂದು ಕೋರಿರುತ್ತಾರೆ. ಈ ಪ್ರಸ್ತಾವನೆಗೆ ಬಗ್ಗೆ ಅಧ್ಯಕ್ಷರು ಹೆಚ್ಚುವರಿಯಾಗಿ ಮುಖ್ಯ ಲೆಕ್ಕಾಧಿಕಾರಿಗಳನ್ನು ಸೃಜಿಸುವುದು ಅವಶ್ಯವಿಲ್ಲವೆಂದು ಹಾಲಿ ಎಲ್ಲಾ ವಲಯ ಕಛೇರಿಗಳಿಗೂ ಸಹಾಯಕ ನಿಯಂತ್ರಕರು (ಹಣಕಾಸು) ರವರುಗಳನ್ನು ವಲಯ ಜಂಟಿ ಆಯುಕ್ತರು ರವರು ಅದೀನದಲ್ಲಿ ಕಾರ್ಯನಿರ್ವಹಿಸಲು ಈಗಾಗಲೇ ಕ್ರಮಕೈಗೊಳ್ಳಲಾಗಿರುವುದರಿಂದ ಪೂರ್ಣ ಪ್ರಮಾಣದ ಅಧಿಕಾರ ಪ್ರತ್ಯಾಯೋಜನೆಯನ್ನು ವಲಯಗಳಿಗೆ ನೀಡಿ ಹಾಲಿ ಮುಖ್ಯ ಕಛೇರಿಯಲ್ಲಿ ಮುಖ್ಯ ಲೆಕ್ಕಾಧಿಕಾರಿಗಳ ಅಧೀನದಲ್ಲಿ ಉಪ ನಿಯಂತ್ರಕರು (ಹಣಕಾಸು) ಹಾಗೂ ಲೆಕ್ಕ ಅದೀಕ್ಷಕರುಗಳು ಕಾರ್ಯನಿರ್ವಹಿಸುವುದು ಸೂಕ್ತವೆಂದು ತಿಳಿಸಿರುತ್ತಾರೆ.

ಮುಖ್ಯ ಕಛೇರಿಯಲ್ಲಿ 8 ವಲಯಗಳಿಗೆ ಸಂಬಂಧಿಸಿದಂತೆ 8 ಜನ ಲೆಕ್ಕ ಅಧೀಕ್ಷಕರು ಹಾಗೂ ಅವರಿಗೆ ಸಹಾಯಕರಾಗಿ 8 ಜನ ಪ್ರಥಮ ದರ್ಜೆ ಗುಮಾಸ್ತರರನ್ನು ಸೃಜಿಸಿದಲ್ಲಿ ಆಯಾ ವಲಯದ ಪೂರ್ಣ ಪ್ರಮಾಣದ ಮಾಹಿತಿಯನ್ನು ಸಂಬಂಧಪಟ್ಟ ಲೆಕ್ಕ ಅಧೀಕ್ಷಕರು ಹಾಗೂ ಪ್ರಥಮ ದರ್ಜೆ ಗುಮಾಸ್ತರವರುಗಳು ನಿರ್ವಹಿಸಲು ಸೂಚಿಸಬಹುದಾಗಿರುತ್ತದೆ.

ಮುಖ್ಯ ಕಛೇರಿಯಲ್ಲಿನ ಉಪ ನಿಯಂತ್ರಕರು (ಹಣಕಾಸು) ರವರು ಯೋಜನೆ, ಎಂ.ಪಿ.ಇ.ಡಿ, ನರ್ಮ್ ಈ ಕಛೇರಿಗಳ ಕಾರ್ಯವೈಖರಿಯನ್ನು ನಿರ್ವಹಿಸಬಹುದಾಗಿರುತ್ತದೆ. ಉಳಿದಂತೆ 8

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಲಯಗಳಲ್ಲಿರುವ ಸಹಾಯಕ ನಿಯಂತ್ರಕರು (ಹಣಕಾಸು) ರವರುಗಳ ವಲಯ ಜಂಟಿ/ಅಪರ ಆಯುಕ್ತರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮುಖ್ಯ ಕಛೇರಿಯಲ್ಲಿನ ಕಾರ್ಯಭಾರವನ್ನು ವಲಯ ಕಛೇರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿದಲ್ಲಿ ಈ ಇಲಾಖೆಯು ಇನ್ನು ಹೆಚ್ಚಿನ ರೀತಿಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವೆಂದು ಮುಖ್ಯ ಲೆಕ್ಕಾಧಿಕಾರಿ ರವರು ಸಭೆಗೆ ವಿವರಿಸಿರುತ್ತಾರೆ.

## ಕೌನ್ಸಿಲ್ ಕಾರ್ಯಾಲಯ

ಕೌನ್ಸಿಲ್ ಕಾರ್ಯದರ್ಶಿರವರು ಸಭೆಗೆ ತಮ್ಮ ಕಛೇರಿಯ ಕಾರ್ಯವೈಖರಿ ಕುರಿತಂತೆ ವಿವರಣೆ ನೀಡಿ ಈ ಹಿಂದೆ 100 ವಾರ್ಡ್‌ಗಳಿದ್ದು ಪ್ರಸ್ತುತ 198 ವಾರ್ಡ್‌ಗಳು ಇದ್ದು ಹಾಲಿ ಹಿಂದೆ ಇದ್ದಂತಹ ಸಿಬ್ಬಂದಿವರ್ಗದವರಿಂದ ದೈನಂದಿನ ಕಚೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದ್ದು ಹಾಲಿ ಹೆಚ್ಚುವರಿಯಾಗಿ 98 ಪಾಲಿಕೆ ವಾರ್ಡ್‌ಗಳ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹೆಚ್ಚುವರಿ ಹುದ್ದೆಗಳ ಅವಶ್ಯಕತೆ ಇರುವುದರಿಂದ ಈ ಕೆಳಕಂಡ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಕೋರಿರುತ್ತಾರೆ.

1) ರೇಕಾರ್ಡಿಂಗ್ ಅಧಿಕಾರಿ – 1 ಹುದ್ದೆ
2) ವಿಶೇಷ ಅಧಿಕಾರಿ (ಎಆರ್‌ಓ ಗ್ರೇಡ್) – 3 ಹುದ್ದೆ
3) ವ್ಯವಸ್ಥಾಪಕರು – 2 ಹುದ್ದೆ
4) ವರದಿಗಾರರು – 8 ಹುದ್ದೆ
5) ಟಪಾಲು ರವಾನೆಗಾರರು – 31 ಹುದ್ದೆ
6) ನಾಲ್ಕನೇ ದರ್ಜೆ ನೌಕರರು – 30 ಹುದ್ದೆಗಳು ಅವಶ್ಯವಿದ್ದು ಮೇಲ್ಕಂಡ ಎರಡು (ಕ್ರ.ಸಂ 5 ಹಾಗೂ 6) ವೃಂದಗಳ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳು ಹಾಲಿ ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು ಈ ನಿಯೋಜನೆ ಹುದ್ದೆಗಳನ್ನು ವೇತನ ಬಟವಾಡೆಯೊಂದಿಗೆ ವರ್ಗಾಹಿಸಿದಲ್ಲಿ ಹೆಚ್ಚುವರಿ ಹುದ್ದೆಗಳ ಸೃಜನೆ ಅವಶ್ಯವಿಲ್ಲವೆಂದು ತಿಳಿಸಿರುತ್ತಾರೆ.

ಹಾಲಿ ಕೌನ್ಸಿಲ್ ಕಾರ್ಯಾಲಯದಲ್ಲಿ ಇರುವ ವರದಿಗಾರರಿಗೆ ಹೆಚ್ಚುವರಿ ಕೆಲಸವಿಲ್ಲದೆ ಇದ್ದು ಹೊಸ ಹುದ್ದೆಗಳನ್ನು ಸೃಜಿಸುವ ಅವಶ್ಯವಿಲ್ಲವೆಂದು ಅಧ್ಯಕ್ಷರು ತಿಳಿಸಿರುತ್ತಾರೆ. ಹಾಲಿ ಕೌನ್ಸಿಲ್ ಕಾರ್ಯಾಲಯದಲ್ಲಿ ವಿವಿಧ ಇಲಾಖೆಗಳಿಂದ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿನ ನೌಕರರ ವೇತನ ಬಟವಾಡೆ ಸ್ಥಳವನ್ನು ಕೌನ್ಸಿಲ್ ಕಾರ್ಯಾಲಯಕ್ಕೆ ವರ್ಗಾಹಿಸಿರುವುದರಿಂದ ಪಾಲಿಕೆಗೆ ಆರ್ಥಿಕವಾಗಿ ಹೆಚ್ಚುವರಿ ಹೊರೆ ಆಗುವುದಿಲ್ಲವೆಂದು ತಿಳಿಸಿರುತ್ತಾರೆ.

## ಆಡಳಿತ ವಿಭಾಗ

ಅಪರ ಆಯುಕ್ತರು ( ಆಡಳಿತ) ರವರು ತಮ್ಮ ವಿಭಾಗಕ್ಕೆ ಸಂಬಂಧಿಸಿದಂತೆ ಕೆಲವು ಹುದ್ದೆಗಳು ಸೃಜಿಸಲು ಅವಶ್ಯಕತೆ ಇದೆಯೆಂದು ವಿವರಿಸಿದ್ದು ಈ ನಿಟ್ಟಿನಲ್ಲಿ ಅಧ್ಯಕ್ಷರು ಹಾಲಿ ಪಾಲಿಕೆಗೆ ವಿಶೇಷ ಆಯುಕ್ತರು (ಯೋಜನೆ) ಹುದ್ದೆ ಅವಶ್ಯವಿದೆಯೆ ಹಾಗೂ ಇವರು ಯಾವುದೇ ಸ್ವಂತ ನಿರ್ಣಯ ಕೈಗೊಳ್ಳದೆ ಕಡತಗಳನ್ನು ಆಯುಕ್ತರ ಆದೇಶಕ್ಕೆ ಮಂಡಿಸುವ ಅಗತ್ಯವೇನು ಎಂಬ ಬಗ್ಗೆ ಕೇಳಲಾಗಿ ಅಪರ ಆಯುಕ್ತರು (ಆಡಳಿತ) ರವರು ಈ ಬಗ್ಗೆ ಸಮರ್ಪಕವಾದ ರೀತಿಯಲ್ಲಿ ವರದಿ ನೀಡಲು ವಿಫಲರಾಗಿರುತ್ತಾರೆ. ಆ ಸಂದರ್ಭದಲ್ಲಿ ಮುಖ್ಯ ಲೆಕ್ಕಾಧಿಕಾರಿರವರು ಕಾರ್ಯಸೂಚಿ ಹಾಗೂ ಅಧಿಕಾರ ಪ್ರತ್ಯಾಯೋಜನೆ ಕುರಿತಂತೆ ಆಯುಕ್ತರು ಸ್ಪಷ್ಟ ಆದೇಶ ಹೊರಡಿಸಿದಲ್ಲಿ ಹಿರಿಯ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯ ಅನುಸಾರ ಕ್ರಮಕೈಗೊಳ್ಳಲು ಅನುವಾಗುವುದೆಂದು ತಿಳಿಸಿರುತ್ತಾರೆ. ಈ ಸಂಧರ್ಬದಲ್ಲಿ ಅಧ್ಯಕ್ಷರು ವಿಶೇಷ ಆಯುಕ್ತರು (ಯೋಜನೆ) ಹಾಗೂ ಅಪರ ಆಯುಕ್ತರು (ಆಡಳಿತ) ಹುದೆಗಳನ್ನು ಹಿರಿಯ ಕೆಎಎಸ್ ವೃಂದದಿಂದ ತುಂಬಬಹುದೆಂದು ಈ ಹುದ್ದೆಗಳಿಗೆ ಐಎಎಸ್ ಶ್ರೇಣಿಯ ಅಧಿಕಾರಿಗಳ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅವಶ್ಯವಿಲ್ಲವೆಂದು ತಿಳಿಸಿರುತ್ತಾರೆ. ಅತಿ ಮುಖ್ಯವಾಗಿ 4ನೇ ದರ್ಜೆಗೆ ಮೇಲ್ಪಟ್ಟು ಯಾವುದೇ ವೃಂದದ ಹುದ್ದೆಗಳಿಗೆ ಇನ್ನು ಮುಂದೆ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅಭ್ಯರ್ಥಿಗಳು ಗಣಕಯಂತ್ರ ನಿರ್ವಹಣೆಯಲ್ಲಿ ಅಗತ್ಯ ವಿದ್ಯಾರ್ಹತೆ ಅವಶ್ಯವೆಂಬುದನ್ನು ಮನದಟ್ಟು ಮಾಡಿಕೊಳ್ಳಲು ಸೂಚಿಸಿರುತ್ತಾರೆ.

ಹಾಲಿ ಇರುವ ಉಪ ಆಯುಕ್ತರು (ಆಡಳಿತ) ಹುದ್ದೆಯೊಂದಿಗೆ ಉಪ ಆಯುಕ್ತರು ( ಮಾನವ ಸಂಪನ್ಮೂಲ ಅಭಿವೃದ್ಧಿ) ಹುದ್ದೆಯನ್ನು ತುಂಬಲು ಕ್ರಮಕೈಗೊಳ್ಳಲು ಹಾಗೂ ಸದರಿಯವರು ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಪರಿಣಿತಿ ಹೊಂದಿರತಕ್ಕದೆಂಬುದನ್ನು ನಮೂದಿಸಲು ಸೂಚಿಸಲಾಗಿರುತ್ತದೆ.

ಆಯುಕ್ತರ ಆಪ್ತ ಕಾರ್ಯದರ್ಶಿ ಹುದ್ದೆಯನ್ನು ಸಹಾಯಕ ಕಂದಾಯ ಅಧಿಕಾರಿ ಹುದ್ದೆಯ ವೃಂದದಿಂದ ಸೃಜಿಸಲು ತಿಳಿಸಲಾಗಿರುತ್ತದೆ.

ಹಾಲಿ ಇರುವ ಉಗ್ರಾಣ ಅಧಿಕಾರಿಯ ಹುದ್ದೆಯನ್ನು ಕಂದಾಯ ಅಧಿಕಾರಿ ಬದಲಿಗೆ ಸಹಾಯಕ ಕಂದಾಯ ಅಧಿಕಾರಿ ಹುದ್ದೆಯಿಂದ ಸೃಜಿಸಲು ಹಾಗೂ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಅಧಿಕಾರಿ ರವರನ್ನು ಅವಶ್ಯವಿರುವ ಬೇರೆ ಇಲಾಖೆಗೆ ವರ್ಗಾಹಿಸಬಹುದಾಗಿರುತ್ತದೆ ಹಾಗೂ ರೇಕಾರ್ಡ್ ರೂಂಗಳಿಗೆ ಅಗತ್ಯವಾದಲ್ಲಿ ಗ್ರಂಥಾಲಯ ಅಧಿಕಾರಿಯೊಬ್ಬರನ್ನು ಸಹ ನೇಮಕ ಮಾಡಬಹುದಾಗಿದೆ.

## ಸಾರ್ವಜನಿಕ ಸಂಪರ್ಕ ವಿಭಾಗ

ಹಾಲಿ ಇರುವ ಸಾರ್ವಜನಿಕ ಸಂಪರ್ಕಾಧಿಕಾರಿ ರವರು ವಿದ್ಯಾ ಇಲಾಖೆಯಿಂದ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು ಸದರಿಯವರ ನಿಯೋಜನೆಯನ್ನು ಕೂಡಲೇ ರದ್ದುಪಡಿಸಿ ವೃಂದ ಮತ್ತು ನೇಮಕಾತಿ ನಿಯಮದ ಅನುಸಾರ ಸರ್ಕಾರದ ವಾರ್ತಾ ಮತ್ತು ಸಮಾಚಾರ ಇಲಾಖೆಯಿಂದ ಅಗತ್ಯ ವಿದ್ಯಾರ್ಹತೆಯ ಆಧಾರದ ಮೇಲೆ ನೇಮಿಸಿಕೊಳ್ಳಲು ಕ್ರಮಕೈಗೊಳ್ಳತಕ್ಕದ್ದು ಹಾಗೂ 8 ವಲಯ ಕಛೇರಿಗಳಿಗೂ ಸಹ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಗಳನ್ನು ಸೃಜಿಸಲು ಸೂಚಿಸಲಾಗಿದೆ ಹಾಗೂ ಹಾಲಿ ವಿದ್ಯಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಪೈಕಿ ಕೆಲವರು ನಿಯೋಜನೆ ಮೇರೆಗೆ ಭೋದಕೇತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸದರಿಯವರುಗಳ ನಿಯೋಜನೆಯನ್ನು ರದ್ದುಪಡಿಸಿ ಅವರ ಮೂಲ ಹುದ್ದೆಗೆ ಹಿಂದಿರುಗಿಸಲು ತ್ವರಿತವಾಗಿ ಕ್ರಮಕೈಗೊಳ್ಳಲು ಸೂಚಿಸಿದೆ.

ಮುಖ್ಯ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಹಿತಿ ಹಕ್ಕು ಅಧಿ ನಿಯಮದ ಕಛೇರಿಯನ್ನು ರದ್ದುಪಡಿಸಿ ಅಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಅವರ ಮೂಲ ಇಲಾಖೆಗೆ ಹಿಂದಿರುಗಿಸುವುದು ಹಾಗೂ ಮಾಹಿತಿ ಹಕ್ಕಿಗೆ ಸಂಬಂಧಿಸಿದಂತೆ ಕೋರಿ ಸಲ್ಲಿಸುವ ಅರ್ಜಿಗಳನ್ನು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಗೆ ಮಂಡಿಸುವುದು ಹಾಗೂ ಆಯಾ ಇಲಾಖೆಗಳ ಮುಖ್ಯಸ್ಥರು ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆ.

## ಕಾನೂನು ಕೋಶದ ವಿಭಾಗ

ಕಾನೂನು ಇಲಾಖೆಗೆ ಸಂಬಂಧಿಸಿದಂತೆ ಕಾನೂನು ಕೋಶದ ಮುಖ್ಯಸ್ಥರೊಂದಿಗೆ ಉಪ ಕಾನೂನು ಅದಿಕಾರಿ, ಸಹಾಯಕ ಕಾನೂನು ಅಧಿಕಾರಿಗಳು ಹಾಗೂ ಕಿರಿಯ ಕಾನೂನು ಅಧಿಕಾರಿಗಳು, ಹಾಜರಿದ್ದು ಸಹಾಯಕ ಕಾನೂನು ಅಧಿಕಾರಿಯವರು ಸಭೆಗೆ ವಿವರಣೆಯನ್ನು ನೀಡಿ ಹಾಲಿ ಪಾಲಿಕೆಯಲ್ಲಿ 5600 ದಾವೆಗಳು ಬಾಕಿ ಇರುವುದಾಗಿ ಈ ಪೈಕಿ 1 ಪ್ರಕರಣವು ಮಾತ್ರ ನ್ಯಾಯಾಲಯ ನಿಂದನೆ ಪ್ರಕರಣವಾಗಿದ್ದು ಹಾಲಿ ಇರುವ ಅಧಿಕಾರಿಗಳ ಹುದ್ದೆಗಳಿಂದ ಮೇಲ್ಕಂಡ ದಾವೆಗಳನ್ನು ಇತ್ಯಾರ್ಥ ಪಡಿಸಲು ಸಾಧ್ಯವಿಲ್ಲವೆಂದು ತಿಳಿಸಿ ಈ ಒಂದು ವಿಭಾಗವನ್ನು ಶಕ್ತಿಯುತವನ್ನಾಗಿ ಮಾಡಲು ಅಧಿಕ ಹುದ್ದೆಗಳನ್ನು ಸೃಜಿಸುವುದು ಸೂಕ್ತವೆಂದು ಕೋರಿದ್ದು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರುಗಳು



ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಕಾನೂನು ಇಲಾಖೆಯ ಕಾರ್ಯವೈಖರಿ ಕುರಿತಂತೆ ತಮ್ಮಗಳ ಅತೀವ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಕಾನೂನು ಇಲಾಖೆಯು ಪಾಲಿಕೆಯ ವಿರುದ್ಧ ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದು, ಪಾಲಿಕೆಯ ಕೋಟ್ಯಾಂತರ ರೂ ಆಸ್ತಿಗಳ ಕುರಿತಂತೆ ಇರುವ ವಿವಿಧ ದಾವೆಗಳಲ್ಲಿ ಸೋಲನ್ನು ಅನುಭವಿಸುತ್ತಿದ್ದು ಇದರಿಂದ ಪಾಲಿಕೆಗೆ ನಷ್ಟವನ್ನು ಉಂಟುಮಾಡುತ್ತಿರುವುದರಿಂದ ಈ ಇಲಾಖೆಯನ್ನು ರದ್ದುಪಡಿಸಿ ಹೊರಗುತ್ತಿಗೆ ಮೂಲಕ ವಕೀಲ ವೃಂದವನ್ನು ನೇಮಿಸಿಕೊಳ್ಳುವುದು ಸೂಕ್ತವೆಂದು ಅಧ್ಯಕ್ಷರು ಅಭಿಪ್ರಾಯಿಸಿರುತ್ತಾರೆ. ಈ ಸಂದರ್ಭದಲ್ಲಿ ಕಾನೂನು ಕೋಶದ ಮುಖ್ಯಸ್ಥರು ಈ ವಿಭಾಗವು ಹೆಚ್ಚಿನ ಶ್ರದ್ಧೆಯಿಂದ ದಾವೆಗಳನ್ನು ಇತ್ಯರ್ಥ ಪಡಿಸಿ ಕ್ರಮಕೈಗೊಳ್ಳಲಾಗುತ್ತಿದೆಯೆಂದು ತಿಳಿಸಿ ಹಾಗೂ 5 ಹೊಸ ವಲಯಗಳಿಂದ ಹೆಚ್ಚುವರಿಯಾಗಿ ಪ್ರಕರಣಗಳು ಉದ್ಭವವಾಗುತ್ತಿರುವುದರಿಂದ ಹಾಲಿ 8 ವಲಯಗಳಿಗೆ ಕಿರಿಯ ಕಾನೂನು ಅಧಿಕಾರಿ ಅವಶ್ಯಕವೆಂದು ತಿಳಿಸಿ ಒಟ್ಟು 16 ಕಿರಿಯ ಕಾನೂನು ಅಧಿಕಾರಿ ಹುದ್ದೆ ಅವಶ್ಯವೆಂದು ತಿಳಿಸಿರುತ್ತಾರೆ ಹಾಗೂ 4 ಸಹಾಯಕ ಕಾನೂನು ಅಧಿಕಾರಿ ಹುದ್ದೆಗಳು ಅವಶ್ಯವೆಂದು ಕೋರಿರುತ್ತಾರೆ.

ಹಾಲಿ ಇರುವ 56 ಜನ ವಕೀಲರು ಸಮರ್ಪಕವಾಗಿ ಕಾರ್ಯನಿರ್ವಹಿಸದೆ ಇರುವುದರಿಂದ ಪಾಲಿಕೆಗೆ ಕೋಟ್ಯಾಂತರ ರೂಗಳು ನಷ್ಟವಾಗುತ್ತಿದ್ದು ಈ ನಿಟ್ಟಿನಲ್ಲಿ ವಕೀಲರ ಕಾರ್ಯವೈಖರಿಯನ್ನು ಪರಿಶೀಲಿಸಿ ಅಸಮರ್ಪಕರಾಗಿರುವ ವಕೀಲರನ್ನು ಕೂಡಲೇ ರದ್ದುಪಡಿಸಲು ಸಹ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ. ಹಾಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿತಗೊಳಿಸಲು ಸಹ ಸೂಚಿಸಲಾಗಿದೆ. ಹಾಲಿ ಕೆಪಿಎಸ್‌ಸಿ ವತಿಯಿಂದ ನೇಮಕಹೊಂದಿರುವ ಕಿರಿಯ ಕಾನೂನು ಅಧಿಕಾರಿಗಳಿಗೆ ಕಾನೂನಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ನೀಡದೆ ಇದ್ದು ಗುಮಾಸ್ತರ ಕೆಲಸವನ್ನು ನಿರ್ವಹಿಸುತ್ತಿರುವುದರಿಂದ ತಮ್ಮಗೆ ಕಾನೂನಿನ ಅರಿವು ಮರೆಯುವ ಸಾಧ್ಯತೆ ಇರುವುದೆಂಬ ಅಂಶವನ್ನು ಸಭೆಗೆ ವಿವರಿಸಿದ್ದು ಈ ಬಗ್ಗೆ ಕೂಡಲೇ ಸೂಕ್ತ ಕ್ರಮಕೈಗೊಳ್ಳಲು ಕಾನೂನು ಕೋಶದ ಮುಖ್ಯಸ್ಥರಿಗೆ ಸೂಚಿಸಲಾಗಿರುತ್ತದೆ.

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 668 ಬಟವಾಡೆ ಅಧಿಕಾರಿಗಳಿದ್ದು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ವಿವರವನ್ನು ಪಡೆಯುವ ಸಲುವಾಗಿ ಸಭೆಯೊಂದನ್ನು ಕರೆದು ಅಗತ್ಯ ಮಾಹಿತಿಗಳನ್ನು ಪಡೆದು ಪಾಲಿಕೆಯಲ್ಲಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಮಗ್ರ ಮಾಹಿತಿಯನ್ನು ಪಡೆಯಲು ಮುಖ್ಯಲೆಕ್ಕಾಧಿಕಾರಿರವರಿಗೆ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
6. ಸಹಾಯಕ ಆಯುಕ್ತರು (ವೃಂದ ಮತ್ತು ನೇಮಕಾತಿ ನಿಯಮಾವಳಿ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
7. ಮುಖ್ಯ ಲೆಕ್ಕಾಧಿಕಾರಿಗಳು/ಉಪ ನಿಯಂತ್ರಕರು (ಹಣಕಾಸು) ರವರಿಗೆ ಸೂಕ್ತಕ್ರಮಕ್ಕಾಗಿ
8. ಕಾನೂನು ಕೋಶದ ಮುಖ್ಯಸ್ಥರು/ಉಪ ಕಾನೂನು ಅಧಿಕಾರಿಗಳಿಗೆ ಸೂಕ್ತಕ್ರಮಕ್ಕಾಗಿ
9. ಕೌನ್ಸಿಲ್‌ಕಾರ್ಯದರ್ಶಿಗಳಿಗೆ ಸೂಕ್ತಕ್ರಮಕ್ಕಾಗಿ
10. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 2-01-2012 ರಂದು ದಕ್ಷಿಣ ವಲಯ ಕಛೇರಿಯಲ್ಲಿನ ನಡೆದ ತಪಾಸಣೆ ಸಭೆಯ ನಡವಳಿಗಳು

ಹಾಜರಿದ್ದ ಸದಸ್ಯರು
ಶ್ರೀಯುತರುಗಳಾದ

1 ಹೆಚ್.ಆರ್. ಕೃಷ್ಣಪ್ಪ - ಅಧ್ಯಕ್ಷರು
2. ಮುನಿಸ್ವಾಮಿಗೌಡ - ಸದಸ್ಯರು
3. ವೈ.ಆರ್.ಗೌರಮ್ಮ - ಸದಸ್ಯರು
4. ಲಲಿತ ಮುಕುಂದರಾವ್ - ಸದಸ್ಯರು

ಹಾಜರಿದ್ದ ಅಧಿಕಾರಿಗಳು

ಜಂಟಿ ಆಯುಕ್ತರು
ಉಪ ಆಯುಕ್ತರು
ಮುಖ್ಯ ಅಭಿಯಂತರರರು
ಅದೀಕ್ಷಕ ಅಭಿಯಂತರರು
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿ
ಕಂದಾಯ ಅಧಿಕಾರಿಗಳು
ಕಾರ್ಯಪಾಲಕ ಅಭಿಯಂತರರುಗಳು
ಸಹಾಯಕ ಕಂದಾಯ ಅಧಿಕಾರಿಗಳು
ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು
ತೋಟಗಾರಿಕೆ ಅಧೀಕ್ಷಕರುಗಳು
ಸಹಾಯಕ ನಿರ್ದೇಶಕರು (ನಗರ ಯೋಜನೆ)
ಉಪ ನಿಯಂತ್ರಕರು (ಹಣಕಾಸು)

ಸಮಿತಿಯು ಪ್ರಥಮವಾಗಿ ದಕ್ಷಿಣ ವಲಯ ಕಛೇರಿಯ ನಿಯಂತ್ರಣ ಕೊಠಡಿಗೆ ಭೇಟಿ ನೀಡಿ ಹಿಂದಿನ ರಾತ್ರಿ ಪಾಳಿಯಲ್ಲಿ ದಾಖಲಾಗಿದ್ದ ದೂರುಗಳನ್ನು ಪರಿಶೀಲಿಸಲಾಗಿದ್ದು ದಾಖಲೆ ಪುಸ್ತಕಗಳಲ್ಲಿ ದೂರಿನ ಕುರಿತಂತೆ ಕೈಗೊಂಡ ಕ್ರಮದ ಬಗ್ಗೆ ಸಮರ್ಪಕವಾದ ರೀತಿಯಲ್ಲಿ ವರದಿ ನಮೂದಾಗದೇ ಇದ್ದು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಪರ್ಕವಾದ ರೀತಿಯಲ್ಲಿ ಮೇಲ್ವಿಚಾರಣೆ ನಡೆಸುವಂತೆ ಸೂಚಿಸಲಾಗಿರುತ್ತದೆ. ಸುವರ್ಣ ಪರವಾನಗಿ ನಕ್ಷೆ ಮಂಜೂರಾತಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು (ನಗರಯೋಜನೆ) ಕಛೇರಿಯನ್ನು ತಪಾಸಣೆ ಮಾಡಲಾಗಿ ಕಛೇರಿಯಲ್ಲಿ ಹಳೆಯ ಕಡತಗಳು ಅನುಪಯುಕ್ತ ವಸ್ತುಗಳನ್ನು ಎಲ್ಲೆಂದರಲ್ಲಿ ಸಂಗ್ರಹಿಸಿಟ್ಟಿರುವುದು ಕಂಡುಬಂದಿದ್ದು ಕೂಡಲೇ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಲು ಆದೇಶಿಸಲಾಯಿತ್ತು. ಈ ವಲಯ ಕಛೇರಿಯ ಪ್ರಾಂಗಣದಲ್ಲಿ ಸ್ವಚ್ಚತೆ ಬಗ್ಗೆ ಗಮನ ಹರಿಸದೇ ಇರುವುದು ಶೋಚನೀಯ ಸಂಗತಿಯಾಗಿರುತ್ತದೆ. ಮೂರನೇ ಮಹಡಿಯಲ್ಲಿ ಇರುವ ಒಳಾಂಗಣ ಕ್ರೀಡಾಂಗಣದಲ್ಲಿ ಪಕ್ಷಿಗಳಿಂದ ಉಂಟಾಗುತ್ತಿರುವ ಮಾಲಿನ್ಯವನ್ನು ಸ್ವಚ್ಚಗೊಳಿಸುವ ಬಗ್ಗೆ ಯಾವೊಬ್ಬ ಅಧಿಕಾರಿಗಳು ಗಮನ ಹರಿಸದೇ ಇರುವುದು ಕಂಡುಬಂದಿರುತ್ತದೆ. ಕ್ರೀಡಾಂಗಣದ ಒಂದು ಭಾಗದಲ್ಲಿ ತಾರಸಿಯ ಮೂಲಕ ನೀರಿನ ಸೋರಿಕೆ ಉಂಟಾಗುತ್ತಿದ್ದು ಈ ಬಗೆಗೂ ಸಿಬ್ಬಂದಿವರ್ಗದವರೂ

ಗಮನ ಹರಿಸದೇ ಇರುವುದು ಅವರುಗಳ ಬೇಜಾವಾಬ್ದಾರಿತನಕ್ಕೆ ಸಾಕ್ಷಿಯಾಗಿರುತ್ತದೆ. ಈ ವಲಯ ಕಛೇರಿಯ ಎಲ್ಲಾ ಮಹಡಿಯ ಪ್ರಾಂಗಣದಲ್ಲಿಯೂ ಸಹ ಅನುಪಯುಕ್ತ ವಸ್ತುಗಳು ಎಲ್ಲೆಂದರಲ್ಲಿ ಸಂಗ್ರಹಿಸಿಟ್ಟಿರುವುದು ಹಾಗೂ ಕಟ್ಟಡದ ಪ್ರಾಂಗಣದಲ್ಲಿ ಇರುವ ಬ್ಯಾಟರಿಗಳ ದುಸ್ಥಿತಿಯು ಸಹ ವಲಯ ಮುಖ್ಯಸ್ಥರ ಉದಾಸೀನ ಮನೋಭಾವನೆ ಎತ್ತಿತೋರಿಸುತ್ತದೆ. ವಲಯ ಕಛೇರಿಯ ಮೇಲ್ಚಾವಣಿಯನ್ನು ಪರಿಶೀಲಿಸಲಾಗಿ ನೀರಿನ ಟ್ಯಾಂಕ್ ಬಳಿ ಗಿಡಗಳು ಬೆಳೆದಿರುವುದು ಕಂಡುಬಂದಿದ್ದು ಈ ಕಟ್ಟಡದ ಮೇಲುಸ್ತುವಾರಿ ವಹಿಸಿಕೊಂಡಿರುವ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು ಅಸಂಬದ್ಧ ಹೇಳಿಕೆಯನ್ನು ನೀಡಿದ್ದು ಅವರಿಗೆ ತೀವ್ರತರ ಎಚ್ಚರಿಕೆಯನ್ನು ನೀಡಿ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಲಾಗಿರುತ್ತದೆ. ಒಟ್ಟಾರೇ ವಲಯ ಕಛೇರಿಯಲ್ಲಿ ಎಲ್ಲಾ ಇಲಾಖೆಗಳಲ್ಲಿ ಹಾಗೂ ಪ್ರಾಂಗಣದಲ್ಲಿ ಸ್ವಚ್ಛತೆ ಬಗ್ಗೆ ಗಮನ ಹರಿಸದೇ ಇರುವುದು ಮುಖ್ಯವಾಗಿ ಕಂಡುಬಂದ ನ್ಯೂನತೆಯಾಗಿರುತ್ತದೆ.

ಮುಖ್ಯ ಅಭಿಯಂತರರ ಕಛೇರಿಯ ವಿಷಯ ನಿರ್ವಾಹಕ ಒಬ್ಬರ ಅಲ್ಮೇರಾವನ್ನು ಪರಿಶೀಲಿಸಲಾಗಿ ಅನೇಕ ಕಡತಗಳನ್ನು ವ್ಯವಹರಿಸದೇ ಉಳಿಸಿಕೊಂಡಿರುವುದು ಕಂಡುಬಂದಿದ್ದು ಇದು ಹಲವು ವಿಧವಾದ ಅನುಮಾನಗಳಿಗೆ ಅಸ್ಪದವನ್ನು ನೀಡಿದಂತಾಗಿರುತ್ತದೆ. ಉಪಸ್ಥಿತರಿದ್ದ ಮುಖ್ಯ ಅಭಿಯಂತರರು ಕಡತಗಳ ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವೊಂದು ನ್ಯೂನತೆಗಳು ಇರುವುದಾಗಿಯೂ ಅದನ್ನು ಸರಿಪಡಿಸಬೇಕಾಗಿರುವುದರಿಂದ ಕಡತವನ್ನು ಮಂಡಿಸುವಲ್ಲಿ ವಿಳಂಬವಾಗಿದ್ದು ಇನ್ನು ಮುಂದೆ ಇಂತಹ ವಿಳಂಬಗಳಿಗೆ ಆಸ್ಪದ ನೀಡುವುದಿಲ್ಲವೆಂದು ತಿಳಿಸಿ ಮೂರು ದಿವಸಗೊಳಗಾಗಿ ಕಡತಗಳನ್ನು ವಿಲೇವಾರಿ ಮಾಡುವುದಾಗಿ ತಿಳಿಸಿರುತ್ತಾರೆ.

ವಲಯ ಕಚೇರಿಯ ಪರಿಶೀಲನೆ ಮುಗಿದ ನಂತರ ಸಭೆಯು ಪ್ರಾರಂಭವಾಗಿದ್ದು, ಜಂಟಿ ಆಯುಕ್ತರು (ದಕ್ಷಿಣ) ರವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಪರಿಚಯಿಸುತ್ತಾ, ತಮ್ಮ ವಲಯ ವ್ಯಾಪ್ತಿಯ ಕಛೇರಿಗಳ ಕಾರ್ಯವೈಖರಿ ಕುರಿತಂತೆ ಸಂಕ್ಷಿಪ್ತ ವಿವರಣೆ ನೀಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದಂತಹ ದಕ್ಷಿಣ ವಲಯದ ಆರು ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯ ಕಾರ್ಯವೈಖರಿ ಕುರಿತಂತೆ ವಿವರಣೆಯನ್ನು ಪಡೆಯಲಾಗಿ ಕಂದಾಯ ವಸೂಲಾತಿಯಲ್ಲಿ ಹಾಲಿ ನಿರ್ವಹಿಸಲಾಗಿರುವ ಕಾರ್ಯವು ಸಮರ್ಪಕವಾಗಿಲ್ಲದೇ ಇದ್ದು ಇನ್ನೂ ಹೆಚ್ಚಿನ ರೀತಿಯಲ್ಲಿ ಶ್ರಮವಹಿಸಿ ಕಾರ್ಯನಿರ್ವಹಿಸಿದ್ದ ಪಕ್ಷದಲ್ಲಿ ಪೂರ್ಣಪ್ರಮಾಣದಲ್ಲಿ ಕಂದಾಯ ವಸೂಲಾತಿ ಕುರಿತಂತೆ ಪ್ರಗತಿ ಉಂಟಾಗುವುದರಲ್ಲಿ ಸಂಶಯವಿಲ್ಲವೆಂದು ತಿಳಿಯಪಡಿಸಿ, ಸಹಾಯಕ ಕಂದಾಯ ಅಧಿಕಾರಿ (ಬಿ.ಟಿ.ಎಂ) ವಲಯಕ್ಕೆ ಸಂಬಂಧಿಸಿದಂತೆ ಆಸ್ತಿಯೊಂದರ ಖಾತೆಯನ್ನು ನಕಲಿ ದಾಖಲೆಗಳ ಆಧಾರದ ಮೇಲೆ ಅನಧಿಕೃತ ವ್ಯಕ್ತಿಯೊಬ್ಬರಿಗೆ ಖಾತೆ ವರ್ಗಾವಣೆ ಮಾಡಿದ್ದು ಕರ್ನಾಟಕ ಮುನಿಸಿಪಲ್ ಕಾಯ್ದೆ ನಿಯಮ 114 ಎ ರೀತ್ಯಾ ಖಾತೆ ರದ್ದುಪಡಿಸಲು ತಹಲ್‌ವರೆವಿಗೂ ಕ್ರಮಕೈಗೊಳ್ಳದಿರುವ ಬಗ್ಗೆ ಲೋಪ ವೆಸಗಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮಕೈಗೊಳ್ಳಲು ಸಹ ಸೂಚಿಸಲಾಯಿತು.

ವಲಯ ವ್ಯಾಪ್ತಿಯ ಕಾಮಗಾರಿಯ ಕಾರ್ಯಕ್ರಮ ಪಟ್ಟಿ ಕುರಿತಂತೆ ವಿವರವಾಗಿ ಪರಿಶೀಲಿಸುತ್ತಿದ್ದ ಸಂದರ್ಭದಲ್ಲಿ ಎಲ್ಲಾ 6 ವಿಧಾನ ಸಭಾ ಕ್ಷೇತದಲ್ಲಿಯು ಸಹ ಕಾಮಗಾರಿಗಳು ಶೇಕಡ 50 ರಷ್ಟು ಪೂರ್ಣಗೊಳ್ಳದೇ ಇದ್ದು ಅಭಿಯಂತರರಗಳ ಬೇಜಾವಾಬ್ದಾರಿತನ ಕಂಡುಬಂದಿದ್ದು ಕೂಡಲೇ ಕಾಮಗಾರಿ ಪಟ್ಟಿಯಲ್ಲಿ ಮಂಜೂರಾಗಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲು ತಿಳಿಸಲಾಗಿರುತ್ತದೆ.

ಸಭೆಯಲ್ಲಿ ಉಪಸ್ಥಿತರಿದ್ದ ಆರೋಗ್ಯ ಅಧಿಕಾರಿಗಳು ಪ್ರಸುತ್ತ ದಕ್ಷಿಣ ವಲಯದಲ್ಲಿ ಕೇವಲ ಇಬ್ಬರೂ ವೈದ್ಯಾಧಿಕಾರಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಇದರಿಂದಾಗಿ 6 ವಿಧಾನ ಸಭಾ ಕ್ಷೇತ್ರದ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ನಿಗಧಿ ಪಡಿಸಿರುವ ಕಾರ್ಯಗಳನ್ನು ನಿರ್ವಹಿಸಲು ಕಷ್ಟಕರವಾಗಿರುವುದರಿಂದ ಕೂಡಲೇ ಖಾಲಿ ಇರುವ ಆರೋಗ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಹುದ್ದೆಯನ್ನು ಭರ್ತಿ ಮಾಡಿದ ಪಕ್ಷದಲ್ಲಿ ಇನ್ನು ಉತ್ತಮವಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದೆಂದು ತಿಳಿಸಿದ್ದು ಈ ಬಗ್ಗೆ ತುರ್ತಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲು ವಲಯ ಜಂಟಿ ಆಯುಕ್ತರಿಗೆ ತಿಳಿಸಲಾಗಿರುತ್ತದೆ.

ತೋಟಗಾರಿಕೆ ಇಲಾಖೆಯ ಕಾರ್ಯವೈಖರಿ ಬಗ್ಗೆ ತೃಪ್ತಿಕರವಾಗಿಲ್ಲದೇ ಇರುವುದರಿಂದ ಇನ್ನು ಹೆಚ್ಚಿನ ರೀತಿಯ ಶ್ರದ್ದೆ ವಹಿಸಿ ಕಾರ್ಯನಿರ್ವಹಿಸಿದ್ದ ಪಕ್ಷದಲ್ಲಿ ಪಾಲಿಕೆಯ ಕಾರ್ಯವೈಖರಿಯ ಬಗ್ಗೆ ಸಾರ್ವಜನಿಕರಿಂದ ಪ್ರಶಂಸೆಯನ್ನು ಪಡೆಯಲು ಸಹ ಸಾಧ್ಯವೆಂದು ತಿಳಿಸಲಾಗಿರುತ್ತದೆ.

ಭೂಸ್ವಾಧೀನ ಪರಿಹಾರ ಪ್ರಕ್ರಿಯೆ ಕುರಿತಂತೆ ನಿವೃತ್ತ ಅಧಿಕಾರಿಗಳು ನೀಡಿದ ವಿವರಣೆಯನ್ನು ಅವಗಾಹಿಸುತ್ತಾ ತಂಟೆತಕಾರರುಗಳ ಮೂಲಕ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕೂಡಲೇ ಇತ್ಯರ್ಥಗೊಳಿಸಲು ಕ್ರಮಕೈಗೊಳ್ಳಲು ಜಂಟಿ ಆಯುಕ್ತರಿಗೆ ಸೂಚಿಸಲಾಗಿರುತ್ತದೆ.

ಅನಧಿಕೃತ ಜಾಹೀರಾತು ಫಲಕಗಳಿಗೆ ಸಂಬಂಧಪಟ್ಟಂತೆ ವಿವರಣೆ ನೀಡಿದ ಇಲಾಖೆಯ ಸಿಬ್ಬಂದಿಯೊಬ್ಬರು ಅಸಂಬದ್ಧ ಹೇಳಿಕೆಯನ್ನು ನೀಡಿದ್ದು ಈ ಬಗ್ಗೆ ಜಂಟಿ ಆಯುಕ್ತರವರು ಕೂಲಂಕುಷವಾಗಿ ಪರಿಶೀಲಿಸಿ ಸಮಿತಿಗೆ ವರದಿಯೊಂದನ್ನು ನೀಡಲು ಸೂಚಿಸಲಾಗಿರುತ್ತದೆ. ಉಪ ನಿಯಂತ್ರಕರು (ಹಣಕಾಸು) ರವರು ತಮ್ಮ ಕಾರ್ಯವೈಖರಿ ಕುರಿತಂತೆ ವಿವರಣೆ ನೀಡಿದ್ದು ತ್ಯಾಜ್ಯ ವಿಲೇವಾರಿ ಗುತ್ತಿಗೆದಾರರ ಬಳಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಗುತ್ತಿಗೆ ಷರತ್ತಿನ ಅನ್ವಯ ಪಿಎಫ್, ಇಎಸ್ಐ ಪಾವತಿ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಪಡೆಯದೇ ಗುತ್ತಿಗೆದಾರರಿಗೆ ಚೆಕ್‌ಗಳನ್ನು ವಿತರಿಸಿ ಲೋಪ ವೆಸಗಿದ್ದು ಈ ಬಗ್ಗೆ ಅವರಿಂದ ಸ್ಪಷ್ಟ ವಿವರಣೆ ನೀಡಲು ಸಾಧ್ಯವಾಗಿರುವುದಿಲ್ಲ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಿಗೆ ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೇತನ ಪಾವತಿಸಲಾಗುತ್ತಿದೆ ಎಂಬ ಬಗೆಗೂ ಸಹ ಅವರಿಂದ ಸ್ಪಷ್ಟವಾದ ವಿವರಣೆ ಇರುವುದಿಲ್ಲ. ಈ ಬಗೆಗೂ ಸಹ ಕೂಲಂಕುಷ ಪರಿಶೀಲನೆ ಅಗತ್ಯವೆಂದು ಜಂಟಿ ಆಯುಕ್ತರಿಗೆ ತಿಳಿಸಲಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರು ತಮ್ಮ ಕಾರ್ಯವೈಖರಿ ಕುರಿತಂತೆ ತಿಳಿಸಿದ್ದು ಹಾಲಿ ಇ-ಪ್ರೋಕ್ಯುರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕ್ರಿಯೆಗಳು ಪ್ರಗತಿ ಹಂತದಲ್ಲಿ ಇದ್ದು ಒಮ್ಮೆ ಈ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಲ್ಲಿ ಸಾರ್ವಜನಿಕರಿಂದ ಬೀದಿ ದೀಪಗಳ ನಿರ್ವಹಣೆ ಕುರಿತಂತೆ ಯಾವ ವಿಧವಾದ ದೂರುಗಳಿಗೆ ಆಸ್ಪದ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗೆಗೂ ಹೆಚ್ಚಿನ ಆಸಕ್ತಿ ವಹಿಸಿ ಕಾರ್ಯನಿರ್ವಹಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿರುತ್ತದೆ.

ಸಭೆಯಲ್ಲಿ ಉಪಸ್ಥಿತರಿದಂತಹ ಕಾರ್ಯಪಾಲಕ ಅಭಿಯಂತರೊಬ್ಬರು ಖಾತೆ ವರ್ಗಾವಣೆ/ನೊಂದಣೆ ಇಂತಹ ಪ್ರಕ್ರಿಯೆ ಸಂದರ್ಭಗಳಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಕಾಮಗಾರಿ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿಯಾಗಿ ತಪಾಸಣೆ ನಡೆಸಿದ ಪಕ್ಷದಲ್ಲಿ ನಕಲಿ ದಾಖಲೆಗಳ ಆಧಾರ ಮೇಲೆ ಖಾತೆ ವರ್ಗಾವಣೆ/ನೊಂದಾಣೆಗಳ ಪ್ರಕ್ರಿಯೆಯಲ್ಲಿ ಸ್ವತ್ತಿನ ಅಳತೆ ಕುರಿತಂತೆ ಲೋಪದೋಷಗಳಿಗೆ ಅವಕಾಶವಾಗುವುದಿಲ್ಲವೆಂದು ತಿಳಿಸಿದ್ದು ಈ ಬಗೆಗೂ ಸೂಕ್ತ ನಿರ್ಣಯಕೈಗೊಳ್ಳಲು ಮುಂದಿನ ಸಮಿತಿಯ ಸಭೆಯಲ್ಲಿ ಕ್ರಮಕೈಗೊಳ್ಳಲಾಗುವುದು.

ಸಭೆಯಲ್ಲಿ ಉಪಸ್ಥಿತರಿದ್ದ ಪತ್ರಕರ್ತರೊಬ್ಬರು ಗಿರಿನಗರದ ಮೊದಲನೇ, ಎರಡನೇ, ಮೂರನೇ ಹಾಗೂ ನಾಲ್ಕನೇ ಹಂತದಲ್ಲಿ ಖಾತೆ ವರ್ಗಾವಣೆ/ನೊಂದಾಣೆ ಹಾಗೂ ಕಂದಾಯ ವಸೂಲಾತಿ ಕುರಿತಂತೆ ಯಾವುದೇ ಕ್ರಮಕೈಗೊಳ್ಳದೇ ಇದ್ದು ಸದರಿ ಪ್ರದೇಶಗಳಿಗೆ ಪಾಲಿಕೆ ವತಿಯಿಂದ ಎಲ್ಲಾ ವಿಧವಾದ ಮೂಲಭೂತ ಸೌಕರ್ಯವನ್ನು ಕಲ್ಪಿಸಲಾಗಿದ್ದು ಸದರಿ ಪ್ರದೇಶದಲ್ಲಿ ಕಂದಾಯ ವಸೂಲಾತಿ ಮಾಡದೇ ಇರುವುದರಿಂದ ಕೋಟ್ಯಾಂತರ ರೂಗಳ ಆದಾಯ ಕೈತಪ್ಪಿ ಹೋಗುತ್ತಿದ್ದು ಅಲ್ಲದೇ ಈ ಪ್ರದೇಶದಲ್ಲಿ ಸಾಕಷ್ಟು ಹೊಸ ಕಟ್ಟಡವು ಅನಧಿಕೃತವಾಗಿ ನಿರ್ಮಾಣವಾಗಿದ್ದು ಈ ಕಟ್ಟಡಗಳಿಗೆ ನೀರು, ವಿದ್ಯುತ್ ಹಾಗೂ ಒಳಚರಂಡಿ ಸಂಪರ್ಕವನ್ನು ಕಲ್ಪಿಸಿಕೊಳ್ಳಲು ಅನಧಿಕೃತವಾಗಿ ರಸ್ತೆ ಅಗೆತಗಳನ್ನು ಮಾಡಲಾಗಿದ್ದು ಕೂಡಲೇ ಈ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಪಾಲಿಕೆ ನಡುವೆ ಇರುವ ವಿವಾದದ ಬಗ್ಗೆ ಗಮನ ಹರಿಸಿ ಇತ್ಯರ್ಥ ಪಡಿಸಿದಲ್ಲಿ ಪಾಲಿಕೆಗೆ ಹೆಚ್ಚುವರಿ ಆದಾಯವೂ ಬರುವುದೆಂದು ತಿಳಿಸಿರುತ್ತಾರೆ. ವಾರ್ಡ್ ಸಂಖ್ಯೆ 166 ರ ಕರೆಸಂದ್ರ ಪ್ರದೇಶದಲ್ಲಿ ಸಾರ್ವಜನಿಕರೊಬ್ಬರು ಅನಧಿಕೃತವಾಗಿ ತಮ್ಮ ಆಸ್ತಿಗೆ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿದ್ದು ಇದು ಅವೈಜ್ಞಾನಿಕವಾಗಿ ನಿರ್ಮಾಣವಾಗಿದ್ದು ಈ ಕಾಂಪೌಂಡ್ ಬಿದ್ದ ಪಕ್ಷದಲ್ಲಿ ಹಲವಾರು ಅಮಾಯಕರ ಪ್ರಾಣಕ್ಕೆ ಹಾನಿ ಆಗುವುದರಿಂದ ಕೂಡಲೇ ಅನಧಿಕೃತ ನಿರ್ಮಾಣವನ್ನು ತಡೆಗಟ್ಟಲು ಸೂಚಿಸಿದ್ದು ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲು ಜಂಟಿ ಆಯುಕ್ತರಿಗೆ ಸೂಚಿಸಲಾಗಿರುತ್ತದೆ.

ಈ ವಲಯದಲ್ಲಿನ ಸಹಾಯಕ ನಿರ್ದೇಶಕರು (ನಗರ ಯೋಜನೆ) ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿವರ್ಗದವರು ಕಾರ್ಯನಿರ್ವಹಿಸುತ್ತಿದ್ದು ಇದರಿಂದಾಗಿ ಸಾರ್ವಜನಿಕರಿಗೆ ಅನುಕೂಲಕ್ಕಿಂತ ಅನಾನೂಕೂಲವೇ ಹೆಚ್ಚಿನದಾಗಿದ್ದು ಹಾಗೂ ಅತಿ ಮುಖ್ಯವಾಗಿ ಮಂಜೂರಾತಿ ಹುದ್ದೆಗಳು ಇಲ್ಲದಿದಾಗ್ಯೂ ಸಹ ಹೆಚ್ಚುವರಿಯಾಗಿ ಸಿಬ್ಬಂದಿವರ್ಗದವರು ಕಾರ್ಯನಿರ್ವಹಿಸುತ್ತಿರುವುದರಿಂದ ಪಾಲಿಕೆಗೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತಿದ್ದು ಕೂಡಲೇ ಈ ವಲಯಕ್ಕೆ ಕೇವಲ ಇಬ್ಬರು ಸಹಾಯಕ ನಿರ್ದೇಶಕರು ಹಾಗೂ ನಾಲ್ಕು ಜನರ ಸಹಾಯಕ ಅಭಿಯಂತರರು ಮಾತ್ರ ನೇಮಿಸಿ ಹೆಚ್ಚುವರಿಯಾಗಿರುವ ಸಿಬ್ಬಂದಿಗಳನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸಲು ಕೂಡಲೇ ಕ್ರಮಕೈಗೊಳ್ಳಲು ಜಂಟಿ ಆಯುಕ್ತರಿಗೆ ತಿಳಿಸಲಾಗಿರುತ್ತದೆ.

ಅತಿ ಮುಖ್ಯವಾಗಿ ಈ ವಲಯ ಕಛೇರಿಯಲ್ಲಿನ ವಿವಿಧ ಇಲಾಖೆಗಳಲ್ಲಿ ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಹಾಗೂ ಕಟ್ಟಡದ ಕೆಲವು ಭಾಗವು ಶಿಥಿಲಗೊಳ್ಳುತ್ತಿದ್ದು ಕೂಡಲೇ ಇವುಗಳನ್ನು ಸರಿಪಡಿಸಲು ಕ್ರಮಕೈಗೊಳ್ಳಲು ಜಂಟಿ ಆಯುಕ್ತರಿಗೆ ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
5. ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸತಕ್ಕದ್ದು.
7. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ಹೊರಡಿಸಲು ಸೂಚಿಸಿದೆ.
8. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 07-01-2012 ರಂದು ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸದ್ಯಸರು
ಶ್ರೀಯುತರುಗಳಾದ

1. ಹೆಚ್. ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ ಪಿಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಆರ್. ಉದಯ್ ಕುಮಾರ್ – ಸದಸ್ಯರು
5. ಎಂ.ಕೆ. ಗುಣಶೇಖರ್ – ಸದಸ್ಯರು
6. ವೀಣಾ ನಾಗರಾಜು – ಸದಸ್ಯರು
7. ಎ. ವಿಜಯ ರಮೇಶ್ – ಸದಸ್ಯರು
8. ಕೆ.ವಿ. ಯಶೋಧ – ಸದಸ್ಯರು

ಹಾಜರಿದ್ದ ಅಧಿಕಾರಿಗಳು
ಶ್ರೀಯುತರುಗಳಾದ

ಉಪ ಆಯುಕ್ತರು (ಆಡಳಿತ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ಸಹಾಯಕ ಆಯುಕ್ತರು (ನೇಮಕಾತಿ)
ಕಾರ್ಯಪಾಲಕ ಅಭಿಯಂತರರು (ಟಿ.ವಿ.ಸಿ.ಸಿ)
ವಿಶೇಷ ಅಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/20/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ದಿನಾಂಕ: 31-05-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಈ ಕೆಳಕಂಡ ನಿರ್ಣಯ ಕೈಗೊಳ್ಳಲಾಗಿರುತ್ತದೆ. "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ/ನೌಕರರುಗಳ ಹಲವಾರು ಸ್ವಯಂ ಘೋಷಿತ ಸಂಘಗಳಿದ್ದು, ಈ ಸಂಘಗಳ ಪೈಕಿ ಎರಡು ಸಂಘಗಳ ಸ್ವಯಂ ಘೋಷಿತ ಪದಾಧಿಕಾರಿಗಳು ಪರಸ್ಪರ ಕಿತ್ತಾಟದಲ್ಲಿ ತೊಡಗಿದ್ದು, ಒಬ್ಬರ ವಿರುದ್ಧ ಮತ್ತೊಬ್ಬರು ಪೋಲೀಸ್ ಠಾಣೆಯಲ್ಲಿ ದೂರುಗಳನ್ನು ಸಲ್ಲಿಸಿರುತ್ತಾರೆ. ಇದು ನಗರ ಪಾಲಿಕೆಯ ಹಿತದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿರುವುದಿಲ್ಲ. ಈ ಸಂಘಗಳಿಗೆ ಇದುವರೆಗೆ ಚುನಾವಣೆಯು ಸಹ ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರು, ಎಲ್ಲಾ ಪಕ್ಷದ ನಾಯಕರು ಹಾಗೂ ನಗರ ಪಾಲಿಕೆಯ ಅಪರ ಆಯುಕ್ತರ (ಆಡಳಿತ) ರವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಅಧಿಕಾರಿ/ನೌಕರರಿಗೆ ಒಂದು ಸಂಘ ಮತ್ತು ಪೌರಕಾರ್ಮಿಕರು ಹಾಗೂ ಆರೋಗ್ಯ ಗ್ಯಾಂಗ್‌ಮೆನ್‌ರವರಿಗೆ ಒಂದು ಸಂಘ (ಎರಡು ಪ್ರತ್ಯೇಕ ಸಂಘಗಳು) ಈ ಸಂಘಗಳಿಗೆ ಮಾತ್ರ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದು. ಚುನಾಯಿತ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಲು ಕೋರುತ್ತಾ, ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೆ, ಸಂಘಗಳಿಗೆ ಹಾಲಿ ನೀಡಿರುವ ಎಲ್ಲಾ ರೀತಿಯ ಸವಲತ್ತುಗಳನ್ನು ಆಯುಕ್ತರು ಹಿಂಪಡೆದು ಮತ್ತು ಸ್ವಯಂ ಘೋಷಿತ ಸಂಘಗಳ ಪದಾಧಿಕಾರಿಗಳಿಗೆ ಯಾವುದೇ ಮಾನ್ಯತೆ ನೀಡದಂತೆ ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ".

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ, ಪಾಲಿಕೆಯಲ್ಲಿ ಚುನಾಯಿತ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಲು, ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೆ

ಸಂಘಗಳಿಗೆ ಹಾಲಿ ನೀಡಿರುವ ಸವಲತ್ತನ್ನು ಹಿಂಪಡೆದು ಹಾಗೂ ಸ್ವಯಂಘೋಷಿತ ಸಂಘದ ಪದಾಧಿಕಾರಿಗಳಿಗೆ ಯಾವುದೇ ಮಾನ್ಯತೆ ನೀಡದಂತೆ ಎಲ್ಲಾ ಅಧಿಕಾರಿಗಳಿಗೆ ಆದೇಶಿಸಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಪಾಲಿಕೆಯ ಸಭೆಯ ತೀರ್ಮಾನದಂತೆ, ಮಾನ್ಯ ಆಯುಕ್ತರು, ಎಲ್ಲಾ ಪಕ್ಷದ ನಾಯಕರು ಹಾಗೂ ಅಪರ ಆಯುಕ್ತರು (ಆಡಳಿತ) ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಅಧಿಕಾರಿ/ನೌಕರರಿಗೆ ಒಂದು ಸಂಘ ಮತ್ತು ಪೌರಕಾರ್ಮಿಕರು ಹಾಗೂ ಗ್ಯಾಂಗ್‌ಮೆನ್‌ರವರಿಗೆ ಒಂದು ಸಂಘ (ಎರಡು ಪತ್ಯೇಕ ಸಂಘಗಳು) ಈ ಸಂಘಗಳಿಗೆ ಮಾತ್ರ ಚುನಾವಣೆ ನಡೆಸಲು ದಿನಾಂಕವನ್ನು ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 03-10-2011 ರ ಬಿ12 (ಸಿ1) ಪಿಆರ್/23/11-12 ರ ಟಿಪ್ಪಣಿ.

**ನಿರ್ಣಯ:** ವಿಷಯದ ಬಗ್ಗೆ ಧೀರ್ಘವಾದ ಚರ್ಚೆಯ ನಂತರ ಆಯುಕ್ತರ ದಿ: 03-10-2011 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿದೆ.

ಸರ್ಕಾರದ ಪತ್ರ ಸಂಖ್ಯೆ: ನಅಇ 49 ಎಂಎನ್‌ವೈ 2007 ದಿನಾಂಕ: 30-03-2010 ರಲ್ಲಿ ವಿವರಿಸಿರುವಂತೆ ಸ್ಥಳೀಯ ಸಂಸ್ಥೆಗಳಲ್ಲಿ ನೌಕರರ ವರ್ಗವು ತಮ್ಮಗಳ ಹಿತದೃಷ್ಟಿಯಿಂದ ವೃತ್ತಿಪರ ಕಾರ್ಮಿಕರ ಸಂಘಗಳ ಕಾಯಿದೆ 1962 ರ ಅಡಿ ಕಾರ್ಮಿಕರ ಸಂಘಗಳನ್ನು ರಚಿಸಿಕೊಳ್ಳುವ ಅವಕಾಶ ಇರುವ ಹಿನ್ನೆಲೆಯಲ್ಲಿ ಈ ಆದೇಶದನ್ವಯ ನಗರಪಾಲಿಕೆಯ ಎಲ್ಲಾ ಖಾಯಂ ಅಧಿಕಾರಿಗಳು/ನೌಕರರುಗಳು ಭಾಗವಹಿಸುವ ಸಲುವಾಗಿ ಮೇಲ್ಕಂಡ ಆದೇಶದನ್ವಯ ಬೈಲಾ ಅಳವಡಿಸಿಕೊಂಡು ಅತೀಜರೂರಾಗಿ ಚುನಾವಣೆ ನಡೆಸುವುದು. ಅತಿಮುಖ್ಯವಾಗಿ ಪೌರಕಾರ್ಮಿಕರುಗಳ ಸಂಘಗಳಿಗೆ ಸಂಬಂಧಿಸಿದಂತೆ ಸಹ ನಿಯಮಾನುಸಾರ ಚುನಾವಣೆ ನಡೆಸಲು ಕ್ರಮಕೈಗೊಳ್ಳತಕ್ಕದ್ದು. ದಿನಾಂಕ: 31-05-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಸ್ವಯಂಘೋಷಿತ ಸಂಘದ ಪದಾಧಿಕಾರಿಗಳಿಗೆ ಮಾನ್ಯತೆ ನೀಡದಿರುವ ಕುರಿತಂತೆ ದಿ: 13-07-2011 ರಲ್ಲಿ ಆಯುಕ್ತರು ಹೊರಡಿಸಿರುವ ಸುತ್ತೋಲೆ ರೀತ್ಯಾ ತಹಲ್‌ವರೆವಿಗೂ ಯಾವುದೇ ವಿಧವಾದ ಕ್ರಮಕೈಗೊಳ್ಳದೇ ಇದ್ದು ಈ ಬಗೆಗೂ ಸಹ ಗಮನ ಹರಿಸಲು ಸಮಿತಿಯು ಸೂಚಿಸುತ್ತದೆ

**ವಿಷಯ ಸಂಖ್ಯೆ: ಸಿಆಸುಸ್ಥಾಸ/24/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಪರಿಶೀಲನೆ ಕಾರ್ಯವನ್ನು ಗುಣನಿಯಂತ್ರಣ ವಿಭಾಗದಿಂದ ನಿರ್ವಹಿಸಲಾಗುತ್ತಿದ್ದು, ಈ ವಿಭಾಗವನ್ನು ಮತ್ತಷ್ಟು ಬಲಪಡಿಸುವ ಅವಶ್ಯಕತೆ ಇರುವುದರಿಂದ ಈ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮದ ಕುರಿತು ಈ ಕೆಳಕಂಡ ಅಂಶಗಳ ಬಗ್ಗೆ ಪರಿಶೀಲಿಸಿ ವರದಿ ನೀಡಲು ಪತ್ರದ ಸಂಖ್ಯೆ: ಬಿ12(6)ಪಿಆರ್/133/11-12 ದಿನಾಂಕ: 08-07-2011 ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿದೆ.

| | |
|---|---|
| ವಿಶೇಷ ಆಯುಕ್ತರು (ಯೋಜನೆ) | – ಅಧ್ಯಕ್ಷರು |
| ಪ್ರಧಾನ ಅಭಿಯಂತರರು | – ಸದಸ್ಯರು |
| ಮುಖ್ಯ ಅಭಿಯಂತರರು (ಜಾಗೃತ ಮತ್ತು ಪಿಪಿಇಡಿ) | – ಸದಸ್ಯರು |
| ಅಧೀಕ್ಷಕ ಸಲಹೆಗಾರರು (ಟಿವಿಸಿಸಿ) | – ಸದಸ್ಯರು |
| ತಾಂತ್ರಿಕ ಸಲಹೆಗಾರರು | – ಸದಸ್ಯರು |
| ಮಾನ್ಯ ಆಯುಕ್ತರ ತಾಂತ್ರಿಕ ಸಲಹೆಗಾರರು | – ಸಂಚಾಲಕರು |



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಪರಿಶೀಲಿಸಿ ವರದಿ ನೀಡಬೇಕಾದ ಅಂಶಗಳು:**

1) ಗುಣನಿಯಂತ್ರಣ ವಿಭಾಗದಲ್ಲಿ ಹಾಲಿ ಇರುವ ವ್ಯವಸ್ಥೆ
2) ಗುಣನಿಯಂತ್ರಣ ವಿಭಾಗದ ಉನ್ನತೀಕರಣಕ್ಕಾಗಿ ಅವಶ್ಯವಿರಬೇಕಾದ
   ಎ) ಆಡಳಿತಾತ್ಮಕ/ತಾಂತ್ರಿಕ ಅವಶ್ಯಕತೆ
   ಬಿ) ಪ್ರಯೋಗ ಶಾಲೆ ತಾಂತ್ರಿಕ ಅವಶ್ಯಕತೆಗಳು ಉನ್ನತೀಕರಣಗಳು
   ಸಿ) ಪರಿಶೀಲನೆ ಪರಿವೀಕ್ಷಣೆ ಉನ್ನತೀಕರಣಗಳು
3) ತಾಂತ್ರಿಕವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಿವರಣೆ/ವಿವರ

ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 22-07-2011 ರಂದು ಮಧ್ಯಾಹ್ನ 3.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯ ವಿಶೇಷ ಆಯುಕ್ತರು ( ಯೋಜನೆ) ರವರ ಕೊಠಡಿಯಲ್ಲಿ ಮಾನ್ಯ ಆಯುಕ್ತರ ಆದೇಶದ ಅನ್ವಯ ಪಾಲಿಕೆಯ ಗುಣನಿಯಂತ್ರಣ ವಿಭಾಗವನ್ನು ಬಲಪಡಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಈ ಕೆಳಗಿನಂತೆ ಶಿಫಾರಸ್ಸುಮಾಡಿದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಒಟ್ಟು ಎಂಟು ವಲಯಗಳು ಹಾಗೂ ಯೋಜನೆ ವಿಭಾಗಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಬಳಸುವ ಸಾಮಗ್ರಿಗಳ ಗುಣಮಟ್ಟವನ್ನು ಪರಿಶೀಲಿಸಿ ಸಂಬಂಧಪಟ್ಟ ಅಭಿಯಂತರರಿಗೆ ಪರೀಕ್ಷಾ ಫಲಿತಾಂಶಗಳು/ವರದಿ ನೀಡುವ ಸಲುವಾಗಿ ಗುಣನಿಯಂತ್ರಣ ವಿಭಾಗದಲ್ಲಿ ಹಾಲಿ ಕೆಲಸ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ವಿವರಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಈ ಸಂಬಂಧ ಕೆಳಕಂಡಂತೆ ಸಿಬ್ಬಂದಿಯು ಗುಣನಿಯಂತ್ರಣ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿವರಗಳನ್ನು **ಅನುಬಂಧ 'ಅ'** ರಲ್ಲಿ ಲಗತ್ತಿಸಿದೆ.
- ಈ ಮೊದಲು 220 ಚ.ಕಿಮೀ ವಿಸ್ತೀರ್ಣದಲ್ಲಿದ್ದ ಪಾಲಿಕೆಯ ಇದೀಗ 800 ಚದರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ವಿಸ್ತಾರಗೊಂಡು ಮೂರು ವಲಯಗಳಿಂದ ಎಂಟು ವಲಯಗಳಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರೂಪುಗೊಂಡಿರುತ್ತದೆ. ಪ್ರಸ್ತುತ ಎಲ್ಲಾ ಎಂಟು ವಲಯಗಳು ಹಾಗೂ ಯೋಜನಾ ವಿಭಾಗಗಳಲ್ಲಿ ಕಾಮಗಾರಿಗಳು ನಡೆಯುತ್ತಿದ್ದು ಈ ಕಾಮಗಾರಿಗಳ ಸ್ಥಳ ತಪಾಸಣೆ ಮಾಡಿ ಸಾಮಗ್ರಿಗಳನ್ನು ಶೇಖರಿಸಿ ಪರೀಕ್ಷಾ ಫಲಿತಾಂಶ ವರದಿಗಳನ್ನು ಸಕಾಲಕ್ಕೆ ಸರಿಯಾಗಿ ಸಂಬಂಧಪಟ್ಟ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿ ಕಡಿಮೆ ಸಿಬ್ಬಂದಿಯಿಂದ ಕಷ್ಟಕರವಾಗಿರುವುದರ ಬಗ್ಗೆ ಸಭೆಯ ಗಮನಕ್ಕೆ ತರಲಾಗಿರುತ್ತದೆ. ಈ ನಿಟ್ಟಿನಲ್ಲಿ ಗುಣನಿಯಂತ್ರಣ ವಿಭಾಗವನ್ನು ಬಲಪಡಿಸುವ ಅವಶ್ಯಕತೆ ಇದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದು ಅದರಂತೆ ಎಂಟು ವಲಯಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಹಾಲಿ ಇರುವ ಇಬ್ಬರು ಕಾರ್ಯಪಾಲಕ ಅಭಿಯಂತರರ ಜೊತೆಗೆ ಇನ್ನು ಹೆಚ್ಚುವರಿಯಾಗಿ ಇಬ್ಬರು ಕಾರ್ಯಪಾಲಕ ಅಭಿಯಂತರರು ಮತ್ತು ಅಧೀನ ಸಿಬ್ಬಂದಿಯ ಅವಶ್ಯಕತೆಯಿದ್ದು ಇದಕ್ಕೆ ಸಂಬಂಧಿಸಿದಂತೆ ಗುಣನಿಯಂತ್ರಣ ವಿಭಾಗಕ್ಕೆ ಅವಶ್ಯಕತೆಯುಳ್ಳ ಆಡಳಿತ ತಾಂತ್ರಿಕ ಸಿಬ್ಬಂದಿಯ **" ರಚನಾತ್ಮಕ ನಿರ್ವಾಹಣ ಪಟ್ಟಿ"** ( Organization Chare) **ಅನುಬಂಧ 'ಆ'** ರಲ್ಲಿ ಲಗತ್ತಿಸಿದೆ
- ಪ್ರಸ್ತುತ ಎಂಟು ವಲಯಗಳಲ್ಲಿ ಪ್ರಾರಂಭವಾಗಿರುವ ಕಾಮಗಾರಿಗಳ ಗುಣಮಟ್ಟ ಪರೀಕ್ಷೆಗಳನ್ನು ಮಾಡಿ ವರದಿಯನ್ನು ಸಕಾಲಕ್ಕೆ ಸರಿಯಾಗಿ ಸಂಬಂಧಪಟ್ಟ ಫೀಲ್ಡ್ ಅಭಿಯಂತರರಿಗೆ ನೀಡುವ ಸಲುವಾಗಿ ಹಾಲಿ ವಿಭಾಗದಲ್ಲಿ ಸಿಬ್ಬಂದಿಯ ಕೊರತೆಯಿದ್ದು, ಅತಿ ಜರೂರಾಗಿ ಆರು ಕೆಲಸ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪರಿವೀಕ್ಷಕರು, ಆರು ಜವಾನರು ಮತ್ತು ಮೂವರು ಗಣಕಯಂತ್ರ ಆಪರೇಟರ್‌ಗಳ ಅವಶ್ಯಕತೆ ಇದ್ದು ಈ ಸಿಬ್ಬಂದಿಗಳನ್ನು ಜರೂರಾಗಿ ಗುಣನಿಯಂತ್ರಣ ವಿಭಾಗಕ್ಕೆ ನಿಯೋಜಿಸಲು ಅಭಿಪ್ರಾಯ ಪಡಲಾಗಿರುತ್ತದೆ.

- ಹಾಲಿ ಕ್ರಿಯಶೀಲವಾಗಿರುವ ಪಾಲಿಕೆಯ ಗುಣನಿಯಂತ್ರಣ ವಿಭಾಗದಲ್ಲಿ ನಿಯೋಜಿಸಲಾಗುವ ವಿವಿಧ ದರ್ಜೆ ಹುದ್ದೆಗಳ ಸಿಬ್ಬಂದಿಗಳು ಧೀರ್ಘಕಾಲ ಸೇವೆ ಸಲ್ಲಿಸಲು ಬಯಸದೆ ಪದೇ ಪದೇ ಸ್ಥಳ ಬದಲಾವಣೆ ಪಡೆದುಕೊಳ್ಳುತ್ತಿರುವುದರಿಂದ ಗುಣನಿಯಂತ್ರಣ ವಿಭಾಗದ ಕಾರ್ಯ ಚಟುವಟಿಕೆಗಳಿಗೆ ಅಡಚಣೆ ಒದಗಿಬರುತ್ತಿರುವುದರ ಬಗ್ಗೆ ಧೀರ್ಘವಾಗಿ ಚರ್ಚಿಸಿ ಮುಂಬರುವ ದಿನಗಳಲ್ಲಿ ವ್ಯವಸ್ಥಿತವಾದ ಗುಣನಿಯಂತ್ರಣ ವಿಭಾಗದ ನಿರಂತರ ಉತ್ತಮ ಕಾರ್ಯ ನಿರ್ವಹಣೆಗಾಗಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟ ತಪಾಸಣೆ ಹಾಗೂ ಇತರೆ ವಿಧಿ ವಿಧಾನಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಸಿಬ್ಬಂದಿಯ ಕೊರತೆ ಉಂಟಾಗದಂತೆ ಪಾಲಿಕೆಯ ಸೇವೆಯ ಎಲ್ಲಾ ತಾಂತ್ರಿಕ ಸಿಬ್ಬಂದಿಗಳು ತಮ್ಮ ಸೇವಾ ಅವಧಿಯಲ್ಲಿ ಕನಿಷ್ಠ ಸೇವೆಯಂತೆ ಕಾರ್ಯಪಾಲಕ ಅಭಿಯಂತರರು ಆರು ತಿಂಗಳು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು -ಒಂದು ವರ್ಷ ಹಾಗೂ ಸಹಾಯಕ ಅಭಿಯಂತರರು ಎರಡು ವರ್ಷಗಳ ಕನಿಷ್ಠ ಅವಧಿಗೆ ಪಾಲಿಕೆಯ ಗುಣನಿಯಂತ್ರಣ ವಿಭಾಗದಲ್ಲಿ ಸೇವೆ ಸಲ್ಲಿಸಲು ಕಡ್ಡಾಯಪಡಿಸಲು ಇದಲ್ಲದೆ ಮುಂದಿನ ಹುದ್ದೆಗಳಿಗೆ ಮುಂಬಡ್ತಿ ಅವಕಾಶಗಳು ನೀಡುವುದಿಲ್ಲ ಎಂಬ ಷರತ್ತಿನೊಂದಿಗೆ ಆದೇಶಿಸಬೇಕೆಂದು ಅಭಿಪ್ರಾಯಕ್ಕೆ ಬರಲಾಗಿರುತ್ತದೆ.

- 1977 ರಲ್ಲಿ ಪಾಲಿಕೆಯ ಕೇಂದ್ರ ಕಛೇರಿಯ ಆವರಣದಲ್ಲಿ ಗುಣನಿಯಂತ್ರಣ ಪ್ರಯೋಗಾಲಯವು ಪ್ರಾರಂಭವಾಗಿದ್ದು, ಆ ಸಮಯದಲ್ಲಿ ಖರೀದಿಸಲಾದ ಉಪಕರಣಗಳು ಹಳೆಯದಾಗಿದ್ದು, ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವ ಪ್ರಯುಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗುಣನಿಯಂತ್ರಣ ವಿಭಾಗದ ಪ್ರಯೋಗಾಲಯಕ್ಕೆ ನೂತನ ಉಪಕರಣಗಳನ್ನು ಖರೀದಿಸಿ ನೂತನ ಪ್ರಯೋಗಾಲಯವನ್ನು ಕೇಂದ್ರ ಕಛೇರಿಯ ಆವರಣದಲ್ಲಿ ಸ್ಥಾಪಿಸಲಾಗಿರುತ್ತದೆ. ನೂತನ ಪ್ರಯೋಗಾಲಯದಲ್ಲಿ ಲಭ್ಯವಿರುವ ಉಪಕರಣಗಳ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಗಿರುತ್ತದೆ. ಉಪಕರಣಗಳ ಪಟ್ಟಿಯನ್ನು **ಅನುಬಂಧ 'ಇ'** ರಲ್ಲಿ ಲಗತ್ತಿಸಿದೆ.

- ಪ್ರಧಾನ ಕಛೇರಿಯ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಏಕೈಕ ಪ್ರಯೋಗದ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಎಂಟು ವಲಯಗಳು ಹಾಗೂ ಯೋಜನೆ ವಿಭಾಗಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಬಳಸುವ ಸಾಮಗ್ರಿಗಳ ಗುಣಮಟ್ಟವನ್ನು ಪರಿಶೀಲಿಸುವುದು ಕಷ್ಟಕರವಾಗಿರುವುದರ ಬಗ್ಗೆ ಧೀರ್ಘವಾಗಿ ಚರ್ಚಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗುಣನಿಯಂತ್ರಣ ಪ್ರಯೋಗಾಲಯದ ಜೊತೆಗೆ ಹೆಚ್ಚುವರಿಯಾಗಿ ಮೂರು ಪ್ರಯೋಗಾಲಯಗಳನ್ನು ಅವಶ್ಯಕತೆವುಳ್ಳ ಸುಸಜ್ಜಿತ ಉಪಕರಣಗಳೊಂದಿಗೆ ಸ್ಥಾಪಿಸಲು ಸಭೆಯಲ್ಲಿ ಅಭಿಪ್ರಾಯಕ್ಕೆ ಬರಲಾಗಿರುತ್ತದೆ. ಹೆಚ್ಚುವರಿಯಾಗಿ ಅವಶ್ಯಕತೆವುಳ್ಳ ಉಪಕರಣಗಳ ಪಟ್ಟಿಯನ್ನು **ಅನುಬಂಧ 'ಈ'** ರಲ್ಲಿ ಲಗತ್ತಿಸಿದೆ.
- ಪ್ರಸ್ತುತ ಎಂಟು ವಲಯಗಳಲ್ಲಿ ಕೈಗೊಳ್ಳುವ ವಿವಿಧ ಕಾಮಗಾರಿಗಳ ಸಂಬಂಧ ಸಂಗ್ರಹಿಸಲಾಗುವ ಮಾದರಿ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಗಳನ್ನು ಕೈಗೊಂಡು, ಪೂರಕ ಫಲಿತಾಂಶ ವರದಿಗಳನ್ನು ಸಿದ್ಧಪಡಿಸಿ ಸಕಾಲಕ್ಕೆ ಸರಿಯಾಗಿ ಸಂಬಂಧಪಟ್ಟ ಫೀಲ್ಡ್ ಅಭಿಯಂತರರ ಗಮನಕ್ಕೆ ತಂದು ಕಾಮಗಾರಿ ನಿರ್ಮಾಣಗಳಲ್ಲಿ ಉತ್ತಮ ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಹಾಲಿ ಗುಣನಿಯಂತ್ರಣ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಕರ್ತವ್ಯ ನಿಷ್ಠೆ



ಅಧ್ಯಕ್ಷರು

ಮತ್ತು ಕಾರ್ಯ ಕ್ಷಮತೆಯನ್ನು ಹೆಚ್ಚಿಸುವ ದೃಷ್ಟಿಯ ಬಗ್ಗೆ ಚರ್ಚಿಸಲಾಗಿ ಶೇಕಡ 10 ರಷ್ಟು ಪ್ರೋತ್ಸಾಹ ಧನ (Incentive) ಅನ್ನು ನೀಡುವ ಮೂಲಕ ಉತ್ತೇಜಿಸಲು ಅಭಿಪ್ರಾಯಕ್ಕೆ ಬರಲಾಗಿರುತ್ತದೆ.

- ಗುಣನಿಯಂತ್ರಣ ವಿಭಾಗವು ಬಲಪಡಿಸುವ ನಿಟ್ಟಿನಲ್ಲಿ ಹಾಗೂ 8 ವಲಯಗಳಲ್ಲಿ ಪ್ರಾರಂಭವಾಗಿರುವ ಗುಣಮಟ್ಟಗಳ ಪರೀಕ್ಷೆಗಳನ್ನು ವರದಿಮಾಡಿ ಸಕಾಲಕ್ಕೆ ಸಂಬಂಧಿಸಿದ ಅಭಿಯಂತರರುಗಳಿಗೆ ತಲುಪಿಸುವ ಹಾಗೂ ಗುಣಮಟ್ಟವನ್ನು ಕಾಪಾಡುವ ಹಿತದೃಷ್ಟಿಯಿಂದ ಸಮಿತಿಯ ಈ ಕೆಳಕಂಡ ಶಿಫಾರಸ್ಸುನ್ನು ಕೈಗೊಂಡಿದ್ದು, ಈ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸಮಿತಿಯ ಅನುಮೋದನೆ ಕೋರಿದೆ.
- ಎಂಟು ವಲಯಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಹಾಲಿ ಇರುವ ಇಬ್ಬರು ಕಾರ್ಯಪಾಲಕ ಅಭಿಯಂತರರ ಜೊತೆಗೆ ಇನ್ನು ಹೆಚ್ಚುವರಿಯಾಗಿ ಇಬ್ಬರು ಕಾರ್ಯಪಾಲಕ ಅಭಿಯಂತರರು ಮತ್ತು ಅಧೀನ ಸಿಬ್ಬಂದಿಯ ಅವಶ್ಯಕತೆಯಿದ್ದು ಇದಕ್ಕೆ ಸಂಬಂಧಿಸಿದಂತೆ ಗುಣನಿಯಂತ್ರಣ ವಿಭಾಗಕ್ಕೆ ಅವಶ್ಯಕತೆಯುಳ್ಳ ಆಡಳಿತ ತಾಂತ್ರಿಕ ಸಿಬ್ಬಂದಿಯ **"ರಚನಾತ್ಮಕ ನಿರ್ವಹಣ ಪಟ್ಟಿಗೆ"** (Organization Chare) **ಅನುಬಂಧ 'ಆ' ರಲ್ಲಿ** ಲಗತ್ತಿಸಿರುವಂತೆ ಅನುಮೋದನೆ.
- ಆರು ಜವಾನರು ಮತ್ತು ಮೂವರು ಗಣಕಯಂತ್ರ ಆಪರೇಟರ್‌ಗಳ ಅವಶ್ಯಕವಿದ್ದು, ಸಿಬ್ಬಂದಿಗಳನ್ನು ಗುಣನಿಯಂತ್ರಣ ವಿಭಾಗಕ್ಕೆ ನಿಯೋಜಿಸಲು ಆದೇಶ.
- ಪಾಲಿಕೆಯ ಸೇವೆಯ ಎಲ್ಲಾ ತಾಂತ್ರಿಕ ಸಿಬ್ಬಂದಿಗಳು ತಮ್ಮ ಸೇವಾ ಅವಧಿಯಲ್ಲಿ ಕನಿಷ್ಠ ಸೇವೆಯಂತೆ ಕಾರ್ಯಪಾಲಕ ಅಭಿಯಂತರರು ಆರು ತಿಂಗಳು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು –ಒಂದು ವರ್ಷ ಹಾಗೂ ಸಹಾಯಕ ಅಭಿಯಂತರರು ಎರಡು ಕನಿಷ್ಠ ಅವಧಿಗೆ ಪಾಲಿಕೆಯ ಗುಣನಿಯಂತ್ರಣ ವಿಭಾಗದಲ್ಲಿ ಸೇವೆ ಸಲ್ಲಿಸಲು ಕಡ್ಡಾಯಪಡಿಸಲು, ಇದಲ್ಲದೆ ಮುಂದಿನ ಹುದ್ದೆಗಳಿಗೆ ಮುಂಬಡ್ತಿ ಅವಕಾಶಗಳು ನೀಡುವುದಿಲ್ಲ ಎಂಬ ಷರತ್ತಿಗೆ ಅನುಮೋದನೆ.
- ನೂತನ ಪ್ರಯೋಗಾಲಯದಲ್ಲಿ ಲಭ್ಯವಿರುವ ಉಪಕರಣಗಳ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಗಿರುತ್ತದೆ. ಉಪಕರಣಗಳ ಪಟ್ಟಿಯನ್ನು **ಅನುಬಂಧ 'ಇ'** ರಲ್ಲಿ ಲಗತ್ತಿಸಿರುವಂತೆ ಅನುಮೋದನೆ.
- ಹಾಲಿ ಕಾರ್ಯನಿರ್ವಹಿಸುತ್ತಿರುವ ಗುಣನಿಯಂತ್ರಣ ಪ್ರಯೋಗಾಲಯದ ಜೊತೆಗೆ ಹೆಚ್ಚುವರಿಯಾಗಿ ಮೂರು ಪ್ರಯೋಗಾಲಯಗಳನ್ನು ಅವಶ್ಯಕತೆವುಳ್ಳ ಸುಸಜ್ಜಿತ ಉಪಕರಣಗಳೊಂದಿಗೆ ಸ್ಥಾಪಿಸಲು ಸಭೆಯಲ್ಲಿ ಅಭಿಪ್ರಾಯಕ್ಕೆ ಬರಲಾಗಿರುತ್ತದೆ. ಹೆಚ್ಚುವರಿಯಾಗಿ ಅವಶ್ಯಕತೆವುಳ್ಳ ಉಪಕರಣಗಳ ಅನುಮೋದನೆ.
- ಎಲ್ಲಾ ಸಿಬ್ಬಂದಿಗಳ ಕರ್ತವ್ಯ ನಿಷ್ಠೆ ಮತ್ತು ಕಾರ್ಯ ಕ್ಷಮತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಶೇಕಡ 10 ರಷ್ಟು ಪ್ರೋತ್ಸಾಹ ಧನ (Incentive) ಅನ್ನು ನೀಡುವ ಮೂಲಕ ಉತ್ತೇಜಿಸಲು ಆದೇಶ.

ವಿಶೇಷ ಆಯುಕ್ತರು (ಯೋಜನೆ) ರವರ ನೇತ್ರತ್ವದ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:28-10-2011 ರ ಟಿಪ್ಪಣಿ.



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ನಿರ್ಣಯ:** ವಿಷಯದ ಬಗ್ಗೆ ಧೀರ್ಘವಾದ ಚರ್ಚೆಯ ನಂತರ ಆಯುಕ್ತರ ದಿ: 08-07-2011 ರ ಟಿಪ್ಪಣಿಯನ್ನು ಕೆಳಕಂಡಂತೆ ಮಾರ್ಪಾಡಿಸಿದೆ. ಪ್ರಸುತ್ತ ವೃಂದ ಮತ್ತು ನೇಮಕಾತಿ ನಿಯಮಾವಳಿ ರಚನೆಯಾಗುತ್ತಿದ್ದು ಪಾಲಿಕೆಯ ಗುಣನಿಯಂತ್ರಣ ವಿಭಾಗಕ್ಕೆ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುತ್ತಿರುವುದರಿಂದ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವ ಅವಶ್ಯಕತೆ ಇಲ್ಲದಿದ್ದು ಆಡಳಿತಾತ್ಮಕ/ತಾಂತ್ರಿಕ ಅವಶ್ಯಕತೆ ಕುರಿತಂತೆ ಈ ವಿಭಾಗವನ್ನು ಬಲಪಡಿಸುವುದು ಸೂಕ್ತವೆಂದು ತೀರ್ಮಾನಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/25/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 10 ಆಹಾರ ಪರಿವೀಕ್ಷಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಸರ್ಕಾರವು ಅನುಮೋದನೆ ನೀಡಿದ್ದು, ದಿನಾಂಕ: 30-05-2007 ರಂದು ನಡೆದ ನೇಮಕಾತಿ ಸಭೆಯಲ್ಲಿ 10 ಹುದ್ದೆಗಳಲ್ಲಿ 05 ನೇರ ನೇಮಕಾತಿ, 05 ನಿಯೋಜನೆಯಿಂದ ತುಂಬಿಕೊಳ್ಳಲು ತೀರ್ಮಾನಿಸಿ, ಸದರಿ ಸಭೆಯ ತೀರ್ಮಾನದಂತೆ 05 ಆಹಾರ ಪರಿವೀಕ್ಷಕರ ಹುದ್ದೆಗಳಿಗೆ ದಿನಾಂಕ: 10-08-2007 ರಂದು ಅಧಿಸೂಚನೆ ಹೊರಡಿಸಲಾಯಿತು. ನಂತರದಲ್ಲಿ ಈ ಹುದ್ದೆಯು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ನಮೂದಾಗಿಲ್ಲವೆಂದು ದಿನಾಂಕ: 06-11-2008 ರಂದು ಪತ್ರಿಕಾ ಪ್ರಕಟಣೆಯ ಮೂಲಕ ದಿನಾಂಕ: 10-08-2007 ರ ಆಹಾರ ಪರಿವೀಕ್ಷಕರ ಹುದ್ದೆಯ ಅಧಿಸೂಚನೆಯನ್ನು ರದ್ದುಪಡಿಸಲಾಯಿತು.

ನಂತರದಲ್ಲಿ ಆಹಾರ ಪರಿವೀಕ್ಷಕರ ಹುದ್ದೆಯನ್ನು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅಳವಡಿಸಲು ದಿನಾಂಕ: 03-02-2011 ರಂದು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರೊಂದಿಗೆ ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದ್ದು, ಸದರಿ ಸಭೆಯಲ್ಲಿ ಆಹಾರ ಪರಿವೀಕ್ಷಕರ ಹುದ್ದೆಗಳನ್ನು ಪೂರ್ತಿಯಾಗಿ ನೇರ ನೇಮಕಾತಿಯಿಂದ ತುಂಬಲು ಅನುವಾಗುವಂತೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಈ ಹುದ್ದೆಯನ್ನು ಅಳವಡಿಸಿಕೊಂಡು, ತಿದ್ದುಪಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು ಸಭೆಯ ತೀರ್ಮಾನದಂತೆ ತಿದ್ದುಪಡಿ ಪ್ರಸ್ತಾವನೆಯನ್ನು ದಿನಾಂಕ: 12-05-2011 ರಂದು ಸರ್ಕಾರಕ್ಕೆ ಸಲ್ಲಿಸಿದ್ದು ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ದೊರೆತಿರುವುದಿಲ್ಲ.

ಆರೋಗ್ಯ ಪರಿವೀಕ್ಷಕರ ಹುದ್ದೆಗಳು ಪಾಲಿಕೆಯ ಆರೋಗ್ಯ ಇಲಾಖೆಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಹಿನ್ನೆಲೆಯಲ್ಲಿ ಸದರಿ 10 ಆಹಾರ ಪರಿವೀಕ್ಷಕರ ಹುದ್ದೆಗಳಿಗೆ ತಿದ್ದುಪಡಿ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಸರ್ಕಾರದ ಅನುಮೋದನೆ ನಿರೀಕ್ಷಿಸಿ, ವಿಶೇಷ ಪ್ರಕರಣವೆಂದು ಭಾವಿಸಿ, ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಅನುಮೋದನೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:07-09-2011 ರ ಸ.ಆ.ನೇ/ಪಿಆರ್/83/2011-12 ರ ಟಿಪ್ಪಣಿ

**ನಿರ್ಣಯ:** ಪ್ರಸ್ತಾವನೆ ಕುರಿತಂತೆ ದಿ: 08-08-2011 ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಸೇವೆಗಳ ಅಧಿಕೃತ ಜ್ಞಾಪನ ಪತ್ರದ ರೀತ್ಯಾ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯಿದೆ 2006 ನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಕ್ರಮಕೈಗೊಳ್ಳುತ್ತಿರುವುದರಿಂದ ಈ ಸಂದರ್ಬದಲ್ಲಿ ನೇರ ನೇಮಕಾತಿ ಮೂಲಕ ಖಾಲಿ ಇರುವ ಆಹಾರ ಪರಿವೀಕ್ಷಕರ ಹುದ್ದೆಗಳನ್ನು ತುಂಬಲು ಅವಕಾಶವಿದೆಯೆ ಎಂಬ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಮರುಮಂಡಿಸಲು ಹಿಂದಿರುಗಿಸಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/26/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶದ ಸಂಖ್ಯೆ: ಯುಡಿಡಿ/30/ಐಎಸ್ಪಿ/2009 ದಿನಾಂಕ: 08-09-2009 ರ ಆದೇಶದಂತೆ ಮಹಾನಗರ ಪಾಲಿಕೆಗಳಲ್ಲಿ **'ನಗರ ಬಡತನ ನಿರ್ಮೂಲನಾ ಕೋಶ'** ಗಳನ್ನು ಸೃಜಿಸಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಯವರೆಗೆ ಸಮುದಾಯ ತಜ್ಞರು, ಕೌಶಲ್ಯ ಅಭಿವೃದ್ಧಿ ತಜ್ಞರು ಹಾಗೂ ಕಛೇರಿ ಸಹಾಯಕರು ಹುದ್ದೆಗಳನ್ನು ಮಾನ್ಯ ಆಡಳಿತಾಧಿಕಾರಿಯವರಿಂದ ಅನುಮೋದನೆ ಪಡೆದು ದಿನಾಂಕ: 03-09-2009 ರ ಪತ್ರಿಕಾ ಪ್ರಕಟಣೆ ಮುಖಾಂತರ ಅರ್ಜಿಯನ್ನು ಆಹ್ವಾನಿಸಿದ್ದು, ನಿಯಮಗಳಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಸದರಿ ಯು.ಪಿ.ಎ ಸೆಲ್ ( Urban Poverty Livelihood Cell) ಸ್ಥಾಪಿಸಲು ಮತ್ತು ಸಿಬ್ಬಂದಿ ವೇತನ ಹಾಗೂ ಕಾರ್ಯನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ರೂ. 22.00 ಲಕ್ಷಗಳು ಬಿಡುಗಡೆಗೊಂಡಿದ್ದು, ಆದರಂತೆ ಕಾರ್ಯನಿರ್ವಹಣೆ ಮತ್ತು ವೇತನಕ್ಕಾಗಿ ಉಪಯೋಗಿಸಲಾಗಿರುತ್ತದೆ.

ಸದರಿ ಹುದ್ದೆಗಳು **' ರಾಜೀವ್ ಅವಾಜ್ ಯೋಜನೆ'** ಅನುಷ್ಠಾನ ಕಾರ್ಯದಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗಾಗಿ **'ನಗರ ಕೊಳಚೆ ಮುಕ್ತ ನಗರ'** ವನ್ನಾಗಿ ಮಾಡುವ ಯೋಜನೆಯ ಕಾರ್ಯಕ್ರಮದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.

ಅದರಂತೆ ಮಾನ್ಯ ಆಡಳಿತಾಧಿಕಾರಿಗಳ ವಿಷಯ ಸಂಖ್ಯೆ: 560/2009-10 ದಿನಾಂಕ: 15-01-2010 ರ ನಡವಳಿ ಸಂಖ್ಯೆ: ಬಿ12(3)/ಪಿಆರ್/57/09-10 ದಿನಾಂಕ: 20-02-2010 ರಂತೆ ಶ್ರೀ ಎಂ.ಬಿ. ಮುರಳಿಕೃಷ್ಣ, ಸಮುದಾಯ ತಜ್ಞರು ಮತ್ತು ಶ್ರೀ ತಮ್ಮಯ್ಯ, ಕೌಶಲ್ಯ ಅಭಿವೃದ್ಧಿ ತಜ್ಞರನ್ನಾಗಿ ನೇಮಿಸಿ ಆದೇಶ ನೀಡಲಾಗಿದೆ. ಸದರಿಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಂಟು ವಲಯಗಳ ಕೊಳಚೆ ಪ್ರದೇಶಗಳ ಸರ್ವೇ ಕಾರ್ಯ ಡೇಟಾ ಎಂಟ್ರಿ ಕಾರ್ಯ ಮತ್ತು ಅದರಲ್ಲಿರುವ ನ್ಯೂನತೆಗಳನ್ನು ಸರಿಪಡಿಸುವ ಮೇಲ್ವಿಚಾರಣೆ ಕಾರ್ಯವನ್ನು ಹಿರಿಯ ಅಧಿಕಾರಿಗಳ ಆದೇಶದಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಮತ್ತು ಮಹಾನಗರ ಪಾಲಿಕೆಯಲ್ಲಿ ಸೃಷ್ಟಿಗೊಂಡ ಈ ಹುದ್ದೆಗಳನ್ನು ಕೊಳಚೆ ಪ್ರದೇಶದ ಅಭಿವೃದ್ಧಿಯ ಕೆಲಸ ಕಾರ್ಯಗಳ ದೃಷ್ಟಿಯಿಂದ ಪೌರಾಡಳಿತ ನಿರ್ದೇಶನಾಲಯವು ಸಂಖ್ಯೆ: ಪೌನಿ/ಯು.ಪಿ.ಎ.ಸಿ/A&OE/75/2009-10 ದಿನಾಂಕ: 23-03-2011 ರಲ್ಲಿ ಮುಂದಿನ ವರ್ಷ ಇಲ್ಲವೇ ಮುಂದಿನ ಆದೇಶದರೆಗೂ ಮುಂದುವರೆಸಲು ಆದೇಶಿಸಿರುತ್ತಾರೆ.

ಶ್ರೀ ಮುರಳಿಕೃಷ್ಣ ರವರು ಸಮುದಾಯ ಅಭಿವೃದ್ಧಿ ತಜ್ಞರಾಗಿ ಪಾಲಿಕೆಯಲ್ಲಿ ದಿನಾಂಕ: 07-04-2010 ರಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ಶ್ರೀ ತಮ್ಮಯ್ಯ, ಕೌಶಲ್ಯ ಅಭಿವೃದ್ಧಿ ತಜ್ಞರು ದಿನಾಂಕ: 06-04-2010 ರಿಂದ ಕಾರ್ಯನಿರ್ವಹಿಸುತ್ತಿದ್ದು ದಿನಾಂಕ: 25-04-2011 ರಂದು ನಿಧನರಾಗಿರುತ್ತಾರೆ. ಸದರಿಯವರ ಖಾಲಿಯಾಗಿರುವ ಸ್ಥಳವನ್ನು ಕಾಯ್ದಿರಿಸಲಾದ ಅಭ್ಯರ್ಥಿಯಾದ ಶ್ರೀಮತಿ ವಿನೋದ್‌ಭಾವೆ ರವರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಕೊಳಚೆ ಪ್ರದೇಶಗಳ ಮೂಲಭೂತ ಸೌಕರ್ಯ ಬಡತನ ನಿರ್ಮೂಲನೆ ಮತ್ತು ವಿವಿಧ ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸಲು ಶ್ರೀ ಮುರಳಿಕೃಷ್ಣ ಎಂ.ಜಿ. ಸಮುದಾಯ ಅಭಿವೃದ್ಧಿ ತಜ್ಞರು ಇವರನ್ನು ದಿನಾಂಕ: 07-04-2011 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಲು ಹಾಗೂ ಕಾಯ್ದಿರಿಸಲಾದ ಅಭ್ಯರ್ಥಿಯಾದ ಶ್ರೀಮತಿ ವಿನೋದ್ ಭಾವೆ ರವರನ್ನು ಕೌಶಲ್ಯ ಅಭಿವೃದ್ಧಿ ತಜ್ಞರಾಗಿ ಆಯ್ಕೆ ಮಾಡಿಕೊಳ್ಳುವ ಬಗ್ಗೆ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:12-11-2011 ರ ಟಿಪ್ಪಣಿ.



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ನಿರ್ಣಯ:** ವಿಷಯದ ಬಗ್ಗೆ ದೀರ್ಘವಾದ ಚರ್ಚೆಯ ನಂತರ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಹಿಂದಿರುಗಿಸಿದೆ.

1) ಈ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾದ ಆರ್ಥಿಕ ಸಹಾಯ ರೂ. 22 ಲಕ್ಷಗಳ ಪೈಕಿ ತಹಲ್‌ವರೆವಿಗೂ ವೆಚ್ಚವಾಗಿರುವ ಮೊತ್ತವೆಷ್ಟು ?
2) ದಿ: 15-01-2010 ರ ಆಯುಕ್ತರ ಟಿಪ್ಪಣಿಯ ರೀತ್ಯಾ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂಚಿತ ವೇತನದ ಆಧಾರದ ಮೇಲೆ ವರ್ಷಕ್ಕೆ ರೂ. 16,20,000/- ಗಳು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗುವುದಾಗಿ ತಿಳಿಸಿದ್ದು ಈ ಬಗ್ಗೆ ಸ್ಪಷ್ಟ ವಿವರಣೆ ನೀಡುವುದು.
3) ದಿನಾಂಕ: 23-03-2011 ರ ಪೌರಾಡಳಿತ ನಿರ್ದೇಶನಾಲಯದ ಪತ್ರದ ಪ್ರತಿ ಮಾತ್ರ ಇರುತ್ತದೆ. ಪ್ರಸ್ಥಾವಿತ ಅಭ್ಯರ್ಥಿಗಳಿಗೆ ಪಾಲಿಕೆಯಲ್ಲಿ ಮುಂದುವರೆಸಲು ಯಾವುದೇ ಆದೇಶವಿರುವುದಿಲ್ಲ. ಈ ಆದೇಶವು ಅಧಿಕೃತವಾಗಿ ಪಾಲಿಕೆಗೆ ಬಂದಿರುವ ಬಗ್ಗೆ ಕಡತದಲ್ಲಿ ದಾಖಲೆಗಳು ಇರುವುದಿಲ್ಲ. ಆದರೆ ಆಯುಕ್ತರ ಟಿಪ್ಪಣಿಯಲ್ಲಿ ಈ ಉಲ್ಲೇಖದ ರೀತ್ಯಾ ಮುಂದಿನ ಆದೇಶದವರೆವಿಗೂ ಮುಂದುವರೆಸಲು ತಿಳಿಸಲಾಗಿರುತ್ತದೆ ಎಂಬ ಬಗೆಗೂ ಸೂಕ್ತ ವಿವರಣೆ ನೀಡುವುದು.
4) ಕಡತಗಳ ದಾಖಲೆಗಳ ರೀತ್ಯಾ ಕೌಶಲ್ಯ ಅಭಿವೃದ್ಧಿ ತಜ್ಞರಲ್ಲಿ ಕಾಯ್ದಿರಿಸಲಾದ ಅಭ್ಯರ್ಥಿಯ ಹೆಸರಿನ ರೀತ್ಯಾ ಪುನೀತ್ ಬಾವೆ ಎಂದು ದಾಖಲಾಗಿದ್ದು ದಿ: 12-11-2011 ರ ಆಯುಕ್ತರ ಟಿಪ್ಪಣಿಯಲ್ಲಿ ಶ್ರೀಮತಿ ವಿನೋದ್ ಬಾವೆ ರವರನ್ನು ಶಿಪಾರಸ್ಸು ಮಾಡಿದ್ದು ಇದು ಅತಿ ಗಂಭೀರ ಸ್ವರೂಪದ ಆರೋಪವಾಗಿದ್ದು ಈ ಕರ್ತವ್ಯಲೋಪಕ್ಕೆ ಸಂಬಂಧಪಟ್ಟ ಸಿಬ್ಬಂದಿವರ್ಗದವರ ಮೇಲೆ ಶಿಸ್ತಿನ ಕ್ರಮ ಕೈಗೊಂಡು ವರದಿ ನೀಡುವುದು.

ಸಮಿತಿಯು ಈ ಹಿಂದೆ ಆಯುಕ್ತರ ಕಛೇರಿಯ ಆಡಳಿತ ಶಾಖೆಯ ತಪಾಸಣೆ ಸಂದರ್ಭದಲ್ಲಿ ಕಛೇರಿಯಲ್ಲಿನ ಕೆಲವೊಂದು ನ್ಯೂನತೆಗಳ ಬಗ್ಗೆ ಪರಿಶೀಲಿಸುತ್ತಿದ್ದ ಸಮಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ಆಸ್ತಿ ಮತ್ತು ಋಣಭಾರ ಪ್ರಪತ್ರಗಳನ್ನು ಪರಿಶೀಲಿಸುವ ಸಲುವಾಗಿ ಮೊಹರುನೊಂದಿಗೆ ತರಲಾದ ದಾಖಲೆಗಳನ್ನು ಉಪ ಆಯುಕ್ತರು (ಆಡಳಿತ) ರವರ ಸಕ್ಷಮದಲ್ಲಿ ಅವರ ಕಛೇರಿಯ ಸುಪರ್ದಿಗೆ ಈ ದಿನ ನೀಡಲಾಗಿರುತ್ತದೆ. ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿಸಿಬ್ಬಂದಿಗಳ ಹಾಜರಾತಿ ಕುರಿತಂತೆ ಬಯೋಮೆಟ್ರಿಕ್ ಯಂತ್ರವು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದು ಈ ಬಗೆಗೂ ಸಹ ಸೂಕ್ತ ಗಮನ ಹರಿಸಲು ಸೂಚಿಸಲಾಗಿರುತ್ತದೆ. ಕಚೇರಿ ವೇಳೆಯಲ್ಲಿ ಸಿಬ್ಬಂದಿವರ್ಗದವರು ಗುರುತಿನ ಚೀಟಿ ಧರಿಸದೇ ಇರುವುದು ಹಾಗೂ ಚಾಲಕರುಗಳು ಹಾಗೂ ನಾಲ್ಕನೇ ದರ್ಜೆ ನೌಕರರು ಸಮವಸ್ತ್ರ ಧರಿಸದೇ ಇರುವುದು ಕಂಡುಬಂದಿದ್ದು ಈ ಬಗೆಗೂ ಸಹ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು. ಸಮಿತಿಯ ಸದಸ್ಯರಾದ ಶ್ರೀ ಎಂ.ಕೆ.ಗುಣಶೇಖರ್ ರವರು ಆಸ್ತಿ ತೆರಿಗೆ ಪಾವತಿಸಲು ಬರುವ ಸಾರ್ವಜನಿಕರೊಂದಿಗೆ ಪಾಲಿಕೆಯ ಸಿಬ್ಬಂದಿವರ್ಗದವರು ಸೌಜನ್ಯದಿಂದ ವರ್ತಿಸುವಂತೆ ಸೂಕ್ತ ತಿಳುವಳಿಕೆ ನೀಡುವಂತೆಯೂ ಸಹ ಉಪ ಆಯುಕ್ತರು (ಆಡಳಿತ) ರವರನ್ನು ಕೋರಿರುತ್ತಾರೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 28-01-2012 ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು**
**ಶ್ರೀಯುತರುಗಳಾದ**

1. ಹೆಚ್. ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ ಪಿಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಆರ್. ಉದಯ್ ಕುಮಾರ್ – ಸದಸ್ಯರು
5. ವೈ.ಆರ್. ಗೌರಮ್ಮ – ಸದಸ್ಯರು
6. ಗೋವಿಂದರಾಜು – ಸದಸ್ಯರು
7. ಲಲಿತ ಮುಕುಂದರಾವ್ – ಸದಸ್ಯರು
8. ಎ. ವಿಜಯ ರಮೇಶ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**
**ಶ್ರೀಯುತರುಗಳಾದ**

ಉಪ ಆಯುಕ್ತರು (ಆಡಳಿತ)
ಸಹಾಯಕ ಆಯುಕ್ತರು (ಆಡಳಿತ-1)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ಜಂಟಿ ನಿರ್ದೇಶಕರು (ಸಾಂಖ್ಯಿಕ)
ವಿಶೇಷ ಅಧಿಕಾರಿಗಳು

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/27/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಂಟಿ ನಿರ್ದೇಶಕರು (ಸಾಂಖ್ಯಿಕ) ರವರ ಕಛೇರಿಯನ್ನು ಸುಮಾರು 20 ವರ್ಷಕ್ಕೂ ಹಿಂದೆ ರಚಿಸಲ್ಪಟ್ಟಿದ್ದು ಈ ಕಛೇರಿಯ ಸಾಮಾನ್ಯ ಮತ್ತು ವಿವಿಧ ಹಂತದ ಮಾಹಿತಿ ಅಂಕಿ ಅಂಶ ಕ್ರೂಢೀಕರಣ, ಮೌಲ್ಯಮಾಪನ ಮುಂತಾದ ಕೆಲಸಗಳೊಂದಿಗೆ ಜನನ/ಮರಣ ನೊಂದಣಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸಲು ಉದ್ದೇಶಿಸಲಾಗಿತ್ತು. ಆದರೆ ಅಂದಿನಿಂದ ಇಂದಿನವರೆಗೂ ನಾಗರೀಕ ನೊಂದಣಿಕಾರ್ಯದ ಮೇಲ್ವಿಚಾರಣೆ ಜೊತೆಗೆ ಜನನ/ಮರಣ ಪ್ರಮಾಣ ಪತ್ರದಲ್ಲಿ ಹೆಸರು ಸೇರ್ಪಡೆ ಅಗತ್ಯ ತಿದ್ದುಪಡಿ, ತಡೆನೊಂದಣಿ ಮಾಡುವ ಕಾರ್ಯಕ್ಕೆ ಸೀಮಿತಗೊಂಡಿರುತ್ತದೆ.

ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಪಾಲಿಕೆ ವಿಸ್ತೀರ್ಣವೂ ಸುಮಾರು 776.2 ಚ.ಕೀ ಮೀಟರ್ ಆಗಿರುತ್ತದೆ ಮತ್ತು 198 ವಾರ್ಡ್‌ಗಳನ್ನು ಒಳಗೊಂಡಂತಹ ಬೃಹತ್ ಸಂಸ್ಥೆಯಾಗಿರುತ್ತದೆ.

ಜನನ/ಮರಣ ನೊಂದಣಿ ಸಮಯದಲ್ಲಿ ಸಂಭವಿಸಲಾಗಿರುವ ತಪ್ಪುಗಳ ತಿದ್ದುಪಡಿ ಮತ್ತು ಹೆಸರು ಸೇರ್ಪಡೆ, ತಡೆನೊಂದಣಿ ಮುಂತಾದ ಕೆಲಸಗಳನ್ನು ಕೋರಿ ಪ್ರತಿದಿನವೂ ಸರಿ ಸುಮಾರು ದಿನಕ್ಕೆ 400 ಅರ್ಜಿಗಳು ಈ ಕಛೇರಿಯಲ್ಲಿ ಸ್ವೀಕೃತವಾಗುತ್ತಿರುತ್ತದೆ. ಜನನ/ಮರಣ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ಕೆಲಸದ ಒತ್ತಡ ಅತೀ ಹೆಚ್ಚಾಗಿರುವುದರಿಂದ ಈ ಕಛೇರಿವು ಜನನ/ಮರಣ ಪ್ರಮಾಣ ಪತ್ರ ಕಾರ್ಯಕ್ಕೆ ಸೀಮಿತಗೊಂಡಿರುತ್ತದೆ ಮತ್ತು **ಮೂಲ ಕರ್ತವ್ಯಗಳಾದ ಸಾಮಾನ್ಯ ಮಾಹಿತಿ ಸಂಗ್ರಹಣೆ, ವಿವಿಧ ಯೋಜನೆಗಳನ್ನು ಸಿದ್ದಪಡಿಸುವುದು, ಮೌಲ್ಯಮಾಪನ ಮುಂತಾದ ಸಾಂಖ್ಯಿಕ ಕಾರ್ಯಗಳನ್ನು ನಿರ್ವಹಿಸಲು**



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾಧ್ಯವಾಗಿರುವುದಿಲ್ಲ,** ಅಲ್ಲದೆ ಬೆಂಗಳೂರಿನ ವಿವಿಧ ಮೂಲೆಗಳಿಂದ ಸಾರ್ವಜನಿಕರು ಜನನ/ಮರಣ ಪತ್ರಗಳ ವಿಚಾರಕ್ಕೆ ಸಂಬಂಧಿಸಿದಂತೆ 30 ರಿಂದ 40 ಕಿ..ಮೀ. ದೂರದಿಂದ ಈ ಕಛೇರಿಗೆ ಬಂದು ಹೋಗುವುದು ಕಷ್ಟಕರವಾಗಿರುತ್ತದೆ. ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತನ್ನ ವಿವಿಧ ಇಲಾಖೆಗಳ ಕಛೇರಿಗಳನ್ನು ವಿಕೇಂದ್ರಿಕರಣಗೊಳಿಸಿದಂತೆ ಈ ಕಛೇರಿಯನ್ನೂ ಸಹ ವಲಯ ಮಟ್ಟದಲ್ಲಿ ವಿಕೇಂದ್ರಿಕರಣಗೊಳಿಸಬಹುದಾಗಿರುತ್ತದೆ. ಇದರಿಂದಾಗಿ ಸಾರ್ವಜನಿಕರಿಗೆ ಆಯಾ ವಲಯ ಮಟ್ಟದಲ್ಲಿಯೇ ಸೇವೆ ಒದಗಿಸುವುದರ ಜೊತೆಗೆ ಸಾಂಖ್ಯಿಕ ವಿಚಾರಗಳಿಗೆ ಸಂಬಂಧಿಸಿದಂತೆ ಕಾರ್ಯಗಳನ್ನು ಸಹ ಉತ್ತಮವಾಗಿ ನಿರ್ವಹಿಸಬಹುದಾಗಿರುತ್ತದೆ.

ಇದರಿಂದ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವುದರ ಜೊತೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದೈನಂದಿನ ಆಡಳಿತಕ್ಕೆ ಪ್ರಯೋಜನವಾಗಲಿದ್ದು ಸಾಂಖ್ಯಿಕ ಕಛೇರಿಯನ್ನು ವಿಕೇಂದ್ರಿಕರಣ ಗೊಳಿಸುವ ನಿಟ್ಟಿನಲ್ಲಿ ವಿವರವಾದ ಟಿಪ್ಪಣಿಯನ್ನು ಸಿದ್ದಪಡಿಸಿದೆ.

**ಹಾಲಿ ಕಛೇರಿಯು ಈ ಕೆಳಕಂಡ ಸಿಬ್ಬಂದಿಯನ್ನು ಹೊಂದಿರುತ್ತದೆ.**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಜಂಟಿ ನಿರ್ದೇಶಕರು (ಸಾಂಖ್ಯಿಕ) | 1 |
| 2 | ಸಹಾಯಕ ಸಾಂಖ್ಯಿಕ ಅಧಿಕಾರಿ | 1 |
| 3 | ಪ್ರಥಮ ದರ್ಜೆ ಸಹಾಯಕರು | 1 |
| 4 | ದ್ವಿತೀಯ ದರ್ಜೆ ಸಹಾಯಕರು | 5 |
| 5 | ನಾಲ್ಕನೇ ದರ್ಜೆ ನೌಕರರು | 6 |

## II. ಹಾಲಿ ನಿರ್ವಹಿಸಲಾಗುತ್ತಿರುವ ಕೆಲಸಗಳ ವಿವರ

1. ನಾಗರೀಕ ನೊಂದಣಿ ಕಾರ್ಯದ ಮೇಲ್ವಿಚಾರಣೆ ಮತ್ತು ತಾಂತ್ರಿಕ ಸಲಹೆಗಳನ್ನು ನೀಡುವುದು.
2. ಜನನ/ಮರಣ ಪ್ರಮಾಣ ಪತ್ರಗಳಲ್ಲಿ ತಿದ್ದುಪಡಿ, ಹೆಸರು ನೊಂದಣಿ ಮುಂತಾದ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಒಂದು ವರ್ಷಕ್ಕೂ ಹೆಚ್ಚು ಅವಧಿಯಾಗಿರುವ ನೊಂದಣಿ ವಹಿಗಳ ನಿರ್ವಹಣೆ ಮತ್ತು ಸಂರಕ್ಷಣೆ.
3. ವಾರ್ಷಿಕ ಆಡಳಿತ ವರದಿಯನ್ನು ಸಿದ್ದಪಡಿಸುವುದು.
4. ಜನಗಣತಿ ಮುಂತಾದ ಗಣತಿ ಕಾರ್ಯಗಳ ಉಸ್ತುವಾರಿ ನಿರ್ವಹಿಸುವುದು

ಕಳೆದ 20 ವರ್ಷಗಳಲ್ಲಿ ಬೆಂಗಳೂರು ಬೃಹದಾಕಾರವಾಗಿ ಬೆಳೆದಿದ್ದು ಸುಮಾರು 840 ಚ.ಕಿ.ಮೀ ವ್ಯಾಪ್ತಿಯಲ್ಲಿ ಆವರಿಸಿರುತ್ತದೆ. ನಗರದ ವಿಸ್ತರಣೆಯನ್ನು ಗಮನದಲ್ಲಿರಿಸಿ ಇಲಾಖೆಯ ಕಾರ್ಯ ವ್ಯಾಪ್ತಿ ಮತ್ತು



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಹಿತದೃಷ್ಟಿ ಗಮನದಲ್ಲಿರಿಸಿಕೊಂಡು, ಇಲಾಖೆಯನ್ನು ವಲಯಮಟ್ಟಕ್ಕೆ ವಿಸ್ತರಿಸುವ ಅವಶ್ಯಕತೆ ಇರುತ್ತದೆ.

ಜನನ/ಮರಣ ಪ್ರಮಾಣ ಪತ್ರಗಳಲ್ಲಿ ತಿದ್ದುಪಡಿ, ಹೆಸರು ಸೇರ್ಪಡೆ ಮುಂತಾದ ಕಾರ್ಯಗಳಿಗಾಗಿ ಜನರು ಬೆಂಗಳೂರಿನ ವಿವಿಧ ಮೂಲೆಗಳಿಂದ 30–40 ಕಿ.ಮೀ ದೂರದಿಂದ ಈ ಕಚೇರಿಗೆ ಪ್ರತಿ ದಿನವೂ ನೂರಾರು ಸಂಖ್ಯೆಯಲ್ಲಿ ಭೇಟಿ ನೀಡುತ್ತಿರುತ್ತಾರೆ, ಜನನ/ಮರಣ **ಪ್ರಮಾಣ ಪತ್ರಗಳಲ್ಲಿ ತಿದ್ದುಪಡಿ, ಹೆಸರು ಸೇರ್ಪಡೆ, ಮುಂತಾದ ಕೆಲಸ ಕಾರ್ಯಗಳನ್ನು ಆಯಾ ವಲಯಮಟ್ಟದಲ್ಲಿಯೇ ಶಾಖೆಯನ್ನು ಪ್ರಾರಂಭಿಸಿ ನೊಂದಣಿ ವಹಿಯನ್ನು ಆಯಾ ವಲಯಕ್ಕೆ ಸಂಬಂಧಿಸಿದಂತೆ ವರ್ಗಾಯಿಸಿ ನಿರ್ವಹಿಸಿದ್ದಲ್ಲಿ, ಸಾರ್ವಜನಿಕರಿಗೆ ತುಂಬಾ ಅನುಕೂಲ ಕಲ್ಪಿಸಿದಂತಾಗುತ್ತದೆ.**

ಕೇಂದ್ರ ಕಛೇರಿಯನ್ನು **ಯೋಜನೆ ಮತ್ತು ಮೌಲ್ಯ ಮಾಪನ** ವಿಭಾಗವೆಂದು ಮರು ನಾಮಕರಣ ಮಾಡಿ ಹಾಲಿ ಇರುವ ಜಂಟಿ ನಿರ್ದೇಶಕರು (ಸಾಂಖ್ಯಿಕ) ರವರ ಹುದ್ದೆಯನ್ನು ಜಂಟಿ ಆಯುಕ್ತರು **ಯೋಜನೆ ಮತ್ತು ಮೌಲ್ಯಮಾಪನ ವಿಭಾಗವೆಂದು ಮರುನಾಮಕರಣ ಮಾಡಬಹುದಾಗಿರುತ್ತದೆ** ಹಾಗೂ ಈ ಕೆಳಕಂಡ ಸಿಬ್ಬಂದಿಯು ಈ ವಿಭಾಗಕ್ಕೆ ಅವಶ್ಯಕವಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಕೇಂದ್ರ ಕಛೇರಿಯ ಯೋಜನೆ ಮೌಲ್ಯಮಾಪನ ವಿಭಾಗಕ್ಕೆ ಅವಶ್ಯವಿರುವ ಹುದ್ದೆಗಳ ವಿವರ |
|---|---|---|
| 1 | ಜಂಟಿ ನಿರ್ದೇಶಕರು (ಸಾಂಖ್ಯಿಕ) | 1 |
| 2 | ಉಪ ನಿರ್ದೇಶಕರು | 1 |
| 3 | ಸಹಾಯಕ ನಿರ್ದೇಶಕರು | 1 |
| 4 | ಸಹಾಯಕ ಸಾಂಖ್ಯಿಕ ಅಧಿಕಾರಿ | 2 |
| 5 | ಸಾಂಖ್ಯಿಕ ನಿರೀಕ್ಷಕರು | 3 |
| 6 | ಪ್ರಥಮ ದರ್ಜೆ ಸಹಾಯಕರು | 1 |
| 7 | ದ್ವಿತೀಯ ದರ್ಜೆ ಸಹಾಯಕರು | 3 |
| 8 | ನಾಲ್ಕನೇ ದರ್ಜೆ ನೌಕರರು | 3 |

ಜಂಟಿ ಆಯುಕ್ತರು ಯೋಜನೆ ಮತ್ತು ಮೌಲ್ಯಮಾಪನ ವಿಭಾಗವು **ಪ್ರಮುಖವಾಗಿ ಮೂರು ಭಾಗಗಳಾಗಿ ಕಾರ್ಯನಿರ್ವಹಿಸಬಹುದಾಗಿದೆ.**

1) ಸಾಮಾನ್ಯ ಮಾಹಿತಿ ಸಂಗ್ರಹಣೆ ಮತ್ತು ನಿರ್ವಹಣೆ.
2) ಯೋಜನೆಗಳನ್ನು ಸಿದ್ದಪಡಿಸುವುದು ಮತ್ತು ಆಯಾವ್ಯಯವನ್ನು ಸಿದ್ದಪಡಿಸುವುದು.
3) ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವುದು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## 1. ಸಾಮಾನ್ಯ ಮಾಹಿತಿ ಸಂಗ್ರಹಣೆ ಮತ್ತು ನಿರ್ವಹಣೆ ಮಾಡುವುದು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ವಾರ್ಡ್‌ವಾರು ಜನಸಂಖ್ಯೆ (ಪುರುಷರು, ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಅಂಗವಿಕಲರು ಮುಂತಾದ ವಿವರಗಳನ್ನು ಸಂಗ್ರಹಿಸುವುದು) ಪಶುಸಂಖ್ಯೆ, ರಸ್ತೆ, ಕುಡಿಯುವ ನೀರು ಬೀದಿ ದೀಪ, ಶಾಲಾ ಕಾಲೇಜುಗಳು, ಉದ್ಯಾನವನಗಳು, ಕೆರೆ, ಆಸ್ಪತ್ರೆ, ನರ್ಸಿಂಗ್ ಹೋಂಗಳು, ಬ್ಯಾಂಕ್‌ಗಳು ಮುಂತಾದ ಮೂಲಭೂತ ಸೌಲಭ್ಯಗಳ ಮಾಹಿತಿಯನ್ನು ಸಂಗ್ರಹಿಸುವುದು, ಕ್ರೋಢೀಕರಿಸುವುದು ಮತ್ತು ಪ್ರಕಟಿಸುವುದು.

ಬೃಹತ್ ಬೆಂಗಳೂರು ಪ್ರದೇಶದ ವ್ಯಾಪ್ತಿಯ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಗಳನ್ನು ಆಧರಿಸಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ವಾರ್ಡ್‌ವಾರು ಕ್ರೋಢೀಕರಿಸುವುದು ಮತ್ತು ಪ್ರಕಟಿಸುವುದು.

ವಾರ್ಡ್‌ವಾರು ಜನಸಂಖ್ಯೆ ಅನುಗುಣವಾಗಿ ಜನನ/ಮರಣ, ತಾಯಿ ಮರಣ, ಶಿಶು ಮರಣ, ಆರೋಗ್ಯ ಮತ್ತು ನೈರ್ಮಲೀಕರಣ, ಮರಣ ಕಾರಣಗಳ ವಿವರಗಳ (ಅಂದರೆ ಅಪಘಾತದಿಂದ, ಆತ್ಮಹತ್ಯೆ ವಿವಿಧ ರೋಗಗಳು, ಸಹಜವಾಗಿ ಆಗುವ ಮರಣಗಳ ಬಗ್ಗೆ) ಮಾಹಿತಿ ಸಂಗ್ರಹಿಸುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನಿರ್ವಹಿಸಲ್ಪಡುವ ಪ್ರಾಥಮಿಕ/ಪ್ರೌಢಶಾಲಾ ಮತ್ತು ಕಾಲೇಜುಗಳಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳ ವಿವರ, ಮುಂಜೂರಾದ ಉಪಾಧ್ಯಾಯರ ಹುದ್ದೆಗಳು, ಭರ್ತಿ ಮಾಡಲ್ಪಟ್ಟ ಹುದ್ದೆಗಳು, ಶಾಲೆಗಳಲ್ಲಿನ ಪರಿಸ್ಥಿತಿ ಅಂದರೆ ಕಟ್ಟಡ ವಿದ್ಯುತ್ ಸೌಕರ್ಯ ಕುಡಿಯುವ ನೀರು, ಶೌಚಾಲಯ ಮುಂತಾದ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು Academic Performance ಗೆ ಸಂಬಂಧಪಟ್ಟ ಮಾಹಿತಿಗಳನ್ನು ಕ್ರೋಢೀಕರಿಸಿ ವರದಿಯನ್ನು ಸಿದ್ದಪಡಿಸುವುದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿವಿಧ ವಲಯಗಳಿಗೆ ಸಂಬಂಧಿಸಿದಂತೆ (Sectorwise) ಪ್ರಗತಿಯ ವರದಿಯನ್ನು ಕಾಮಗಾರಿ/ಯೋಜನೆವಾರು ಸಂಗ್ರಹಿಸಿ ಪ್ರಗತಿ ವರದಿಯನ್ನು ಸಿದ್ದಪಡಿಸಿ ಮಾನ್ಯ ಆಯುಕ್ತರವರಿಗೆ ಸಲ್ಲಿಸುವುದು.

## II. ಯೋಜನೆಗಳನ್ನು ರೂಪಿಸುವುದು ಮತ್ತು ಆಯವ್ಯಯ ಸಿದ್ದಪಡಿಸುವುದು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತನ್ನ ಸ್ವಂತ ಸಂಪನ್ಮೂಲಗಳಿಂದ (ಆಸ್ತಿ ತೆರಿಗೆ, ಬಾಡಿಗೆ, ವ್ಯಾಪಾರ ಪರವಾನೆಗೆ, ಜಾಹೀರಾತು ತೆರಿಗೆ ಇತ್ಯಾದಿ) ಸಂಗ್ರಹವಾಗುವ ಆದಾಯದ ವಿವರಗಳನ್ನು ಸಿದ್ದಪಡಿಸುವುದು. ಅಯಾ ಆರ್ಥಿಕ ವರ್ಷದಲ್ಲಿ ಸಂಗ್ರಹವಾಗುವ ಬೇಡಿಕೆ ಮತ್ತು ವಸೂಲಾತಿ ವಿವರವನ್ನು (ಡಿ.ಸಿ.ಬಿ) ಸಿದ್ದಪಡಿಸುವುದು.

ರಾಜ್ಯ/ಕೇಂದ್ರ ಸರ್ಕಾರದಿಂದ ಪಡೆಯಬಹುದಾದ ಸಹಾಯಧನದ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸುವುದು ವಿವಿಧ ಯೋಜನೆಗಳ ಮೂಲಕ ಲಭ್ಯವಾಗುವ ಅನುದಾನವನ್ನು ಅಂದಾಜಿಸುವುದು



ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಾಗೂ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರದಿಂದ ಪಡೆಯಬಹುದಾದ ವ್ಯಕ್ತಿಗತ ಅನುದಾನದ ( Percapita Grant) ಬಗ್ಗೆ ಮಾಹಿತಿ ಸಂಗ್ರಹಿಸುವುದು ಮತ್ತು ವರದಿಯನ್ನು ಸಿದ್ಧಪಡಿಸುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ವಾರ್ಷಿಕ ಆಯವ್ಯಯವನ್ನು ಸಿದ್ದಪಡಿಸುವ ಕಾರ್ಯದಲ್ಲಿ ಸಿಬ್ಬಂದಿ ವೇತನ, ವಾಹನಗಳ ನಿರ್ವಹಣೆ, ಕಛೇರಿ ವೆಚ್ಚ ಹಾಗೂ ಮುಂದುವರೆದ ಕಾರ್ಯಕ್ರಮಗಳಿಗೆ ಹೊಸ ಕಾಮಗಾರಿಗಳಿಗೆ ಲಭ್ಯವಾಗುವ ಅನುದಾನದ ನೈಜ ವಿವರಗಳ ಮಾಹಿತಿಯನ್ನು **ಮುಖ್ಯ ಲೆಕ್ಕಾಧಿಕಾರಿಗಳಿಗೆ** ನೀಡುವುದರೊಂದಿಗೆ ಆಯವ್ಯಯ ಸಿದ್ದಪಡಿಸುವ ಕಾರ್ಯದಲ್ಲಿ ಅಗತ್ಯ ಸಹಕಾರ ನೀಡುವುದು.

ಆರ್ಥಿಕ ವರ್ಷದಲ್ಲಿ ಅನುಷ್ಠಾನಗೊಳ್ಳಬಹುದಾದ ( Implimentable Budget) ಆಯವ್ಯಯ ತಯಾರಿಸುವ ದೆಶೆಯಲ್ಲಿ ಮುಖ್ಯಲೆಕ್ಕಾಧಿಕಾರಿಗಳು, ಮಾನ್ಯ ಆಯುಕ್ತರು, ಸ್ಥಾಯಿ ಸಮಿತಿಗಳಿಗೆ ಅಗತ್ಯ ಸಹಕಾರ ನೀಡುವುದು.

ವಾರ್ಡ್‌ವಾರು ಕಾಮಗಾರಿಗಳಿಗೆ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಮಾನ್ಯ ಸದಸ್ಯರುಗಳ ಸಲಹೆ/ಸೂಚನೆಗಳನ್ನು ಅನುಸರಿಸಿ ಯೋಜನೆಗಳನ್ನು ಸಿದ್ದಪಡಿಸುವುದು ಹಾಗೂ ಸಂಬಂಧಪಟ್ಟ ಸ್ಥಾಯಿ ಸಮಿತಿಗಳಲ್ಲಿ ಮಂಡಿಸುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೂಲಭೂತ ಸೌಕರ್ಯಗಳನ್ನೊಳಗೊಂಡಂತೆ ಅಭಿವೃದ್ಧಿಯ ನೀಲಾನಕ್ಷೆಯನ್ನು ಸಿದ್ದಪಡಿಸುವುದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 198 ವಾರ್ಡ್‌ಗಳಿಗೆ ವಾರ್ಡ್‌ವಾರು/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುನ್ನೋಟ 2015 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುನ್ನೋಟ 2020 ಸಿದ್ದಪಡಿಸುವದು.

## III. ಮೌಲ್ಯ ಮಾಪನ ಕಾರ್ಯವನ್ನು ನಿರ್ವಹಿಸುವುದು.

1. ವಾರ್ಷಿಕ ಯೋಜನೆಯಲ್ಲಿ ವಲಯವಾರು/ಕಾರ್ಯಕ್ರಮವಾರು ಆಯಾವ್ಯಯಕ್ಕೆ ಮುನ್ನ ಮತ್ತು ಆಯಾವ್ಯಯದ ನಂತರದ ಪರಿಸ್ಥಿತಿಯ ತುಲನಾತ್ಮಕ ವರದಿ ತಯಾರಿಸುವುದು ಹಾಗೂ ಮಾನ್ಯ ಆಯುಕ್ತರವರ ಪರಿಶೀಲನೆ ಮತ್ತು ಅನುಮೋದನೆಯೊಂದಿಗೆ/ಸಂಬಂಧಿಸಿದ ಸ್ಥಾಯಿ ಸಮಿತಿಗೆ ಮಂಡಿಸುವುದು.
2. ವಿವಿಧ ವಲಯಗಳ/ಕಾರ್ಯಗಳಿಗೆ ಸಂಬಂಧಿಸಿದಂತೆ ಮಾಸಿಕ ಪ್ರಗತಿ ವರದಿಯನ್ನು (ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನೊಳಗೊಂಡಂತೆ) ಸಿದ್ದಪಡಿಸುವುದು.
3. ರಾಜ್ಯ/ಕೇಂದ್ರ ಸರ್ಕಾರ ಕಾರ್ಯಕ್ರಮಗಳು/ಸಹಾಯಧನ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಮಾಸಿಕ/ತ್ರೈಮಾಸಿಕ/ವಾರ್ಷಿಕ ಪ್ರಗತಿ ವರದಿ ಸಿದ್ದಪಡಿಸುವುದು.
4. ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಅನುಷ್ಠಾನಗೊಳ್ಳುವ ಯೋಜನೆಗಳ ಪ್ರಗತಿ ವರದಿಯನ್ನು ಸಿದ್ದಪಡಿಸುವುದು.
5. **ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ನೀಡಲಾಗಿರುವ ಸ್ವತ್ತುಗಳು ನೈಜ ಫಲಾನುಭವಿಗೆ ತಲುಪಿರುವ ಬಗ್ಗೆ**



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪಯುಕ್ತತೆಯ ಬಗ್ಗೆ ರ್‍ಯಾಂಡಮ್ ಸಮೀಕ್ಷೆಗಳ ಮೂಲಕ (ಸಮೀಕ್ಷೆಯನ್ನು ಇಲಾಖೆ/ಹೊರಗಿನ ಏಜೆನ್ಸಿಸಿಗಳಾದ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಸಮೀಕ್ಷೆಯ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಸಂಸ್ಥೆ, ಇಂಡಿಯನ್ ಇನ್ಸ್‌ಟೂಟ್ ಆಫ್ ಮ್ಯಾನೇಜ್‌ಮೆಂಟ್ /ಅರ್ಹ ಸರ್ಕಾರಿ/ಅರೆ ಸರ್ಕಾರಿ) ಸಂಸ್ಥೆಗಳಿಂದ ನಿರ್ವಹಿಸಿ ವರದಿಯನ್ನು ಸಿದ್ದಪಡಿಸಿ ಮಾನ್ಯ ಆಯುಕ್ತರ ಪರಿಶೀಲನೆ ಮತ್ತು ಅನುಮೋದನೆಯೊಂದಿಗೆ ಸಂಬಂಧಿಸಿದ ಸ್ಥಾಯಿ ಸಮಿತಿಯ ಮುಂದೆ ಮಂಡಿಸುವುದು.

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆ/ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೌಲ್ಯ ಮಾಪನವನ್ನು ಮಾನ್ಯ ಆಯುಕ್ತರು/ಸ್ಥಾಯಿ ಸಮಿತಿ ಕೌನ್ಸಿಲ್ ಸಭೆ ನಿರ್ದೇಶನವನ್ನು ಅನುಸರಿಸಿ, ಯೋಜನೆ ಮತ್ತು ಮೌಲ್ಯ ಮಾಪನ ಶಾಖೆ/ಸರ್ಕಾರಿ/ಅರೆ ಸರ್ಕಾರಿ/ಸಂಸ್ಥೆಗಳ ಮೂಲಕ ನಿರ್ವಹಿಸಿ ವರದಿ ಸಲ್ಲಿಸುವುದು.
7. ಮಾನ್ಯ ಆಯುಕ್ತರು/ವಿಶೇಷ ಆಯುಕ್ತರು/ಸ್ಥಾಯಿ ಸಮಿತಿ/ಕೌನ್ಸಿಲ್ ಸಭೆಯು ಆಗಿಂದಾಗ್ಗೆ ನೀಡಬಹುದಾದ ನಿರ್ದೇಶನಗಳನ್ನು ಪಾಲಿಸುವುದು.

<u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಂಟು ವಲಯಗಳಲ್ಲಿನ ಸಾಂಖ್ಯಿಕ ಶಾಖೆಯನ್ನು ಜಂಟಿ ಆಯುಕ್ತರು/ಉಪ ಆಯುಕ್ತರು ರವರ ಆಢಳಿತಾತ್ಮಕ ಮತ್ತು ಜಂಟಿ ಆಯುಕ್ತರವರ ಯೋಜನೆ ಮತ್ತು ಮೌಲ್ಯಮಾಪನ ವಿಭಾಗ ಇವರ ತಾಂತ್ರಿಕ ನಿಯಂತ್ರಣದಲ್ಲಿ ಈ ಕೆಳಕಂಡ ಸಿಬ್ಬಂದಿಯೊಂದಿಗೆ ರಚಿಸಬಹುದಾಗಿದೆ.</u>

**ವಲಯ ಮಟ್ಟದಲ್ಲಿ ರಚಿಸಬಹುದಾದ ಕಛೇರಿಯ ರೂಪುರೇಷೆಗಳು**

| | | |
|---|---|---|
| 1 | ಸಹಾಯಕ ನಿರ್ದೇಶಕರು (ಸಾಂಖ್ಯಿಕ) | 1 |
| 2 | ಸಹಾಯಕ ಸಾಂಖ್ಯಿಕ ಅಧಿಕಾರಿ | 1 |
| 3 | ಸಾಂಖ್ಯಿಕ ನಿರೀಕ್ಷಕರು | 2 |
| 4 | ಗ್ರೂಪ್ 'ಡಿ ದರ್ಜೆ ನೌಕರರು | 1 |

<u>**ವಲಯಮಟ್ಟದಲ್ಲಿ ರಚಿತವಾಗುವ ಸಾಂಖ್ಯಿಕ ಶಾಖೆಯು ಈ ಕೆಳಕಂಡಂತೆ ಕಾರ್ಯಗಳನ್ನು ನಿರ್ವಹಿಸುತ್ತದೆ.**</u>

1. ಸಾಂಖ್ಯಿಕ ಶಾಖೆಯು ವಲಯಮಟ್ಟದಲ್ಲಿ ಜಂಟಿ ಆಯುಕ್ತರು/ಉಪ ಆಯುಕ್ತರು ರವರ ಆಡಳಿತಾತ್ಮಕ ಮತ್ತು ಜಂಟಿ ಆಯುಕ್ತರು <u>ಯೋಜನೆ ಮತ್ತು ಮೌಲ್ಯಮಾಪನ</u> ತಾಂತ್ರಿಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವುದು.
2. ಆಯಾ ವಲಯಗಳಿಗೆ ಸಂಬಂಧಿಸಿದ ಜನನ/ಮರಣ ವಹಿಗಳನ್ನು ಸಂಗ್ರಹಿಸಿ ಸಂರಕ್ಷಿಸಿ ನಿರ್ವಹಿಸುವುದು.
3. ಒಂದು ವರ್ಷಕ್ಕೆ ಮೇಲ್ಪಟ್ಟ ಪ್ರಕರಣಗಳಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ ತಡನೊಂದಣಿ ಮುಂತಾದ ಕಾರ್ಯಗಳನ್ನು ಜನನ/ಮರಣ ನೊಂದಣಿ ಅಧಿನಿಯಮ 1969 ಮತ್ತು ನಿಯಮ 1999 ರಂತೆ ನಿರ್ವಹಿಸುವುದು.

ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

4. ಆಯಾ ವಲಯಮಟ್ಟದಲ್ಲಿ ವಾರ್ಡ್‌ವಾರು ಸಾಮಾನ್ಯ ಮಾಹಿತಿ ಸಂಗ್ರಹಣೆ ಕ್ರೋಢೀಕರಿಸುವುದು ನಿಗಧಿತ ನಮೂನೆಯಲ್ಲಿ ಜಂಟಿ ಆಯುಕ್ತರು ಯೋಜನೆ ಮತ್ತು ಮೌಲ್ಯಮಾಪನ ರವರ ಕಛೇರಿಗೆ ಸಲ್ಲಿಸುವುದು.
5. ಆಯಾ ವಲಯ ಮಟ್ಟದಲ್ಲಿ ಯೋಜನೆಗಳನ್ನು ಸಿದ್ದಪಡಿಸುವಿಕೆ, ಪ್ರಗತಿ ವರದಿ ಸಿದ್ದಪಡಿಸುವುದು ಮೌಲ್ಯಮಾಪನ ಮುಂತಾದ ಕಾರ್ಯಗಳನ್ನು ಜಂಟಿ ಆಯುಕ್ತರು ಯೋಜನೆ ಮತ್ತು ಮೌಲ್ಯಮಾಪನ ರವರ ನಿರ್ದೇಶನದಂತೆ ನಿರ್ವಹಿಸಿ ವರದಿ ಸಲ್ಲಿಸುವುದು.
6. ಆಯಾ ವಲಯಗಳ ಜಂಟಿ ಆಯುಕ್ತರು/ಉಪ ಆಯುಕ್ತರು/ಜಂಟಿ ಆಯುಕ್ತರು ಯೋಜನೆ ಮತ್ತು ಮೌಲ್ಯಮಾಪನ ರವರುಗಳು ಆಗಿಂದಾಗ್ಗೆ ನೀಡುವ ನಿರ್ದೇಶನಗಳನ್ನು ಪಾಲಿಸುವುದು.

ಸದ್ಯಕ್ಕೆ ವಲಯಮಟ್ಟದಲ್ಲಿ ಸಹಾಯಕ ನಿರ್ದೇಶಕರು ಮತ್ತು ಸಿಬ್ಬಂದಿಯನ್ನು ಮಂಜೂರಾತಿ ನೀಡುವ ವರೆಗೆ ಈ ಕಾರ್ಯವನ್ನು ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ) ಇವರಿಗೆ ಸಂಬಂಧಪಟ್ಟ ಜನನ/ಮರಣ ವಹಿಗಳನ್ನು ವರ್ಗಾಯಿಸಿ ನಿರ್ವಹಿಸಲು ಅಧಿಕಾರ ನೀಡಬಹುದಾಗಿರುತ್ತದೆ.

ಈ ರೀತಿ ಯೋಜನೆ ಮತ್ತು ಮೌಲ್ಯಮಾಪನ ವಿಭಾಗವನ್ನು ವಿಸ್ತರಿಸಿ ವಿಕೇಂದ್ರಿಕರಣಗೊಳಿಸಿದಲ್ಲಿ ಆಯಾ ವಲಯಮಟ್ಟದಲ್ಲಿಯೇ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಒದಗಿಸುವುದರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅವಶ್ಯವಿರುವ ಮಾಹಿತಿಯನ್ನು ಕ್ರೋಢೀಕರಿಸಿ ವಿಶ್ಲೇಷಿಸಿ ವರದಿಗಳನ್ನು ಸಿದ್ದಪಡಿಸಿಸಬಹುದಾಗಿರುತ್ತದೆ. ಇದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಗತ್ಯವಾದ ಸಾಮಾನ್ಯ ಮಾಹಿತಿಯೊಂದಿಗೆ ಉತ್ತಮ ಆಯಾವ್ಯಯವನ್ನು ಸಿದ್ದಪಡಿಸುವ ಮತ್ತು ನಿಗಧಿತ ಅವಧಿಯಲ್ಲಿ ಕಾರ್ಯಗತಗೊಳಿಸಲು ಸಾಧ್ಯವಾಗುವಂತಹ ಯೋಜನೆಗಳನ್ನು/ಕಾರ್ಯಗಳನ್ನು ರೂಪಿಸಲು ಮತ್ತು ಯಶಸ್ವಿ ಅನುಷ್ಠಾನ ಕೈಗೊಳ್ಳಲು ಸಾಧ್ಯವಾಗುವುದರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಭಿವೃದ್ದಿಯತ್ತ ಸಾಗಲು ಮಹಾಜನತೆಯ ಆಶೋತ್ತರಕ್ಕೆ ಸ್ಪಂದಿಸಲು ದಾರಿಯಾಗುತ್ತದೆ ಮೇಲೆ ವಿವರಿಸಲಾದ ಅಂಶಗಳನ್ನು ಆಧರಿಸಿ ಸಾಂಖ್ಯಿಕ ವಿಭಾಗವನ್ನು ವಲಯ ಮಟ್ಟಕ್ಕೆ ವಿಸ್ತರಿಸಲು ಹಾಗೂ ಸದರಿ ಕಛೇರಿಯನ್ನು ತೆರೆಯಲು ಅವಶ್ಯವಿರುವ ಅನುಮೋದನೆಯನ್ನು ಸರ್ಕಾರದಿಂದ ಮಂಜೂರಾತಿ ಬರುವವರೆಗೂ ವಲಯ ಮಟ್ಟದಲ್ಲಿ ವೈದ್ಯಾಧಿಕಾರಿಗಳು ಜನನ/ಮರಣ ವಿಷಯಕ್ಕೆ ಸಂಬಂಧಿಸಿದಂತೆ ಹೆಸರು ಸೇರ್ಪಡೆ ತಿದ್ದುಪಡಿ ತಡೆನೊಂದಣಿ ಮುಂತಾದ ಕಾರ್ಯಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 12-01-2012 ರ ಸಂಖ್ಯೆ: ಜೆ.ಡಿ.ಎಸ್/ಪಿಆರ್/14/11-12 ರ ಟಿಪ್ಪಣಿ.

**ನಿರ್ಣಯ:** ಪ್ರಸ್ತಾವನೆ ಕುರಿತಂತಹ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದ್ದು ಇವುಗಳನ್ನು ಸರಿಪಡಿಸಿ ಮರುಮಂಡಿಸಲು ಹಿಂದಿರುಗಿಸಿದೆ.

1. ಈ ಪ್ರಸ್ತಾವನೆ ಕುರಿತಂತೆ ಆಯುಕ್ತರ ಕಛೇರಿಯ ಆಡಳಿತ ವಿಭಾಗದಲ್ಲಿ ಯಾವುದೇ ರೀತಿಯಲ್ಲಿ ವ್ಯವಹರಣೆಯಾಗದೇ ಇದ್ದು ಇದು ಕೆಲವೊಂದು ಅನುಮಾನಗಳಿಗೆ ಆಸ್ಪದವನ್ನು ಉಂಟುಮಾಡುತ್ತದೆ ಈ ಬಗ್ಗೆ ವಿವರಣೆ ನೀಡುವುದು.
2. ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಅಂಕಿ ಅಂಶ ಅಧಿಕಾರಿಯ ಹುದ್ದೆ ಮಾತ್ರ ಮಂಜೂರಾತಿಯಾಗಿದ್ದು ಅಧಿಕವಾಗಿ ಕೋರಿರುವ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅಳವಡಿಸಲು ಕ್ರಮಕೈಗೊಳ್ಳಲಾಗಿದೆಯೇ?
3. ಸದರಿ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸುವ ಅವಶ್ಯಕತೆ ಬಗ್ಗೆ ವಿವರಣೆ ನೀಡುವುದು.
4. ಜಂಟಿ ಆಯುಕ್ತರು (ಯೋಜನೆ ಮತ್ತು ಮೌಲ್ಯಮಾಪನ) ಎಂಬುದಾಗಿ ಸೃಷ್ಟಿಸಿ ಸದರಿಯವರಿಗೆ ಯೋಜನೆಗಳನ್ನು ರೂಪಿಸುವುದು, ಆಯವ್ಯಯ ಸಿದ್ದಪಡಿಸುವುದು ಹಾಗೂ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ಕಾರ್ಯಗಳನ್ನು ರೂಪಿಸುವುದು ಎಂಬುದಾಗಿ ವರದಿಯಾಗಿರುತ್ತದೆ. ಈ ಕುರಿತಂತೆ ಪ್ರಧಾನ ಅಭಿಯಂತರರು, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಉಪ ಆಯುಕ್ತರು (ಕಂದಾಯ) ರವರ ಅಭಿಪ್ರಾಯವನ್ನು ಪಡೆಯದೆ ಜಂಟಿ ಆಯುಕ್ತರವರೆ ನಿರ್ವಹಿಸಲು ನಿಯಮಗಳಲ್ಲಿ ಅವಕಾಶವಿದೆಯೇ? ಇದ್ದಪಕ್ಷದಲ್ಲಿ ಪ್ರಧಾನ ಅಭಿಯಂತರರು, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಉಪ ಆಯುಕ್ತರು (ಕಂದಾಯ)ರವರು ಕಾರ್ಯವೈಖರಿ ಏನು?
5. ಜಂಟಿ ನಿರ್ದೇಶಕರು (ಸಾಂಖ್ಯಿಕ) ಕಛೇರಿಯ ಹಾಲಿ ಕಾರ್ಯ ವೈಖರಿಯ ಬಗ್ಗೆ ಸಾರ್ವಜನಿಕರಲ್ಲಿ ಸದಾಭಿಪ್ರಾಯವಿಲ್ಲದೆ ಇದ್ದು ಈ ಒಂದು ಕೊರತೆಯನ್ನು ನಿವಾರಿಸಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಯಾವ ವಿಧವಾದ ಕ್ರಮಕೈಗೊಳ್ಳಲಾಗಿದೆ.
6. ಅಂಕಿ ಅಂಶ ಇಲಾಖೆಯು Central Act ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದ್ದು ಈ ಹಂತದಲ್ಲಿ ಪಾಲಿಕೆ ವತಿಯಿಂದ ಸದರಿ ಇಲಾಖೆಯಲ್ಲಿರುವ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸಲು ಕೆಎಂಸಿ ನಿಯಮದಲ್ಲಿ ಅವಕಾಶವಿದೆಯೆ ಸ್ಪಷ್ಟಪಡಿಸಿ

**ವಿಷಯ ಸಂಖ್ಯೆ: ಸಿಆಸುಸ್ಥಾಸ/28/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀಮತಿ ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ ಹಿಂದಿ ಪಾಠಶಾಲೆ ಇವರನ್ನು ಸರ್ಕಾರದ ಆದೇಶದಲ್ಲಿ ಪಾಲಿಕೆಗೆ ಒಂದು ವರ್ಷದ ಅವಧಿಗೆ ನಿಯೋಜನೆ ಮೇಲೆ ನೇಮಿಸಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಶಿಕ್ಷಕರು ಸರ್ಕಾರದ ಆದೇಶದಂತೆ ಪಾಲಿಕೆಯಲ್ಲಿ ಸಲ್ಲಿಸಿದ್ದ ಹಾಜರಾತಿ ವರದಿಯನ್ನು ಪರಿಗಣಿಸಿ ಕರ್ತವ್ಯದ ಮೇಲೆ ತೆಗೆದುಕೊಳ್ಳಲಾಗಿರುತ್ತದೆ. ನಂತರ ಸರ್ಕಾರವು ಸದರಿ ಸಹ ಶಿಕ್ಷಕರ ನಿಯೋಜನೆ ಅವಧಿಯನ್ನು ಪಾಲಿಕೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬುವವರೆವಿಗೂ ಅಥವಾ 2 ವರ್ಷದ ಅವಧಿಗೆ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಮುಂದುವರೆಸಲು ಅನುಮತಿ ನೀಡಲಾಗಿರುತ್ತದೆ. ಇದರಂತೆ ಸದರಿ ಸಹ ಶಿಕ್ಷಕರನ್ನು ಪಾಲಿಕೆಯಲ್ಲಿ ನಿಯೋಜನಾ ಸೇವೆ ಮೇಲೆ ದಿನಾಂಕ: 05-02-2011 ರಿಂದ 2 ವರ್ಷದ ವರೆಗೆ ಅಥವಾ ಪಾಲಿಕೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬುವವರೆವಿಗೂ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಎರವಲು ಸೇವೆಯ ಮೇಲೆ ಪಾಲಿಕೆಯ ಪ್ರಾಥಮಿಕ ಶಾಲೆ ಮಾರಪ್ಪನ ಪಾಳ್ಯ ಇಲ್ಲಿ ಕಾರ್ಯನಿರ್ವಹಿಸಲು ಆದೇಶದಂತೆ ಮುಂದುವರೆಸಲಾಗಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಂದುವರೆದು ಸರ್ಕಾರದ ಪತ್ರದಲ್ಲಿ ಶ್ರೀಮತಿ ಕಲ್ಯಾಣಮ್ಮ ಸಹ ಶಿಕ್ಷಕರು, ಮೈಸೂರು ದಕ್ಷಿಣ ವಾಸಿ ಹಿಂದುಸ್ಥಾನಿ ಜನ ಮಹಾಸಭಾ ಕನ್ನಡ ಹಿಂದಿ ಪಾಠಶಾಲೆ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಿರುತ್ತಾರೆ.

ಸರ್ಕಾರದ ಪತ್ರದಲ್ಲಿ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅನುಮತಿ ನೀಡಿರುವಂತೆ ಈಗಾಗಲೇ ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಸರ್ಕಾರಿ/ಅನುದಾನಿತ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪಾಲಿಕೆಯ ಸೇವೆಗೆ ಎರವಲು ಸೇವೆ ಮೇಲೆ ನಿಯೋಜಿಸಲು/ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಕಾನೂನು ಕೋಶದ ಮುಖ್ಯಸ್ಥರು ಪಾಲಿಕೆಯ ವೃಂದ ಮತ್ತು ನೇಮಕಾತಿಯ ನಿಯಮಾವಳಿಯಂತೆ ಸರ್ಕಾರಿ/ಅನುದಾನಿತ ಶಾಲೆಯಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರನ್ನು ಪಾಲಿಕೆಯ ಸೇವೆಗೆ ಎರವಲು ಸೇವೆಯ ಮೇರೆಗೆ ನಿಯೋಜಿಸಲು/ವಿಲೀನಗೊಳಿಸಲು ಅವಕಾಶವಿಲ್ಲದೇ ಇರುವುದರಿಂದ ಸದರಿಯವರನ್ನು ಪಾಲಿಕೆಯ ಸೇವೆಗೆ ವಿಲೀನಗೊಳಿಸಲು ಬರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಮೇಲ್ಕಂಡ ವಿವರವಾದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಪತ್ರದಲ್ಲಿ ಶ್ರೀಮತಿ ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ ಹಿಂದಿ ಪಾಠಶಾಲೆಯಿಂದ ಸರ್ಕಾರದ ಆದೇಶದಂತೆ ಪಾಲಿಕೆಯ ಪ್ರಾಥಮಿಕ ಶಾಲೆ ಇಲ್ಲಿ ಎರವಲು ಸೇವೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಇವರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಿರುವ ಸಂಬಂಧ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 12-01-2012 ರ ಬಿ12(3) ಪಿಆರ್/175/09-10 ರ ಟಿಪ್ಪಣಿ.

**ನಿರ್ಣಯ:**

ನಿಯಮಗಳಲ್ಲಿ ಅವಕಾಶವಿಲ್ಲದೇ ಇರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡಲು ತೀರ್ಮಾನಿಸಿದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 30–01–2012 ರಂದು ಸಹಾಯಕ ಕಂದಾಯ ಅಧಿಕಾರಿ (ಕೆಂಗೇರಿ ಉಪವಿಭಾಗ ಮತ್ತು ಹೇರೋಹಳ್ಳಿ ಉಪವಿಭಾಗ) ಕಛೇರಿಗಳ ತಪಾಸಣಾ ವರದಿ

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಹೆಚ್. ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ. ಪಿಳ್ಳಪ್ಪ – ಸದಸ್ಯರು
3. ವೀಣಾ ನಾಗರಾಜ್ – ಸದಸ್ಯರು
4. ಕೆ.ವಿ. ಯಶೋಧ – ಸದಸ್ಯರು
5. ವೈ.ಆರ್. ಗೌರಮ್ಮ – ಸದಸ್ಯರು
6. ಆರ್. ಉದಯಕುಮಾರ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಉಪ ಆಯುಕ್ತರು (ರಾಜರಾಜೇಶ್ವರಿನಗರ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ಕಂದಾಯ ಅಧಿಕಾರಿ (ಕೆಂಗೇರಿ ಉಪವಿಭಾಗ)
ವಿಶೇಷ ಅಧಿಕಾರಿಗಳು (ಕೌನ್ಸಿಲ್ ಕಾರ್ಯಾಲಯ)
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿಗಳು

ರಾಜರಾಜೇಶ್ವರಿನಗರ ವಲಯದ ಸಹಾಯಕ ಕಂದಾಯ ಅಧಿಕಾರಿ ಕೆಂಗೇರಿ ಉಪವಿಭಾಗದ ವ್ಯಾಪ್ತಿಯ ಸಹಾಯ ಕೇಂದ್ರಕ್ಕೆ ಭೇಟಿ ನೀಡಿ ತಪಾಸಣೆ ಕೈಗೊಳ್ಳಲಾಗಿ ಕಂದಾಯ ವಸೂಲಿಗಾರರಾದ ಶ್ರೀ ಗಣೇಶ್ ಎಂಬುವರು ದಿ: 27–01–2012 ರಂದು ಸ್ವೀಕೃತಿ ಆಗಿದ್ದ ಕಂದಾಯದ ಚೆಕ್‌ಗಳನ್ನು ಬ್ಯಾಂಕಿಗೆ ಪಾವತಿಸದೇ ಇರುವುದು ಕಂಡುಬಂದಿದ್ದು ಈ ಬಗ್ಗೆ ವಿಚಾರಿಸಲಾಗಿ ಜಿಐಎಸ್ ಕಾರ್ಯನಿಮಿತ್ತ ಬ್ಯಾಂಕಿಗೆ ಜಮಾ ಮಾಡಲು ಸಾಧ್ಯವಾಗದೇ ಇರುವುದಾಗಿ ತಿಳಿಸಿದ್ದು ಈ ಬಗ್ಗೆ ಸಮಿತಿಯು ಆಕ್ಷೇಪ ವ್ಯಕ್ತಪಡಿಸಿ ಆಸ್ತಿ ತೆರಿಗೆಯ ಎಲ್ಲಾ ಚೆಕ್‌ಗಳನ್ನು ಸ್ವೀಕೃತವಾದ ಮರು ದಿವಸವೇ ಬ್ಯಾಂಕಿಗೆ ಜಮಾ ಮಾಡಲು ಸೂಚಿಸಿ ಮುಂದೆ ಇಂತಹ ಲೋಪದೋಷಗಳು ಅಗದಂತೆ ಕ್ರಮಕೈಗೊಳ್ಳಲು ಹಾಜರಿದ್ದ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಯಿತು ಹಾಗೂ ಕಂದಾಯ ವಸೂಲಿಗಾರರ ಖಿರ್ದಿ ಪುಸ್ತಕಗಳನ್ನು ಪರಿಶೀಲಿಸಲಾಗಿ ಪ್ರತಿನಿತ್ಯ ವಸೂಲಿಯಾಗುವ ಕಂದಾಯದ ಬಗ್ಗೆ ಮತ್ತು ಸದರಿ ಚೆಕ್‌ಗಳನ್ನು ಬ್ಯಾಂಕಿಗೆ ಜಮಾ ಮಾಡಿರುವ ಬಗ್ಗೆ ಖಿರ್ದಿ ಪುಸ್ತಕದಲ್ಲಿ ಯಾವುದೇ ಅಧಿಕಾರಿಯು ದೃಢೀಕರಿಸದೇ ಇರುವುದು ಕಂಡುಬಂದಿದ್ದು ಈ ಬಗೆಗೂ ಸಹ ಗಮನ ಹರಿಸಿ ಎಲ್ಲಾ ಕಂದಾಯ ವಸೂಲಿಗಾರರ ಖಿರ್ದಿ ಪುಸ್ತಕಗಳನ್ನು ಪ್ರತಿನಿತ್ಯ ಕಛೇರಿಯ ವ್ಯವಸ್ಥಾಪಕರಾಗಲಿ ಅಥವಾ ಸಹಾಯಕ ಕಂದಾಯ ಅಧಿಕಾರಿಗಳಾಗಲಿ ಧೃಢೀಕರಿಸಲು ಸೂಚಿಸಲಾಯಿತು.

ನಂತರ ಸಮಿತಿಯು ಸಹಾಯಕ ಕಂದಾಯ ಅಧಿಕಾರಿ, (ಕೆಂಗೇರಿ ಉಪವಿಭಾಗ) ಕಛೇರಿಗೆ ಭೇಟಿ ನೀಡಿ ಕಛೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ನವಂಬರ್ ಹಾಗೂ ಡಿಸೆಂಬರ್ ಮಾಹೆಯಲ್ಲಿ ಈ ಕಛೇರಿಯ ಸಿಬ್ಬಂದಿಗಳಾದ ಶ್ರೀ ಎಸ್.ಹೆಚ್. ಶ್ರೀನಿವಾಸಮೂರ್ತಿ, ಕಂದಾಯ ಪರಿವೀಕ್ಷಕರು (ಪಂಚಾಯ್ತಿ ಕಾರ್ಯದರ್ಶಿ ಗ್ರೇಡ್–II) ರವರು ಹಾಜರಾತಿಯಲ್ಲಿ ಸಹಿ ಮಾಡದೇ ಇದ್ದರೂ ಸಹ ಪೂರ್ಣವೇತನವನ್ನು ಪಾವತಿಸಿರುವುದು

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕಂಡುಬಂದಿದ್ದು, ಕೂಡಲೇ ಸದರಿಯವರ ವೇತನವನ್ನು ತಡೆಹಿಡಿದು ಗೈರು ಹಾಜರಿ ಬಗ್ಗೆ ಪರಿಶೀಲಿಸದೇ ವೇತನ ಪಾವತಿಸಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಲಾಯಿತು. ಕಛೇರಿಯ ಸಾಂಧರ್ಭಿಕ ರಜೆ ವಹಿ, ಖಾಲಿ ಹುದ್ದೆಗಳ ವಹಿ, ದಾಸ್ತಾನು ವಹಿ, ವೇತನ ಬಟವಾಡೆ ವಹಿ, ತಿರಸ್ಕೃತ ಚೆಕ್‌ಗಳ ವಹಿ ಹಾಗೂ ಇತ್ಯಾದಿ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಲು ಸೂಚಿಸಲಾಗಿ ಸದರಿ ಕಛೇರಿಯಲ್ಲಿ ಮೇಲ್ಕಂಡ ವಹಿಯನ್ನು ನಿರ್ವಹಿಸದೇ ಇರುವುದು ಕಂಡುಬಂದಿದ್ದು ಹಾಗೂ ಕಛೇರಿಯ ಹಾಜರಾತಿ ವಹಿ, ಕೆಟಿಆರ್ ವಹಿ, ಎಂ.ಆರ್. ವಹಿ, ಪಿ.ಆರ್.ವಹಿ ಗಳು ಅಧಿಕಾರಿಗಳಿಂದ ದೃಢೀಕರಿಸದೇ ಇರುವುದು ಇವರ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಸದರಿ ಕಛೇರಿಯಲ್ಲಿ ಶ್ರೀ ಶಿವರಾಜು, ಕಂದಯ ವಸೂಲಿಗಾರರವರು ಟಪಾಲು ಗುಮಾಸ್ತರಾಗಿ ಸುಮಾರು ಒಂದು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು ಕೂಡಲೇ ಸದರಿ ಕಂದಾಯ ವಸೂಲಿಗಾರರನ್ನು ಮೂಲ ಹುದ್ದೆಗೆ ನಿಯೋಜಿಸಲು ಕ್ರಮಕೈಗೊಳ್ಳಲು ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕಛೇರಿಯ ತಪಾಸಣೆ ವೇಳೆ ನೆರೆದಿದ್ದ ಸಾರ್ವಜನಿಕರು ಸಮಿತಿಯ ಮುಂದೆ ಹಲವಾರು ದೂರುಗಳನ್ನು ನೀಡಿದ್ದು ಈ ಕಛೇರಿಯ ಸಿಬ್ಬಂದಿಗಳು ಖಾತಾಗಳನ್ನು ನೀಡಲು ತಿಂಗಳು ಗಟ್ಟಲೆ ವಿಲೇಇಟ್ಟು ಅಕ್ರಮ ಸಂಭಾವನೆಗೆ ಒತ್ತಾಯಿಸುವುದಾಗಿ ಹಾಗೂ ಖಾತಾ ಅರ್ಜಿಗಳು ಹಾಗೂ ರಸೀದಿ ಪುಸ್ತಕಗಳು ಖಾಲಿಯಾಗಿರುತ್ತದೆ ಎಂದು ಹೇಳುತ್ತಿದ್ದು, ಈ ಸಂಬಂಧ ಹಾಜರಿದ್ದ ಉಪ ಆಯುಕ್ತರಿಗೆ ಕೂಡಲೇ ಖಾತಾ ಅರ್ಜಿಗಳನ್ನು ಹಾಗೂ ರಸೀದಿ ಪುಸ್ತಕಗಳನ್ನು ಸರಬರಾಜು ಮಾಡಿಸಲು ಸೂಕ್ತ ಕ್ರಮಕೈಗೊಂಡು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ವಿಲೇ ಇರುವ ಖಾತಾ ಕಡತಗಳನ್ನು ಕೂಡಲೇ ಪೂರ್ಣಗೊಳಿಸಲು ವಿನಾ:ಕಾರಣ ಕಡತಗಳನ್ನು ವಿಲೇ ಇಟ್ಟು ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕ್ರಮಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

ಸದರಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಸ್.ಹೆಚ್. ಶ್ರೀನಿವಾಸಮೂರ್ತಿ, ಕಂದಾಯ ಪರಿವೀಕ್ಷಕರು (ಪಂಚಾಯ್ತಿ ಕಾರ್ಯದರ್ಶಿ ಗ್ರೇಡ್–II) ರವರು ವಿನಾ:ಕಾರಣ ಸಾರ್ವಜನಿಕರೊಬ್ಬರಿಗೆ ಎಲ್ಲಾ ದಾಖಲೆಗಳನ್ನು ನೀಡಿದ್ದರೂ ಸಹ ಕರ್ನಾಟಕ ಗೃಹ ಮಂಡಳಿ ಸ್ವತ್ತಿನ ಖಾತಾ ವರ್ಗಾವಣೆ ಮಾಡಲು ಸುಮಾರು ತಿಂಗಳುಗಳ ಕಾಲ ಕಡತಗಳನ್ನು ವಿಲೇ ಇಟ್ಟು ತೊಂದರೆ ನೀಡಿರುವುದಾಗಿ ತಪಾಸಣೆ ವೇಳೆಯಲ್ಲಿ ಹಾಜರಿದ್ದ ಆಸ್ತಿಯ ಮಾಲೀಕರೊಬ್ಬರು ಸಮಿತಿಗೆ ದೂರು ನೀಡಿದ್ದು ಈ ಬಗ್ಗೆ ಪರಿಶೀಲಿಸಲಾಗಿ ಎಲ್ಲಾ ದಾಖಲಾತಿಗಳೊಂದಿಗೆ ಹಾಗೂ ವರ್ಗಾವಣೆ ಶುಲ್ಕದ ಡಿ.ಡಿ ಅನ್ನು ಸಲ್ಲಿಸಿದ್ದಾಗ್ಯೂ ಕಡತವನ್ನು ತಮ್ಮಲ್ಲಿಯೇ ಇಟ್ಟುಕೊಂಡು ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವುದು ಪರಿಶೀಲನೆ ವೇಳೆಯಲ್ಲಿ ಕಂಡುಬಂದಿದ್ದು ಹಾಗೂ ಮತ್ತೊಂದು ಆಸ್ತಿಯ ಮಾಲೀಕರಾದ ಶ್ರೀಮತಿ ಚಂದ್ರಮ್ಮ ಎಂಬುವರು ಕೆ.ಹೆಚ್.ಬಿ ಸ್ವತ್ತಿನ ಸಂಖ್ಯೆ: 110 ಬಿ2 ಸ್ವತ್ತಿಗೆ ಖಾತಾ ನೀಡಲು ರೂ. 4000/– ಅಕ್ರಮ ಸಂಭಾವನೆಯನ್ನು ಮೇಲ್ಕಂಡ ಕಂದಾಯ ಪರಿವೀಕ್ಷಕರು ಕೇಳಿದ್ದಾಗಿ ಸದರಿ ಮೊತ್ತವನ್ನು ನೀಡದೇ ಇರುವ ಕಾರಣ



ಅಧ್ಯಕ್ಷರು
ಭ್ರಷ್ಟಾಚಾರ ನಿರ್ಮೂಲನೆ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸುಮಾರು 2 ತಿಂಗಳುಗಳ ಕಾಲ ವಿಲೇ ಇಟ್ಟು ತೊಂದರೆ ನೀಡಿರುವುದಾಗಿ ಸಮಿತಿಯ ತಪಾಸಣೆ ವೇಳೆಯಲ್ಲಿ ತಿಳಿಸಿರುತ್ತಾರೆ. ಈ ಬಗೆಗೂ ಸಹ ಪರಿಶೀಲಿಸಲಾಗಿ ದಿ: 24-11-2011 ರಂದೇ ಎಲ್ಲಾ ದಾಖಲಾತಿಗಳೊಂದಿಗೆ ಹಾಗೂ ವರ್ಗಾವಣೆ ಶುಲ್ಕ ರೂ. 700/- (ಡಿ.ಡಿ. ಸಂಖ್ಯೆ: 233977 ದಿ: 19-09-2011) ಡಿ.ಡಿ.ಯೊಂದಿಗೆ ಅರ್ಜಿ ಸಲ್ಲಿಸಿದ್ದರೂ ಸಹ ಕೆ.ಹೆಚ್.ಬಿ ಸ್ವತ್ತಿಗೆ ವಿನಾ:ಕಾರಣ ಬಿಡಿಎ ಯಿಂದ NOC ನೀಡುವಂತೆ ಹಿಂಬರಹ ನೀಡಿದ್ದು ತದನಂತರ ಅರ್ಜಿದಾರರು ಕೋರಿರುವ ದಾಖಲಾತಿಗಳನ್ನು ಸಲ್ಲಿಸಿದ್ದಾಗ್ಯೂ ಸಹ ಸುಮಾರು 20 ದಿನಗಳು ಕಡತವನ್ನು ತಮ್ಮಲ್ಲಿಯೇ ಇಟ್ಟುಕೊಂಡು ತೊಂದರೆ ನೀಡಿರುವುದು ಪರಿಶೀಲನೆ ವೇಳೆಯಲ್ಲಿ ಕಂಡುಬಂದಿದ್ದು ಸದರಿ ಕಂದಾಯ ಪರಿವೀಕ್ಷಕರು ವಿನಾ:ಕಾರಣ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದು ಈ ಹಿನ್ನೆಲೆಯಲ್ಲಿ ಇವರ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ಕೂಡಲೇ ಅಮಾನತ್ತುಗೊಳಿಸಿ ಇವರ ನಿಯೋಜನೆಯನ್ನು ರದ್ದುಪಡಿಸಿ ಮಾತೃ ಇಲಾಖೆಗೆ ಹಿಂದಿರುಗಿಸಲು ಕ್ರಮಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಉಪ ಆಯುಕ್ತರಿಗೆ ಸೂಚಿಸಲಾಯಿತು.

ಕೆಂಗೇರಿ ಉಪವಿಭಾಗಕ್ಕೆ ಸಂಬಂಧಿಸಿದಂತೆ ಖಾತಾ ದಾಖಲಾತಿ ಪುಸ್ತಕದ ಸಂಖ್ಯೆ: 1 ರ ಪುಟ ಸಂಖ್ಯೆ 135 ರಿಂದ 138 (ಕ್ರಮ ಸಂಖ್ಯೆ 4470 ರಿಂದ 4483 ರವರೆಗೆ) ರವರೆಗಿನ ಖಾತೆಗಳನ್ನು ಶ್ರೀ ಕೆ.ಹೆಚ್. ಖಾನ್ ಮತ್ತು ಶ್ರೀ ಖರಾರ್ ಅಹಮದ್ ಎಂಬುವರ ಹೆಸರಿನಲ್ಲಿ ಅನಧಿಕೃತವಾಗಿ ದಾಖಾಲಿಸಿದ್ದು ಹಾಗೂ ಸದರಿ ಖಾತೆಗಳಿಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ ಕಡತಗಳಲ್ಲಿ ಖಾತಾ ನೊಂದಾವಣೆಗೆ ಬೇಕಾದ ಯಾವುದೇ ದಾಖಲಾತಿಗಳನ್ನು ಪಡೆಯದೇ ಸುಧಾರಣಾ ವೆಚ್ಚವನ್ನು ಸಹ ಪಾವತಿಸಿಕೊಳ್ಳದೇ ಸಹಾಯಕ ಕಂದಾಯ ಅಧಿಕಾರಿಗಳು ನೇರವಾಗಿ ಜಂಟಿ ಆಯುಕ್ತರವರಿಂದ ಅನುಮೋದನೆ ಪಡೆದು ಖಾತಾ ನೊಂದಾಯಿಸಿರುವುದು ಕಂಡುಬಂದಿದ್ದು ಈ ರೀತಿ ನೊಂದಾಯಿಸಿರುವ ಖಾತಾಗಳ ಒಟ್ಟು ವಿಸ್ತೀರ್ಣ ಸುಮಾರು 35 ಎಕರೆಗಳಿಗಿಂತ ಹೆಚ್ಚಿನದಾಗಿದ್ದು ಇದರಿಂದ ಪಾಲಿಕೆಯ ಬೊಕ್ಕಸಕ್ಕೆ ಸುಧಾರಣಾ ವೆಚ್ಚದ ಮೂಲಕ ಸುಮಾರು 6 ರಿಂದ 7 ಕೋಟಿಗೂ ಹೆಚ್ಚಿನ ನಷ್ಟ ಉಂಟಾಗಿದ್ದು, ಈ ಬಗ್ಗೆ ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮಕೈಗೊಂಡು ಪಾಲಿಕೆಗೆ ಬರಬೇಕಾದ ಸುಧಾರಣಾ ವೆಚ್ಚವನ್ನು ಕೂಡಲೇ ವಸೂಲಿ ಮಾಡುವುದು ಹಾಗೂ ಇಂತಹ ಅನೇಕ ಅನಧಿಕೃತ ಖಾತಾಗಳನ್ನು ರದ್ದುಪಡಿಸಲು ಉಪ ಆಯುಕ್ತರು (ಕಂದಾಯ)ರವರಿಗೆ ತಪಾಸಣೇ ವೇಳೆಯಲ್ಲಿಯೇ ದೂರವಾಣಿ ಮುಖೇನ ಆದೇಶಿಸಿದ್ದು, ಅದರಂತೆ ಸಂಬಂಧಪಟ್ಟ ಕಡತಗಳು ಹಾಗೂ ಖಾತಾ ದಾಖಲಾತಿ ವಹಿಗಳನ್ನು ಉಪ ಆಯುಕ್ತರು (ರಾಜರಾಜೇಶ್ವರಿನಗರ) ರವರು ವಶಪಡಿಸಿಕೊಂಡು ಉಪ ಆಯುಕ್ತರು (ಕಂದಾಯ) ರವರಿಗೆ ಮುಂದಿನ ಸೂಕ್ತ ತನಿಖೆಗಾಗಿ ಸಲ್ಲಿಸಲು ಸೂಚಿಸಲಾಗಿದೆ, ಸ್ಥಳದಲ್ಲಿ ಹಾಜರಿದ್ದ ಸಾರ್ವಜನಿಕರೊಬ್ಬರ ದೂರಿನ ಅನ್ವಯ ನಗರಸಭೆಯಿಂದ ಈ ಕಛೇರಿಗೆ ಹಸ್ತಾಂತರವಾಗಿದ್ದು ಎಂ.ಎ.ಆರ್ 19 ರ ( ಮೈಲಸಂದ್ರ ಹಾಗೂ ಕೆಂಗೇರಿ) ವಹಿಗಳನ್ನು ಪರಿಶೀಲಿಸಲಾಗಿ ನಗರಸಭೆಯ ದಾಖಲಾತಿ ಪುಸ್ತಕಗಳಲ್ಲಿ ಖಾತೆಗಳನ್ನು ಖಾತದಾರರ ಹೆಸರು ಹಾಗೂ ಸ್ವತ್ತಿನ ಅಳತೆಗಳನ್ನು ಅನಧಿಕೃತವಾಗಿ ಈ ಕಛೇರಿಯ ಗುಮಾಸ್ತರುಗಳು ಹಾಗೂ ಕಂದಾಯ ಪರಿವೀಕ್ಷಕರುಗಳು ತಿದ್ದುಪಡಿ ಮಾಡಿರುವುದು ಮತ್ತು ಅನಧಿಕೃತವಾಗಿ ಅನೇಕ ಖಾತೆಗಳನ್ನು ಸೇರಿಸಿರುವುದು ಕಂಡುಬಂದಿದ್ದು ಈ ಬಗ್ಗೆ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಹೆಚ್ಚಿನ ತನಿಖೆಯ ಅಗತ್ಯವಿದ್ದು ಎಲ್ಲಾ ನಗರಸಭೆ ಹಾಗೂ ಪಂಚಾಯ್ತಿ ವಹಿಗಳನ್ನು ಉಪ ಆಯುಕ್ತರು (ಕಂದಾಯ) ರವರ ವಶಕ್ಕೆ ನೀಡಲು ಸೂಚಿಸುತ್ತಾ ಈ ಬಗ್ಗೆ ತನಿಖೆ ನಡೆಸಲು ಒಂದು ತಂಡವನ್ನು ರಚಿಸಿ ಎಲ್ಲಾ ಖಾತೆಗಳನ್ನು ಪರಿಶೀಲಿಸಿ ದೃಢೀಕರಿಸಿದ ನಂತರ ಪಾಲಿಕೆಯ ಸ್ವತ್ತು ದಾಖಲಾತಿ ಪುಸ್ತಕಗಳಿಗೆ ಖಾತಾಗಳನ್ನು ದಾಖಲಿಸಿಕೊಳ್ಳಲು ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ಆದೇಶ ನೀಡಲು ಮಾನ್ಯ ಆಯುಕ್ತರವರನ್ನು ಕೋರಲು ಸಮಿತಿಯ ಅಭಿಪ್ರಾಯಿಸುತ್ತದೆ.

ಸದರಿ ಕಛೇರಿಯಲ್ಲಿ ಯಾವೊಬ್ಬ ಅಧಿಕಾರಿ/ಸಿಬ್ಬಂದಿಗಳು ಗುರುತಿನ ಚೀಟಿ ಧರಿಸದೇ ಇರುವುದು ಕಂಡುಬಂದಿದ್ದು ಹಾಗೂ ನಾಲ್ಕನೇ ದರ್ಜೆ ನೌಕರರು ಸಮವಸ್ತ್ರ ಧರಿಸದೇ ಇರುವುದು ಕಂಡುಬಂದಿದ್ದು ಈ ಬಗ್ಗೆ ವಿವರ ನೀಡುವಲ್ಲಿ ಸಹ ಕಂದಾಯ ಅಧಿಕಾರಿಗಳು ವಿಫಲರಾಗಿರುತ್ತಾರೆ.

ಕೆಂಗೇರಿ ಉಪವಲಯ ಸಂಬಂಧಿಸಿದಂತೆ ಪಟ್ಟಣಗೆರೆ ಗ್ರಾಮದ ಸ್ವತ್ತಿನ ಸಂಖ್ಯೆ:207/55/4 ರ ಸ್ವತ್ತನ್ನು ಶ್ರೀ ಎಂ. ಯದುಕುಮಾರ್ ಬಿನ್ ಎಂ. ಮುದ್ದಪ್ಪ ಎಂಬುವರ ಹೆಸರಿಗೆ 65,340 ಚದರ ಅಡಿಗಳನ್ನು ನೊಂದಾಯಿಸಿದ್ದು ( ಕೆಟಿಆರ್ ಸಂಖ್ಯೆ: 07/05/2010-11, ಎಂ.ಆರ್.ಸಂಖ್ಯೆ: 06/51/2010-11 ದಿ: 17-01-2011) ಸದರಿ ಕಡತವನ್ನು ಪರಿಶೀಲಿಸಲಾಗಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಗಮನಕ್ಕೆ ಬಾರದೇ ಕಡತವು ವ್ಯವಹರಣೆಯಾಗಿದ್ದು ಹಿಂದಿನ ಸಹಾಯಕ ಕಂದಾಯ ಅಧಿಕಾರಿಗಳು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ನೇರವಾಗಿ ಖಾತಾ ನೊಂದಾವಣೆ ಪ್ರಸ್ತಾವನೆಯನ್ನು ಉಪ ಆಯುಕ್ತರಿಗೆ ಮಂಡಿಸಿರುವುದು ಗಂಭೀರವಾದ ಲೋಪವಾಗಿದ್ದು ತದನಂತರ ಕಂದಾಯ ಅಧಿಕಾರಿಗಳು ಸಹಿ ಮಾಡಬೇಕಾಗಿದ್ದಂತಹ ವಿಶೇಷ ಸೂಚನಾ ಪತ್ರದಲ್ಲಿ ಉಪ ಆಯುಕ್ತರೇ ಸಹಿ ಮಾಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಡುವುದಲ್ಲದೇ ಸದರಿ ಕಡತದ ವ್ಯವಹರಣೆಯಲ್ಲಿ ನಿಯಮಗಳು ಗಂಭೀರಸ್ವರೂಪದಲ್ಲಿ ಉಲ್ಲಂಘನೆಯಾಗಿದ್ದು ಇಂತಹ ಪ್ರಕರಣಗಳಲ್ಲಿ ಸುಧಾರಣಾ ವೆಚ್ಚ ಪಾವತಿಸುವ ಸಂಬಂಧ ಅನುಮೋದನೆಗಾಗಿ ಉಪ ಆಯುಕ್ತರು (ಕಂದಾಯ) ರವರಿಗೆ ಬಂದಿದ್ದು ಉಪ ಆಯುಕ್ತರು (ಕಂದಾಯ) ರವರು ಸದರಿ ಕಡತಗಳನ್ನು ಪರಿಶೀಲಿಸದೇ ಭಾಗಶ: ಸುಧಾರಣಾ ವೆಚ್ಚವನ್ನು ಪಾವತಿಸಲು ಪ್ರಸ್ತಾವನೆಯನ್ನು ಅನುಮೋದಿಸಿ ಮಾನ್ಯ ಆಯುಕ್ತರಿಗೆ ಮಂಡಿಸಿರುವುದು ಕಂಡುಬಂದಿದ್ದು ಈ ಬಗ್ಗೆ ಸಮಿತಿಯು ತೀವ್ರತರನಾದ ಅಸಮಾಧಾನವನ್ನು ವ್ಯಕ್ತಪಡಿಸಿ ಇಂತಹ ನಿಯಮಬಾಹಿರ ಖಾತೆಗಳನ್ನು ಕೂಡಲೇ ರದ್ದುಪಡಿಸಿ ಸಂಬಂಧಪಟ್ಟವರ ವಿರುದ್ಧ ಕ್ರಮಕೈಗೊಳ್ಳಲು ಹಾಗೂ ಇಂತಹ ಸಾಕಷ್ಟು ಪ್ರಕರಣಗಳು ಈ ವಲಯದಲ್ಲಿ ನಡೆದಿರುವ ಬಗ್ಗೆ ಆರೋಪಗಳು ಕಂಡುಬಂದಿದ್ದು ಖಾತಾ ನೊಂದಾವಣೆಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಪರಿಶೀಲಿಸಿ ಸಮಿತಿಗೆ ವರದಿ ಸಲ್ಲಿಸಲು ಮಾನ್ಯ ಆಯುಕ್ತರನ್ನು ಸಮಿತಿಯ ಅಭಿಪ್ರಾಯಿಸುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೆಂಗೇರಿ ಉಪವಲಯದ ಸಂಬಂಧಿಸಿದಂತೆ ಸ್ವತ್ತಿನ ಸಂಖ್ಯೆ: 4475 ರಲ್ಲಿ ಸರ್ವೇ ನಂ 137/6 ಹಾಗೂ 140 ರ ಒಟ್ಟು ವಿಸ್ತೀರ್ಣ 196020 ಚದರ ಅಡಿಗಳು ಹಾಗೂ ಸರ್ವೆ ನಂ. 4481/139 ರಲ್ಲಿ 100188 ಚದರ ಅಡಿಗಳನ್ನು ಒಟ್ಟುಗೂಡಿಸಿ ಒಟ್ಟು ಅಳತೆ 2 96208 ಚದರ ಅಡಿಗಳನ್ನು ಶ್ರೀ ಕರಾರ್ ಅಹಮದ್ ಬಿನ್/ ನಸೀರ್ ಅಹಮದ್ ರವರ ಹೆಸರಿಗೆ ಒಂದುಗೂಡಿಸಿ ನೊಂದಾಯಿಸಿದ್ದು ಈ ಸಂಬಂಧ ಪರಿಶೀಲನೆಗಾಗಿ ಕಡತವನ್ನು ಕೇಳಲಾಗಿ ಸದರಿ ಖಾತಾ ನೊಂದಾವಣೆಯ ಕಡತವು ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ಹಾಗೂ ಈ ಖಾತಾ ನೊಂದಾವಣೆಯ ಕಡತವನ್ನು ಈ ಕಛೇರಿಯ ಯಾವೊಬ್ಬ ವಿಷಯ ನಿರ್ವಾಹಕರು ವ್ಯವಹರಣೆ ನಡೆಸಿರುವುದಿಲ್ಲವೆಂದು ತಿಳಿಸಿದ್ದು ಆದರೆ ಕಂದಾಯ ಅಧಿಕಾರಿಗಳು ತಿಳಿಸಿರುವಂತೆ ಸದರಿ ಖಾತೆಯ ಸೂಚನಾ ಪತ್ರದಲ್ಲಿರುವ ಸಹಿವು ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಕಂದಾಯ ಅಧಿಕಾರಿಗಳ ಸಹಿಯಾಗಿದ್ದು ಇದು ಅನಧಿಕೃತ ಖಾತೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಕೂಡಲೇ ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮಕೈಗೊಂಡು ಪಾಲಿಕೆಗೆ ಬರಬೇಕಾದ ಸುಧಾರಣಾ ವೆಚ್ಚವನ್ನು ಪಾವತಿಸಿಕೊಳ್ಳಲು ಕ್ರಮಕೈಗೊಂಡು ವರದಿ ಸಲ್ಲಿಸಲು ಮಾನ್ಯ ಆಯುಕ್ತರವರಿಗೆ ಕೋರಲು ಸಮಿತಿಯು ಅಭಿಪ್ರಾಯಿಸುತ್ತದೆ.

ಸಮಿತಿಯು ಸಹಾಯಕ ಕಂದಾಯ ಅಧಿಕಾರಿ (ಹೇರೋಹಳ್ಳಿ ಉಪವಿಭಾಗ) ಕಛೇರಿಗೆ ಭೇಟಿ ನೀಡಿ ತಪಾಸಣೆ ನಡೆಸಿದ ಸಂದರ್ಬದಲ್ಲಿ ಈ ಕಛೇರಿಯಲ್ಲಿಯೂ ಸಹ ಯಾವುದೇ ವಹಿಗಳನ್ನು ಕ್ರಮಬದ್ದವಾಗಿ ನಿರ್ವಹಿಸದೇ ಇರುವುದು ಕಂಡುಬಂದಿದ್ದು ಈ ಬಗ್ಗೆ ಸಮಿತಿಯು ತೀವ್ರತರನಾದ ಅಸಮಧಾನವನ್ನು ವ್ಯಕ್ತಪಡಿಸಿ ತಪಾಸಣೆ ಸಂದರ್ಭದಲ್ಲಿ ಹಾಜರಿದ್ದ ಕಂದಾಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡುತ್ತಾ ಕಛೇರಿಯ ಅವ್ಯವಸ್ಥೆಯನ್ನು ಸರಿಪಡಿಸಲು ಸೂಚಿಸಲಾಯಿತು.

ಹೇರೋಹಳ್ಳಿ ಉಪವಿಭಾಗ ಕಛೇರಿಯಲ್ಲಿ ವಿಷಯ ನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಶಾರದಮ್ಮ ರವರ ವಿರುದ್ದ ಸಾರ್ವಜನಿಕವಾಗಿ ಸಾಕಷ್ಟು ದೂರುಗಳು ಬಂದಿದ್ದ ಹಿನ್ನೆಲೆಯಲ್ಲಿ ಸದರಿಯವರ ಅಲ್ಮರಾಗಳನ್ನು ಉಪ ಆಯುಕ್ತರು (ರಾಜರಾಜೇಶ್ವರಿನಗರ) ರವರ ಸಮ್ಮುಖದಲ್ಲಿ ಪರಿಶೀಲಿಸಲಾಗಿ ಪಂಚಾಯ್ತಿಗಳಿಂದ ಪಾಲಿಕೆಗೆ ಹಸ್ತಾಂತರವಾಗಿದ್ದ ಪಂಚಾಯ್ತಿ ಸ್ವತ್ತು ದಾಖಲಾತಿ ಪುಸ್ತಕಗಳನ್ನು ಉಪ ಆಯುಕ್ತರು (ಕಂದಾಯ) ರವರ ವಶಕ್ಕೆ ನೀಡುವಂತೆ ಎಲ್ಲಾ ವಲಯಗಳಿಗೂ ಸೂಚಿಸಿದ್ದರೂ ಸಹ ತಹಲ್‌ವರೆವಿಗೂ ಸದರಿ ದಾಖಲಾತಿ ಪುಸ್ತಕಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ ಹಾಗೂ ಲೆಕ್ಕ ಪರಿಶೋಧನೆಯಾದ ನಂತರವು ಹಾಗೂ ಬಳಕೆ ಆಗದೆ ಇರುವ ಕಂದಾಯ ರಸೀದಿ ಪುಸ್ತಕಗಳನ್ನು ಅಭಿಲೇಖಾಲಯಕ್ಕೆ ಕಳುಹಿಸದೇ ತಮ್ಮ ಅಧೀನದಲ್ಲಿಯೇ ಇಟ್ಟಿಕೊಂಡಿರುವುದೇ ಅಲ್ಲದೇ ಅನಧಿಕೃತವಾಗಿ ಕಂದಾಯ ರಸೀದಿಗಳನ್ನು ಹಾಗೂ ಖಾತಾಗಳನ್ನು ನೀಡುತ್ತಿರುವ ಬಗ್ಗೆ ಸಮಿತಿಯ ಗಮನಿಸಿದ್ದು ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಸದರಿ ವಿಷಯ ನಿರ್ವಾಹಕರು ಇದುವರೆವಿಗೂ ನಿರ್ವಹಿಸಿರುವ ಎಲ್ಲಾ ಕಡತಗಳನ್ನು ಪರಿಶೀಲನೆ ಒಳಪಡಿಸಿ, ಬಿಬಿಎಂಪಿ ಖಾತಾ ದಾಖಲಾತಿ ಪುಸ್ತಕಗಳಲ್ಲಿ ಎಲ್ಲಾ ಖಾತಾಗಳನ್ನು ಕಂದಾಯ ಅಧಿಕಾರಿಗಳಿಂದ ದೃಢೀಕರಿಸಿದ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ನಂತರ ಅನಧಿಕೃತ ಖಾತಾಗಳನ್ನು ರದ್ದುಪಡಿಸಲು ಕ್ರಮಕೈಗೊಂಡು ಅಧಿಕೃತ ಖಾತಾಗಳನ್ನು ಮಾತ್ರ ಸಾರ್ವಜನಿಕರಿಗೆ ನೀಡಲು ಕ್ರಮಕೈಗೊಂಡಲ್ಲಿ ಪಾಲಿಕೆಯ ಆದಾಯದಲ್ಲಿ ಆಗುತ್ತಿರುವ ಸೋರಿಕೆಯನ್ನು ತಡೆಗಟ್ಟಬಹುದೆಂದು ಸಮಿತಿಯು ಅಭಿಪಾಯಿಸುತ್ತಾ ಸದರಿ ವಿಷಯ ನಿರ್ವಾಹಕರ ವಿರುದ್ಧ ಕ್ರಮಕೈಗೊಂಡು ಕೂಡಲೇ ಸದರಿಯವರನ್ನು ಈ ವಲಯದಿಂದ ಸಾರ್ವಜನಿಕ ಸಂಪರ್ಕವಿಲ್ಲದ ಸ್ಥಳಕ್ಕೆ ವರ್ಗಾಹಿಸತಕ್ಕದ್ದೆಂದು ಮಾನ್ಯ ಆಯುಕ್ತರನ್ನು ಕೋರಲು ಸಮಿತಿಯು ಅಭಿಪ್ರಾಯಿಸುತ್ತದೆ.

ಸದರಿ ಉಪವಿಭಾಗದಲ್ಲಿಯೂ ಸಹ ಸಾಕಷ್ಟು ಅನಧಿಕೃತ ಖಾತಾಗಳು ದಾಖಲಾಗಿದ್ದು ಅನಧಿಕೃತ ಬಡಾವಣೆಯ ನಿವೇಶನಗಳಿಗೆ ಯಾವುದೇ ಸುಧಾರಣಾ ವೆಚ್ಚ ಪಡೆಯದೇ ಉಪಸಂಖ್ಯೆ ನೀಡಿದ್ದು ಇದು ಸಹ ನಿಯಮಬಾಹಿರ ಕ್ರಮವಾಗಿದ್ದು ಹಾಗೂ ದೊಡ್ಡಬಿದರಕಲ್ಲು ಗ್ರಾಮಕ್ಕೆ ಸೇರಿದ್ದ ಸರ್ವೇ 23/7 ರಲ್ಲಿನ 18,200 ಚದರ ಅಡಿಗಳನ್ನು ಶ್ರೀ. ಎ. ಸ್ಟೀವನ್ ರವರ ಹೆಸರಿನಲ್ಲಿ ನೊಂದಾಯಿಸಿದ್ದು (ಕೆಟಿಆರ್ 01/09-10 ಎಂ.ಆರ್. 06/09-10 ದಿ: 09-12-2010) ಸದರಿ ಕಡತಗಳನ್ನು ಪರಿಶೀಲಿಸಲಾಗಿ ಸದರಿ ಸರ್ವೇ ನಂ 23/7 ರಲ್ಲಿ 20 ಗುಂಟೆ( 21,780 ಚದರ ಅಡಿ) ವಿಸ್ತೀರ್ಣಕ್ಕೆ ಶ್ರೀಮತಿ ಬಿ. ಸಾವಿತ್ರಮ್ಮ ಕೋಂ ಕರಿಯಪ್ಪ ರವರ ಹೆಸರಿನಲ್ಲಿ ಭೂಪರಿವರ್ತನೆಯಾಗಿದ್ದು ಆಯುಕ್ತರ ಸುತ್ತೋಲೆ ಸಂಖ್ಯೆ: ಉಆ(ಕಂ) ಪಿ.ಆರ್/23/07-08 ದಿ: 07-02-2011 ರಂತೆ ಭೂಪರಿವರ್ತನೆಯಾಗಿರುವ ಮಾಲೀಕರ ಹೆಸರಿನಲ್ಲಿ ಏಕ ನಿವೇಶನಗಳಿಗೆ ಮಾತ್ರ ಖಾತಾ ನೊಂದಾಯಿಸಲು ಅವಕಾಶವಿದ್ದು ಸದರಿ ಪ್ರಕರಣದಲ್ಲಿ 20 ಗುಂಟೆಯ ಬದಲು ಸ್ವತ್ತುನ್ನು ವಿಭಜಿಸಿ 18,200 ಚದರ ಅಡಿಗಳಿಗೆ ಖಾತಾ ನೊಂದಾಯಿಸಿರುವುದು ನಿಯಮಬಾಹಿರ ಕ್ರಮವಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಕಂದಾಯ ಪರಿವೀಕ್ಷಕರನ್ನು ಈ ಕೂಡಲೇ ಅಮಾನತ್ತು ಪಡಿಸಿ ಇಲಾಖಾ ವಿಚಾರಣೆ ನಡೆಸಲು ಸೂಕ್ತ ಕ್ರಮಕೈಗೊಳ್ಳುವಂತೆ ಮಾನ್ಯ ಆಯುಕ್ತರನ್ನು ಕೋರಲು ಸಮಿತಿಯು ಅಭಿಪ್ರಾಯಿಸುತ್ತದೆ.

ಹೇರೋಹಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಸ್.ಬಿ ರವೀಶ್, ಕಂದಾಯ ವಸೂಲಿಗಾರರು, ಶ್ರೀ,ಕೆ.ಬಿ ರಾಮಚಂದ್ರ, ಕಂದಾಯ ಪರಿವೀಕ್ಷಕರು, (ಹೇರೋಹಳ್ಳಿ) ಶ್ರೀ ಜಿ. ಹನುಮಂತಪ್ಪ, ಕಂದಾಯ ವಸೂಲಿಗಾರರು (ಗಿಡದಕೋನೇಹಳ್ಳಿ) ರವರುಗಳ ವಿರುದ್ಧ ನಕಲಿ ಕಂದಾಯ ರಸೀದಿ, ನಕಲಿ ಖಾತಾಗಳನ್ನು ( ರಸೀದಿ ಸಂಖ್ಯೆ: 98607 ದಿ: 09-07-2010 ಬಿ-ಖಾತಾ ಸಂಖ್ಯೆ: 738/2465/8/16 ಗಿಡದಕೋನೇಹಳ್ಳಿಗೆ ಸಂಬಂಧಿಸಿದ ನಕಲಿ ದಾಖಲೆಯ ಪ್ರತಿ ಲಗತ್ತಿಸಿದೆ) ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬಂದಿದ್ದರೂ ಸಹ ಇದುವರೆವಿಗೂ ಯಾವುದೇ ಕ್ರಮಕೈಗೊಳ್ಳದೇ ಇರುವ ಬಗ್ಗೆ ಸಮಿತಿಯ ಅಸಮಧಾನ ವ್ಯಕ್ತಪಡಿಸುತ್ತಾ ಮೇಲ್ಕಂಢ ಎರಡು ಉಪವಿಭಾಗ ಕಛೇರಿಗಳಿಗೆ ಇಷ್ಟೊಂದು ಮಟ್ಟದ ಅವ್ಯವಹಾರ ನಡೆಯುತ್ತಿದ್ದರೂ ಸಹ ವಲಯ ಅಪರ ಆಯುಕ್ತರು ಈ ಬಗ್ಗೆ ಕ್ರಮ ವಹಿಸದೇ ಇರುವುದು ಅವರ ಬೇಜವಾಬ್ದಾರಿತನವನ್ನು ತೋರಿಸುವುದೇ ಅಲ್ಲದೇ ಹಲವಾರು ಅನುಮಾನಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಅಧ್ಯಕ್ಷರು

2008–09ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿರುವಂತೆ ಈ ಕೆಳಕಂಡ ನೌಕರರುಗಳ ಹೆಸರಿನ ಮುಂದೆ ಸೂಚಿಸಿರುವ ಲೆಕ್ಕ ತಪಾಸಣಾ ಆಕ್ಷೇಪಣೆಗಳ ಮೊತ್ತ ಈ ಕೆಳಕಂಡಂತಿರುತ್ತದೆ. ಸದರಿ ನೌಕರರುಗಳ ವಿರುದ್ಧ ಲಕ್ಷಾಂತರ ರೂಗಳ ಹಣ ದುರುಪಯೋಗಕ್ಕೆ ಸಂಬಂಧಪಟ್ಟಂತೆ ಆಕ್ಷೇಪಣೆ ಇದ್ದರೂ ಸಹ ಇದುವರೆವಿಗೂ ಯಾವ ವಿಧವಾದ ಕ್ರಮಕೈಗೊಳ್ಳದೇ ಇರುವುದು ಈ ವಲಯದ ಜಂಟಿ ಆಯುಕ್ತರ ನಿರ್ಲಕ್ಷತೆ ಹಾಗೂ ಬೇಜಾವಾಬ್ದಾರಿಯನ್ನು ಸೂಚಿಸುತ್ತಿದ್ದು ಈ ಬಗ್ಗೆ ಸಮಿತಿಯು ಅಸಮಧಾನವನ್ನು ವ್ಯಕ್ತಪಡಿಸುತ್ತಾ ಪಾಲಿಕೆಯ ಬಗ್ಗೆ ಹಾಗೂ ಸಾರ್ವಜನಿಕರ ಕೆಲಸಕಾರ್ಯಗಳ ಬಗ್ಗೆ ಬೇಜಾವಾಬ್ದಾರಿತನವನ್ನು ತೋರಿಸುತ್ತಿರುವ ಈ ವಲಯದ ಅಪರ ಆಯುಕ್ತರ ವಿರುದ್ಧ ಕರ್ತವ್ಯಲೋಪದ ಆರೋಪದ ಮೇಲೆ ಸೂಕ್ತ ಶಿಸ್ತು ಕ್ರಮಕೈಗೊಳ್ಳಲು ಸರ್ಕಾರಕ್ಕೆ ಪತ್ರ ಬರೆದು ಸದರಿಯವರನ್ನು ಪಾಲಿಕೆಯಿಂದ ಬಿಡುಗಡೆಗೊಳಿಸುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

| | |
|---|---|
| ಶ್ರೀ ಎಸ್.ಕೆ ರಾಮಚಂದ್ರಯ್ಯ, ಕಂದಾಯ ಪರಿವೀಕ್ಷಕರು– | ರೂ. 50,09,805.00 |
| ಶ್ರೀ ರಾಮಕೃಷ್ಣ ಕೆ, ದ್ವಿತೀಯ ದರ್ಜೆ ಗುಮಾಸ್ತರು – | ರೂ. 67,800.00 |
| ಶ್ರೀ ಎಸ್.ಬಿ.ರವೀಶ್, ಕಂದಾಯ ವಸೂಲಿಗಾರರು – | ರೂ. 31,939.00 |
| ಶ್ರೀ ಜಿ.ಎಸ್ ಶೇಖರಪ್ಪ, ಕಂದಾಯ ವಸೂಲಿಗಾರರು – | ರೂ. 47,491.00 |

ಮೇಲ್ಕಂಡ ನೌಕರರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲ ಹಾಗೂ ವೇತನದಲ್ಲಿ ಅಕ್ಷೇಪಿಸಿರುವ ಮೊತ್ತವನ್ನು ಕಟಾವು ಮಾಡಲು ಸಹಾಯಕ ಕಂದಾಯ ಅಧಿಕಾರಿಗಳ ಶಿಫಾರಸ್ಸಿನಂತೆ ಕೂಡಲೇ ಕ್ರಮಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಈ ಉಪವಿಭಾಗದ ಕಛೇರಿಯಲ್ಲಿನ ಅಧಿಕಾರಿ/ಸಿಬ್ಬಂದಿ ವರ್ಗದವರೂ ಸುಮಾರು 8 ರಿಂದ 10 ವರ್ಷಗಳಿಂದ ಇದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಇವರಲ್ಲಿ ಕಛೇರಿ ಕೆಲಸ ಕಾರ್ಯಗಳ ಬಗ್ಗೆ ಅಲಕ್ಷ್ಯ ಮಾನೋಭಾವನೆ ಇದ್ದು ಕೂಡಲೇ 3 ವರ್ಷಗಳಿಗಿಂತ ಅಧಿಕವಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಈ ವಲಯಕಛೇರಿಯಿಂದಲೇ ವರ್ಗಾಯಿಸಿದಲ್ಲಿ ಇತರೇ ನೌಕರರುಗಳು ಹೆಚ್ಚಿನ ದಕ್ಷತೆಯಿಂದ ಕಾರ್ಯನಿರ್ವಹಿಸಲು ಎಚ್ಚರಿಕೆ ನೀಡದಂತಾಗುತ್ತದೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

ಸದರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಲವು ನೌಕರರುಗಳು ದಿನಕೂಲಿ ನೌಕರರಾಗಿದ್ದು, ಅಂತಹವರು ಜವಾಬ್ದಾರಿಯುತವಾದ ಹುದ್ದೆಗಳಾದ ಕಂದಾಯ ವಸೂಲಿಗಾರರು ಹಾಗೂ ವಿಷಯ ನಿರ್ವಾಹಕರ ಹುದ್ದೆಗಳನ್ನು ನಿರ್ವಹಿಸುತ್ತಿದ್ದು, ಈ ಬಗ್ಗೆ ಸಹ ಕಂದಾಯ ಅಧಿಕಾರಿಗಳ ಹೇಳಿಕೆಯಲ್ಲಿ ಸದರಿ ನೌಕರರುಗಳು ಹಿಂದಿನಿಂದಲೂ ಇದೇ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆಂದು ತಿಳಿಸಿದ್ದು, ಕಂದಾಯ ವಸೂಲಿಗಾರರ



ಅಧ್ಯಕ್ಷರು

ಹುದ್ದೆಯು ಜವಾಬ್ದಾರಿಯುತ ಹುದ್ದೆಯಾಗಿದ್ದು ಇದನ್ನು ನಿರ್ವಹಿಸಲು ಖಾಯಂ ಕಂದಾಯ ವಸೂಲಿಗಾರರಿಗೆ ಮಾತ್ರ ಅರ್ಹತೆಯಿದ್ದು, ಈ ಬಗ್ಗೆ ಕೂಡಲೇ ಕ್ರಮಕೈಗೊಂಡು ಖಾಯಂ ಕಂದಾಯ ವಸೂಲಿಗಾರರನ್ನು ಹಾಗೂ ಹುದ್ದೆಗಳಿಗೆ ಅರ್ಹತೆವುಳ್ಳವರನ್ನು ಈ ಉಪವಿಭಾಗಕ್ಕೆ ನಿಯೋಜಿಸಿದಲ್ಲಿ ಸದರಿ ಕಛೇರಿಯ ಆಡಳಿತದಲ್ಲಿ ಸುಧಾರಣೆ ತರಬಹುದೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

**ಪ್ರತಿಯನ್ನು:** 01.02.2012

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಅಪರ ಆಯುಕ್ತರು (ಆಡಳಿತ)/ಅಪರ ಆಯುಕ್ತರು (ರಾಜರಾಜೇಶ್ವರಿನಗರ)/ಉಪ ಆಯುಕ್ತರು (ಆಡಳಿತ)/ ಉಪ ಆಯುಕ್ತರು (ಕಂದಾಯ) ರವರಿಗೆ ಕಳುಹಿಸುತ್ತಾ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಂಡು, ವರದಿ ನೀಡಲು ಸೂಚಿಸಿದೆ.*
6. *ಕಛೇರಿ ಪ್ರತಿ*

1/2/12

01/02/12

O/C.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 04–02–2012 ರಂದು ಪೂರ್ವ ವಲಯ ಕಛೇರಿಯಲ್ಲಿ ನಡೆದ ತಪಾಸಣಾ ವರದಿ

**ಹಾಜರಿದ್ದ ಸದಸ್ಯರು**
**ಶ್ರೀಯುತರುಗಳಾದ**

1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ ಪಿಳ್ಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ವೈ.ಆರ್. ಗೌರಮ್ಮ – ಸದಸ್ಯರು
5. ವೀಣಾ ನಾಗರಾಜ್ – ಸದಸ್ಯರು
6. ಎ. ವಿಜಯ ರಮೇಶ್ – ಸದಸ್ಯರು
7. ಆರ್. ಉದಯಕುಮಾರ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಜಂಟಿ ಆಯುಕ್ತರು (ಪೂರ್ವ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿಗಳು
ಆಯುಕ್ತರ ಕಚೇರಿಯ ನೋಡಲ್ ಅಧಿಕಾರಿಗಳು

ಪೂರ್ವ ವಲಯದ ಕಲ್ಯಾಣ ಇಲಾಖೆಯ ಕಛೇರಿಗೆ ಭೇಟಿ ನೀಡಿದಾಗ ಸುಮಾರು 11.30 ಗಂಟೆಯಾದರೂ ಕಛೇರಿ ಸಿಬ್ಬಂದಿಗಳು ಹಾಜರಾಗದೇ ಇರುವುದು ಕಂಡುಬಂದಿದ್ದು ಹಾಜರಾತಿಯನ್ನು ಪರಿಶೀಲಿಸಲಾಗಿ ಹಾಜರಾತಿಯಲ್ಲಿಯೂ ಸಹ ಸಹಿ ಮಾಡಿರುವುದಿಲ್ಲ. ಈ ಬಗ್ಗೆ ಕಚೇರಿಯ ವ್ಯವಸ್ಥಾಪಕರನ್ನು ವಿಚಾರಿಸಲಾಗಿ ಕಲ್ಯಾಣ ಅಧಿಕಾರಿಗಳು ಕೇಂದ್ರ ಕಛೇರಿಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಚಲನವಲನ ಪುಸ್ತಕದಲ್ಲಿ ಗೈರು ಹಾಜರಿದ್ದ ಸಿಬ್ಬಂದಿಗಳು ದಾಖಲಿಸದೇ ಇರುವ ಬಗ್ಗೆ ಸಮಿತಿಯು ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಗೈರು ಹಾಜರಾದ ಸಿಬ್ಬಂದಿಗಳಿಗೆ ನೋಟೀಸ್ ಜಾರಿ ಮಾಡಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು. ಕಲ್ಯಾಣ ವಿಭಾಗದ ಕಛೇರಿಯ ಪಕ್ಕದಲ್ಲಿಯೇ ಇರುವ ವಲಯ ಅರಣ್ಯ ಅಧಿಕಾರಿಗಳ ಕಛೇರಿಯು ಸುಮಾರು 12.00 ಘಂಟೆಯಾದರೂ ಬಾಗಿಲನ್ನು ತೆರೆಯದೇ ಇರುವುದು ತಪಾಸಣೆ ವೇಳೆಯಲ್ಲಿ ಕಂಡುಬಂದಿದ್ದು ಸದರಿ ಅಧಿಕಾರಿಗಳು ಜಂಟಿ ಆಯುಕ್ತರು (ಪೂರ್ವ) ರವರ ಗಮನಕ್ಕೆ ತರದೇ ಗೈರು ಹಾಜರಾಗಿರುವ ಹಿನ್ನೆಲೆಯಲ್ಲಿ ವಲಯ ಅರಣ್ಯ ಅಧಿಕಾರಿಗಳ ಕಛೇರಿಯನ್ನು ಸೀಜ್ ಮಾಡಲಾಗಿರುತ್ತದೆ ಹಾಗೂ ಇವರ ವಿರುದ್ಧ ಕೂಡಲೇ ಕ್ರಮಕೈಗೊಂಡು ಸಮಿತಿಗೆ ವರದಿ ನೀಡಲು ಜಂಟಿ ಆಯುಕ್ತರು (ಪೂರ್ವ) ರವರಿಗೆ ಸೂಚಿಸಲಾಯಿತು.

ಕಲ್ಯಾಣ ಇಲಾಖೆಯ ತಪಾಸಣೆ ವೇಳೆಯಲ್ಲಿ ಕಂಡುಬಂದ ಅತಿ ಮುಖ್ಯವಾದ ಅಂಶವೇನೆಂದರೆ ಕಲ್ಯಾಣ ಅಧಿಕಾರಿಗಳ ಹುದ್ದೆಯನ್ನು ಸಮುದಾಯ ಸಂಘಟಕರೊಬ್ಬರು ನಿರ್ವಹಿಸುತ್ತಿರುವುದು



o/c

ಪೂರ್ವವಲಯವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೇ ಅತಿ ಹೆಚ್ಚು ವಾರ್ಡ್‌ಗಳನ್ನು/ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದ್ದು ಅತಿ ಹೆಚ್ಚಿನ ಜನಸಂಖ್ಯೆಯ ವಾಸವಿದ್ದು ಇಂತಹ ವಲಯದ ಕಲ್ಯಾಣಾಧಿಕಾರಿ (ಕಂದಾಯಾಧಿಕಾರಿಗಳ ಹುದ್ದೆಗೆ ಸಮಾನಾಂತರ ಹುದ್ದೆ) ಹುದ್ದೆಯು ಅತೀ ಜವಾಬ್ದಾರಿಯುತವಾದ ಹುದ್ದೆಯಾಗಿದ್ದು ಈ ಹುದ್ದೆಗೆ ಶ್ರೀಮತಿ ಉಷಾ, ಸಮುದಾಯ ಸಂಘಟಕರು (ಪ್ರಥಮ ದರ್ಜೆ ಸಹಾಯಕರಿಗೆ ಸಮಾನಾಂತರ ಹುದ್ದೆ) ರವರನ್ನು ಯಾವ ಆಧಾರದ ಮೇಲೆ ವಲಯದ ಜಂಟಿ ಆಯುಕ್ತರು ನಿಯೋಜಿಸಿರುವ ಅಂಶವು ಹಲವು ಅನುಮಾನಗಳಿಗೆ ಅಸ್ಪದ ನೀಡಿರುತ್ತದೆ. ಈ ಹಿಂದೆ ಕಲ್ಯಾಣಾಧಿಕಾರಿಯಾಗಿದ್ದ ಶ್ರೀ ಸೊಹೆಲ್ ಅಹಮದ್ (ವ್ಯವಸ್ಥಾಪಕರು ಪ್ರಭಾರ ಸಹಾಯಕ ಕಂದಾಯ ಅಧಿಕಾರಿ) ರವರ ನಂತರ ತೆರವಾದ ಸ್ಥಾನಕ್ಕೆ ಮತ್ತೊಬ್ಬ ಸಹಾಯಕ ಕಂದಾಯ ಅಧಿಕಾರಿಯವರನ್ನು ನೇಮಿಸಲಾಗಿ ಅವರನ್ನು ಬದಲಿಸಲು ಕಾರಣವೇನು ಎಂಬ ಬಗ್ಗೆ ವಿವರಣೆ ನೀಡುವಲ್ಲಿ ತಪಾಸಣೆ ವೇಳೆಯಲ್ಲಿ ಹಾಜರಿದ್ದ ಜಂಟಿ ಆಯುಕ್ತರು ಪೂರ್ಣವಾಗಿ ವಿಫಲರಾಗಿರುತ್ತಾರೆ.

ಶ್ರೀಮತಿ ಉಷಾ, ಸಮುದಾಯ ಸಂಘಟಕರು, ಪ್ರಭಾರ ಕಲ್ಯಾಣ ಅಧಿಕಾರಿ ರವರು ತಪಾಸಣೆ ವೇಳೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವಲ್ಲಿ ವಿಫಲರಾಗಿದ್ದು ಹಾಗೂ ಕಡತಗಳನ್ನು ತಪಾಸಣೆಗೆ ಹಾಜರು ಪಡಿಸಲು ಸೂಚಿಸಲಾಗಿ ಕಚೇರಿಯಲ್ಲಿ ಯಾವುದೇ ಕಡತಗಳನ್ನು ಹಾಗೂ ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು ಕಂಡುಬಂದಿದ್ದು ಇದು ಇವರ ಕರ್ತವ್ಯಲೋಪವನ್ನು ಎತ್ತಿ ತೋರಿಸುತ್ತದೆ ಹಾಗೂ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಅಡಿ ಸಾರ್ವಜನಿಕರಿಂದ ಬಂದಿರುವ ಅರ್ಜಿಗಳನ್ನು ಕಛೇರಿಯಲ್ಲಿ ಕಸದ ರಾಶಿಯಂತೆ ಸಂಗ್ರಹಿಸಿರುವ ಬಗ್ಗೆ ಸಮಿತಿಯು ತೀವ್ರತರನಾದ ಆಕ್ಷೇಪವನ್ನು ವ್ಯಕ್ತಪಡಿಸುತ್ತಾ ಕಲ್ಯಾಣ ಕಾರ್ಯಕ್ರಮಗಳ ಎಲ್ಲಾ ದಾಖಲಾತಿಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗುವಂತೆ ವಲಯ ಜಂಟಿ ಆಯುಕ್ತರಿಗೆ ಸೂಚಿಸಲಾಯಿತು ಹಾಗೂ ಜವಾಬ್ದಾರಿಯುತ ಹುದ್ದೆಯಾದ ಕಲ್ಯಾಣ ಅಧಿಕಾರಿಗಳ ಹುದ್ದೆಗೆ ಕಂದಾಯ ಅಧಿಕಾರಿಗಳ ಸಮನಾಂತರ ಹುದ್ದೆಯಲ್ಲಿರುವ ದಕ್ಷ ಅಧಿಕಾರಿಯನ್ನು ನೇಮಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಆಯುಕ್ತರನ್ನು ಕೋರಲು ಸಮಿತಿಯು ಅಭಿಪ್ರಾಯಿಸುತ್ತದೆ.

ಮುಂದುವರೆದು ಪಾಲಿಕೆಯ ಇತರೇ ಕಲ್ಯಾಣ ಕಾರ್ಯಕ್ರಮಗಳಾದ ಕಾರು/ಆಟೋ/ಲಘು ವಾಹನಗಳನ್ನು ವಿತರಿಸುವ ಕಾರ್ಯಕ್ರಮ, ಸವಿತಾ ಸಮಾಜದ ಕಿಟ್‌ಗಳನ್ನು ನೀಡುವ ಕಾರ್ಯಕ್ರಮ ಹಾಗೂ ಇನ್ನಿತರೆ ಕಲ್ಯಾಣ ಕಾರ್ಯಕ್ರಮಗಳಲ್ಲಿಯೂ ಸಹ ಪೂರ್ವ ವಲಯದಲ್ಲಿ ಸಾಕಷ್ಟು ಲೋಪಗಳು ಕಂಡುಬಂದಿದ್ದು ಈ ಬಗ್ಗೆ ಸಮಿತಿಯ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಸದರಿ ವಲಯದಲ್ಲಿ

ಅನುಷ್ಠಾನಗೊಂಡಿರುವ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳಲ್ಲಿ ನಡೆದಿರುವ ಲೋಪ ಬಗ್ಗೆ ಸೂಕ್ತ ತನಿಖೆ ನಡೆಸಲು ಕ್ರಮಕೈಗೊಳ್ಳುವಂತೆ ಆಯುಕ್ತರನ್ನು ಕೋರಲು ಸಮಿತಿಯು ಅಭಿಪ್ರಾಯಿಸುತ್ತದೆ.

ಕಛೇರಿಯ ಹಾಜರಾತಿ ಪುಸ್ತಕ, ಪಿ.ಆರ್. ರಿಜಿಸ್ಟರ್, ಚಲನವಲನ ವಹಿ, ವೇತನ ಬಟವಾಡೆ ಪುಸ್ತಕ ಇವುಗಳನ್ನು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ದೃಢೀಕರಿಸದೇ ಇರುವುದು ಅವರ ಉದಾಸೀನ ಮನೋಭಾವನೆಯನ್ನು ಕಂಡುಬಂದಿರುತ್ತದೆ. ಒಟ್ಟಾರೇ ಪೂರ್ವವಲಯದ ಕಲ್ಯಾಣ ಕಚೇರಿಯು ಸಮರ್ಪಕವಾದ ಮೇಲುಸ್ತುವಾರಿ ಇಲ್ಲದೆ ಇದ್ದು ಇದು ಪಾಲಿಕೆಯ ವ್ಯಾಪ್ತಿಗೆ ಸಂಬಂಧಪಟ್ಟಿಲವೇನೂ ಎಂಬಂತೆ ವರ್ತಿಸಿರುವುದು ಸಮಿತಿಯು ತಪಾಸಣೆ ಸಂದರ್ಭದಲ್ಲಿ ಸೂಕ್ಷ್ಮವಾಗಿ ಗಮನಿಸಿರುತ್ತದೆ. ಮೇಲ್ಕಂಡ ಕಲ್ಯಾಣ ವಿಭಾಗದಲ್ಲಿ ಇಷ್ಟೊಂದು ಮಟ್ಟದ ಅವ್ಯವಹಾರ ನಡೆಯುತ್ತಿದ್ದರೂ ಸಹ ವಲಯ ಜಂಟಿ ಆಯುಕ್ತರು ಈ ಬಗ್ಗೆ ಕ್ರಮ ವಹಿಸದೇ ಇರುವುದು ಅವರ ಬೇಜವಾಬ್ದಾರಿತನವನ್ನು ತೋರಿಸುವುದೇ ಅಲ್ಲದೇ ಹಲವಾರು ಅನುಮಾನಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಅಭಿಪ್ರಾಯಿಸುತ್ತಾ ಈ ಬಗ್ಗೆ ಶಿಸ್ತಿನ ಕ್ರಮ ಜರುಗಿಸಲು ಆಯುಕ್ತರನ್ನು ಕೋರಲು ಸಮಿತಿಯು ಅಭಿಪ್ರಾಯಿಸುತ್ತದೆ.

ಈ ಮೇಲ್ಕಂಡ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ ಈ ವಲಯದ ಕಲ್ಯಾಣ ವಿಭಾಗ ಒಂದರಲ್ಲಿಯೇ ಇಷ್ಟೊಂದು ಅವ್ಯವಸ್ಥೆಯ ಹಗರಣವಾಗಿದ್ದು, ಉಳಿದ ಕಛೇರಿಗಳ ಪರಿಸ್ಥಿತಿಯು ಹೇಗಿರಬಹುದೆಂಬ ಬಗ್ಗೆ ಸಮಿತಿಯು ತನ್ನ ಅನಿಸಿಕೆ ವ್ಯಕ್ತಪಡಿಸುತ್ತದೆ.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ.*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಅಪರ ಆಯುಕ್ತರು (ಆಡಳಿತ)/ಜಂಟಿ ಆಯುಕ್ತರು (ಪೂರ್ವ)/ಉಪ ಆಯುಕ್ತರು (ಆಡಳಿತ)/ ಜಂಟಿ ಆಯುಕ್ತರು (ಕಲ್ಯಾಣ) ರವರಿಗೆ ಕಳುಹಿಸುತ್ತಾ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಂಡು, ವರದಿ ನೀಡಲು ಸೂಚಿಸಿದೆ.*
6. *ಕಛೇರಿ ಪ್ರತಿ.*

1) ಪೂಜ್ಯ ಮಹಾಪೌರರು

2) ಮಾನ್ಯ ಉಪ ಮಹಾಪೌರರು

3) ಮಾನ್ಯ ಆಯುಕ್ತರು

4) ಅಪರ ಆಯುಕ್ತರು (ಆಡಳಿತ)

5) ಜಂಟಿ ಆಯುಕ್ತರು (ಕಲ್ಯಾಣ)

6) ಉಪ ಆಯುಕ್ತರು (ಆಡಳಿತ)

7) ಜಂಟಿ ಆಯುಕ್ತರು (ಪೂರ್ವ)

8) ಎಲ್ಲಾ ಸ್ಥಾಯಿ ಸಮಿತಿ ಸದಸ್ಯರಿಗೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 06-02-2012 ರಂದು ಕೇಂದ್ರ ಕಛೇರಿಯ ಮುಖ್ಯ ಆರ್ಥಿಕ ಅಧಿಕಾರಿ (JNNURM) ರವರ ಕಛೇರಿ ತಪಾಸಣಾ ವರದಿ

**ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ**

1. ಹೆಚ್. ಆರ್ ಕೃಷ್ಣಪ್ಪ – ಅಧ್ಯಕ್ಷರು
2. ಮುನಿಸ್ವಾಮಿಗೌಡ – ಸದಸ್ಯರು
3. ವೀಣಾ ನಾಗರಾಜ್ – ಸದಸ್ಯರು
4. ಆರ್. ಉದಯಕುಮಾರ್ – ಸದಸ್ಯರು
5. ಎ. ವಿಜಯ ರಮೇಶ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿಗಳು
ಆಯುಕ್ತರ ಕಚೇರಿಯ ನೋಡಲ್ ಅಧಿಕಾರಿಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆರ್ಥಿಕ ಅಧಿಕಾರಿಗಳು (JNNURM) ರವರ ಕಛೇರಿಗೆ ಅನಿರೀಕ್ಷಿತಾ ತಪಾಸಣೆ ನಡೆಸಿದ ಸಂದರ್ಭದಲ್ಲಿ ಘಂಟೆ 10.30 ಆದರೂ ಸಿಬ್ಬಂದಿಗಳು ಕಛೇರಿಗೆ ಹಾಜರಾಗಿರಲಿಲ್ಲ ಹಾಗೂ ಕಛೇರಿಯ ಯಾವೊಬ್ಬ ನೌಕರರು ಗುರುತಿನ ಚೀಟಿ ಧರಿಸಿರುವುದಿಲ್ಲ. ನಾಲ್ಕನೇ ದರ್ಜೆ ನೌಕರರು ಸಮವಸ್ತ್ರ ಧರಿಸದೇ ಇರುವುದು ಕಂಡುಬಂದಿರುತ್ತದೆ. ಕಚೇರಿ ಹಾಜರಾತಿ ಪುಸ್ತಕದಲ್ಲಿ ಸಿಬ್ಬಂದಿವರ್ಗದವರು ಸಹಿಮಾಡದೇ ಇದ್ದು ಈ ಬಗ್ಗೆ ಕೇಳಲಾಗಿ ಮುಖ್ಯ ಆರ್ಥಿಕ ಅಧಿಕಾರಿಗಳು ಬಯೋಮೆಟ್ರಿಕ್ ಯಂತ್ರದಲ್ಲಿ ದಾಖಲಿಸುವುದರಿಂದ ಹಾಜರಾತಿ ಪುಸ್ತಕದಲ್ಲಿ ಯಾರು ಸಹಿ ಮಾಡಿರುವುದಿಲ್ಲವೆಂದು ತಿಳಿಸಿದ್ದು ಆದರೆ ಹಾಜರಾತಿ ಕುರಿತಂತೆ ಬಯೋಮೆಟ್ರಿಕ್ ಯಂತ್ರದ ಪ್ರತಿಯನ್ನು ಕೋರಲಾಗಿ ಯಂತ್ರವು ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಈ ಪ್ರಕ್ರಿಯೆಯು ಉನ್ನತ ಅಧಿಕಾರಿಯೊಬ್ಬರು ಸ್ಥಾಯಿ ಸಮಿತಿಗೆ ನೀಡುವ ತಪ್ಪು ಮಾಹಿತಿ ಎಂಬುದನ್ನು ಸಮಿತಿಯು ತಿಳಿಸಲು ಇಚ್ಚಿಸುತ್ತದೆ.

ಸದರಿ ಕಚೇರಿಯ ಸಿಬ್ಬಂದಿವರ್ಗದವರು ಗೈರು ಹಾಜರು ಆಗಿದ್ದರೂ ಸಹ ತಪ್ಪದೇ ವೇತನ ಪಡೆದಿರುವುದು ದಾಖಲಾಗಿರುತ್ತದೆ. 2008-09ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಸಂಬಂಧಿಸಿದಂತೆ



O/C

ಹಲವಾರು ಆಕ್ಷೇಪಣೆ ಇದ್ದಾಗ್ಯೂ ಸಹ ಕಾಮಗಾರಿಗಳ ಬಿಲ್ಲು ಪಾವತಿ ಕುರಿತಂತೆ ಕ್ರಮಕೈಗೊಂಡಿರುವುದು ಕಂಡುಬಂದಿದ್ದು ಈ ಬಗ್ಗೆ ಸಮರ್ಪಕವಾದ ರೀತಿಯಲ್ಲಿ ವಿವರಣೆ ನೀಡಲು ವಿಫಲರಾಗಿರುತ್ತಾರೆ. ಸುಮಾರು ಕಾಮಗಾರಿ ಪ್ರಕ್ರಿಯೆಗಳಲ್ಲಿ ಟೆಂಡರ್ ಮೌಲ್ಯಮಾಪನ ನಡೆಸುವಾಗ ಗುತ್ತಿಗೆದಾರರೊಂದಿಗೆ ಸಂಧಾನ ನಡೆದಿದ್ದು ಗುತ್ತಿಗೆ ಮೊತ್ತವು ಶೇ 50 ರಷ್ಟು ಹೆಚ್ಚಿನಾಗಿದ್ದ ಸರ್ಕಾರದ ಸುತ್ತೋಲೆ ರೀತ್ಯಾ ಶೇ 10 ಕ್ಕಿಂತಲೂ ಹೆಚ್ಚಿನಾಗಿದ್ದ ಪಕ್ಷದಲ್ಲಿ ಸದರಿ ಗುತ್ತಿಗೆ ಮೊತ್ತವನ್ನು ಪರಿಗಣಿಸಲು ಸಾಧ್ಯವಿಲ್ಲದಿದ್ದಾಗ್ಯೂ ಸಹ ಬಿಲ್ಲು ಪಾವತಿಸಲು ಶಿಫಾರಸ್ಸು ಮಾಡಿದ್ದು ಇದು ನಿಯಮಬಾಹಿರವೆಂದು ಸಮಿತಿಯ ಅಭಿಪ್ರಾಯಿಸುತ್ತದೆ. ಸದರಿ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಛೇರಿಯ ಜವಾಬ್ದಾರಿಯುತವಾದ ಕಡತ ವಿಲೇವಾರಿ ಕಾರ್ಯವನ್ನು ನಿರ್ವಹಿಸಲು ಕೈಗೊಂಡಿರುವ ಕ್ರಮವು ಸಹ ನಿಯಮಬಾಹಿರವಾಗಿರುತ್ತದೆ.

ಸದರಿ ಕಛೇರಿಯ 2008-09ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಂತೆ ಸುಮಾರು ರೂ.17,85,69,783.00 ( ಹದಿನೇಳು ಕೋಟಿ ಎಂಭತ್ತೈದು ಲಕ್ಷದ ಅರವತ್ತೊಂಭತ್ತು ಸಾವಿರದ ಏಳು ನೂರ ಎಂಭತ್ತ ಮೂರು) ಗಳಷ್ಟು ಆಕ್ಷೇಪಣಾ ಮೊತ್ತವಿದ್ದು ಹಾಗೂ ರೂ. 5,19,28,766.00 ( ಐದು ಕೋಟಿ ಹತ್ತೊಂಭತ್ತು ಲಕ್ಷದ ಇಪ್ಪತ್ತೆಂಟು ಸಾವಿರದ ಏಳು ನೂರ ಅರವತ್ತಾರು) ಗಳಷ್ಟು ವಸೂಲಾತಿ ಮೊತ್ತವಿದ್ದರೂ ಸಹ ತಹಲ್‌ವರೆವಿಗೂ ಕೋಟ್ಯಾಂತರ ರೂಗಳಷ್ಟು ಇರುವ ಆಕ್ಷೇಪಣಾ ಮೊತ್ತವನ್ನು ವಸೂಲಾತಿ ಮಾಡುವಲ್ಲಿ ಮುಖ್ಯ ಆರ್ಥಿಕ ಅಧಿಕಾರಿಗಳು ವಿಫಲರಾಗಿದ್ದು ಇದು ಇವರ ಕರ್ತವ್ಯ ನಿರ್ಲಕ್ಷತೆ ತೋರಿದ್ದು ಇದರಿಂದ ಪಾಲಿಕೆಯ ಬೊಕ್ಕಸಕ್ಕೆ ನಷ್ಟ ಉಂಟಾಗಿರುವ ಹಿನ್ನೆಲೆಯಲ್ಲಿ ಸದರಿಯವರ ಮೇಲೆ ಸೂಕ್ತ ಶಿಸ್ತಿನ ಕ್ರಮಕೈಗೊಂಡು ಕೂಡಲೇ ಲೆಕ್ಕ ಪರಿಶೋಧನಾ ಅಕ್ಷೇಪಣಾ ಮೊತ್ತವನ್ನು ವಸೂಲಿ ಮಾಡಲು ಸಂಬಂಧಪಟ್ಟವರಿಗೆ ಆದೇಶಿಸತಕ್ಕದೆಂದು ಮಾನ್ಯ ಆಯುಕ್ತರನ್ನು ಕೋರಿದೆ.

ಸದರಿ ಕಛೇರಿಯ ಕಡತಗಳನ್ನು ಗುತ್ತಿಗೆದಾರರು ಹಾಗೂ ಇತರೆ ಅಪರಿಚಿತ ವ್ಯಕ್ತಿಗಳು ತೆಗೆದುಕೊಂಡು ಹೋಗುತ್ತಿರುವುದು ಸಮಿತಿಯ ತಪಾಸಣೆ ವೇಳೆಯಲ್ಲಿ ಗಮನಿಸಿದ್ದು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಾ ಕಛೇರಿಯ ಎಲ್ಲಾ ಕಡತಗಳನ್ನು ಟಪಾಲು ಮೂಲಕವಾಗಿ ಇತರೆ ಕಛೇರಿಗಳಿಗೆ ಕಳುಹಿಸತಕ್ಕದೆಂದು ಹಾಗೂ ಇನ್ನು ಮುಂದೆ ಮೇಲ್ಕಂಡಂತಹ ಲೋಪದೋಷಗಳಿಗೆ ಅವಕಾಶ ನೀಡದಂತೆ ಎಚ್ಚರಿಕೆ ವಹಿಸಲು ಮುಖ್ಯ

ಆರ್ಥಿಕ ಅಧಿಕಾರಿಗಳಿಗೆ ಸೂಚಿಸಲಾಯಿತು ಹಾಗೂ ಸದರಿ ಕಛೇರಿಯ ಕಡತಗಳನ್ನು ಕ್ರಮವಾಗಿ ಇಡದೇ ಎಲ್ಲೆಂದರಲ್ಲಿ ಇಟ್ಟಿರುವುದು ಕಂಡುಬಂದಿದ್ದು ಈ ಬಗೆಗೂ ಸಹ ಎಲ್ಲಾ ಕಡತಗಳನ್ನು ಕ್ರಮವಾಗಿ ಅಲ್ಮರಾಗಳಲ್ಲಿ ಇಡುವಂತೆ ಸೂಚಿಸಲಾಯಿತು.

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ.*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಅಪರ ಆಯುಕ್ತರು (ಆಡಳಿತ)/ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಂಡು, ವರದಿ ನೀಡಲು ಸೂಚಿಸಿದೆ.*
6. *ಮುಖ್ಯ ಲೆಕ್ಕಾಧಿಕಾರಿ ರವರಿಗೆ ಸೂಕ್ತಕ್ರಮಕ್ಕಾಗಿ*
7. *ಮುಖ್ಯ ಆರ್ಥಿಕ ಅಧಿಕಾರಿ ರವರಿಗೆ ಸೂಕ್ತಕ್ರಮಕ್ಕಾಗಿ*
8. *ಕಛೇರಿ ಪ್ರತಿ.*

1) ಮಾನ್ಯ ಮಹಾಪೌರರು 15/2/12

2) ಮಾನ್ಯ ಉಪ ಮಹಾಪೌರರು 15/2/2012.

3) ಮಾನ್ಯ ಆಯುಕ್ತರು 15/2/12

4) ವಿಶೇಷ ಆಯುಕ್ತರು (ಆಡಳಿತ) 15-02-12

5) ಉಪ ಆಯುಕ್ತರು (ಆಡಳಿತ) 15/2/12

6) ಮುಖ್ಯ ಲೆಕ್ಕಾಧಿಕಾರಿಗಳು 15/02/12

7) ಮುಖ್ಯ ಆರೋಗ್ಯ ಅಧಿಕಾರಿಗಳು 15/2/12.

8) ಎಲ್ಲಾ ಸ್ಥಾಯಿ ಸಮಿತಿ ಸದಸ್ಯರಿಗೆ.

15/2/12

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 02-03-2012 ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಹೆಚ್. ಆರ್. ಕೃಷ್ಣಪ್ಪ – ಅಧ್ಯಕ್ಷರು
2. ಎಂ.ಇ. ಪಿಳಪ್ಪ – ಸದಸ್ಯರು
3. ಮುನಿಸ್ವಾಮಿಗೌಡ – ಸದಸ್ಯರು
4. ಆರ್. ಉದಯ್ ಕುಮಾರ್ – ಸದಸ್ಯರು
5. ಎಂ.ಕೆ. ಗುಣಶೇಖರ್ – ಸದಸ್ಯರು
6. ವಿಜಯ ರಮೇಶ್ – ಸದಸ್ಯರು
7. ವೈ.ಆರ್. ಗೌರಮ್ಮ – ಸದಸ್ಯರು
8. ವೀಣಾ ನಾಗರಾಜ್ – ಸದಸ್ಯರು
9. ಲಲಿತ ಮುಕುಂದರಾವ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**
**ಶ್ರೀಯುತರುಗಳಾದ**

ಮುಖ್ಯ ಅಭಿಯಂತರರು (ಬಿ.ಎಸ್.ಯು.ಪಿ)
ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು
ವಿಶೇಷ ಅಧಿಕಾರಿಗಳು
ಆಯುಕ್ತರ ಕಛೇರಿಯ ನೋಡಲ್ ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

### ವಿಷಯ ಸಂಖ್ಯೆ: ಸಿಆಸುಸ್ಥಾಸ/18/2011-12

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀಮತಿ ಸಿ. ಕಾಮೇಶ್ವರಿ ದೇವಿ, ಪ್ಲಾಟ್ ನಂ.1, ಪ್ರಿಯದರ್ಶಿನಿ ಲಾ ಕಾಲೇಜ್ ಹತ್ತಿರ, ಸಂತೋಷನಗರ, ಅಟ್ಟೂರು, ಯಲಹಂಕ, ಬೆಂಗಳೂರು ಇವರನ್ನು ಕಛೇರಿ ಆದೇಶದಲ್ಲಿ ಬಿ.ಹೆಚ್.ಯು.ಪಿ ಯೋಜನೆಯಲ್ಲಿ ಲೋಕಲ್ ಕೋ ಆರ್ಡಿನೇಟ್ ಆಗಿ ಕಾರ್ಯನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ. 10,000/- ಗಳ ಸಂಚಿತ ವೇತನದ ಮೇಲೆ ನೇಮಿಸಲಾಗಿರುತ್ತದೆ.

ಸದರಿ ಗುತ್ತಿಗೆ ಅವಧಿಯು ದಿನಾಂಕ: 10-08-2010ಕ್ಕೆ ಮುಕ್ತಾಯವಾಗಿರುವುದರಿಂದ ದಿನಾಂಕ: 12-08-2010 ರ ಕಛೇರಿ ಆದೇಶದಲ್ಲಿ ದಿನಾಂಕ: 11-08-2010 ರಿಂದ ಅನ್ವಯವಾಗುವಂತೆ ಮತ್ತೊಂದು ವರ್ಷದ ಅವಧಿಗೆ ವಿಸ್ತರಿಸಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ: 10-08-2011 ಕ್ಕೆ ಮುಕ್ತಾಯಗೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ಬಿ.ಹೆಚ್.ಯು.ಪಿ.ಯ ಯೋಜನೆಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ವಿವಿಧ ಸಂಘ ಸಂಸ್ಥೆಗಳು/ಪಾಲಿಕೆ ಆಸ್ಪತ್ರೆಗಳೊಂದಿಗೆ ಸಮನ್ವಯ ಸಾಧಿಸಲು ಶ್ರೀಮತಿ ಸಿ. ಕಾಮೇಶ್ವರಿ ದೇವಿ ಇವರ ಸೇವೆಯು ಅವಶ್ಯಕತೆ ಇರುವುದರಿಂದ ಸದರಿಯವರ ಸೇವೆಯನ್ನು ದಿನಾಂಕ: 11-08-2011 ರಿಂದ ಅನ್ವಯವಾಗುವಂತೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲು ವರದಿಯಲ್ಲಿ ಶಿಫಾರಸ್ಸು ಮಾಡಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

5/3/12

ಆದ್ದರಿಂದ ಶ್ರೀಮತಿ ಕಾಮೇಶ್ವರಿ ದೇವಿ, ಬಿ.ಹೆಚ್.ಯು.ಪಿ ಯೋಜನೆಯಲ್ಲಿ ಲೋಕಲ್ ಕೋ ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ದಿನಾಂಕ: 11-08-2011 ರಿಂದ ಅನ್ವಯವಾಗುವಂತೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:16-09-2011 ರ ಬಿ12 (4) ಪಿಆರ್/179/2011-12 ರ ಟಪ್ಪಣಿ.

**ಈ ಪ್ರಸ್ತಾವನೆಯಲ್ಲಿನ ಕೆಳಕಂಡ ನ್ಯೂನತೆಗಳ ಕುರಿತಂತೆ ಕೂಲಂಕುಷವಾಗಿ ಪರಿಶೀಲಿಸಿ ಮರು ಮಂಡಿಸುವುದು**

1. ದಿನಾಂಕ: 09-08-2010 ರಿಂದ 10-08-2011 ರವರೆಗೆ ಗುತ್ತಿಗೆ ಅವಧಿಯನ್ನು ಮುಂದುವರೆಸಿರುವ ಬಗ್ಗೆ ಆಯುಕ್ತರ /ಸಮಿತಿಯ ಅನುಮೋದನೆ ಪಡೆಯುವುದು ಅವಶ್ಯವಿಲ್ಲವೇ
2. ಗುತ್ತಿಗೆ ನೌಕರರು ಗುತ್ತಿಗೆ ಅವಧಿಯನ್ನು ಮುಂದುವರೆಸಲು ಕೋರಿರುವ ಮನವಿಯಲ್ಲಿ ದಿನಾಂಕವಾಗಲಿ, ಕಛೇರಿಯ ಮೊಹರಾಗಲಿ ಹಾಗೂ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ಮೇಲ್ರುಜುವಿಲ್ಲದೇ ಇದ್ದು, ಈ ಮನವಿಯು ಕ್ರಮಬದ್ದವೇ
3. ದಿನಾಂಕ: 27-05-2011 ರ ಮುಖ್ಯ ಆರೋಗ್ಯ ಅಧಿಕಾರಿಯವರ ಆದೇಶದ ರೀತ್ಯಾ ದಿ: 01-04-2011 ರಿಂದ 31-03-2012 ರವರೆಗೆ ಪ್ರತಿ ಮಾಹೆ ರೂ. 10,000/- ಗಳ ವಾಹನ ಭತ್ಯೆ ಮಂಜೂರು ಮಾಡಲು ಆದೇಶ ಜಾರಿ ಮಾಡಿದ್ದು. ಸದರಿ ಗುತ್ತಿಗೆ ನೌಕರರು ಗುತ್ತಿಗೆ ಅವಧಿಯು ಮುಂದುವರೆಯುವ ಬಗ್ಗೆ ಮಂಜೂರಾತಿ ಪ್ರಾಧಿಕಾರಿಯ ಅನುಮೋದನೆ ಪಡೆಯದೇ ಇದ್ದರೂ ಸಹ ಇಲಾಖಾ ಮುಖ್ಯಸ್ಥರು ಹೊರಡಿಸಿರುವ ಈ ಆದೇಶವು ನಿಯಾಮಾಬಾಹಿರವಾಗಿರುವುದರಿಂದ ಈ ಹಿನ್ನೆಲೆಯಲ್ಲಿ ಪಾಲಿಕೆಗೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಂದಲೇ ವಸೂಲಿ ಮಾಡುವುದು ಹಾಗೂ ಅವರಿಂದ ವಿವರಣೆ ಪಡೆಯುವುದು. ವಿವರಣೆಯೊಂದಿಗೆ ಪ್ರಸ್ತಾವನೆಯನ್ನು ಮರು ಮಂಡಿಸುವುದು.

**ದಿನಾಂಕ: 02-03-2012 ರ ನಿರ್ಣಯ:**

ದಿನಾಂಕ:26-09-2011 ರ ಸಭೆಯಲ್ಲಿನ ಅವಲೋಕನೆಗೆ ಸಂಬಂಧಿಸಿದಂತೆ ನೀಡಿರುವ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ದಿನಾಂಕ: 16-09-2011 ರ ಆಯುಕ್ತರ ಟಿಪ್ಪಣಿಯನ್ನು ಭಾಗಶ: ಒಪ್ಪುತ್ತಾ 1977 ರ ಕೆಎಂಸಿ ನಿಯಮ 20(ಬಿ) ರೀತ್ಯಾ 11 ತಿಂಗಳುಗಳ ಅವಧಿಗೆ ಶ್ರೀಮತಿ ಸಿ. ಕಾಮೇಶ್ವರಿದೇವಿ ರವರ ಗುತ್ತಿಗೆ ಅವಧಿಯನ್ನು ಮುಂದುವರೆಸಲು ತೀರ್ಮಾನಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/26/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶದ ಸಂಖ್ಯೆ: ಯುಡಿಡಿ/30/ಐಎಸ್ಬಿ/2009 ದಿನಾಂಕ: 08-09-2009 ರ ಆದೇಶದಂತೆ ಮಹಾನಗರ ಪಾಲಿಕೆಗಳಲ್ಲಿ ' ನಗರ ಬಡತನ ನಿರ್ಮೂಲನಾ ಕೋಶ' ಗಳನ್ನು ಸೃಜಿಸಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಯವರೆಗೆ ಸಮುದಾಯ ತಜ್ಞರು, ಕೌಶಲ್ಯ ಅಭಿವೃದ್ಧಿ ತಜ್ಞರು ಹಾಗೂ ಕಛೇರಿ ಸಹಾಯಕರು ಹುದ್ದೆಗಳನ್ನು ಮಾನ್ಯ ಆಡಳಿತಾಧಿಕಾರಿಯವರಿಂದ ಅನುಮೋದನೆ ಪಡೆದು ದಿನಾಂಕ: 03-09-2009 ರ ಪತ್ರಿಕಾ ಪ್ರಕಟಣೆ ಮುಖಾಂತರ ಅರ್ಜಿಯನ್ನು

ಆಹ್ವಾನಿಸಿದ್ದು, ನಿಯಮಗಳಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಸದರಿ ಯು.ಪಿ.ಎ ಸೆಲ್ (Urban Poverty Livelihood Cell) ಸ್ಥಾಪಿಸಲು ಮತ್ತು ಸಿಬ್ಬಂದಿ ವೇತನ ಹಾಗೂ ಕಾರ್ಯನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ರೂ. 22.00 ಲಕ್ಷಗಳು ಬಿಡುಗಡೆಗೊಂಡಿದ್ದು, ಆದರಂತೆ ಕಾರ್ಯನಿರ್ವಹಣೆ ಮತ್ತು ವೇತನಕ್ಕಾಗಿ ಉಪಯೋಗಿಸಲಾಗಿರುತ್ತದೆ.

ಸದರಿ ಹುದ್ದೆಗಳು **' ರಾಜೀವ್ ಅವಾಜ್ ಯೋಜನೆ'** ಅನುಷ್ಠಾನ ಕಾರ್ಯದಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗಾಗಿ **'ನಗರ ಕೊಳಚೆ ಮುಕ್ತ ನಗರ'** ವನ್ನಾಗಿ ಮಾಡುವ ಯೋಜನೆಯ ಕಾರ್ಯಕ್ರಮದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.

ಅದರಂತೆ ಮಾನ್ಯ ಆಡಳಿತಾಧಿಕಾರಿಗಳ ವಿಷಯ ಸಂಖ್ಯೆ: 560/2009-10 ದಿನಾಂಕ: 15-01-2010 ರ ನಡವಳಿ ಸಂಖ್ಯೆ: ಬಿ12(3)/ಪಿಆರ್/57/09-10 ದಿನಾಂಕ: 20-02-2010 ರಂತೆ ಶ್ರೀ ಎಂ.ಬಿ. ಮುರಳಿಕೃಷ್ಣ, ಸಮುದಾಯ ತಜ್ಞರು ಮತ್ತು ಶ್ರೀ ತಮ್ಮಯ್ಯ, ಕೌಶಲ್ಯ ಅಭಿವೃದ್ಧಿ ತಜ್ಞರನ್ನಾಗಿ ನೇಮಿಸಿ ಆದೇಶ ನೀಡಲಾಗಿದೆ. ಸದರಿಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಂಟು ವಲಯಗಳ ಕೊಳಚೆ ಪ್ರದೇಶಗಳ ಸರ್ವೆ ಕಾರ್ಯ ಡೇಟಾ ಎಂಟ್ರಿ ಕಾರ್ಯ ಮತ್ತು ಅದರಲ್ಲಿರುವ ನ್ಯೂನತೆಗಳನ್ನು ಸರಿಪಡಿಸುವ ಮೇಲ್ವಿಚಾರಣೆ ಕಾರ್ಯವನ್ನು ಹಿರಿಯ ಅಧಿಕಾರಿಗಳ ಆದೇಶದಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಮತ್ತು ಮಹಾನಗರ ಪಾಲಿಕೆಯಲ್ಲಿ ಸೃಷ್ಟಿಗೊಂಡ ಈ ಹುದ್ದೆಗಳನ್ನು ಕೊಳಚೆ ಪ್ರದೇಶದ ಅಭಿವೃದ್ಧಿಯ ಕೆಲಸ ಕಾರ್ಯಗಳ ದೃಷ್ಟಿಯಿಂದ ಪೌರಾಡಳಿತ ನಿರ್ದೇಶನಾಲಯವು ಸಂಖ್ಯೆ: ಪೌನಿ/ಯು.ಪಿ.ಎ.ಸಿ/A&OE/75/2009-10 ದಿನಾಂಕ: 23-03-2011 ರಲ್ಲಿ ಮುಂದಿನ ವರ್ಷ ಇಲ್ಲವೇ ಮುಂದಿನ ಆದೇಶದರೆಗೂ ಮುಂದುವರೆಸಲು ಆದೇಶಿಸಿರುತ್ತಾರೆ.

ಶ್ರೀ.ಮುರಳಿಕೃಷ್ಣ ರವರು ಸಮುದಾಯ ಅಭಿವೃದ್ಧಿ ತಜ್ಞರಾಗಿ ಪಾಲಿಕೆಯಲ್ಲಿ ದಿನಾಂಕ: 07-04-2010 ರಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ಶ್ರೀ ತಮ್ಮಯ್ಯ, ಕೌಶಲ್ಯ ಅಭಿವೃದ್ಧಿ ತಜ್ಞರು ದಿನಾಂಕ: 06-04-2010 ರಿಂದ ಕಾರ್ಯನಿರ್ವಹಿಸುತ್ತಿದ್ದು ದಿನಾಂಕ: 25-04-2011 ರಂದು ನಿಧನರಾಗಿರುತ್ತಾರೆ. ಸದರಿಯವರ ಖಾಲಿಯಾಗಿರುವ ಸ್ಥಳವನ್ನು ಕಾಯ್ದಿರಿಸಲಾದ ಅಭ್ಯರ್ಥಿಯಾದ ಶ್ರೀಮತಿ ವಿನೋದ್‌ಭಾವೆ ರವರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಕೊಳಚೆ ಪ್ರದೇಶಗಳ ಮೂಲಭೂತ ಸೌಕರ್ಯ ಬಡತನ ನಿರ್ಮೂಲನೆ ಮತ್ತು ವಿವಿಧ ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸಲು ಶ್ರೀ ಮುರಳಿಕೃಷ್ಣ ಎಂ.ಜಿ. ಸಮುದಾಯ ಅಭಿವೃದ್ಧಿ ತಜ್ಞರು ಇವರನ್ನು ದಿನಾಂಕ: 07-04-2011 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಲು ಹಾಗೂ ಕಾಯ್ದಿರಿಸಲಾದ ಅಭ್ಯರ್ಥಿಯಾದ ಶ್ರೀಮತಿ ವಿನೋದ್ ಭಾವೆ ರವರನ್ನು ಕೌಶಲ್ಯ ಅಭಿವೃದ್ಧಿ ತಜ್ಞರಾಗಿ ಆಯ್ಕೆ ಮಾಡಿಕೊಳ್ಳುವ ಬಗ್ಗೆ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ:12-11-2011 ರ ಟಿಪ್ಪಣಿ.

**ನಿರ್ಣಯ:** ವಿಷಯದ ಬಗ್ಗೆ ದೀರ್ಘವಾದ ಚರ್ಚೆಯ ನಂತರ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಹಿಂದಿರುಗಿಸಿದೆ.

1) ಈ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾದ ಆರ್ಥಿಕ ಸಹಾಯ ರೂ. 22 ಲಕ್ಷಗಳ ಪೈಕಿ ತಹಲ್‌ವರೆವಿಗೂ ವೆಚ್ಚವಾಗಿರುವ ಮೊತ್ತವೆಷ್ಟು ?

ಅಧ್ಯಕ್ಷರು



ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

2) ದಿ: 15-01-2010 ರ ಆಯುಕ್ತರ ಟಿಪ್ಪಣಿಯ ರೀತ್ಯಾ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂಚಿತ ವೇತನದ ಆಧಾರದ ಮೇಲೆ ವರ್ಷಕ್ಕೆ ರೂ. 16,20,000/- ಗಳು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗುವುದಾಗಿ ತಿಳಿಸಿದ್ದು ಈ ಬಗ್ಗೆ ಸ್ಪಷ್ಟ ವಿವರಣೆ ನೀಡುವುದು.

3) ದಿನಾಂಕ: 23-03-2011 ರ ಪೌರಾಡಳಿತ ನಿರ್ದೇಶನಾಲಯದ ಪತ್ರದ ಪ್ರತಿ ಮಾತ್ರ ಇರುತ್ತದೆ. ಪ್ರಸ್ಥಾವಿತ ಅಭ್ಯರ್ಥಿಗಳಿಗೆ ಪಾಲಿಕೆಯಲ್ಲಿ ಮುಂದುವರೆಸಲು ಯಾವುದೇ ಆದೇಶವಿರುವುದಿಲ್ಲ. ಈ ಆದೇಶವು ಅಧಿಕೃತವಾಗಿ ಪಾಲಿಕೆಗೆ ಬಂದಿರುವ ಬಗ್ಗೆ ಕಡತದಲ್ಲಿ ದಾಖಲೆಗಳು ಇರುವುದಿಲ್ಲ. ಆದರೆ ಆಯುಕ್ತರ ಟಿಪ್ಪಣಿಯಲ್ಲಿ ಈ ಉಲ್ಲೇಖದ ರೀತ್ಯಾ ಮುಂದಿನ ಆದೇಶದವರೆವಿಗೂ ಮುಂದುವರೆಸಲು ತಿಳಿಸಲಾಗಿರುತ್ತದೆ ಎಂಬ ಬಗೆಗೂ ಸೂಕ್ತ ವಿವರಣೆ ನೀಡುವುದು.

4) ಕಡತಗಳ ದಾಖಲೆಗಳ ರೀತ್ಯಾ ಕೌಶಲ್ಯ ಅಭಿವೃದ್ಧಿ ತಜ್ಞರಲ್ಲಿ ಕಾಯ್ದಿರಿಸಲಾದ ಅಭ್ಯರ್ಥಿಯ ಹೆಸರಿನ ರೀತ್ಯಾ ಪುನೀತ್ ಬಾವೆ ಎಂದು ದಾಖಲಾಗಿದ್ದು ದಿ: 12-11-2011 ರ ಆಯುಕ್ತರ ಟಿಪ್ಪಣಿಯಲ್ಲಿ ಶ್ರೀಮತಿ ವಿನೋದ್ ಬಾವೆ ರವರನ್ನು ಶಿಫಾರಸ್ಸು ಮಾಡಿದ್ದು ಇದು ಅತಿ ಗಂಭೀರ ಸ್ವರೂಪದ ಆರೋಪವಾಗಿದ್ದು ಈ ಕರ್ತವ್ಯಲೋಪಕ್ಕೆ ಸಂಬಂಧಪಟ್ಟ ಸಿಬ್ಬಂದಿವರ್ಗದವರ ಮೇಲೆ ಶಿಸ್ತಿನ ಕ್ರಮ ಕೈಗೊಂಡು ವರದಿ ನೀಡುವುದು.

**ದಿನಾಂಕ: 02-03-2012 ರ ಸಭೆಯ ನಿರ್ಣಯ:** ದಿನಾಂಕ: 07-01-2012 ರ ಸಭೆಯ ಅವಲೋಕನೆಗೆ ಕುರಿತಂತೆ ನೀಡಿರುವ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಆಯುಕ್ತರ ದಿನಾಂಕ: 12-11-2011 ರ ಟಿಪ್ಪಣಿಯನ್ನು ಭಾಗಶ: ಒಪ್ಪುತ್ತಾ ಶ್ರೀ. ಎಂ.ಬಿ. ಮುರಳಿಕೃಷ್ಣ, ಸಮುದಾಯ ತಜ್ಞರು ರವರನ್ನು 1977 ರ ಕೆಎಂಸಿ ನಿಯಮ 20(ಬಿ) ರೀತ್ಯಾ 11 ತಿಂಗಳುಗಳಿಗೆ ಗುತ್ತಿಗೆ ಅವಧಿಯನ್ನು ಮುಂದುವರೆಸಲು ಹಾಗೂ ಸದರಿಯವರಿಗೆ ಯಾವುದೇ ವಿಧವಾದ ಆರ್ಥಿಕ ನಿರ್ವಹಣೆಯನ್ನು ನೀಡದಂತೆ ಸೂಚಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/29/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ್ದ ಸರ್ಕಾರಿ ನೌಕರರ ಅವಲಂಬಿತರ ನೇಮಕಾತಿ ಸಂಬಂಧ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ದಿ: 13-10-2011 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 06-09-2011 ರ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳು ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಆದ್ದರಿಂದ ಭಾದಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 08-09-2011 ರ ಕರ್ನಾಟಕ ರಾಜ್ಯಪತ್ರದ ಭಾಗ-iv ಎ (ಪಿ.ಆರ್.ಸಂ 808) ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14) ರ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ:

ಸದರಿ ರಾಜ್ಯಪತ್ರವನ್ನು ದಿನಾಂಕ: 08-09-2011 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ಮತ್ತು ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗದಿರುವುದರಿಂದ ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ (14) ರ 8ನೇ ಪ್ರಕರಣದೊಂದಿಗೆ+ ಓದಿಕೊಂಡ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ. ಎಂದರೆ:

## ನಿಯಮಗಳು

1) **ಶಿರೋನಾಮೆ ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು 2011 ಎಂದು ಕರೆಯತಕ್ಕದ್ದು.

2) ಇವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 1 ಕ್ಕೆ ತಿದ್ದುಪಡಿ:-** ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗುವುದು) ನಿಯಮ 1 ರ ಉಪ ನಿಯಮ (3) ರಲ್ಲಿ " ಮೃತ ಸರ್ಕಾರಿ ನೌಕರ" ಎಂಬ ಪದಗಳ ನಂತರ ಅಥವಾ " ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿ ಸರ್ಕಾರಿ ನೌಕರ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. **ಹೊಸ ನಿಯಮ 3 ಅ ರ ಸೇರ್ಪಡೆ:-** ಸದರಿ ನಿಯಮಗಳ ನಿಯಮ 3 ರ ನಂತರ ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು ಅಂದರೆ:-

### 3. ಅ. ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರ ನೇಮಕಾತಿ

**(1)** ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರು ಈ ನಿಯಮಗಳ ವ್ಯಾಪಕತೆಗೆ ಹಾನಿ ಉಂಟು ಮಾಡದಂತೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರಾಗುತ್ತಾರೆ.

**(2)** ಈ ನಿಯಮಗಳು ನಿಯಮ 9ನ್ನು ಹೊರತುಪಡಿಸಿ ಮೃತ ಸರ್ಕಾರಿ ನೌಕರನ ಅವಲಂಬಿತರಿಗೆ ಅನ್ವಯವಾಗುವ ಅರ್ಹತೆಯ ಎಲ್ಲಾ ಷರತ್ತುಗಳು ನೇಮಕಾತಿ ನಿಬಂಧನೆಗಳು ಮತ್ತು ಅರ್ಜಿ ಸಲ್ಲಿಸುವ ಮತ್ತು ನೇಮಕಾತಿ ಮಾಡುವ ಕಾರ್ಯ ವಿಧಾನದ ನಿಯಮಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರನ ಅವಲಂಬಿತರಿಗೆ ನೌಕರನು ನಿವೃತ್ತಿ ಹೊಂದಿದ ದಿನಾಂಕದಿಂದ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗುತ್ತದೆ.

**ಪರಂತು, ಕರ್ನಾಟಕ ಸಿವಿಲ್ ಸೇವಾ ( ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ಜಾರಿಗೆ ಬಂದ ದಿನಾಂಕದಂದು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅರ್ಹ ಅವಲಂಬಿತರು ಸದರಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸತಕ್ಕದ್ದು.**

ಅಧ್ಯಕ್ಷರು

ಬ್ಯಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ವಿವರಣೆ:** ಈ ನಿಯಮಗಳು ಉದ್ದೇಶಕ್ಕಾಗಿ:

(i) "ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ" ಎಂದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಚಿತವಾದ ವೈದ್ಯಕೀಯ ಮಂಡಳಿಯು ನೀಡಿದ ಪ್ರಮಾಣ ಪತ್ರದನ್ವಯ ಸಾರ್ವಜನಿಕ ಸೇವೆಯ ಮೇಲೆ ಕರ್ತವ್ಯದಲ್ಲಿರುವಾಗ ದೈಹಿಕವಾಗಿ ಅಥವಾ ಮಾನಸಿಕವಾಗಿ ಶಾಶ್ವತವಾಗಿ ಅಸಮರ್ಥರಾಗಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳನ್ವಯ 1ನೇ ಜನವರಿ 2010 ರಂದು ಅಥವಾ ತದನಂತರ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ.

(ii) "ಕರ್ತವ್ಯದ ಮೇಲಿರುವಾಗ" ಎಂಬ ಪದಗಳು ಮನೆಯಿಂದ ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಹೋಗಿಬರುವ ಪ್ರಮಾಣವನ್ನು ಒಳಗೊಂಡಿರುತ್ತವೆ.

(iii) ಮೃತ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ಪರಿಭಾಷಿಸಿರುವ " ಅವಲಂಬಿತರು" ಮತ್ತು ಕುಟುಂಬದ ಸದಸ್ಯರು" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅವಲಂಬಿತರಿಗೂ ಆರ್ಥೈಸಲ್ಪಡತಕ್ಕದ್ದು.

(iv) ಈ ನಿಯಮಗಳಲ್ಲಿ ಮೃತ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ನಮೂದಾಗಿರುವ "ವಿಧವೆ" ಅಥವಾ "ವಿಧುರ" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಕ್ರಮವಾಗಿ " ಪತ್ನಿ" ಅಥವಾ ' ಪತಿ' ಎಂದು ಪರಿಗಣಿಸಲ್ಪಡತಕ್ಕದ್ದು.

ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ವರದಿಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಹೊರಡಿಸಿರುವ ದಿನಾಂಕ: 13–10–2011 ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ರ ನಿಯಮ 1 ರ ಉಪ ನಿಯಮ (3) ರಲ್ಲಿ ಮೃತ ಸರ್ಕಾರಿ ನೌಕರ ಎಂಬ ಪದಗಳ ನಂತರ ಅಥವಾ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರ ಎಂಬ ಪದಗಳನ್ನು ಸೇರಿಸಿಕೊಂಡು ಹೊಸ ನಿಯಮ 3(ಅ) ರ ಸೇರ್ಪಡಿಸಿಕೊಂಡು ಹೊರಡಿಸಲಾಗಿರುವ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಟಿಪ್ಪಣಿಯನ್ನು ತಯಾರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಆದೇಶ ಕೋರಿರುವುದು ಕಂಡುಬರುತ್ತದೆ. ಆದುದರಿಂದ ಪಾಲಿಕೆಯಲ್ಲಿ ನಿಯಮಾವಳಿಗಳಂತೆ ಸದರಿ ಅಧಿಸೂಚನೆಯನ್ನು ಅಳವಡಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಜಂಟಿ ಆಯುಕ್ತರು (ಆರೋಗ್ಯ) ರವರು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ: 13–10–2011 ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸಬಹುದು ಎಂದು ದಿನಾಂಕ: 07–02–2012 ರಂದು ಕಡತದಲ್ಲಿ ವರದಿಯನ್ನು ನೀಡಿರುತ್ತಾರೆ.

ಅಧ್ಯಕ್ಷರು
ಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ದಿನಾಂಕ: 13-10-2011 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 14-02-2012 ರ ಸಂಖ್ಯೆ: ಬಿ12 (5ಜಿ) ಪಿಆರ್/240/11-12 ರ ಟಿಪ್ಪಣಿ.

**ನಿರ್ಣಯ:** ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಹಿಂದುರಿಗಿಸಿದೆ.

1. ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ರ ಅಥವಾ 1996 ರ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವುದು.
2. ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಜಾರಿ ಮಾಡಲಾಗಿರುವ ಮಾರ್ಗಸೂಚಿಗಳು ಹಾಗೂ ಷರತ್ತುಗಳ ವಿವರಗಳೊಂದಿಗೆ

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ದಿನಾಂಕ: 17-03-2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು ಶ್ರೀಯುತರುಗಳಾದ |
|---|---|---|
| 1. ಹೆಚ್. ಆರ್. ಕೃಷ್ಣಪ್ಪ | – ಅಧ್ಯಕ್ಷರು | ಕಾನೂನು ಕೋಶದ ಮುಖ್ಯಸ್ಥರು |
| 3 ಮುನಿಸ್ವಾಮಿಗೌಡ | – ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2. ಆರ್. ಉದಯ್ ಕುಮಾರ್ | – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ) |
| 4. ಎಂ.ಕೆ. ಗುಣಶೇಖರ್ | – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| 5. ವೈ.ಆರ್. ಗೌರಮ್ಮ | – ಸದಸ್ಯರು | ವಿಶೇಷ ಅಧಿಕಾರಿಗಳು |
| 6. ಲಲಿತ ಮುಕುಂದರಾವ್ | – ಸದಸ್ಯರು | ಆಯುಕ್ತರ ಕಚೇರಿಯ ನೋಡಲ್ ಅಧಿಕಾರಿ |
| 7. ವೀಣಾ ನಾಗರಾಜು | – ಸದಸ್ಯರು | |
| 8. ಕೆ.ವಿ. ಯಶೋಧ | – ಸದಸ್ಯರು | |

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/14/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರು ದಿ: 23-03-2011 ರಂದು ಮನವಿ ಸಲ್ಲಿಸಿ, ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಅಧಿಸೂಚನೆ ಸಂಖ್ಯೆ: ನಅಇ 92 ಎಂಎನ್‌ವೈ 2006 ದಿನಾಂಕ: 16-01-2007 ರಂದು ಈ ಹಿಂದೆ ಇದ್ದ ಬೆಂಗಳೂರು ಮಹಾನಗರ ಪಾಲಿಕೆಯು 110 ಗ್ರಾಮಗಳು, 7 ನಗರಸಭೆ ಮತ್ತು 1 ಪುರಸಭೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಯಾಗಿದ್ದು, ಸದರಿ 110 ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಹಂಗಾಮಿ ಕಂದಾಯ ವಸೂಲಿಗಾರರು, ಗಣಕಯಂತ್ರ ನಿರ್ವಾಹಕರು, ಜವಾನರು, ಎಲೆಕ್ಟ್ರೀಷಿಯನ್, ಜಲಗಾರರು, ಪೌರಕಾರ್ಮಿಕರುಗಳು ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿದ್ದು, ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ ಮಾಹೆಯಾನ ರೂ. 2500, ಗುಮಾಸ್ತರಿಗೆ ಮಾಹೆಯಾನ ರೂ. 2042, ಜಲಗಾರರಿಗೆ ಮಾಹೆಯಾನ ರೂ. 2250, ಪೌರಕಾರ್ಮಿಕರಿಗೆ ಮಾಹೆಯಾನ 1750 ಹಾಗೂ ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ ರೂ.3000 ಮತ್ತು ಜವಾನರಿಗೆ ಮಾಹೆಯಾನ ರೂ. 1000 ಗಳನ್ನು ಪಾವತಿಸಲಾಗುತ್ತಿತ್ತು. ನಂತರದಲ್ಲಿ ಅಪರ ಆಯುಕ್ತರು (ಆಡಳಿತ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ದಿನಾಂಕ: 07-07-2010 ರ ಆದೇಶದಂತೆ ಸರ್ಕಾರದ ಕಾರ್ಮಿಕ ಆಯುಕ್ತರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಪಿಟಿಎನ್/ಸಿಆರ್-118/09-10 ದಿನಾಂಕ: 07-01-2010 ರ ಪತ್ರದನ್ವಯ ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ, ಗುಮಾಸ್ತರಿಗೆ ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ ರೂ. 2874, ಜಲಗಾರರಿಗೆ, ಪೌರಕಾರ್ಮಿಕರಿಗೆ, ಜವಾನರಿಗೆ ಮಾಹೆಯಾನ ರೂ. 2632.00 ಗಳಿಗೆ ಕನಿಷ್ಠ ವೇತನವನ್ನು ಹೆಚ್ಚಿಸಿ ಆದೇಶ ಹೊರಡಿಸಿರುತ್ತಾರೆ. ಅದರಂತೆ, ಹೆಚ್ಚಳ ಮಾಡಿರುವ ಕನಿಷ್ಠ ವೇನತವನ್ನು ಪಡೆಯುತ್ತಿದ್ದು, ಈಗ ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರು ಘನತೆವೆತ್ತ ರಾಜ್ಯಪಾಲರ ಆದೇಶಾನುಸಾರ ದಿನಾಂಕ: 21-02-2011 ರಂದು ಅಧಿಸೂಚನೆ ಹೊರಡಿಸಿ, ಕನಿಷ್ಠ ವೇತನವನ್ನು ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ, ಗುಮಾಸ್ತರಿಗೆ, ಎಲೆಕ್ಟ್ರೀಷಿಯನ್ ರವರಿಗೆ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮಾಹೆಯಾನ ರೂ. 5881/- ಜಲಗಾರರಿಗೆ, ಪೌರಕಾರ್ಮಿಕರಿಗೆ ಮಾಹೆಯಾನ ರೂ. 5647.00 ಗಳನ್ನು ಜವಾನರಿಗೆ ಮಾಹೆಯಾನ ರೂ. 5179.00 ಗಳನ್ನು ಪರಿಷ್ಕರಿಸಿ, ಕನಿಷ್ಠ ವೇತನವನ್ನು ಹೆಚ್ಚಿಸಿ ಅಧಿಸೂಚನೆ ಹೊರಡಿಸಿರುತ್ತಾರೆ. ಆದ್ದರಿಂದ ಸದರಿ ಸರ್ಕಾರದ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಪಾವತಿಸಬೇಕೆಂದು ಕೋರಿರುತ್ತಾರೆ.

ಸರ್ಕಾರದ ಕಾರ್ಮಿಕ ಇಲಾಖೆಯ ಸಂಖ್ಯೆ: ಕಾಇ/152/ಎಲ್‌ಡಬ್ಲ್ಯೂಎ/2008 ದಿ: 21-02-2011 ರ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಯಾವುದೇ " ನಗರ ಸ್ಥಳೀಯ ಸಂಸ್ಥೆಗಳು" ಹಾಗೂ " ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಎಂಬ ಅನುಸೂಚಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಿರ್ದಿಷ್ಟಪಡಿಸಿರುವ ಕನಿಷ್ಠ ವೇತವವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆಯ ಭಾಗ-4 (ಎ) ರಲ್ಲಿ ದಿನಾಂಕ: 30-09-2010 ರಂದು ಪ್ರಕಟಿಸಿ, ಕನಿಷ್ಠ ವೇತನ ಕಾಯ್ದೆ 1948 ರ (ಕೇಂದ್ರಾನಿಧಿಯಮ ಸಂ: (XI) ಸೆಕ್ಷನ್ 5 (1) (ಬಿ) ಪ್ರಕಾರ ಇದರಿಂದ ಭಾದಿತರಾಗುವ/ಸಂಬಂಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ/ಆಕ್ಷೇಪಣೆಗಳನ್ನು ಕನಿಷ್ಠ ವೇತನ ಸಲಹಾ ಮಂಡಳಿಯಲ್ಲಿ ಮಂಡಿಸಲಾಗಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರಕ್ಕೆ ಶಿಫಾರಸ್ಸು ನೀಡಿರುವಂತೆ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಪರಿಶೀಲಿಸಿ, ಕರಡು ಅಧಿಸೂಚನೆಯಲ್ಲಿ ನಿಗಧಿಪಡಿಸಿದ್ದ ವೇತನ ದರಗಳು ಇತರೆ ಅನುಸೂಚಿತ ಉದ್ದಿಮೆಗಳಿಗಿಂತ ಹಾಗೂ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ರಾಷ್ಟ್ರೀಯ ಕನಿಷ್ಠ ವೇತನ ದರಕ್ಕಿಂತ ಗಣನೀಯವಾಗಿ ಹೆಚ್ಚಾಗಿರುವುದನ್ನು ಸರ್ಕಾರವು ಗಮನಿಸಿ, ಈ ರೀತಿ ಗಣನೀಯವಾಗಿ ಕನಿಷ್ಠ ವೇತನವನ್ನು ಹೆಚ್ಚಾಗಿ ನಿಗಧಿಪಡಿಸಿರುವುದರಿಂದ ಇತರ ಅನುಸೂಚಿತ ಉದ್ದಿಮೆಗಳಿಗೆ ತಾರತಮ್ಯ ಮಾಡಿದಂತಾಗುತ್ತದೆ ಎನ್ನುವುದನ್ನು ಮನಗಂಡು ಕರಡು ಅಧಿಸೂಚನೆಯಲ್ಲಿನ ದರಗಳನ್ನು ಕಡಿತಗೊಳಿಸಲು ತೀರ್ಮಾನಿಸಿ, ಕನಿಷ್ಠ ವೇತನ ಕಾಯ್ದೆ 1948 ರ ಸೆಕ್ಷನ್ 3(1)(ಬಿ) ಹಾಗೂ 5 (1) (ಬಿ) ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ ಯಾವುದೇ " ನಗರ ಸ್ಥಳೀಯ ಸಂಸ್ಥೆಗಳು" ಹಾಗೂ " ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆಯೆಂದು ಅಧಿಸೂಚನೆ ಹೊರಡಿಸಿರುತ್ತದೆ.

**ಅನುಸೂಚಿ**

| ಕ್ರಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು (ರೂಪಾಯಿಗಳಲ್ಲಿ) | | | | | |
|---|---|---|---|---|---|---|---|
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು | | ಎಲ್ಲಾ ನಗರ ಸಭೆಗಳು | | ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು | |
| | | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| 1 | 2 | 3 | 4 | 5 | 6 | 7 | 8 |
| 1 | ಗುಮಾಸ್ತ/ಕ್ಲರ್ಕ್/ಕಂಪ್ಯೂಟರ್ ಆಪರೇಟರ್/ ಡಾಟಾ ಎಂಟ್ರೀ ಆಪರೇಟರ್/ಕರ ವಸೂಲಿಗಾರರು/ ಎಲೆಕ್ಟ್ರೀಷಿಯನ್ ಹಾಗೂ ಇತರೆ ಕುಶಲ ಕಾರ್ಮಿಕರು | 5881-20 | 226-20 | 5532-80 | 212-20 | 4919-20 | 189-20 |



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | | | | | | | |
|---|---|---|---|---|---|---|---|
| 2 | ಪಂಪ್ ಆಪರೇಟರ್/ಮೆಕ್ಯಾನಿಕ್/ ಬಾಲವಾಡಿ ಕಾರ್ಯಕರ್ತೆಯರು/ ವಾಹನ ಚಾಲಕರು ಮತ್ತು ಇತರೆ ಅರೆ ಕುಶಲ ಕಾರ್ಮಿಕರು | 5647-20 | 217-20 | 5304-00 | 204-00 | 4808-70 | 184-90 |
| 3 | ವಾಟರ್‌ಮ್ಯಾನ್ (ನೀರು ಗಂಟೆ) | 5413-20 | 208-20 | 5075-20 | 195-20 | 4698-20 | 180-70 |
| 4 | ಜವಾನರು, ಅಟೆಂಡರ್ | 5179-20 | 199-20 | 4846-40 | 186-40 | 4587-70 | 176-45 |
| 5 | ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ರಸ್ತೆಗಳನ್ನು ಗುಡಿಸುವುದು, ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಚಗೊಳಿಸುವುದು ಹಾಗೂ ಇತರೆ ಕುಶಲರಲ್ಲದ ಕಾರ್ಮಿಕರು | 5044-00 | 194-00 | 4264-00 | 164-00 | 3484-00 | 134-00 |

**ತುಟ್ಟಿಭತ್ಯೆ:-**

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳನ್ನು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿಭತ್ಯೆ ನೀಡತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು, ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ, ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಂಕದ (ಜನವರಿ 2010 ರಿಂದ ಡಿಸೆಂಬರ್ 2010) ರ ಸರಾಸರಿ ಆಧಾರದ ಮೇಲೆ 2011 ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದು ಸೇರಿದಂತೆ ಲೆಕ್ಕ ಹಾಕತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:**

ಅ) ಮಾಸಿಕ ವೇತನವನ್ನು ಪಡೆಯುವವರು:

ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು × ತುಟ್ಟಿಭತ್ಯೆ ದರ × 30 ದಿನಗಳು = ತುಟ್ಟಿಭತ್ಯೆ

ಆ) ದಿನಗೂಲಿ ವೇತನ ಪಡೆಯುವವರು:

$$\frac{\text{ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು} \times \text{ತುಟ್ಟಿಭತ್ಯೆ ದರ} \times 30\ \text{ದಿನಗಳು}}{26} = \text{ತುಟ್ಟಿಭತ್ಯೆ}$$

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ಹೆಚ್ಚಾಗಿರುವ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.

4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು, ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ರಿಂದ ಭಾಗಿಸಬೇಕು, ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು.

7. ಸಂಸ್ಥೆಗಳಲ್ಲಿ ನಿಗಧಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ, ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.

10. ಅಪ್ರೆಂಟೀಸ್‌ಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. **<u>ಕುಶಲ:</u>**ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ, ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ ಅವಶ್ಯವಿದ್ದರೆ ಸರಳವಾದ ನಕ್ಷೆಗಳನ್ನು ಓದಿ ಮತ್ತು ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

12. <u>ಅರೆ ಕುಶಲ:</u> ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರ ಉಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

13. <u>ಕುಶಲರಲ್ಲದವರು:</u> ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು. ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸರ್ಕಾರದ ಕಾರ್ಮಿಕ ಆಯುಕ್ತರ ಅರೆ ಸರ್ಕಾರಿ ಪತ್ರ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಪಿಟಿಎನ್/ಸಿಆರ್–188/09–10 ದಿನಾಂಕ: 07–01–2010 ರನ್ವಯ ಸದರಿ ನೌಕರರುಗಳಿಗೆ ಕನಿಷ್ಠ ವೇತನವನ್ನು ಪಾವತಿಸಲಾಗುತ್ತಿರುತ್ತದೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ: 21–02–2011 ರಂದು ಕಾರ್ಮಿಕ ಇಲಾಖೆಯ ಪ್ರಸ್ತುತ ಅಧಿಸೂಚನೆ ಅನ್ವಯ ಪರಿಷ್ಕೃತ ವೇತನ ಶ್ರೇಣಿಯನ್ನು ಹಂಗಾಮಿ ಕಾರ್ಮಿಕರುಗಳಿಗೆ ನೀಡುವುದರಲ್ಲಿ ಯಾವುದೇ ಬಾದಕವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ದಿನಾಂಕ: 21–02–2011 ರಂದು ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು, ಪಾಲಿಕೆಯ ಮಹದೇವಪುರ ವಲಯ, ಬೊಮ್ಮನಹಳ್ಳಿ ವಲಯ, ದಾಸರಹಳ್ಳಿ ವಲಯ, ರಾಜರಾಜೇಶ್ವರಿನಗರ ವಲಯ ಮತ್ತು ಯಲಹಂಕ ವಲಯಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಮುಂದುವರೆದು ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸದರಿ ಅಧಿಸೂಚನೆ ಹೊರಡಿಸಿದ ದಿನಾಂಕ: 21–02–2011 ರಿಂದ ಅನ್ವಯವಾಗುವಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ: 20–06–2011 ರ ನಿರ್ಣಯ ಕುರಿತಂತೆ ದಿನಾಂಕ: 28–07–2011 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಸಿಬ್ಬಂದಿ ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ಕುರಿತಂತೆ

**ನಿರ್ಣಯ:** ದಿನಾಂಕ: 26–09–2011 ರಲ್ಲಿನ ಸಮಿತಿಯ ಸಭೆಯಲ್ಲಿನ ಅವಲೋಕನೆಗೆ ಸಂಬಂಧಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ದಿ: 20–06–2011 ರ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ

## ವಿಷಯ ಸಂಖ್ಯೆ: ಸಿಆಸುಸ್ಥಾಸ/30/2011–12

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀ. ಸತ್ಯನಾರಾಯಣಗೌಡ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಸಹಾಯಕ ಕಾರ್ಯಪಾಲಕ ಅಬಿಯಂತರರು (ಪರಿಸರ) ಬನಶಂಕರಿ ಉಪವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಮಾನ್ಯ ಮುಖ್ಯಮಂತ್ರಿರವರ ಪ್ರಧಾನ ಕಾರ್ಯದರ್ಶಿ–II ರವರ ಪತ್ರದ ಸಂಖ್ಯೆ:ಮುಮಪ್ರಾಕಾ–II/104, ದಿ:04–01–2012 ರಂತೆ ಪಾಲಿಕೆಯಲ್ಲಿ ವಿಲೀನಗೊಳಿಸಲು, ನ್ಯಾಯಲಯದ ಪ್ರಕರಣದ ಡಬ್ಲ್ಯೂ.ಪಿ. ನಂ.30981/96ರ ದಿ:28–01–2011 ರಲ್ಲಿ ಇತ್ಯರ್ಥವಾಗಿದ್ದು ಇವರ ಸೇವೆಯನ್ನು ಪಾಲಿಕೆಯಲ್ಲಿ ವಿಲೀನಗೋಳಿಸಲು ಕಾನೂನಿನ ತೊಡಕ್ಕಿಲ್ಲವೆಂದು ತಿಳಿದು ಬಂದಿರುವ ಹಿನ್ನೆಲೆಯಲ್ಲಿ, ಇವರ ಸೇವೆಯನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಸತ್ಯನಾರಾಯಣಗೌಡ, ಸಹಾಯಕರು ಇವರು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ದಿನಾಂಕ: 21–08–2003 ರಿಂದ ದ್ವಿ.ದ.ಸ. ಆಗಿ 7 ವರ್ಷಗಳಿಂದ ಕಾರ್ಯನಿರ್ವಹಿಸಿರುತ್ತಾರೆ. ನಂತರ, ಸದರಿ ನೌಕರರಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರ ಆದೇಶ ಸಂಖ್ಯೆ: ಕಕೈಅನಿಅ ಆಡಳಿತ 2010–2011/53 ದಿ: 19–04–2010ರ ಆದೇಶದಂತೆ ನಿಗಮದ 'ಕಿರಿಯ ಸಹಾಯಕರ' ಹುದ್ದೆಯಿಂದ 'ಸಹಾಯಕರ' ಹುದ್ದೆಗೆ ಮುಂಬಡ್ತಿ ನೀಡಿದ್ದು, ಸರ್ಕಾರದ ದಿನಾಂಕ: 19–05–2010 ರ ಪತ್ರದ ಅನುಮೋದನೆಯಂತೆ ಈ ಕಛೇರಿಯ ದಿನಾಂಕ:31–05–2010ರ ಆದೇಶದಂತೆ ಪಾಲಿಕೆಯಲ್ಲಿ ಎರವಲು



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಸೇವೆಯ ಮೇಲೆ 'ಪ್ರಥಮ ದರ್ಜೆ ಸಹಾಯಕ' ಹುದ್ದೆಯಲ್ಲಿ ಮುಂದುವರೆದು ಸುಮಾರು 2 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು ಶೇಕಡ 50%ರಷ್ಟು ನೇರ ನೇಮಕಾತಿಯಿಂದ ಹಾಗೂ ಶೇಕಡ 50%ರಷ್ಟು ಪಾಲಿಕೆಯ ದ್ವಿತೀಯ ದರ್ಜೆ ನೌಕರರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಮಾತ್ರ ಅವಕಾಶವಿದ್ದು ಅನ್ಯ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಶ್ರೀ ಸತ್ಯನಾರಾಯಣಗೌಡ, ಪ್ರ.ದ.ಸಹಾಯಕರು ಈ ಹಿಂದೆ ಸರ್ಕಾರದ ಪತ್ರದ ದಿ:05-07-2010 ರಂತೆ ಪಾಲಿಕೆಯಲ್ಲಿ ವಿಲೀನಗೊಳಿಸಲು ಕೋರಲಾಗಿರುವಂತೆ ಈಗಾಗಲೇ ಶ್ರೀಮತಿ ಅಮರಾವತಿ, ಪ್ರಥಮ ದರ್ಜೆ ಗುಮಾಸ್ತರು ರವರನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವ ಸಂಬಂಧ ಪಾಲಿಕೆಯ ನೌಕರರು ಆಕ್ಷೇಪಿಸಿ ಘನ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 13310/2007 (ಎಸ್-ಆರ್‌ಇಎಸ್)ಗೆ ಸಂಬಂಧಿಸಿದಂತೆ, ಘನ ಉಚ್ಚ ನ್ಯಾಯಾಲಯ MISC WNo. 11157/2007 ರಲ್ಲಿ ದಿನಾಂಕ: 07.12.2009 ರಂದು "The Apex Court, in C.Muniyappa Naidu's case, having considered the claim of Senior Health Inspectors drawn from the State Directorate, while on deputation to the then Corporation of the City of Bangalore, when absorbed to the permanent posts of Senior Health Inspectors, held that there was no amendment to the C & R Regulations permitting such absorption, and accordingly set-aside the resolution of the City of Corporation absorbing the said persons on deputation, to the posts in the Corporation. In my considered opinion, in the admitted facts of the present case, the recruitment for FDC's under the C&R Regulations is 50% by way of promotion and 50% by direct recruitment. In the absence of an amended to the C&R Regulations, as observed by the Apex Court, no power is invested in the BBMP to absorb persons on deputation from state services, since that is not a channel for recruitment under the Regulations. Applying the principles laid down in C.Muniyappa's case supra the claim of the for absorption to the cadre of FD C in the respondent BBMP under the C&R Regulations is impermissible------The wirt petition is accordingly disposed of" ಎಂದು ಆದೇಶ ಹೊರಡಿಸಲಾಗಿರುತ್ತದೆ ಹಾಗೂ ಸರ್ವೋಚ್ಚ ನ್ಯಾಯಾಲಯ/ಉಚ್ಚ ನ್ಯಾಯಾಲಯದ ವಿವಿಧ ಪ್ರಕರಣದಲ್ಲಿನ ತೀರ್ಪುಗಳಲ್ಲಿಯೂ ಸಹ ಎರವಲು ಸೇವೆಯ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಅವಕಾಶವಿರುವುದಿಲ್ಲವೆಂದು" ಸರ್ಕಾರಕ್ಕೆ ದಿ: 11-08-2010 ರಂದು ಪತ್ರ ಬರೆಯಲಾಗಿರುತ್ತದೆ.

ತದನಂತರ, ಸಹ, ಮಾನ್ಯ ಮುಖ್ಯಮಂತ್ರಿರವರ ಪತ್ರದಲ್ಲಿ ಸದರಿಯವರನ್ನು ವಿಲೀನಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಖಾಂತರ ಪಾಲಿಕೆಯ ಸಭೆಯ ಮುಂದೆ ಮಂಡಿಸಲಾಗಿದ್ದು, ದಿನಾಂಕ: 29-12-2010ರಂದು ನಡೆದ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 4 (154)/2010-11 ರಂತೆ ಸದರಿಯವರನ್ನು ಮೇಲಿನಂತೆ ಸರ್ವೋಚ್ಛ ನ್ಯಾಯಾಲಯ / ಉಚ್ಛ ನ್ಯಾಯಾಲಯದ ವಿವಿಧ ಪ್ರಕರಣದಲ್ಲಿನ ತೀರ್ಪುಗಳಲ್ಲಿಯೂ ಸಹ ಎರವಲು ಸೇವೆಯ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವುದರ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಕೋರಲಾದಂತೆ ಪಾಲಿಕೆಯ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸಭೆಯ ತೀರ್ಮಾನದ ನಡವಳಿಯನ್ನು ಸರ್ಕಾರದ ಅವಗಾಹನೆಗೆ ಕಳುಹಿಸಲಾಗಿರುತ್ತದೆ. ಆದರೆ, ಈ ತಹಲ್‌ವರೆವಿಗೂ ಸಹ ಯಾವುದೇ ವರದಿ / ಆದೇಶವಾಗಲಿ ಈ ಕಛೇರಿಗೆ ಬಂದಿರುವುದಿಲ್ಲ.

ಮುಂದುವರೆದು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ–II ರವರ ಪತ್ರದ ದಿನಾಂಕ: 04–01–2012 ರಂತೆ, ಸದರಿಯವರನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಕೋರಿದ್ದು, ಈ ಸಂಬಂಧ ಕಾನೂನು ಕೋಶದ ಮುಖ್ಯಸ್ಥರ ವರದಿಯಲ್ಲಿ, ರಿಟ್ ಅರ್ಜಿ ಸಂಖ್ಯೆ: 30981/1996 ರ ಆದೇಶವು ರಿಟ್ ಅರ್ಜಿಯಲ್ಲಿ ತೋರಿಸಿರುವ ಪ್ರತಿವಾಧಿಗಳಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಸದರಿ ಅರ್ಜಿದಾರರಿಗೆ ಅನ್ವಯಿಸುವುದಿಲ್ಲ. ಆದುದರಿಂದ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಪ್ರಥಮ ದರ್ಜೆ ಸಹಾಯಕರನ್ನು ಅನ್ಯ ಇಲಾಖೆಯಿಂದ ಎರವಲು ಸೇವೆಯ ಮೇಲೆ ಪಡೆಯಲು ಅವಕಾಶವಿರುವುದಿಲ್ಲ ಮತ್ತು ಶ್ರೀ ಸತ್ಯನಾರಾಯಣಗೌಡರವರು ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಆಯುಕ್ತರ ಅನುಮೋದನೆ ಪಡೆದು ಅರ್ಜಿದಾರರ ಮನವಿಯನ್ನು ಪರಿಷ್ಕರಿಸಬಹುದೆಂದು ಅಭಿಪ್ರಾಯಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳನ್ನು ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅನ್ಯ ಇಲಾಖೆಯ ಪ್ರಥಮ ದರ್ಜೆ ಸಹಾಯಕರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ. ಟಿಪ್ಪಣಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿರವರು ದಿನಾಂಕ: 04–01–2012ರ ಪತ್ರದಂತೆ ಶ್ರೀ ಸತ್ಯನಾರಾಯಣಗೌಡ, ಸಹಾಯಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಇವರ ಸೇವೆಯನ್ನು ಪಾಲಿಕೆಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ವಿಲೀನಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮರು ಮಂಡಿಸಿರುವ ಆಯುಕ್ತರ ದಿ: 05–03–2012 ರ ಸಂಖ್ಯೆ: ಬಿ12(1ಬಿ)ಪಿಆರ್/17/03–04 ರ ಟಿಪ್ಪಣಿ.

**ನಿರ್ಣಯ:** ಈ ಪ್ರಸ್ತಾವನೆ ಕುರಿತಂತೆ ದಿನಾಂಕ: 29–12–2010 ರ ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನ ಕೈಗೊಂಡಿರುವುದರಿಂದ ನಿಯಮಾನುಸಾರ ಮುಂದಿನ ತೀರ್ಮಾನಕ್ಕಾಗಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ನಿರ್ಣಯಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/31/2011–12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರುಗಳು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ರವರಿಗೆ ಮನವಿ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವಂತೆ ಕೋರಿರುವ ಮೇರೆಗೆ ಸದರಿಯವರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ವಿಲೀನಗೊಳಿಸಲು ನಿಗಮದ ಅಭ್ಯಂತರವಿಲ್ಲವೆಂದು ಹಾಗೂ ಸದರಿಯವರುಗಳ ಮನವಿಯನ್ನು ಪರಿಗಣಿಸಲು ನಿಗಮದಿಂದ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರದ ಪತ್ರಗಳಲ್ಲಿ ಈ ಕೆಳಕಂಡ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ವರದಿಯನ್ನು ಕಳುಹಿಸಿಕೊಡಲು ಕೋರಿರುತ್ತಾರೆ.

1. ಶ್ರೀ ಆರ್.ಟಿ. ಸುರೇಶ್‌ಬಾಬು. ಸಹಾಯಕ ಅಭಿಯಂತರರು
2. ಶ್ರೀ. ಜಿ. ನಾಗಭೂಷಣ್, ಸಹಾಯಕ ಅಭಿಯಂತರರು
3. ಶ್ರೀ. ಆರ್. ಬೆನಕೇಶ್, ಸಹಾಯಕ ಅಭಿಯಂತರರು
4. ಶ್ರೀ. ಹೆಚ್.ಎಂ. ತಿಮ್ಮಪ್ಪ, ಕಿರಿಯ ಅಭಿಯಂತರರು
5. ಶ್ರೀ. ಕೆ.ಜಿ ಸುಂದರೇಶ್. ಕಿರಿಯ ಅಭಿಯಂತರರು
6. ಶ್ರೀ. ಎಸ್.ಎಲ್. ಅಶ್ವಥ್. ಸಹಾಯಕ ಅಭಿಯಂತರರು
7. ಶ್ರೀ. ಎಸ್. ವಿಶ್ವನಾಥ್, ಸಹಾಯಕ ಅಭಿಯಂತರರು
8. ಶ್ರೀ. ಬಿ. ರಮೇಶ್, ಕಿರಿಯ ಅಭಿಯಂತರರು
9. ಶ್ರೀ ರವೀಂದ್ರನಾಥ್. ಸಹಾಯಕ ಅಭಿಯಂತರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ/ಕಿರಿಯ ಅಭಿಯಂತರರುಗಳ ಕೊರತೆ ಇದ್ದು, ಕರ್ನಾಟಕ ನಿರ್ಮಾಣ ನಿಗಮ ನಿಯಮಿತದ ಅಭಿಯಂತರರುಗಳನ್ನು ಪೊಲೀಸ್ ಹೌಸಿಂಗ್ ಕಾರ್ಪೋರೇಷನ್ ಹಾಗೂ ಇತರೆ ಇಲಾಖೆಗಳಲ್ಲಿ ವಿಲೀನಗೊಳಿಸಿರುವುದರಿಂದ ಹಾಗೂ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದೇ ಇರುವುದರಿಂದ ಈ ಕೆಳಕಂಡ ಷರತ್ತುಗೊಳಪಡಿಸಿ, ಸಾರ್ವಜನಿಕ ಹಾಗೂ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ನಿಯಮವನ್ನು ಸಡಿಲಿಸಿ, ಪಾಲಿಕೆಯ ನೇರ ನೇಮಕಾತಿ ಹುದ್ದೆಗಳಿಗೆ ಸದರಿಯವರುಗಳ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಮಾನ್ಯ ಆಡಳಿತಗಾರರು ಆದೇಶಿಸಿದ್ದು, ಇದರಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. (ಶ್ರೀ. ಆರ್.ಟಿ. ಸುರೇಶ್ ಬಾಬು, ಸಹಾಯಕ ಅಭಿಯಂತರರು, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ಅವರ ಹೆಸರನ್ನು ಕೈಬಿಡಲಾಗಿರುತ್ತದೆ)

**ಷರತ್ತುಗಳು**

1. ಸದರಿ ಅಭಿಯಂತರರುಗಳ ಸೇವಾ ಜೇಷ್ಠತೆಯನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳ ಸೇವಾ ಜೇಷ್ಠತೆಗಿಂತ ಕಿರಿಯರನ್ನಾಗಿ ಪರಿಗಣಿಸುವುದು.
2. ಸೇವಾ ಹಿರಿತನ ಹಾಗೂ ಮುಂಬಡ್ತಿ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡತಕ್ಕದ್ದಲ್ಲ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರವು ದಿ: 01-06-2011 ರಂದು ಕರಡು ನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಸದರಿ ಕರಡು ನಿಯಮಗಳಿಗೆ ನಿಗಧಿತ ಅವಧಿಯಲ್ಲಿ ಸ್ವೀಕರಿಸುವ ಆಕ್ಷೇಪಣೆ/ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಕೋರಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಇದರಂತೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಈ ಕೆಳಕಂಡವರುಗಳ ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಪತ್ರದಲ್ಲಿ ಕಳುಹಿಸಿಕೊಡಲಾಗಿರುತ್ತದೆ.

| ಕ್ರ ಸಂ | ಆಕ್ಷೇಪಣೆದಾರರ ಹೆಸರು | ವಿಳಾಸ |
|---|---|---|
| 1 | ಶ್ರೀ. ಎಂ ಉದಯಶಂಕರ್ | ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 2 | ಅಧ್ಯಕ್ಷರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರ ಕೇಂದ್ರೀಯ ಸಂಘ (ನೋಂ) |
| 3 | ಶ್ರೀ ಸಿ.ಎಂ ಮಂಜುನಾಥ್ | ನಂ. 48, 15ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು-96 |
| 4 | ಶ್ರೀ. ಎಂ.ಟಿ. ಬಾಲಾಜಿ ಮತ್ತು ಇತರೇ ಸಹಾಯಕ ಅಭಿಯಂತರರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ/ ಕಿರಿಯ ಅಬಿಯಂತರರುಗಳು |
| 5 | ಶ್ರೀ.ಎಸ್. ವೆಂಕಟರತ್ನಯ್ಯ | ನಂ. 48, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಗೌಡನಹಳ್ಳಿ, ಬೆಂಗಳೂರು. |

ಸರ್ಕಾರವು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸರ್ಕಾರವು ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿದ್ದು ಸದರಿ ಅಧಿಸೂಚನೆಯು ಈ ಕೆಳಕಂಡಂತೆ ಇರುತ್ತದೆ.

" Whereas, the draft of the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike(Special) Rules, 2011 which the Government of Karnataka proposes to make in exercise of the powers conferred by sub-section (1) of section 91 read with section 421 of the Karnataka Municipal Corporations Act. 1976 (Karnataka Act 14 of 1977 was published in Notification No. UDD 31 MNY 2008, dated 1st June 2011, in part IV-A of the Karnataka Gazette, Extra-ordinary, dated 2nd June 2011inviting objections and suggestions from the persons likely to be affected thereby within fifteen days from the date of its publication in the Official Gazette.

Whereas, the said Gazette was made available to the public on 2nd June 2011. And whereas, the objections and suggestions were received in respect of the said draft rules have been examined by the Government.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Now therefore in exercise of the powers conferred by Section 421 of the Karnataka Municipal Corporations Act, 1976 (Karnataka Act 14 of 1977) the Government of Karnataka hereby makes the following rules, namely:

**RULES**

1. **Title and commencement:** (1) These rules may be called the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike (Special) Rules 2011.

(2)They Shall come into force from the date of their publication in the Official Gazette.

2. **Defintions:** (1) In these rules, unless the context otherwise requires, "Deputation Assistant Engineers/Junior Engineers" means an Assistant Engineer or Junior Engineer as the case may be appointed in the Bruhat Bangalore Mahanagara Palike on deputation basis and has served for not less than three years in the Karnataka State construction Corporation limited.

(2) Other works and expression used in these rules but not defined shall have the same meaning respectively assigned to them in the Karnataka Municipal Corporations Rules 1977.

3. **Absorption of Deputation Assistant Engineer or Junior Engineer in the Bruhat Bangalore Mahanagara Palike-**

Notwithstanding anything contained in the Karnataka Municipal Corporations Rules., 1977 or any other rules made or deemed to have been made under the provisions of the Karnataka Municipal Corporations Act, 1976 (Karnataka Act 14 of 1977), governing the method or recruitment of the employees of the Bruhat Bangalore Mahanagara Palike every Deputation Assistant Engineer or Junior Engineer as Specified in Column (2) of the Schedule and continues as such in the Bruhat Bangalore Mahanagara Palike on the date of commencement of these rules, be absorbed in the corresponding category of post and scale of pay specified in Columns (4) and (5) respectively in the Bruhat Bangalore Mahanagara Palike Services. Provided that no such person shall be absorbed.

(i) If he was disqualified for appointment under the Karnataka Municipal Corporations Rules, 1977 on the date of appointment as

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Assistant Engineer or Junior Engineer in the Karnataka State Construction Corporation Limited;

(ii) If he does not possess the minimum academic qualification if any specified in the rules of recruitment applicable for the recruitment to the post in which he is absorbed.

(iii) In any post reserved for the persons belonging to the category of Schedule castes or Scheduled Tribes or other backward classes to which he was appointed as deputation Junior Engineer or Assistant Engineer as the case may be if he is found to be not belonging to such category, Otherwise such posts shall be treated as backlog to be filled by process of Special recruitment from among these classes.

3. **Pay, Pension Leave and Seniority of persons absorbed under these rules:** Notwithstanding anything contained in the Karnataka Municipal Corporations Rules 1977.

(i) The initial basic pay of deputations Assistant Engineer or Junior Engineer as the case may be absorbed under these rules shall be fixed at the minimum of the pay scale applicable to the category of post to which he is absorbed under rule 3.

(ii) The services rendered by a person on deputation Assistant Engineer or Junior Engineer as the case may be prior to the date of absorption shall count for the purpose of leave pension, but not for pay and seniority and grant of selection time scale of pay under Karnataka Civil Services (Time Bound Advancement) Rules. 1983 or grant of selection time scale of pay under the Karnataka Civil Services (Automatic grant of special promotion to the senior scale of pay) Rules, 1991 and additional increment for having completed twenty years of service in the single cadre.

## SCHEDULE

**(NOTIFICATION NO.UDD 31 MNY 2008 DATED: 31-10-2011)**
**(See Rule-3)**

| Sl. No. | Name of the Deputation Engineers | Designation | Post in which absorbed | Scale of pay of the post in which absorbed (Rs) |
|---|---|---|---|---|
| 1. | Sri. G. Nagabhushana | Assistant Engineer | Assistant Engineer | 11400-21600 |
| 2 | Sri. R. Benakesha | Assistant Engineer | Assistant Engineer | 11400-21600 |



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ
ಬೃಹತ್ ಬೆಂಗಳೂರು ಮಹಾನಗರ

| | | | | |
|---|---|---|---|---|
| 3 | Sri. S.L. Ashwath | Assistant Engineer | Assistant Engineer | 11400-21600 |
| 4 | Sri. S. Vishwanath | Assistant Engineer | Assistant Engineer | 11400-21600 |
| 5 | Sri. H. Ravindranath | Assistant Engineer | Assistant Engineer | 11400-21600 |
| 6 | Sri. H.M. Thimmappa | Junior Engineer | Junior Engineer | 8825-16000 |
| 7 | Sri. K.G. Sundaresh | Junior Engineer | Junior Engineer | 8825-16000 |
| 8 | Sri. B. Ramesh | Junior Engineer | Junior Engineer | 8825-16000 |

ಶ್ರೀ. ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರು ಸರ್ಕಾರದ ಅಧಿಸೂಚನೆಯೊಂದಿಗೆ ಮನವಿ ಸಲ್ಲಿಸಿ ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಸರ್ಕಾರದಿಂದ ಮುಚ್ಚಲು ಆದೇಶವಾಗಿರುವ ಹಿನ್ನೆಲೆಯಲ್ಲಿ ನಮ್ಮಗಳ ಸೇವೆಯನ್ನು ಪಾಲಿಕೆಯಲ್ಲಿ ಕ್ರಮಬದ್ಧಗೊಳಿಸಲು ಕೋರಿರುತ್ತಾರೆ.

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 31 ಎಂಎನ್‌ವೈ 2008 ದಿ: 31–10–2011ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ: 08–03–2012ರ ಸಂಖ್ಯೆ: ಬಿ12(6ಎ)ಪಿಆರ್/132/2011–12 ರ ಟಿಪ್ಪಣಿ.

**ನಿರ್ಣಯ: ಮಾಹಿತಿಗಾಗಿ ಮುಂದೂಡಿದೆ.**

(ಹೆಚ್. ಆರ್. ಕೃಷ್ಣಪ್ಪ)
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ